ಕಾಂಡಭಾಗವೆಲ್ಲ ಟೊಳ್ಳಷ್ಟೆ; ಕಾಂಡದ ಎಪಿಡರ್ಮಿಸ್ ಮತ್ತು ಕೇಂಬಿಯಮುಗಳ ನಡುವೆ ಇರುವ ಆಹಾರಸಾಗಣೆಯ ಅಂಗಾಂಶವಾದ ಫ್ಲೋಯೆಮ್ ಅಂಗಾಂಶವೇ ಗಾಂಜಾಗಿಡದ ನಾರು. ಗಂಡು ಹೂಗಳು ಗಾತ್ರದಲ್ಲಿ ಹೆಣ್ಣು ಹೂಗಳಿಗಿಂತ ದೊಡ್ಡವಾದ್ದರಿಂದ ಸುಲಭವಾಗಿ ಕಣ್ಣಿಗೆ ಬೀಳುತ್ತವೆ. ಅದೇ ಹೆಣ್ಣು ಹೂಗಳು ತುಂಬಾ ಚಿಕ್ಕವಾದುದರಿಂದ ಗಮನವನ್ನು ಸೆಳೆಯವು. ಕಾಂಡದ ತುದಿ ಭಾಗಗಳಲ್ಲಿ ಮತ್ತು ಕಾಂಡದುದ್ದಕ್ಕೆ ಪ್ರತಿ ಗೆಣ್ಣಿನಲ್ಲು ಹೂಗಳು ಗೊಂಚಲು ಗೊಂಚಲಾಗಿ ಬಿಡುತ್ತವೆ. ಬೀಜಗಳು ಗಾತ್ರದಲ್ಲಿ ಗೋದಿ ಕಾಳಿನಷ್ಟಿದ್ದು ಕೊಂಚ ಗುಂಡಾಗಿರುತ್ತವೆ. ಅವು ಪೂರ್ಣ ಬಲಿಯಲು ಇಷ್ಟೇ ಕಾಲ ಹಿಡಿಯುತ್ತದೆಂದು ಹೇಳಲು ಸಾಧ್ಯವಿಲ್ಲ.

ನಾರಿನ ಉತ್ಪಾದನೆಗೋಸ್ಕರ ಈ ಗಿಡದ ಸಾಗುವಳಿ ವಿಧಾನಗಳು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆಯಾದರೂ ಎಲ್ಲ ಕಡೆಗೂ ಅನುಸರಿಸುವ ಕೆಲವು ಸಾಮಾನ್ಯ ಕ್ರಮಗಳಿವೆ. ಸಕಾಲದಲ್ಲಿ ಬೀಜ ಬಿತ್ತುವುದು, ಅಚ್ಚುಕಟ್ಟಾಗಿ ಹದ ಮಾಡಿದ ಭೂಮಿಯನ್ನೇ ಉಪಯೋಗಿಸುವುದು, ಫಲವತ್ತಾಗಿಲ್ಲದಲ್ಲಿ ಸಾಕಷ್ಟು ಗೊಬ್ಬರ ಕೊಡುವುದು ಹಾಗೂ ದಟ್ಟವಾಗಿ ಬೀಜ ಬಿತ್ತುವುದು ಎಲ್ಲೆಡೆಗಳಲ್ಲೂ ವಾಡಿಕೆ. ಒಂದು ಎಕರೆಗೆ 15–20 ಕೆಜಿ. ಬೀಜ ಬೇಕಾಗುತ್ತದೆ. ಬೆಲ್ಜಿಯಂ ಮತ್ತು ಫ್ರಾನ್ಸಿನ ಉತ್ತರದ ಪ್ರದೇಶಗಳಲ್ಲಿ ಎಕರೆಗೆ 40 ಕೆಜಿ ಬೀಜವನ್ನು ಬಿತ್ತುವುದುಂಟು. ಭೂಮಿಯ ಮೇಲ್ಮೈಯಲ್ಲಿ ಎಂದರೆ 1–2.5 ಸೆಂ.ಮೀ ಆಳದಲ್ಲಿ ಬೀಜ ನೆಡುತ್ತಾರೆ. ಬಿತ್ತಿದ ಅನಂತರ ಆರೈಕೆ ಅಷ್ಟಾಗಿ ಬೇಕಿಲ್ಲ. ಯುರೋಪಿನ ಕೆಲವು ಭಾಗಗಳ ಹೊರತು ಇತರ ಪ್ರದೇಶಗಳಲ್ಲಿ ಕಳೆ ಕೀಳುವುದು ಸಹ ರೂಢಿಯಲ್ಲಿಲ್ಲ. ಗಂಡು ಗಿಡಗಳಲ್ಲಿ ಹೂ ಅರಳಿ ಪರಾಗ ಹೊರ ಸುರಿಯುತ್ತಿರುವ ಕಾಲದಲ್ಲಿ ನಾರಿಗೋಸ್ಕರ ಬೆಳೆದ ಫಸಲನ್ನು ಕಟಾವು ಮಾಡುತ್ತಾರೆ. ಈ ಕಾಲದಲ್ಲಿ ಕಟಾಯಿಸಿದ ಗಿಡಗಳಿಂದ ಬರುವ ನಾರು ಅತಿನವುರಾಗಿಯೂ ಮೃದುವಾಗಿಯೂ ಇರುತ್ತದೆ. ಆದರೆ ಈ ನಾರು ಅಷ್ಟು ಗಡುಸಲ್ಲ. ನಾರು ಗಡುಸಾಗಿದ್ದು ಹೇರಳವಾಗಿರಬೇಕಾದರೆ ಗಿಡಗಳು ಇನ್ನೂ ಬಲಿತಿರಬೇಕು. ಆದರೆ ಈ ನಾರು ಒರಟು. ಯುರೋಪಿನ ಕೆಲವು ಭಾಗಗಳಲ್ಲಿ ಕೈಯಿಂದ ಗಿಡಗಳನ್ನು ಬುಡಸಮೇತ ಕೀಳುವುದು ರೂಢಿಯಲ್ಲಿದೆ. ಉಳಿದ ದೇಶಗಳ ಬಹುಭಾಗಗಳಲ್ಲಿ ಗಿಡವನ್ನು ನೆಲದಿಂದ ಕೊಂಚ ಮೇಲಕ್ಕೆ ಕುಡುಗೋಲಿನಿಂದ ಕತ್ತರಿಸುತ್ತಾರೆ.

ಗಿಡಗಳ ಕಟಾವಾದ ಬಳಿಕ ಅವುಗಳಿಂದ ನಾರು ತೆಗೆಯಲು ಅವನ್ನು ಕೊಳೆಸಬೇಕು. ಕೊಳೆಸುವಿಕೆಯಲ್ಲಿ ಮುಖ್ಯವಾಗಿ ಎರಡು ವಿಧಾನಗಳಿವೆ: ನೀರಿನಲ್ಲಿ ಅದ್ದಿಟ್ಟು ಕೊಳೆಸುವುದು ಅಥವಾ ಇಬ್ಬನಿಯಲ್ಲಿ ಗಿಡಗಳನ್ನು ಹರವಿಟ್ಟು ಕೊಳೆಸುವುದು. ಅಮೆರಿಕದಲ್ಲಿ ಇಬ್ಬನಿಯಿಂದ ಕೊಳೆಸುವುದು ಸಾಮಾನ್ಯ. ನೀರಿನಲ್ಲಿ ಅದ್ದಿಟ್ಟು ಕೊಳೆಸುವುದು ಇತರ ದೇಶಗಳಲ್ಲಿ ಅನುಸರಿಸುವ ಮಾರ್ಗ. ಇಬ್ಬನಿಯಲ್ಲಿ ಕಟಾವಾದ ಗಿಡಗಳನ್ನು ಹೊಲಗಳಲ್ಲೇ ಕೊಳೆಯಲು ಬಿಡುತ್ತಾರೆ. ಕೆಲವು ಏಕಾಣು ಜೀವಿಗಳು ಹಾಗೂ ಶಿಲೀಂಧ್ರಗಳು ನಾರಿನ ಸುತ್ತಲಿರುವ ಸಸ್ಯಾಂಶವನ್ನು ಹೊಕ್ಕು ಅವನ್ನು ಕೊಳೆಸುತ್ತವೆ. ಹೀಗೆ ಸಸ್ಯಾಂಶ ಮಾತ್ರ ಕೊಳೆಯುವುದರಿಂದ ನಾರನ್ನು ಸುಲಭವಾಗಿ ಬೇರ್ಪಡಿಸಬಹುದು. ಕೊಳೆಯಲು ಬೇಕಾಗುವ ಕಾಲಾವಧಿ ಹವಾ ಪರಿಸ್ಥಿತಿಯನ್ನು ಅವಲಂಬಿಸಿ ಒಂದು ವಾರದಿಂದ ಕೆಲವು ತಿಂಗಳುಗಳಷ್ಟು ವ್ಯತ್ಯಾಸವಾಗುತ್ತದೆ.

ನೀರಿನಲ್ಲಿ ಅದ್ದಿ ಕೊಳೆಸುವ ಕ್ರಮದಲ್ಲಿ ಮೊದಲು ಕಟಾವಾದ ಗಿಡಗಳನ್ನು ಪೂರ್ಣವಾಗಿ ಒಣಗಿಸಬೇಕು. ಅನಂತರ ಇವನ್ನು ನೀರಿನಲ್ಲಿ ಅದ್ದಿಡಬೇಕು. ಏಕಾಣುಜೀವಿಗಳು ಹಾಗೂ ನೀರು ಇವೆರಡರಿಂದಾಗಿ ನಾರಿನ ಸುತ್ತಲಿರುವ ಸಸ್ಯಾಂಶ ಕೊಳೆಯಲು ಅವಕಾಶವಾಗುತ್ತದೆ. ಈ ಕ್ರಮದಿಂದ ನಾರು ಪಡೆಯಲು 10–20 ದಿವಸಗಳಾಗುತ್ತವೆ. ಕೊಳೆಯಲು ಬೇಕಾಗುವ ಅವಧಿ ನೀರಿನ ಉಷ್ಣತೆಯನ್ನು ಅನುಸರಿಸುವುದು. ಗಿಡಗಳನ್ನು ಕೆರೆ, ಕೊಳ, ಕುಂಟೆ, ನದಿಗಳಲ್ಲಿ ಇಲ್ಲವೆ ಕೃತಕ ತೊಟ್ಟಿಗಳಲ್ಲಿ ಕೊಳೆಸಬಹುದು. ತೊಟ್ಟಿಗಳಲ್ಲಿ ನೀರಿಟ್ಟು ಉಷ್ಣತೆಯನ್ನು ಸೂಕ್ತವಾಗಿ ನಿಯಂತ್ರಿಸಿದರೆ ಕೇವಲ 3–5 ದಿವಸಗಳಲ್ಲಿ ಕೊಳೆಯುತ್ತದೆ. ಇದಕ್ಕೆ ಬೇಕಾಗುವ ಸೂಕ್ತ ಉಷ್ಣತೆ $90^0$ ಫ್ಯಾ.

ಇಬ್ಬನಿಯಿಂದ ಕೊಳೆಸಿದ ಗಿಡಗಳನ್ನು ಕೆಲವು ಪ್ರದೇಶಗಳಲ್ಲಿ ಕಂತೆ ಕಟ್ಟುವುದಿಲ್ಲ. ಅಮೆರಿಕ ಸಂಯುಕ್ತಸಂಸ್ಥಾನದ ಉತ್ತರ ಭಾಗಗಳಲ್ಲಿ ಗಿಡಗಳನ್ನು ಒಟ್ಟಿಗೆ ಸೇರಿಸಿ ಯಂತ್ರಗಳಿಂದ ಕಂತೆ ಕಟ್ಟುತ್ತಾರೆ. ಇದಾದ ಅನಂತರ ಕಂತೆಗಳನ್ನು ಒಣಗಿಸಲು ಯಾವ ವಿಶಿಷ್ಟ ಕ್ರಮವನ್ನೂ ಸಾಮಾನ್ಯವಾಗಿ ಅನುಸರಿಸುವುದಿಲ್ಲ. ಅವೇ ಒಣಗುತ್ತವೆ. ಆದರೆ ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಹಲವಾರು ಸಾಧನಗಳನ್ನು ಉಪಯೋಗಿಸಿ ಕೃತಕ ರೀತಿಯಲ್ಲಿ ಒಣಗಿಸುತ್ತಾರೆ.

ಕೊಳೆತ ಗಿಡಗಳು ಸಾಕಷ್ಟು ಒಣಗಿದ ಅನಂತರ ನಾರನ್ನು ಬೇರ್ಪಡಿಸಲು ವಿವಿಧ ರೀತಿಯ ಯಂತ್ರ ಸಾಧನಗಳನ್ನು ಉಪಯೋಗಿಸಲಾಗುವುದು. ಈ ಸಾಧನಗಳಿಗೆ ಜಜ್ಜಿ ತುಂಡರಿಸುವ (ಬ್ರೇಕರ್ಸ್) ಸಾಧನಗಳು ಎಂದು ಹೆಸರು. ಏಕೆಂದರೆ ಇವು ಸಸ್ಯಾಂಶವೆಲ್ಲವನ್ನು ಕಬ್ಬಿನ ಗಾಣದಂತೆ ಜಜ್ಜಿ ತುಂಡರಿಸುತ್ತವೆ. ಈ ಸಂಸ್ಕಾರವಾದ ಅನಂತರ ನಾರನ್ನು ಇವುಗಳಿಂದ ಬೇರ್ಪಡಿಸಲಾಗುವುದು. ಒದರುವುದು, ಕೂರ್ಚ ಹೊಡೆಯುವುದು ಹಾಗೂ ಚಾಚುವುದರಿಂದ ನಾರನ್ನು ಬೇರ್ಪಡಿಸಿ ಚೊಕ್ಕ ಮಾಡುತ್ತಾರೆ. ಸಾಮಾನ್ಯವಾಗಿ ಈ ಕಾರ್ಯಗಳನ್ನು ಕೈಗಳಿಂದಲೇ ಮಾಡಿದರೂ ಅನೇಕ ಕಡೆ ಯಂತ್ರ ಸಾಧನಗಳನ್ನೂ ಉಪಯೋಗಿಸುವುದುಂಟು. ಈ ಸಾಧನಗಳನ್ನು ಉಪಯೋಗಿಸಿದಾಗ ನಾರು ತುಂಡಾಗುವ ಸಂಭವ ಉಂಟು.

**ಉತ್ಪಾದನಾ ಪರಿಮಾಣ :** ಎಕರೆಗೆ ಉತ್ಪಾದನೆಯಾಗುವ ನಾರಿನ ಪರಿಮಾಣದಲ್ಲಿ ದೇಶದಿಂದ ದೇಶಕ್ಕೆ ವ್ಯತ್ಯಾಸ ಕಂಡುಬರುತ್ತದೆ. ಸಾಮಾನ್ಯವಾಗಿ ಇಳುವರಿ ಒಂದು ಎಕರೆಗೆ 225–820 ಕೆಜಿ.ಗಳವರೆಗೂ ಇರುವುದುಂಟು. ಎಕರೆಗೆ ಅತ್ಯಂತ ಕನಿಷ್ಠ ಉತ್ಪಾದನೆ ರಷ್ಯದಲ್ಲಿ ಹಾಗೂ ಅತ್ಯಂತ ಅಧಿಕ ಉತ್ಪಾದನೆ ಉತ್ತರ ಇಟಲಿಯಲ್ಲಿ. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ 900 ಕೆಜಿ. ನಾರು ಉತ್ಪಾದನೆಯಾದ ದಾಖಲೆಯಿದೆಯಾದರೂ ಸರಾಸರಿ ಉತ್ಪಾದನೆ 400 ಕೆಜಿ.ಯನ್ನು ಮೀರಿಲ್ಲ.

**ಉಪಯೋಗಗಳು :** ನಾರನ್ನು ಏಷ್ಯ ಮತ್ತು ಯುರೋಪುಗಳಲ್ಲಿ ವಿವಿಧ ರೀತಿಯ ನೇಯ್ಗೆ ಸರಕುಗಳಿಗಾಗಿ ಒಂದಲ್ಲ ಒಂದು ಕಾಲದಲ್ಲಿ ಬಳಸಲಾಗಿದೆ. ಇದರಿಂದ ಅತ್ಯಂತ ನವುರಾದ ದಾರ ಹಾಗೂ ದಪ್ಪ ಹುರಿಗಳನ್ನು ತಯಾರಿಸಬಹುದು. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಗಾಂಜಾ ನಾರಿನಿಂದ ಟ್ವೈನ್ ದಾರವನ್ನು ತಯಾರಿಸುತ್ತಿದ್ದರು. ಕೃತಕ ಸ್ಪಾಂಜ್ ಮಾಡಲು ಈ ನಾರನ್ನು 1950ರ ಅನಂತರ ಉಪಯೋಗಿಸಿ ಕೊಳ್ಳಲಾಗುತ್ತಿದೆ.

ಈ ಗಿಡದ ಬೀಜದಿಂದ ಎಣ್ಣೆಯೊಂದನ್ನು ತೆಗೆಯಬಹುದು. ಬೀಜದಲ್ಲಿ ಶೇ. 30 ಭಾಗ ಎಣ್ಣೆ ಉಂಟು. ಇದನ್ನು ಬಣ್ಣ, ವಾರ್ನಿಶ್ ಮತ್ತು ಸಾಬೂನು ತಯಾರಿಕೆಯಲ್ಲಿ ಬಳಸುತ್ತಾರೆ. ಅಲ್ಲದೆ ಬೀಜಗಳನ್ನು ಸಾಕುಪಕ್ಷಿಗಳ ಆಹಾರವಾಗಿ ಉಪಯೋಗಿಸುವುದಿದೆ.

**ಗಾಂಜಾ ಸೇವನೆ :** ಗಾಂಜಾಗಿಡದ ಕುಡಿ ಹೂ, ಎಳೆಯಕಾಂಡ, ಎಲೆ ಮತ್ತು ಬೀಜಗಳಲ್ಲಿ ಔಷಧೀಯ ಗುಣವಿದೆ. ಈ ಪದಾರ್ಥವನ್ನೇ ಗಾಂಜಾ ಎನ್ನುವುದೂ ಉಂಟು. ಗಾಂಜಾದ ಮಾದಕ ಗುಣಕ್ಕೆ ಅದರಲ್ಲಿನ ಎಣ್ಣೆಯೇ ಕಾರಣ. ತೀವ್ರತೆಗೆ ತಕ್ಕಂತೆ ಗಾಂಜಾ ಮೂರು ಬಗೆಯದಾಗಿದೆ.

1. ಅತ್ಯಂತ ಪ್ರಭಾವಶಾಲಿ ಮತ್ತೇರಿಸುವ ಬಗೆ: ಬಲಿತಿರುವ ಹೆಣ್ಣು ಗಿಡಗಳ ಕುಡಿಗಳಿಂದ ಬರುವ ಗೋಂದಿನಿಂದ ಇದನ್ನು ತಯಾರುಮಾಡುತ್ತಾರೆ. ಉತ್ತರ ಆಫ್ರಿಕ, ಮಧ್ಯಪ್ರಾಚ್ಯ ಪ್ರದೇಶಗಳಲ್ಲಿ ಇದಕ್ಕೆ ಹಶೀಶ್ ಎನ್ನುತ್ತಾರೆ. ಇದನ್ನೇ ಭಾರತದಲ್ಲಿ ಚರಸ್ ಎನ್ನವುದು.

2. ಪ್ರಭಾವ ಅಷ್ಟು ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ, ಮಧ್ಯಮ ರೀತಿಯ ಬಗೆ ಇದೇ ಗಾಂಜಾ ಎಂದು ಬಳಕೆಯಿದೆ. ಸಾಗುವಳಿ ಮಾಡಿದ ಗಿಡಗಳ ಕುಡಿಗಳಲ್ಲಿ ಬಿಡುವ ಹೂ ಮತ್ತು ಎಲೆಗಳಿಂದ ಇದನ್ನು ಪಡೆಯಲಾಗುತ್ತದೆ.

3. ಪ್ರಭಾವ ಅತ್ಯಲ್ಪವಾಗಿರುವುದು ಮೂರನೆಯ ವಿಧ. ಇದನ್ನು ಭಾಂಗ್ (ಭಂಗಿ) ಎಂದು ಕರೆಯುತ್ತಾರೆ. ಕಾಡುಗಿಡಗಳಂತೆ ಬೆಳೆದಿರುವ ಗಿಡಗಳ ಒಣ ಎಲೆಗಳು ಹಾಗೂ ಹೂ ಬಿಡುವ ಕೊಂಬೆಗಳನ್ನು ಕತ್ತರಿಸಿ ಇದನ್ನು ತೆಗೆಯಲಾಗುತ್ತದೆ.

ಗಾಂಜಾ ಗಿಡದ ಯಾವ ಭಾಗಕ್ಕೆ ಆಗಲಿ ಅಥವಾ ಯಾವ ಭಾಗದಿಂದ ತೆಗೆದ ವಸ್ತುವಿಗಾಗಲಿ ಅಮೆರಿಕದಲ್ಲಿ ಮ್ಯಾರವಾನ ಎಂಬ ಸಾಮಾನ್ಯ ಹೆಸರು ರೂಢಿಯಲ್ಲಿದೆ. ಅಂದರೆ ಈ ವಸ್ತುವನ್ನು ಸೇವಿಸಿದರೆ ವ್ಯಕ್ತಿಯ ಶರೀರಕ್ರಿಯೆ ಹಾಗೂ ಮನಸ್ಸಿನ ಮೇಲೆ ಪರಿಣಾಮ ಬೀರುವಂತಿರಬೇಕು. ಮ್ಯಾರವಾನ ಪದ ಪೋರ್ಚುಗೀಸ್ ಭಾಷೆಯ ಮರಿಜಿ ಆಂಗೋ (ಮಾದಕವಸ್ತು ಎಂದು ಅರ್ಥ) ಎಂಬುದರಿಂದ ಬಂದಿದೆ ಎಂದು ಊಹಿಸಲಾಗಿದೆ. ಅಮೆರಿಕದಲ್ಲಿ ಎಲ್ಲೆಡೆಗಳಲ್ಲೂ ಸುಲಭವಾಗಿ ಹಾಗೂ ಅತಿ ಕಡಿಮೆ ಬೆಲೆಗೆ ದೊರಕುವ ವಸ್ತು ಭಂಗಿ. ಅಶುದ್ಧ ಹಾಗೂ ಕೀಳುದರ್ಜೆಯ ವಸ್ತುವಿದು. ಇದರಿಂದ ಕೆಲವು ರೋಗಗಳೂ ಬರಬಹುದೆಂದು ಹೇಳಲಾಗಿದೆ.

ಗಾಂಜಾ ಮೊಟ್ಟಮೊದಲು ಔಷಧರೂಪದಲ್ಲಿ ಬಳಕೆಗೆ ಬಂದುದು ಪ್ರಾಚೀನ ಚೀನದಲ್ಲಿ. ಇದನ್ನು ಭಾರತ, ಆಫ್ರಿಕ ಅನಂತರ ಯುರೋಪು ದೇಶಗಳಲ್ಲೂ ಉಪಯೋಗಿಸಲಾಗುತ್ತಿತ್ತು ಮತ್ತು ಮಧ್ಯ ಮತ್ತು ದಕ್ಷಿಣ ಅಮೆರಿಕ ದೇಶಗಳ ಆದಿವಾಸಿಗಳಿಗೂ ಇದರ ಉಪಯೋಗ ಚೆನ್ನಾಗಿ ತಿಳಿದಿತ್ತು. ಇದನ್ನು ನೋವು ಮತ್ತು ಸಣ್ಣಪುಟ್ಟ ರೋಗಗಳಿಗೆ ಶಿಫಾರಸು ಮಾಡುತ್ತಿದ್ದರು. ಗಾಂಜಾದ ಬಗ್ಗೆ 1938ರ ಅನಂತರ ಗಮನಾರ್ಹವಾದ ಸಂಶೋಧನೆಗಳು ನಡೆದಿವೆ. ಇದರ ರಾಸಾಯನಿಕ ಸ್ವರೂಪ ಅತಿ ಜಟಿಲವಾದದ್ದು. ಇದರ ಪೂರ್ಣ ಅರಿವು ನಮಗಿನ್ನೂ ಆಗಿಲ್ಲ. ಟೆಟ್ರಹೈಡ್ರೊಕ್ಯಾನಾಬಿನಾಲ್ (ಟಿ.ಎಚ್.ಸಿ.) ಎಂಬುದು ಗಾಂಜಾದ ಕ್ರಿಯಾಂಶ (ಆಕ್ಟಿವ್ ಪ್ರಿನ್ಸಿಪಲ್) ಎಂದು ವಿಜ್ಞಾನಿಗಳು ನಂಬಿದ್ದಾರೆ. ಕ್ಯನಾಬಿನಾಲಿನಲ್ಲಿ ಅನೇಕ ಸ್ವರೂಪಗಳಿವೆ. ಪ್ರತಿಯೊಂದು ಒಂದು ನಿರ್ದಿಷ್ಟ ರೀತಿಯ ಮಾದಕಾವಸ್ಥೆಗೆ ಕಾರಣವಾಗಬಹುದು.

ಇತ್ತೀಚೆಗೆ ಯುವಕ ಯುವತಿಯರಲ್ಲಿ ಭಂಗಿ ಸೇವನೆ ಒಂದು ಬೃಹತ್ಸಮಸ್ಯೆಯಾಗಿ ಪ್ರಪಂಚಾದ್ಯಂತ ತಲೆ ಎತ್ತಿದೆ. ಪಾಶ್ಚಾತ್ಯ ದೇಶಗಳಲ್ಲಿ ಇದಕ್ಕೆ ವೀಡ್, ಪಾಟ್, ಸ್ಟಫ್, ಗ್ರ್ಯಾಸ್, ಇಂಡಿಯನ್ ಹೇ, ಟೀ, ಮೇರಿ ಜೇನ್ ಮುಂತಾದ ಹೆಸರುಗಳು ರೂಢಿಗೆ ಬಂದಿವೆ. ಗಿಡಗಳನ್ನು ಕಿತ್ತು, ಕತ್ತರಿಸಿ, ಒಣಗಿಸಿ, ಪುಡಿಮಾಡಿ ಸಿಗರೇಟು ಚುಟ್ಟಾಗಳಂತೆ ಸೇದುವುದೇ ಎಲ್ಲೆಲ್ಲೂ ಅನುಸರಣೆಯಲ್ಲಿರುವ ಚಟ. ಇವಕ್ಕೆ ಇಂಗ್ಲಿಷಿನಲ್ಲಿ ರೀಫರ್ಸ್ ಅಥವಾ ಜಾಯಿಂಟ್ಸ್ ಎಂದು ಕರೆಯಲಾಗುತ್ತದೆ. ಇತ್ತೀಚೆಗೆ ಈ ವಸ್ತುವನ್ನು ದೇಹಕ್ಕೆ ಚುಚ್ಚಿ ಸೇರಿಸಿಕೊಳ್ಳುವುದೂ ವರದಿಯಾಗಿದೆ. ಪಾನೀಯ, ತಾಂಬೂಲ ಹಾಗೂ ಮಿಠಾಯಿಗಳಲ್ಲಿ ಸೇರಿಸಿ ಸೇವಿಸುವುದು ಮತ್ತೊಂದು ಬಗೆ. ಗಾಂಜಾ ಸೇವನೆಯಿಂದ ದೇಹ ಹಾಗೂ ಮನಸ್ಸುಗಳೆರಡರ ಮೇಲೂ ದುಷ್ಪರಿಣಾಮಗಳಾಗುತ್ತವೆ.

**ದೈಹಿಕ ಪರಿಣಾಮಗಳು :** ಗಾಂಜಾವನ್ನು ಸೇವಿಸುವ ವ್ಯಕ್ತಿಯ ನಾಡಿಯ ಓಟ ತ್ವರಿತಗೊಳ್ಳುತ್ತದೆ. ರಕ್ತದ ಒತ್ತಡ ಅಲ್ಪ ಸ್ವಲ್ಪ ಏರುತ್ತದೆ. ಕಣ್ಣು ಗುಡ್ಡೆ ಕೆಂಪಗಾಗುತ್ತದೆ. ರಕ್ತದಲ್ಲಿ ಸಕ್ಕರೆಯ ಅಂಶ ಅಧಿಕಗೊಳ್ಳುತ್ತದೆ. ಪದೇ ಪದೇ ಮೂತ್ರವಿಸರ್ಜನೆಗೆ ಒತ್ತಾಯ ಕಂಡುಬರುತ್ತದೆ. ಗಂಟಲೊಣಗುವುದು, ಬಾಯಾರುವುದು, ಓಕರಿಕೆ, ವಾಂತಿ ಕೆಲವು ವೇಳೆ ಭೇದಿ ಸಹ ಆಗಬಹುದು. ಕಣ್ಣಿನ ಪಾಪೆಯ ಸ್ಥಿತಿಸ್ಥಾಪಕಶಕ್ತಿ ಕಡಿಮೆಯಾಗುತ್ತದೆ. ಬೆರಳುಗಳು ಅದುರುವುದು ಸಾಮಾನ್ಯ. ದೈಹಿಕ ಮತ್ತು ಮಾನಸಿಕ ಕ್ರಿಯೆಗಳಲ್ಲಿ ಪರಸ್ಪರ ಹೊಂದಾಣಿಕೆಗೆ ಧಕ್ಕೆ ಉಂಟಾಗುತ್ತದೆ. ಉದಾಹರಣೆಗೆ ನೆಟ್ಟಗೆ ನಿಲ್ಲಲ್ಲು ಮತ್ತು ಬೇಕಾಗಿರುವೆಡೆ ಎಲ್ಲರಂತೆ ಹೋಗಲು ಸಾಧ್ಯವಾಗದಿರಬಹುದು.

**ಮಾನಸಿಕ ಪರಿಣಾಮಗಳು :** ಅತಿಸಾಮಾನ್ಯವಾಗಿ ಕಂಡುಬರುವ ಪ್ರತಿಕ್ರಿಯೆಗಳೆಂದರೆ ಒಂದು ರೀತಿಯ ಸ್ವಪ್ನಾವಸ್ಥೆ, ಅರಿವಿನಲ್ಲಿ ಬದಲಾವಣೆ, ಒಂದಕ್ಕೊಂದು ಹೊಂದಾಣಿಕೆ ಯಿಲ್ಲದ ಭಾವನಾತರಂಗಗಳು ಹತೋಟಿಯಿಲ್ಲದೆ ತಮ್ಮಷ್ಟಕ್ಕೆ ತಾವೇ ತೇಲಾಡುವಂಥ ತೋರಿಕೆ ಇತ್ಯಾದಿ. ಈ ಭಾವನಾತರಂಗಗಳು ಒಂದಾದ ಮೇಲೊಂದು ಜೋಡಣೆ ಯಿಲ್ಲದೆ ಇಲ್ಲಷ್ಟು ಅಲ್ಲಷ್ಟು ಹರುಕು ಹುರುಕು ಎಂದೋ ನಡೆದುಹೋದ ಮರೆತಿರುವ ಪ್ರಸಂಗಗಳು ಜ್ಞಾಪಕಕ್ಕೆ ಬರುವುದು ಮತ್ತು ಪ್ರಮುಖ ಪ್ರಸಂಗಗಳು ಜ್ಞಾಪಕದಲ್ಲಿ ಉಳಿಯದಿರುವುದು ಸಾಮಾನ್ಯ. ನಿಮಿಷಗಳು ಗಂಟೆಗಳಂತೆ ಗಂಟೆಗಳು ನಿಮಿಷಗಳಂತೆ ಭಾಸವಾಗುವುದು, ಸಂಕುಚಿತ ಸ್ಥಳ ಬೃಹದಾಕಾರವಾಗಿ ಕಾಣುವುದು, ಹತ್ತಿರವಿರುವ ವಸ್ತುಗಳು ದೂರವಿರುವಂತೆ ತೋರುವುದು ಇವೆಲ್ಲ ಸಾಮಾನ್ಯ. ಹೆಚ್ಚು ಮೊತ್ತದಲ್ಲಿ ಗಾಂಜಾ ಸೇವಿಸಿದರೆ ಅತ್ಯಂತ ವಾಸ್ತವಿಕವೆಂಬಂತೆ ತೋರುವ ಭ್ರಮೆಯ ಅನುಭವ ವಾಗುತ್ತದೆ. ಈ ಭ್ರಮೆ ಸಾಮಾನ್ಯವಾಗಿ ಉಲ್ಲಾಸ ಕೊಡುವ ಸಂತೋಷಾನುಭವ. ಆದರೆ ಅದರಲ್ಲಿ ಕಾಣುವ ಬಣ್ಣಗಳು, ಕಲ್ಪನೆಗೆ ಬರುವ ಲೈಂಗಿಕಪ್ರಸಂಗಗಳು ಮುಂತಾದವು ಔಷಧದ ಪ್ರಭಾವಕ್ಕಿಂತ ವ್ಯಕ್ತಿಯ ವ್ಯಕ್ತಿತ್ವವನ್ನು ಅವಲಂಬಿಸುತ್ತವೆ ಎಂದು ಹೇಳಲಾಗಿದೆ. ಅನೇಕ ವೇಳೆ ಮನಃಸ್ಥಿತಿಯಲ್ಲಿಯೂ ಬದಲಾವಣೆಗಳನ್ನು ಕಾಣಬಹುದು. ಅತ್ಯಂತ ಸುಖ ಸಂತೋಷಗಳಿಂದ ಕೂಡಿದ ಒಂದು ರೀತಿಯ ಉದ್ರೇಕಾನುಭವ ಈ ಔಷಧಿಯ ವೈಶಿಷ್ಟ್ಯ. ಹತೋಟಿಯಿಲ್ಲದ ನಗು ಹಾಗೂ ಅತಿ ಸ್ವಲ್ಪ ಉತ್ತೇಜನದಿಂದಲೇ ಉಂಟಾಗುವ ಆನಂದಾತಿರೇಕ ಇವು ಸಾಮಾನ್ಯ ಅನುಭವಗಳು. ಅನಂತರ ವ್ಯಕ್ತಿ ಒಂದು ರೀತಿಯ ದುಗುಡ, ವಿಲಕ್ಷಣ ಕಲ್ಪನಾಪ್ರಪಂಚದಲ್ಲಿ ಮುದುರಿಕೊಳ್ಳುತ್ತಾನೆ. ಅಪರೂಪಕ್ಕೆ ಗಾಂಜಾ ಸೇವನೆಯಿಂದ ಕೆಲವರಲ್ಲಿ ಇರುವ ಲವಲವಿಕೆಯೂ ಹೋಗಿ ಜಡತ್ವ ಕಂಡುಬರಬಹುದು. ಇಂಥವರು ಇನ್ನೂ ಹೆಚ್ಚಿನ ಪ್ರಮಾಣಗಳಲ್ಲಿ ಸೇವಿಸಿದರೆ ನಿಷ್ಕಾರಣವಾದ ಭೀತಿ ಆವರಿಸಿ ಸಾವಿನ ಭಯ ತೋರಬಹುದು. ತನ್ನ ದೇಹ ಸೊಟ್ಟಪಟ್ಟವಾದಂತೆ, ತಲೆ ದೊಡ್ಡದಾಗಿರುವಂತೆ, ಕೈಕಾಲುಗಳು ಎತ್ತಲಾರದಷ್ಟು ಭಾರವಾದಂತೆ ಅನುಭವವಾಗುತ್ತದೆ. ಕಲ್ಪನಾಪ್ರಪಂಚದ ಭ್ರಮೆ ಅನೇಕ ವಿಧ. ತಾನು ಎರಡು ವ್ಯಕ್ತಿತ್ವಗಳಿಂದ ಕೂಡಿದ್ದೇನೆಂಬ ಅರಿವು ಸಾಮಾನ್ಯವಾಗಿ ಉಂಟಾಗುತ್ತದೆ. ಔಷಧದ ಪ್ರಮಾಣ ಕಡಿಮೆಯಾಗಿದ್ದರೂ ಮನಸ್ಸಿನ ಆವೇಗದಿಂದ ನಡೆವಳಿಕೆ ಹಠಾತ್ತಾದ ಪ್ರವೃತ್ತಿಯನ್ನೊಳಗೊಂಡಿರಲೂ ಸಾಧ್ಯ. ಗೊತ್ತುಗುರಿ ಇಲ್ಲದ ಭಾವನೆಗಳು ಉದ್ಭವವಾದೊಡನೆ ವ್ಯಕ್ತಿ ಮಾತಿನಲ್ಲಿ ಈ ಭಾವನೆಗಳನ್ನು ಹೊರಗೆಡಹುತ್ತಾನೆ. ಆದರೆ ಹಿಂಸಾತ್ಮಕ ಅಥವಾ ಮೇಲೆ ಬೀಳುವ ಪ್ರವೃತ್ತಿ ಅಪರೂಪ. ವ್ಯಕ್ತಿ ಒಬ್ಬನೇ ಇದ್ದರೆ ಅಮಲೇರಿದವನಂತೆ ಮಲಗಿದ್ದು ಗದ್ದಲ ಮಾಡದೆ ಇರುತ್ತಾನೆ. ಯಾರಾದರೂ ಜೊತೆಗಿದ್ದರೆ ಹರಟುವುದು, ಉಲ್ಲಾಸ ಪೂರಿತವಾಗಿರುವುದು ಸಾಮಾನ್ಯ. ಅನೇಕವೇಳೆ ಹುಚ್ಚು ಹಿಡಿದವರಿಗೂ ಇವರಿಗೂ ಹೆಚ್ಚು ವ್ಯತ್ಯಾಸಗಳೇನೂ ಕಂಡು ಬರುವುದಿಲ್ಲ. ಗಾಂಜಾ ಸೇವನೆಯಿಂದ ಸಂಭೋಗಾನಂದ ವೃದ್ಧಿಗೊಳ್ಳುತ್ತದೆಂಬುದು ಕೆಲವರ ಅಭಿಪ್ರಾಯ. ಆದರೆ ಇದಕ್ಕೆ ವೈಜ್ಞಾನಿಕ ಆಧಾರಗಳಿಲ್ಲ. ಇದರ ಪ್ರಭಾವಕ್ಕೊಳಗಾಗಿ ರುವ ವ್ಯಕ್ತಿಯ ಮಾನಸಿಕ ಹತೋಟಿ ಪೂರ್ಣ ಸಡಿಲಗೊಂಡು ಗಂಡಸಲ್ಲೇ ಆಗಲಿ ಹೆಂಗಸಲ್ಲೇ ಆಗಲಿ ನೈತಿಕ ಮಟ್ಟ ಅಧೋಗತಿಗಿಳಿದಿರುತ್ತದೆ ಎಂಬುದರಲ್ಲಿ ಅನುಮಾನ ವಿಲ್ಲ. ಈ ಸಂದರ್ಭಗಳಲ್ಲಿ ಮನುಷ್ಯನ ಪಾಶವೀಗುಣ ಎದ್ದು ಕಾಣುತ್ತದೆ.

ಗಾಂಜಾ ಸೇವಿಸುವ ತಂದೆ ತಾಯಿಗಳಿಗೆ ಹುಟ್ಟುವ ಮಕ್ಕಳಲ್ಲಿ ಅನುವಂಶಿಕ ಪರಿಣಾಮಗಳೇನಾದರೂ ಉಂಟೇ ಎಂಬುದರ ಬಗ್ಗೆ ಅಮೆರಿಕದ ನ್ಯೂಜರ್ಸಿಯ ಪ್ಯಾಟರ್‌ಸನ್‌ನಲ್ಲಿರುವ ಸೇಂಟ್ ಡಿಸ್‌ಮಾಸ್ ಆಸ್ಪತ್ರೆಯ ಡಾಕ್ಟರ್ ಲೂಯಿ ಸೌಜರವರು ಅಧ್ಯಯನ ನಡೆಸಿದ್ದಾರೆ. ಗಾಂಜಾ ತನ್ನ ಪ್ರಭಾವವನ್ನು ವಂಶವಾಹಿಗಳ ಮೇಲೂ ಬೀರಿ ಪೀಳಿಗೆಯ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡಿ, ಅನುವಂಶಿಕವಾಗಿ ಬುದ್ಧಿಮಾಂದ್ಯ ಇತ್ಯಾದಿ ನ್ಯೂನತೆಗಳನ್ನು ಸಾಗಿಸುತ್ತದೆ ಎಂದು ಅವರು ದೃಢಪಡಿಸಿದ್ದಾರೆ. ದೀರ್ಘಾವಧಿ ಗಾಂಜಾ ಸೇವನೆಯಿಂದ ಕೆಮ್ಮು, ಗೂರಲು, ನಿದ್ರಾಭಂಗ, ಚಿತ್ತೈಕಾಗ್ರತೆಗೆ ಧಕ್ಕೆ ಮುಂತಾದ ದುಷ್ಪರಿಣಾಮಗಳು ಸಾಮಾನ್ಯ ಎಂದು ಅಮೆರಿಕದ ವೈದ್ಯರ ಸಂಘ ವರದಿ ಮಾಡಿದೆ. ಗಾಂಜಾ ಸೇವನೆ ಕ್ರಮೇಣ ಚಿಕಿತ್ಸೆ ತಿರುಗುತ್ತದೆಯೇ ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ಇನ್ನೂ ಸಿಕ್ಕಿಲ್ಲ. ಸಾಮಾನ್ಯವಾಗಿ ಚಟವಸ್ತುಗಳನ್ನು ಸೇವಿಸುತ್ತಿರು ವವರು ಇದ್ದಕ್ಕಿದ್ದಂತೆ ನಿಲ್ಲಿಸಿದರೆ ಅವರ ಮಾನಸಿಕ ನೆಮ್ಮದಿ ಕೆಡುತ್ತದೆ; ಅವರು ಹುಚ್ಚರಂತೆ ಚಟಪಟಿಸುತ್ತಾರೆ. ಆದರೆ ಗಾಂಜಾ ಸೇವನೆಯಲ್ಲಿ ಈ ರೀತಿಯ ಲಕ್ಷಣಗಳು ಕಾಣುವುದಿಲ್ಲವಾದ್ದರಿಂದ ಗಾಂಜಾ ಚಟವಸ್ತುವಲ್ಲ ಎಂದು ಹೇಳಲಾಗಿದೆ. ವೈಜ್ಞಾನಿಕ ಪ್ರಯೋಗಗಳಿಂದಲೂ ಈ ಮಾತು ಸ್ಥಿರಪಟ್ಟಿದೆ. ಆದರೆ ಇದರ ರುಚಿ ಕಂಡವರು ಇದಕ್ಕೂ ಹೆಚ್ಚಿನ ಪ್ರಭಾವ ಬೀರುವ ವಸ್ತುಗಳನ್ನು ಹುಡುಕಿ ಸೇವಿಸುತ್ತಾರೆ.

ಔಷಧವಾಗಲ್ಲದೆ ಮಾದಕವಸ್ತುವಾಗಿ ಗಾಂಜಾವನ್ನು ಬಳಸಿದಾಗ ದೇಹ ಮತ್ತು ಮನಸ್ಸುಗಳ ಮೇಲೆ ಆಗುವ ದುಷ್ಪರಿಣಾಮಗಳು ಅಪಾರವಾದ್ದರಿಂದ ಅದರಿಂದ ಆದಷ್ಟು ದೂರ ಇರುವುದೇ ಒಳ್ಳೆಯದು. (ಆರ್.ಎಸ್.ವಿ.; ಎಂ.)

**ಗಾಂಡ :** ಪೂರ್ವ ಆಫ್ರಿಕದ ಬುಗಾಂಡ ಪ್ರಾಂತ್ಯದಲ್ಲಿರುವ, ಬಂಟೂ ಭಾಷೆಯನ್ನಾಡುವ ಜನ. ಬಗಾಂಡ, ವಗಾಂಡ ಎಂಬ ಪರ್ಯಾಯ ಹೆಸರುಗಳೂ ಉಂಟು. ನೆಗ್ರಾಯಿಡ್ ವರ್ಗಕ್ಕೆ ಸೇರಿದ ಈ ಜನ ಮಧ್ಯಮ ನಿಲುವಿನವರು; ಗಾಢವಾದ ಚಾಕೊಲೇಟ್ ವರ್ಣದವರು. ಮೊದಲಿಗೆ ಇವರ ಸಂಖ್ಯೆ 30 ಲಕ್ಷಕ್ಕೂ ಮಿಕ್ಕಿತ್ತಾದರೂ 1ನೆಯ ಮಹಾಯುದ್ಧ ಕಾಲದಲ್ಲಿ ಕಾಣಿಸಿಕೊಂಡ ನಿದ್ರಾರೋಗ ಬಹುಮಂದಿಯನ್ನು ಬಲಿ ತೆಗೆದುಕೊಂಡಿದ್ದರಿಂದ ಇಂದು ಇವರ ಸಂಖ್ಯೆ ಸು. 10 ಲಕ್ಷ. ಆದರೆ ಇವರು ನೆಲೆಸಿರುವ ನಾಡಿನ ಸಮೃದ್ಧಿ ಆಫ್ರಿಕದ ಇತರ ಭಾಗಗಳ ಜನರನ್ನು ಆಕರ್ಷಿಸಿರುವುದರಿಂದ ಆ ನೆಲೆಸಿಗರ ಸಂಖ್ಯೆ ಈ ಮೂಲನಿವಾಸಿಗಳ ಸಂಖ್ಯೆಯೊಡನೆ ಸ್ಪರ್ಧಿಸುತ್ತದೆ. ಆಫ್ರಿಕದ ಇತರ ಭಾಗಗಳಲ್ಲಿರುವ ಜನತೆಗೆ ಹೋಲಿಸಿದರೆ ಇಲ್ಲಿಯ ಜನರಲ್ಲಿ ಸಾಕ್ಷರತೆಯ ಪ್ರಮಾಣ ತುಂಬ ಹೆಚ್ಚು. ಇತರ ಬುಡಕಟ್ಟುಗಳಿಗಿಂತಲೂ ಇವರು ಹೆಚ್ಚು ಬುದ್ಧಿವಂತರೂ ರಾಜಕೀಯವಾಗಿ ಮುಂದುವರಿದವರೂ ಆದವರು. ಇವರದು ಪಿತೃಪ್ರಧಾನ ವ್ಯವಸ್ಥೆ. ವಂಶದ ಹಿರಿಯ ಉತ್ತರಾಧಿಕಾರವೇ ಮೊದಲಾದ ವಿಚಾರಗಳನ್ನು ನಿಯಂತ್ರಿಸುತ್ತಾರೆ. ಇವರಲ್ಲಿ ಕೆಲವರು ರಾಜಕೀಯ ಅಧಿಕಾರಗಳನ್ನು ನಿರ್ವಹಿಸುತ್ತಾರೆ. ಆದರೆ ಇವರೆಲ್ಲ ಕಬಕನ (ರಾಜ) ಅಧೀನಕ್ಕೆ ಒಳಪಟ್ಟಂಥವರು. ವಾಸ್ತವವಾಗಿ, ಬೇರೆ ಬೇರೆ ವಂಶದವರು ಅರಮನೆಯ ಸೇವೆಗೆಂದು ನಿಯೋಜಿಸಿದ ವ್ಯಕ್ತಿಗಳಲ್ಲಿ ಕೆಲವರನ್ನು ಆಯ್ದು, ಕಬಕ ಅವರಿಗೆ ರಾಜಕೀಯ ಕರ್ತವ್ಯಗಳನ್ನು ವಹಿಸಿಕೊಟ್ಟಿರುತ್ತಾನೆ. ಇದೇ ರೀತಿ ನಿಯೋಜಿಸಲ್ಪಟ್ಟ ಹುಡುಗಿಯರು ಕಬಕನ ಪತ್ನಿಯರೂ ಆಗಬಹುದು. ಇವರಲ್ಲಿ ಬಹುಪತ್ನಿತ್ವ ರೂಢಿಯಲ್ಲುಂಟು. ಸಾಂಪ್ರದಾಯಿಕ ಗಾಂಡ ಧರ್ಮದಲ್ಲಿ ಪೂರ್ವಜರು, ಹಿಂದಿನ ರಾಜರು, ಪ್ರಾಕೃತಿಕ ಶಕ್ತಿಗಳು ಮತ್ತು ದೇವದೇವತೆಗಳನ್ನು ಉಪಾಸಿಸುವ ಪದ್ಧತಿ ಬಳಕೆಯಲ್ಲಿತ್ತು. ಇಂದು ಇವರಲ್ಲಿ ಬಹುಮಂದಿ ಕ್ರೈಸ್ತಧರ್ಮೀಯರಾಗಿದ್ದರೂ ಮಾಟಮಂತ್ರಗಳ ಪ್ರಾಬಲ್ಯ ಇದ್ದೇ ಇದೆ. ಸುನ್ನಿ ಮುಸ್ಲಿಮರೂ ಗಣನೀಯ ಸಂಖ್ಯೆಯಲ್ಲುಂಟು.

ಬುಗಾಂಡಕ್ಕೆ ಭೇಟಿಕೊಟ್ಟ ವಿದೇಶೀಯರೆಲ್ಲ ಇಲ್ಲಿಯ ಅತ್ಯುತ್ಕೃಷ್ಟ ರೂಪದ ಪ್ರಭುತ್ವವ್ಯವಸ್ಥೆಯನ್ನು ಕಂಡು ಮೆಚ್ಚಿದ್ದಾರೆ. ಕಬಕ ಇಲ್ಲಿಯ ಪರಮಪ್ರಭು. ಈತನಿಗೆ ಎಲ್ಲ ಸಾಂಪ್ರದಾಯಿಕ ಮತ್ತು ರಾಜಕೀಯ ಅಧಿಕಾರಗಳಿರುತ್ತವೆ. ಹಿಂದೆ ಈತ ಮೂವರು ಮಂತ್ರಿಗಳ ಸಹಾಯದಿಂದ ರಾಜ್ಯವಾಳುತ್ತಿದ್ದ. ಕಾಲಾನುಕ್ರಮದಲ್ಲಿ ಮಂತ್ರಿಗಳ ಸಂಖ್ಯೆ ಆರಕ್ಕೆ ಏರಿತು. ಇವರಲ್ಲಿ ಒಬ್ಬ ಪ್ರಧಾನ ಮಂತ್ರಿ, ಚುನಾಯಿತ ಹಾಗೂ ನಾಮಕರಣಗೊಂಡ ಪ್ರತಿನಿಧಿಗಳನ್ನೊಳಗೊಂಡ ಲುಕಿಕೋ ಅಥವಾ ಸಂಸತ್ತು ಉಂಟು. ಪ್ರಾಂತ್ಯವನ್ನು ಜಿಲ್ಲೆಗಳಾಗಿ ವಿಭಾಗಿಸಿ ಅವುಗಳ ಆಡಳಿತಕ್ಕೆ ಅಧಿಕಾರಿಗಳನ್ನು ನೇಮಿಸಲಾಗಿದೆ. ರೈತರ ಮೇಲ್ವಿಚಾರಣೆಗಾಗಿ ಸಾಚಾ ಮತ್ತು ಗೊಂಬೊಲೋಲಾ ಎಂಬ ಅಧಿಕಾರಗಳುಂಟು. ಪೌರ ಅಥವಾ ಸೈನಿಕ ಕಾರ್ಯಗಳನ್ನು ನಿರ್ವಹಿಸುವ ಎಲ್ಲ ಅಧಿಕಾರಗಳಿಗೂ ಜಹಗೀರುಗಳನ್ನು ಕೊಡಲಾಗುತ್ತಿತ್ತು. ಇವರು ಆಡಳಿತಗಾರರಾಗಿ, ನ್ಯಾಯಾಧೀಶರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ಸೈನಿಕ ಕಾರ್ಯಾಚರಣೆಯೇ ಇವರ ಮುಖ್ಯ ಕರ್ತವ್ಯವಾಗಿತ್ತು. ತಂತಮ್ಮ ವಿಭಾಗಗಳಲ್ಲಿ ಸಜ್ಜುಗೊಂಡಿದ್ದ ಪಡೆಗಳ ನೆರವನ್ನು ಪಡೆದು ಇವರು ಯುದ್ಧಕಾರ್ಯದಲ್ಲಿ ಭಾಗವಹಿಸುತ್ತಿದ್ದರು.

19ನೆಯ ಶತಮಾನದ ಕೊನೆಯ ಚರಣದಿಂದ ಈ ಪ್ರಾಂತ್ಯದ ಮೇಲೆ ಬ್ರಿಟಿಷರ ಪ್ರಭಾವ ಬೀಳತೊಡಗಿತು. ತನ್ನ ಪ್ರಾಂತ್ಯದ ಜನರಿಗೆ ಶಿಕ್ಷಣ ಕೊಡುವುದಕ್ಕಾಗಿ ಧರ್ಮ ಪ್ರಚಾರಕರನ್ನು ಕಳುಹಿಸಿಕೊಡಬೇಕೆಂದು ಕಬಕ ಮುತೇಸ ಸ್ಟ್ಯಾನ್ಲೆಯನ್ನು ಕೇಳಿಕೊಂಡಿದ್ದನೆಂದು ತಿಳಿದುಬಂದಿದೆ. 1884 ಮತ್ತು 1900ರಲ್ಲಿ ಸಹಿ ಹಾಕಲಾದ ಒಪ್ಪಂದಗಳ ಮೇರೆಗೆ ಇದು ಬ್ರಿಟಿಷ್ ಆರಕ್ಷಿತ ಪ್ರದೇಶವಾಯಿತು. ಈ ಒಪ್ಪಂದ ಕಬಕ ಮತ್ತು ಲುಕಿಕೋಗಳ ಕರ್ತವ್ಯಾಧಿಕಾರಗಳನ್ನೂ ಬ್ರಿಟಿಷರೊಂದಿಗಿನ ಸಂಬಂಧ ಗಳನ್ನೂ ನಿಯಂತ್ರಣಕ್ಕೊಳಪಡಿಸಿತು. 1953ರಲ್ಲಿ 2ನೆಯ ಕಬಕ ಮುತೇಸ ಬ್ರಿಟಿಷ್ ಸರ್ಕಾರದೊಂದಿಗೆ ಸಹಕರಿಸಲಿಲ್ಲವೆಂಬ ಆರೋಪದ ಮೇಲೆ ಆತನನ್ನು ಗಡೀಪಾರು ಮಾಡಲಾಗಿತ್ತು. ಮೊದಲಿಗೆ ಎಂದರೆ 1954ರಲ್ಲಿ, ಲುಕಿಕೋನಲ್ಲಿ ಒಟ್ಟು 89 ಮಂದಿ ಪ್ರತಿನಿಧಿಗಳಿದ್ದರು. ಅವರಲ್ಲಿ 31 ಮಂದಿ ಮಾತ್ರ ಚುನಾಯಿತ ಪ್ರತಿನಿಧಿಗಳು. 1953ರ ಹೊತ್ತಿಗೆ ಚುನಾಯಿತ ಪ್ರತಿನಿಧಿಗಳ ಸಂಖ್ಯೆಯನ್ನು 60ಕ್ಕೂ ಮಂತ್ರಿಗಳ ಸಂಖ್ಯೆಯನ್ನು 6ಕ್ಕೂ ಏರಿಸಲಾಯಿತು. 1953ರ ಅನಂತರದ ರಾಜಕೀಯ ಬೆಳವಣಿಗೆಗಳ ಫಲವಾಗಿ 1962ರಲ್ಲಿ ಈ ಪ್ರಾಂತ್ಯ ಸ್ವತಂತ್ರವಾಯಿತು.

ಗಾಂಡ ಜನ ಬುದ್ಧಿವಂತರು, ಸಾಹಸಿಗಳು, ಅವರು ಅಡಕವಾದ ಗ್ರಾಮಗಳಲ್ಲಿ ವಾಸಿಸುತ್ತಾರೆ. ಸಾಮಾನ್ಯವಾಗಿ ಪ್ರತಿಯೊಂದು ಕುಟುಂಬವೂ ಬಾಳೆಯ ತೋಟದಲ್ಲಿಯೇ ವಾಸಿಸುತ್ತದೆ. ಬಾಳೆಯ ಹಣ್ಣು ಇವರ ಮುಖ್ಯ ಆಹಾರ. ಅದನ್ನು ಆವಿಯಲ್ಲಿ ಬೇಯಿಸಿ ತಿನ್ನುತ್ತಾರೆ. ಹತ್ತಿ ಮತ್ತು ಕಾಫಿಯಂಥ ವಾಣಿಜ್ಯ ಬೆಳೆಗಳನ್ನು ಪ್ರಾರಂಭಿಸಿದ ಮೇಲೆ ಇಲ್ಲಿಯ ರೈತರ ಜೀವನಮಟ್ಟ ಬಹಳಮಟ್ಟಿಗೆ ಸುಧಾರಿಸಿದೆ. ಇವರು ಕುರಿ, ಮೇಕೆ, ಕೋಳಿ ಮತ್ತು ದನಗಳನ್ನು ಸಾಕುವುದೂ ಉಂಟು. ದೆಬ್ಬೆ ಹುಲ್ಲುಗಳಿಂದ ಮನೆಗಳನ್ನು ಕಟ್ಟುವುದೂ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಿಸುವುದೂ ಸಾಂಪ್ರದಾಯಿಕ ಉದ್ಯೋಗಗಳು. ಈಚೆಗೆ ಇತರ ಉದ್ಯೋಗಗಳೂ ಬೆಳೆದಿವೆ. ಮರದ ತೊಗಟೆಯಿಂದ ಬಟ್ಟೆಗಳ ತಯಾರಿಕೆ, ಬುಟ್ಟಿ ಹೆಣೆಯುವುದು, ಕುಂಬಾರಿಕೆ, ಮೀನುಗಾರಿಕೆ ಮೊದಲಾದ ಉದ್ಯೋಗಗಳೂ ಉಂಟು. (ಪಿ.ಜಿ.ಡಿ.)

**ಗಾಂಡೀವ :** ಒಂದು ದಿವ್ಯ ಧನುಸ್ಸು. ಈ ಧನುಸ್ಸು ಬ್ರಹ್ಮನಿಂದ ಇಂದ್ರನಿಗೂ ಇಂದ್ರನಿಂದ ವರುಣನಿಗೂ ವರುಣನಿಂದ ಅಗ್ನಿಗೂ ಬಂತು. ಖಾಂಡವದಹನ ಸಮಯದಲ್ಲಿ ಅಗ್ನಿ ಅರ್ಜುನ ಮಾಡಿದ ಉಪಕಾರಕ್ಕಾಗಿ ಆತನಿಗಿದನ್ನು ಕೊಟ್ಟ. ಈ ಧನಸ್ಸು ಎರಡು ಅಕ್ಷಯ ಬತ್ತಳಿಕೆಗಳೊಂದಿಗೆ ಅರ್ಜುನನಿಗೆ ಪ್ರಾಪ್ತವಾಗಿತ್ತು. ಈ ಕಾರಣದಿಂದಲೇ ಅವನು ಗಾಂಡೀವಿ ಎನಿಸಿದ. ಇದರ ಮಹಿಮೆಯಿಂದ ಅರ್ಜುನ ಎಲ್ಲ ದಿಕ್ಕುಗಳನ್ನು ಗೆದ್ದು, ಇಂದ್ರನನ್ನು ಸೋಲಿಸಿದುದಲ್ಲದೆ ಇದರ ತುದಿಯಿಂದ ಶಿವನ ನೆತ್ತಿ ಮೇಲೆ ಹೊಡೆದು ಗಾಯ ಮಾಡಿದ. ಮಹಾಪ್ರಸ್ಥಾನ ಸಮಯದಲ್ಲಿ ಅರ್ಜುನ ಇದನ್ನು ಸಮುದ್ರದಲ್ಲಿ ಬಿಸಾಡಿದನೆಂದು ಹೇಳಲಾಗಿದೆ. *

**ಗಾಂಡೈಟ್ :** ಆರ್ಕೇಯನ್ ಮತ್ತು ಧಾರವಾಡ ಯುಗಕ್ಕೆ ಸೇರಿದ ಶಿಲಾ ಶ್ರೇಣಿಗಳಲ್ಲಿ ಹೆಚ್ಚಿನ ರೂಪಾಂತರಕ್ಕೊಳಗಾಗಿ ಮಾರ್ಪಟ್ಟ ಕೆಲವು ಶಿಲಾಸಮುದಾಯಗಳ ಹೆಸರು. ಇದನ್ನು ಮೊತ್ತ ಮೊದಲಿಗೆ ಸರ್ ಲೂಯಿ ಫರ್ಮರ್ ಮಧ್ಯ ಪ್ರದೇಶದಲ್ಲಿ ಗುರುತಿಸಿ ಅಲ್ಲಿನ ಮೂಲನಿವಾಸಿಗಳೆನಿಸಿದ ಗೋಂಡ್ ಪಂಗಡದ ಗಿರಿಜನರ ಹೆಸರನ್ನೇ ಈ ರೂಪಾಂತರಿತ ಶಿಲೆಗಳಿಗೆ ಇಟ್ಟ. ಧಾರವಾಡ ಯುಗದ ಮ್ಯಾಂಗನೀಸ್ ಅಂಶ ಇರುವ ಜೇಡು ಮತ್ತು ಮರಳು ಶಿಲೆಗಳು ತೀವ್ರವಾದ ಒತ್ತಡಕ್ಕೆ ಒಳಗಾದಾಗ ಈ ಶಿಲೆ ಉಂಟಾಯಿತೆಂದು ಅಭಿಪ್ರಾಯಪಡಲಾಗಿದೆ. ಇದರಲ್ಲಿ ಮುಖ್ಯವಾಗಿ ಕ್ವಾರ್ಟ್ಸ್, ಮ್ಯಾಂಗನೀಸ್, ಗಾರ್ನೆಟ್, ಮತ್ತು ರ್‍ಹೋಡೊನೈಟ್ ಎಂಬ ಖನಿಜಗಳನ್ನು ಕಾಣಬಹುದು. ಶಿಲೆ ಸಮಕಣವಿನ್ಯಾಸವನ್ನು ತೋರಿಸುತ್ತದೆ. ಗಾಂಡೈಟ್ ಶಿಲಾಸಮುದಾಯ ಮುಖ್ಯವಾಗಿ ಮಧ್ಯ ಪ್ರದೇಶದ ಜಬುವಾ, ಶಿವರಾಜಪುರ, ಚಿಂದ್ವಾರ, ಭಂಡಾರ, ಗಂಗಪುರ್, ಮತ್ತು ಮಹಾರಾಷ್ಟ್ರದ ನಾಗಪುರ ಈ ಜಿಲ್ಲೆಗಳಲ್ಲಿ ಕಂಡುಬಂದಿವೆ. ಅದರಲ್ಲೂ ಸಾಸರ್ ಶ್ರೇಣಿಯ ಮ್ಯಾಂಗನೀಸ್ ಜಾಡಿನಲ್ಲಿ ಇವನ್ನು ಸಾಮಾನ್ಯವಾಗಿ ಕಾಣಬಹುದು. ಇವಲ್ಲದೆ ಮೇಲೆ ಹೇಳಿರುವ ಖನಿಜಗಳಲ್ಲದೆ ಬ್ರಾನೈಟ್, ಸೈಲಾಮಲೀನ್, ಪೈರೊಲ್ಯೂಸೈಟ್, ಸಿತಾಪರೈಟ್, ವೃಡನ್‌ಬರ್ಗೈಟ್, ಜಾಕಬ್‌ಸೈಟ್, ಹಾಸ್ಮನೈಟ್ ಮೊದಲಾದ ಮ್ಯಾಂಗನೀಸ್ ಖನಿಜಗಳೂ ಇವೆ. ಇವೇ ಮುಖ್ಯವಾದ ಮ್ಯಾಂಗನೀಸ್ ಅದಿರುಗಳು. ತಮ್ಮ ರಚನೆಯಲ್ಲಿ ಇವು ಪ್ರೀಕೇಂಬ್ರಿಯನ್ ಯುಗದ ಕಬ್ಬಿಣದ ಅದಿರಿನ ನಿಕ್ಷೇಪಗಳಾದ ಹಿಮಟೈಟ್–ಕ್ವಾರ್ಟ್ಸೈಟ್ ಸ್ತರಗಳನ್ನು ಹೋಲುತ್ತವೆ. ಅದಿರಿನ ಪ್ರಸ್ತರಗಳು ಸಾಮಾನ್ಯವಾಗಿ 1 1/2–2ಮೀ ಮಂದವಾಗಿರುತ್ತವೆ. ಹಲವು ಬಾರಿ 12–15 ಮೀಗಳಷ್ಟು ಮಂದವಾಗಿರುವುದೂ ಉಂಟು. ಇದೇ ಅಲ್ಲದೆ ಲೋಹಪ್ರಮಾಣದಲ್ಲಿ ಸಹ ಈ ಅದಿರುಗಳಲ್ಲಿ ವಿವಿಧ ದರ್ಜೆಗಳನ್ನು ಗುರುತಿಸಲಾಗಿದೆ. ಒಟ್ಟಿನಲ್ಲಿ ಇವು ಭಾರತದ ಮ್ಯಾಂಗನೀಸ್ ನಿಕ್ಷೇಪಗಳಿಗೆ ಮುಖ್ಯ ತವರು. ಮಧ್ಯ ಪ್ರದೇಶ ಒಂದರಲ್ಲೇ ಸುಮಾರು 80–100 ದಶಲಕ್ಷ ಟನ್‌ಗಳಷ್ಟು ಅದಿರು ಸಿಗಬಹುದೆಂದು ಅಂದಾಜು ಮಾಡಲಾಗಿದೆ. (ಬಿ.ವಿ.ಜಿ.)

**ಗಾಂದಿನಿ :** ಕಾಶೀರಾಜನ ಮಗಳು. ಈಕೆ ಹನ್ನೆರಡು ವರ್ಷಗಳವರೆಗೆ ತಾಯಿಯ ಗರ್ಭದಲ್ಲೇ ಇದ್ದಳೆನ್ನಲಾಗಿದೆ. ಸಕಾಲ ಪ್ರಸವವಾಗದುದನ್ನು ಕಂಡು ಕಳವಳಗೊಂಡ ರಾಜ ತನ್ನ ಪುರೋಹಿತನ ಸಲಹೆಯಂತೆ ಯದುವಂಶದ ಶ್ವಫಲ್ಕನನ್ನು ಬರಮಾಡಿಕೊಂಡು ಈ ವಿಷಯವನ್ನು ತಿಳಿಸಿದ. ಶ್ವಫಲ್ಕ ಗರ್ಭದಲ್ಲಿರುವುದು ಹೆಣ್ಣು ಮಗುವೆಂದು ತಿಳಿದನಲ್ಲದೆ ತನ್ನ ತಾಯಿಗೆ ಈ ರೀತಿ ಹಿಂಸೆ ಕೊಡಲು ಕಾರಣವೇನೆಂದು ಆ ಶಿಶುವನ್ನು ಪ್ರಶ್ನಿಸಿದ. ತಾನು ಹುಟ್ಟಿದ ಮೊದಲ್ಗೊಂಡು ಪ್ರತಿ ದಿನವೂ ಒಂದೊಂದು ಗೋವನ್ನು ದಾನ ಮಾಡುವುದಾದರೆ ತಾನು ಅವತರಿಸಲು ಸಿದ್ಧವೆಂದು ಆ ಶಿಶು ನುಡಿಯಿತು. ರಾಜ ದಂಪತಿಗಳು ಸಂತೋಷದಿಂದ ಒಪ್ಪಿದರು. ಕೂಡಲೇ ಸುಖಪ್ರಸವವಾಯಿತು. ಹನ್ನೆರಡು ವರ್ಷಗಳಿಂದ ಮಳೆ ಬೀಳದಿದ್ದ ಆ ಪ್ರದೇಶದಲ್ಲಿ ಈ ಮಗು ಹುಟ್ಟಿದ ಕೂಡಲೇ ಸುವೃಷ್ಟಿಯಾಯಿತು. ಕಾಲಕ್ರಮದಲ್ಲಿ ಈಕೆಯನ್ನು ಶ್ವಫಲ್ಕನಿಗೇ ಕೊಟ್ಟು ಮದುವೆ ಮಾಡಲಾಯಿತು. ಇವರ ಮಗನೇ ಅಕ್ರೂರ (**ನೋಡಿ**). ಈ ವೃತ್ತಾಂತ ಭಾಗವತದ ಹತ್ತನೆಯ ಸ್ಕಂಧದಲ್ಲಿ ಬಂದಿದೆ. *

**ಗಾಂಧರ್ವವಿವಾಹ :** ಆಧುನಿಕ ಪ್ರೇಮವಿವಾಹವನ್ನು ಹೋಲುವ ಈ ಪದ್ಧತಿ ಸಾಕಷ್ಟು ಪ್ರಾಚೀನವಾದುದು. ಋಗ್ವೇದದಲ್ಲಿ ಇದು ಸೂಚಿತವಾಗಿದೆ. ಮಾತಾಪಿತೃಗಳು ಪ್ರೇಮಪ್ರಸಂಗಗಳಲ್ಲಿ ಕನ್ಯೆಯರನ್ನು ಪ್ರೋತ್ಸಾಹಿಸುತ್ತಿದ್ದರೆಂದೂ ಪ್ರೇಮಯಾಚನೆಗಾಗಿ ವಶೀಕರಣ ಮಂತ್ರಗಳಿವೆಯೆಂದೂ ಅಥರ್ವವೇದ ತಿಳಿಸುತ್ತದೆ. ಮುಂದೆ ಗೃಹ್ಯ ಮತ್ತು ಧರ್ಮಸೂತ್ರಗಳಲ್ಲೂ ಸ್ಮೃತಿಗಳಲ್ಲೂ ವಿವಾಹದ ಎಂಟು ರೂಪಗಳ ಪ್ರಸ್ತಾಪ ಬಂದಾಗಲೆಲ್ಲ ಗಾಂಧರ್ವವಿವಾಹಕ್ಕೂ ಸಾಕಷ್ಟು ಪ್ರಾಶಸ್ತ್ಯ ಸಿಕ್ಕಿದೆ. ಅದು ಬ್ರಾಹ್ಮಣವರ್ಣಕ್ಕೆ ಉಚಿತವಾದ, ಪ್ರಶಸ್ತ ಅಥವಾ ಧರ್ಮಪದ್ಧತಿ ಅಲ್ಲದಿದ್ದರೂ ಬೇರೆ ಅಪ್ರಶಸ್ತ ರೂಪಗಳಿಗಿಂತ ಉತ್ತಮ ಎಂಬ ಭಾವನೆ ಇತ್ತು.

ವಧೂವರರಲ್ಲಿ ಪರಸ್ಪರ ಅನುರಾಗ ಬೆಳೆದು ತಮ್ಮ ಇಚ್ಛೆಯಿಂದಲೇ ಆಲಿಂಗನಾದಿ ಶರೀರ ಸಂಬಂಧ ಉಂಟಾಗಿ ಅನಂತರ ನಡೆಯುವ ವಿವಾಹ ಗಾಂಧರ್ವ ರೀತಿಯದು ಎಂದು ಮನುಸ್ಮೃತಿಯಲ್ಲಿ ಹೇಳಿದೆ. ಗಂಧರ್ವರು ಸ್ತ್ರೀ ಕಾಮುಕರಾದುದರಿಂದ ಈ ಹೆಸರು ಬಂದಿದೆಯೆಂದು ತೈತ್ತಿರೀಯ ಸಂಹಿತೆ ಮತ್ತು ಐತರೇಯ ಬ್ರಾಹ್ಮಣಗಳಿಂದ ತಿಳಿಯುತ್ತದೆ. ಇಲ್ಲಿ ತಂದೆಯಿಂದ ಕನ್ಯಾದಾನವಿಲ್ಲ. ಹೀಗೆ ಅವನ ಅಧಿಕಾರ ಮೊಟಕಾಗುತ್ತದೆ. ವಧೂವರರ ಪರಸ್ಪರ ಪ್ರೇಮವೇ ಇಲ್ಲಿ ಮುಖ್ಯ. ಧರ್ಮ ಮತ್ತು ಪ್ರಜಾಕಾರ್ಯಗಳಿಗಿಂತ ರತಿಗೇ ಹೆಚ್ಚು ಪ್ರಾಧಾನ್ಯ ಇರುವುದರಿಂದ ಹೆಚ್ಚಿನ ಧರ್ಮಶಾಸ್ತ್ರಕಾರರು ಇದನ್ನು ಅಪ್ರಶಸ್ತವೆಂದು ಪರಿಗಣಿಸಿದ್ದಾರೆ. ಆದರೂ ಅದು ಹೇಯವಲ್ಲವೆಂದೂ ಕ್ಷತ್ರಿಯರಿಗೆ ಉಚಿತವಾದುದೆಂದೂ ಕೆಲವೊಮ್ಮೆ ಎಲ್ಲ ವರ್ಣಗಳೂ ಒಪ್ಪಬಹುದಾದ ವಿವಾಹವೆಂದೂ ಅನೇಕರು ಅಭಿಪ್ರಾಯಪಟ್ಟಿದ್ದಾರೆ. ವಾತ್ಸ್ಯಾಯನ ಕಾಮಸೂತ್ರದಲ್ಲಿ ಮೊದಲಿಗೆ ಬ್ರಾಹ್ಮಣವಿವಾಹವೇ ಶ್ರೇಷ್ಠವೆಂದು ತಿಳಿಸಿದರೂ ಮುಂದೆ ಗಾಂಧರ್ವವೇ ಶ್ರೇಷ್ಠವೆಂದು ಹೇಳಿದೆ. ಪರಸ್ಪರ ಅನುರಾಗದ ಮೇಲೆ ನಿಂತಿರುವುದರಿಂದಲೂ ಅನೇಕ ಕ್ಲೇಶಗಳಿಂದ ಮುಕ್ತವಿರುವುದರಿಂದಲೂ ಗಾಂಧರ್ವವಿವಾಹ ವಿವಾಹಗಳಲ್ಲೆಲ್ಲ ಪೂಜಿತವೆಂದು ವಾತ್ಸ್ಯಾಯನ, ಬೌಧಾಯನ ಮತ್ತು ನಾರದರು ಹೊಗಳಿದ್ದಾರೆ. ಕ್ಷತ್ರಿಯರಲ್ಲಿ, ಅದರಲ್ಲೂ ರಾಜಮನೆತನಗಳಲ್ಲಿ, ಅದು ಧಾರಾಳವಾಗಿ ಪ್ರಚಾರದಲ್ಲಿದ್ದಂತೆ ಕಾಣುತ್ತದೆ.

ಸ್ವಯಂವರ ಗಾಂಧರ್ವವಿವಾಹದ ಒಂದು ವಿಧವೆಂದು ಯಾಜ್ಞವಲ್ಕ್ಯ ಸ್ಮೃತಿಯ ಭಾಷ್ಯವಾದ ವೀರಮಿತ್ರೋದಯದಲ್ಲಿ ಹೇಳಿದೆ. ಅದರ ಒಂದು ಸರಳ ಪ್ರಕಾರವೆಂದರೆ ಋತುಮತಿಯಾದ ಕನ್ಯೆ ಮೂರು ವರ್ಷ ಕಾದ ಅನಂತರ ತನ್ನ ವರನನ್ನು ತಾನೇ ಆರಿಸಿಕೊಳ್ಳುವುದು. ಹಾಗೆಯೇ, ವಿವಾಹ ಮಾಡಿಸುವ ತಂದೆ ತಾಯಿಯರೂ ಪಾಲಕರೂ ಇಲ್ಲದಿರುವಾಗಲೂ ಕನ್ಯೆ ಸ್ವತಂತ್ರಳು. ಇದು ಎಲ್ಲ ಜಾತಿಗಳಿಗೂ ಅನ್ವಯಿಸುತ್ತದೆ. ಸಾವಿತ್ರಿ ಸತ್ಯವಾನನನ್ನು ಆರಿಸಿದ್ದು ಹೀಗೆಯೇ. ದಮಯಂತಿ, ಇಂದುಮತಿ ಶಕುಂತಲೆ ಮೊದಲಾದವರು ಪ್ರಸಿದ್ಧ ಉದಾಹರಣೆಗಳಾಗಿದ್ದಾರೆ. (ಎಚ್.ವಿ.ಎನ್.)


**ಗಾಂಧಾರ :** ಪ್ರಾಚೀನ ಭಾರತದ ವಾಯವ್ಯ ಭಾಗದಲ್ಲಿ ಹಬ್ಬಿದ್ದ ಪ್ರದೇಶ. ಈ ಪ್ರದೇಶದ ಜನರನ್ನೂ ಗಾಂಧಾರರೆಂದು ಕರೆಯುತ್ತಿದ್ದದ್ದುಂಟು. ಇದರ ಮೇರೆಗಳು ಅಸ್ಪಷ್ಟವಾಗಿದ್ದುವಲ್ಲದೆ ಇದರ ವಿಸ್ತಾರ ಕಾಲಕಾಲಕ್ಕೆ ಬದಲಾಯಿಸುತ್ತಿತ್ತೆಂದು ತೋರುತ್ತದೆ. ಗಾಂಧಾರದ ಉಲ್ಲೇಖ ಮೊದಲು ಋಗ್ವೇದದಲ್ಲಿ ದೊರಕುತ್ತದೆ. ಅನಂತರದ ಬ್ರಾಹ್ಮಣಗಳು, ಪುರಾಣಗಳು ಮತ್ತು ಬೌದ್ಧ ಗ್ರಂಥಗಳಲ್ಲೂ ಇದರ ಪ್ರಸ್ತಾಪವಿದೆ. ನಿಶ್ಚಿತ ಚಾರಿತ್ರಿಕ ದಾಖಲೆಗಳಲ್ಲಿ ಗಾಂಧಾರದ ಹೆಸರು ಮೊದಲು ಕಾಣಸಿಗುವುದು ಪರ್ಷಿಯದ ದೊರೆ 1ನೆಯ ಡೇರಿಯಸನ (ಪ್ರ.ಶ.ಪೂ. 522–486) ಬೇಹಿಸ್ತಾನ್ ಶಾಸನದಲ್ಲಿ. ಹಿಂದೂಕುಷ್ ಪರ್ವತಶ್ರೇಣಿಯ ದಕ್ಷಿಣಕ್ಕಿದ್ದ ಪ್ರದೇಶಕ್ಕೆ ಗಾಂಧಾರವೆಂಬ ಹೆಸರಿತ್ತೆಂದು ಆ ಕಾಲದ ಇತರ ಆಧಾರಗಳಿಂದ ಸ್ಥೂಲವಾಗಿ ತಿಳಿಯುತ್ತದೆ. ಯುವಾನ್

ಚಾಂಗ್ ಮತ್ತು ಇತರ ಚೀನೀ ಯಾತ್ರಿಕರ ಇತಿವೃತ್ತಗಳಲ್ಲಿ ಗಾಂಧಾರದ ಪ್ರಸಿದ್ಧ ನಗರಗಳು ಮತ್ತು ಬೌದ್ಧ ಕೇಂದ್ರಗಳನ್ನು ವಿಶೇಷವಾಗಿ ವಿವರಿಸಿರುವುದರಿಂದ, ಆ ಪ್ರದೇಶದ ಅಂದಿನ ವ್ಯಾಪ್ತಿಯನ್ನು ಊಹಿಸಬಹುದು. ಇವುಗಳ ಪ್ರಕಾರ ಗಾಂಧಾರ



**ಮಾರಸೇನೆಯಿಂದ ಆವೃತನಾದ ಬುದ್ಧ – 3ನೆಯ ಶತಮಾನದ ಶಿಲ್ಪ**

ಈಗಿನ ಉತ್ತರ ಪಾಕಿಸ್ತಾನದಲ್ಲಿ, ಸಿಂಧೂ ನದಿಯ ಪಶ್ಚಿಮದಿಂದ ಪೆಷಾವರ್ ತಗ್ಗಿನವರೆಗಿನ ಪ್ರದೇಶವನ್ನೂ ಪಶ್ಚಿಮೋತ್ತರದಲ್ಲಿ ಈಗಿನ ಆಫ್ಘಾನಿಸ್ತಾನದ ಸ್ವಾಕ್ ಮತ್ತು ಕಾಬುಲ್ ಕಣಿವೆಯ ಪ್ರದೇಶವನ್ನೂ ಒಳಗೊಂಡಿತ್ತೆಂದು ತಿಳಿಯುತ್ತದೆ. ತಕ್ಷಶಿಲೆ (ಪಾಕಿಸ್ತಾನದ ರಾವಲ್ಪಿಂಡಿ ಜಿಲ್ಲೆಯಲ್ಲಿರುವ ಈಗಿನ ಟ್ಯಾಕ್ಸಿಲ) ಗಾಂಧಾರದ ರಾಜಧಾನಿಯಾಗಿತ್ತು. ಪುಷ್ಕಳಾವತಿಯೂ (ಪಾಕಿಸ್ತಾನದ ಪೆಷಾವರ್ ಜಿಲ್ಲೆಯಲ್ಲಿರುವ ಚಾರ್ಸದ) ಕೆಲಕಾಲ ರಾಜಧಾನಿಯಾಗಿತ್ತು. ಅಕ್ಬರನ ಕಾಲದ ಐನ್–ಇ–ಅಕ್ಬರಿ ಗ್ರಂಥದ ಪ್ರಕಾರ ಅಂದಿನ ಗಾಂಧಾರ ಕಾಶ್ಮೀರ ಮತ್ತು ಅಟ್ಟಕ್ ಮಧ್ಯದ ಪ್ರದೇಶವಾಗಿದ್ದಿತು. ಈಗ ಆಫ್ಘಾನಿಸ್ತಾನದಲ್ಲಿರುವ ಕಾಂದಹಾರ್ ನಗರದ ಹೆಸರಿನಲ್ಲಿ ಹಳೆಯ ಗಾಂಧಾರ ಪ್ರಾಂತ್ಯದ ಸ್ಮರಣೆ ಉಳಿದುಬಂದಿದೆ. ಗಾಂಧಾರದ ಮುಂಡಿಗಕ್, ಬೆಗ್ರಾಮ್, ಹಡ್ಡ, ತಕ್ಷಶಿಲಾ, ಚಾರ್ಸದ ಮುಂತಾದ ಅನೇಕ ಪ್ರಾಚೀನ ನೆಲೆಗಳಲ್ಲಿ ಉತ್ಖನನಗಳು ನಡೆದಿವೆ. ಮುಂಡಿಗಕ್‌ನಲ್ಲಿ ಪ್ರ.ಶ.ಪೂ. 4ನೆಯ ಸಹಸ್ರಮಾನದಿಂದ ಚಾರಿತ್ರಿಕ ಕಾಲದವರೆಗೂ ಪ್ರಚಲಿತವಿದ್ದ ಸಂಸ್ಕೃತಿಗಳು ಬೆಳಕಿಗೆ ಬಂದಿವೆ. ಹಡ್ಡ ಮತ್ತು ಬೆಗ್ರಾಮ್ ಬಹುಮಟ್ಟಿಗೆ ಪ್ರಸಕ್ತಶಕದ ಆದಿ ಶತಮಾನಗಳಿಗೆ ಸೇರಿದ ನಗರಾವಶೇಷಗಳು. ಹಡ್ಡದಲ್ಲಿ ಅನೇಕ ವಾಸ್ತು ಶಿಲ್ಪ ಕಲಾಕೃತಿಗಳೂ ಬೆಗ್ರಾಮ್‌ನಲ್ಲಿ ಇವುಗಳ ಜೊತೆಗೆ ಕೆತ್ತನೆಗಳೂ ದೊರಕಿವೆ. ತಕ್ಷಶಿಲಾದಲ್ಲಿ ಮೂರು ಕಾಲಗಳ ಅವಶೇಷಗಳು ಬೇರೆಬೇರೆ ದಿಬ್ಬಗಳಲ್ಲಿದ್ದವು. ಮೊದಲ ನೆಯ ಬೀರ್ ದಿಬ್ಬ ಪ್ರ.ಶ. ಪೂ. 6ನೆಯ ಶತಮಾನ ದಿಂದ ಅಲೆಗ್ಸಾಂಡರನ ಕಾಲದವರೆಗೆ ಉಪಸ್ಥಿತವಿದ್ದ ನಗರಾವಶೇಷ. ಮುಂದಿನ ಸಿರ್ಕಪ್ ಪ್ರ.ಶ.ಪೂ. 2ನೆಯ ಶತಮಾನದಿಂದ 12ನೆಯ ಶತಮಾನದ ವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ತದನಂತರದ ಸಿಸುರ್ಕ್‌ನಲ್ಲಿ ಕುಶಾನರ ಕಾಲದ ಅವಶೇಷಗಳಿವೆ. ತಕ್ಷಶಿಲಾ ನಗರ 5ನೆಯ ಶತಮಾನದ ಹೊತ್ತಿಗೆ ಕೊನೆಗೊಂಡಿತೆಂದು ತೋರುತ್ತದೆ. ಇಲ್ಲಿ ಕೋಟೆ, ಅರಮನೆ, ದೇವಾಲಯಗಳು, ಬೌದ್ಧಸ್ತೂಪಗಳು, ಮಠಗಳು, ವಾಸದ ಮನೆಗಳು ಮುಂತಾದ ಅನೇಕ ವಾಸ್ತು ಅವಶೇಷಗಳಲ್ಲದೆ ಕಲ್ಲು ಮತ್ತು ಲೋಹ ಕಲಾಕೃತಿಗಳೂ ಅನೇಕ ನಾಣ್ಯಗಳೂ ನಿತ್ಯೋಪಯೋಗಿ ಉಪಕರಣಗಳೂ ಆಯುಧಗಳೂ ಅಲಂಕರಣ ಸಾಮಗ್ರಿಗಳೂ ದೊರೆತಿವೆ. ಚಾರ್ಸದದಲ್ಲಿ ಈಚೆಗೆ ನಡೆದಿರುವ ಉತ್ಖನನದಲ್ಲಿ ಪ್ರಚಲಿತಶಕದ ಆರಂಭದ ಶತಮಾನಗಳ ಅವಶೇಷಗಳು ಕಂಡುಬಂದಿವೆ. ಭಾರತದಲ್ಲಿ ಕ್ರೈಸ್ತಧರ್ಮದ ಅಸ್ತಿತ್ವದ ಬಗ್ಗೆ ಮಾಹಿತಿ ನೀಡುವ ಸಂತ ಪೀಟರನ ಪ್ರತಿಮೆ ಇವುಗಳಲ್ಲಿ ಬಹುಮುಖ್ಯವಾದದ್ದು. ಈ ಪ್ರದೇಶದಲ್ಲಿ ನಡೆದಿರುವ ಇತರ ಅನ್ವೇಷಣೆಗಳಿಂದ ಅನೇಕ ಪ್ರಾಗೈತಿಹಾಸಿಕ ನೆಲೆಗಳು, ಬಾಮಿಯಾನ್, ದರುಂತ, ಮುಂತಾದೆಡೆಗಳಲ್ಲಿ ಗುಹಾದೇವಾಲಯಗಳು, ಅನೇಕ ಶಾಸನಗಳು ಮತ್ತು ನಾಣ್ಯಗಳು ಗೋಚರವಾಗಿವೆ. ಶಾಸನಗಳಲ್ಲಿ ಮಾನ್ಸೇರಾ ಶಾಬಾಸ್‌ಗರ್ಹಿಗಳ ಅಶೋಕನ ಶಿಲಾಲಿಪಿಗಳು ಮುಖ್ಯ. ಇತ್ತೀಚೆಗೆ ಕಾಂದಹಾರ್ ಬಳಿ ದೊರಕಿದ ಅದೇ ದೊರೆಯ ಗ್ರೀಕ್ ಮತ್ತು ಆರಮೇಯಿಕ್ ಶಾಸನಗಳೂ ಅನೇಕ ಶಿಲಾವಿಗ್ರಹಗಳ ಮೇಲಿರುವ ಖರೋಷ್ಠಿ ಶಾಸನಗಳೂ ಮುಖ್ಯವಾದವು. ಅನೇಕ ಉತ್ಖನನಗಳಲ್ಲಿ ಭಾರತದ ಅತ್ಯಂತ ಪ್ರಾಚೀನ ನಾಣ್ಯಗಳಾದ ಮುದ್ರಾಂಕಿತ ನಾಣ್ಯಗಳೂ ಗ್ರೀಕರ, ಪಾರ್ಥಿಯನರ, ಶಕರ, ಕುಷಾಣರ, ಸ್ಯಾಸಾನೀಯನರ ಮತ್ತು ಅನಂತರದ ರಾಜವಂಶೀಯರ ನಾಣ್ಯಗಳು ಬೆಳಕಿಗೆ ಬಂದಿವೆ.





**ಜಂಡಿಯಾಲ್ ದೇವಾಲಯದ ತಳವಿನ್ಯಾಸ: 1. ಪೆರಿಸ್ಟೈಲ್, 2. ಓಪಿಸ್ಟೋಡೋಮಸ್, 3. ನೇವೋಸ್, 4. ಪ್ರೋನೇವೋಸ್**



**ಬೋಧಿಸತ್ತ್ವ, ಸು. 2ನೆಯ ಶತಮಾನ**

ಭಾರತದ ಚರಿತ್ರೆಯಲ್ಲಿ ಗಾಂಧಾರಕ್ಕೆ ಪ್ರಾಮುಖ್ಯತೆ ಇದೆ. ಖೈಬರ್, ಬೋಲಾನ್ ಕಣಿವೆಗಳ ಸುತ್ತಲಿನ ಪ್ರದೇಶವನ್ನು ಒಳಗೊಂಡು, ಪಶ್ಚಿಮ ಮತ್ತು ಮಧ್ಯ ಏಷ್ಯದಿಂದ ಭಾರತದ ಕಡೆಯ ಪ್ರವೇಶ ದ್ವಾರದಲ್ಲಿರುವುದೇ ಗಾಂಧಾರದ ಮಹತ್ವಕ್ಕೆ ಕಾರಣ. ಇದು ಭಾರತೀಯ ಮತ್ತು ಪಶ್ಚಿಮ ಸಂಗಮ ಸ್ಥಾನ. ಇತಿಹಾಸಪೂರ್ವ ಕಾಲದಲ್ಲೇ ಗಾಂಧಾರದಲ್ಲಿ ಇರಾನ್ ಪ್ರಸ್ಥ ಭೂಮಿಯಿಂದ ಹಬ್ಬಿದ ಹಲವು ಸಂಸ್ಕೃತಿ ಗಳು ಪ್ರಚಲಿತವಿದ್ದವು. ಅನಂತರ ಇದರ ಕೆಲವು ಭಾಗಗಳು ಪ್ರಸಿದ್ಧ ಹರಪ್ಪ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿದ್ದವು. ಪ್ರಾಯಶಃ ಆರ್ಯ ಭಾಷಾಭಾಷಿಗಳು ಭಾರತವನ್ನು ಪ್ರವೇಶಿಸಿದ್ದು ಈ ಭಾಗ ದಿಂದಲೇ ಮುಂದೆ ಇತಿಹಾಸ ಯುಗದ ಆರಂಭದಲ್ಲಿ ಇದು ಸುಮಾರು ಎರಡು ಶತಮಾನಗಳ ಕಾಲ ಪರ್ಷಿಯನ್ ಸಾಮ್ರಾಜ್ಯದ ಭಾಗವಾಗಿತ್ತು. ಗ್ರೀಕ್ ಚರಿತ್ರಕಾರ ಹೆಕ್‌ಟೀಯಸ್‌ನ ಒಂದು ಹೇಳಿಕೆಯ ಪ್ರಕಾರ ಪರ್ಷಿಯನ್ ಸಾಮ್ರಾಜ್ಯದ ಇಪ್ಪತ್ತೆರಡು ಪ್ರಾಂತ್ಯಗಳಲ್ಲಿ (ಸತ್ರಪಿ) ಗಾಂಧಾರ ಹದಿನೇಳನೆಯದು. ಬೇಹಿಸ್ತಾನ್ ಶಾಸನವೂ ಹಿರಾಡೊಟಸನ ಉಲ್ಲೇಖಗಳೂ ಇದಕ್ಕೆ ಇಂಬುಗೊಡುತ್ತವೆ. ಗಾಂಧಾರ ಪರ್ಷಿಯನ್ ಸಾಮ್ರಾಜ್ಯದ ಅಧೀನವಾದ್ದು ಪ್ರಾಯಶಃ ಸೈರಸ್ ದೊರೆಯ (ಪ್ರ.ಶ.ಪೂ. 559–530) ಕಾಲದಲ್ಲಿ. ಪರ್ಷಿಯನ್ ಸಾಮ್ರಾಜ್ಯದ ಅಂತ್ಯದ ಅನಂತರ ಪ್ರ.ಶ.ಪೂ. ಸು. 327ರಲ್ಲಿ ಮ್ಯಾಸಿಡಾನ್ ದೊರೆ ಅಲೆಕ್ಸಾಂಡರನ

ಕೈವಶವಾಯಿತು. ಅನಂತರ ಅವನ ದಂಡಾಧಿಕಾರಿ ಸೆಲ್ಯೂಕಸನ ಕೈಸೇರಿ ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದಲ್ಲಿ ಲೀನವಾಯಿತು. ಅಶೋಕಮೌರ್ಯನ ಮರಣಾನಂತರ ಆ ಸಾಮ್ರಾಜ್ಯ ಒಡೆದಾಗ, ಪ್ರ.ಶ.ಪೂ. 208ರಲ್ಲಿ ಸೆಲ್ಯೂಕಸನ ವಂಶೀಯರು ಪುನಃ ಇದನ್ನು ಆಕ್ರಮಿಸಿದರು. ಅಲ್ಲಿಂದ ಪ್ರಚಲಿತಶಕಾರಂಭದ ವರೆಗೆ ಗ್ರೀಕ್-ಬ್ಯಾಕ್ಟ್ರಿಯನರು, ಶಕರು ಇಲ್ಲಿ ಆಳಿದರು. 1ನೆಯ ಶತಮಾನದ ಮೊದಲ ಭಾಗದಲ್ಲಿ ಮಧ್ಯ ಏಷ್ಯದಿಂದ ಬಂದ ಯೂ-ಚಿ ಕುಲದ ಕುಜುಲ ಕಡ್‌ಫೀಸಿಸನ ಕಾಲದಲ್ಲಿ ಕುಶಾಣರ ಅಧೀನವಾಗಿ, ಅನಂತರ ಆ ವಂಶದ ವಿಮ, ಕನಿಷ್ಕ, ವಾಸುದೇವ ಮುಂತಾದವರ ಆಳ್ವಿಕೆಯಲ್ಲಿದ್ದು,



ಗಾಂಧಾರವನ್ನಾಳುತ್ತಿದ್ದ ರಾಜರ ಕೆಲವು ನಾಣ್ಯಗಳು: 1–3 ಪ್ರ.ಶ.ಪೂ. 2ನೆಯ ಶತಮಾನದ ಕೆಲವು ಇಂಡೋಗ್ರೀಕ್ ಅರಸರ ಬೆಳ್ಳಿಯ ನಾಣ್ಯಗಳು. 4. ಕುಷಾಣ ಅರಸ ಕನಿಷ್ಕನ ಚಿನ್ನದ ನಾಣ್ಯ

3ನೆಯ ಶತಮಾನದ ಅಂತ್ಯದ ಹೊತ್ತಿಗೆ ಸ್ಯಾಸಾನೀಯ ಕುಲದ 1ನೆಯ ಆರ್ದಶಿರ ಮತ್ತು 2ನೆಯ ಶಾಪುರನ ಧಾಳಿಗಳಿಂದ ಸ್ಯಾಸಾನೀಯ ಸಾಮ್ರಾಜ್ಯದ ಭಾಗವಾಯಿತು. ಸುಮಾರು 477ರಲ್ಲಿ ಶ್ವೇತ ಹೂಣರು ಇದರ ಮೇಲೆ ಧಾಳಿ ಮಾಡಿದರು. ಹೂಣರನ್ನು ಗುಪ್ತ ವಂಶೀಯರು ಸೋಲಿಸಿದ ಮೇಲೆ ಗಾಂಧಾರ ಸ್ವಲ್ಪಕಾಲ ಗುಪ್ತಸಾಮ್ರಾಜ್ಯದಲ್ಲಿ ಸೇರಿತ್ತು. ಅನಂತರ ಅದು ಕನೌಜಿನ ಹರ್ಷವರ್ಧನನ ಆಸರೆಯಲ್ಲಿತ್ತು. 7ನೆಯ ಶತಮಾನಾಂತ್ಯದಲ್ಲಿ ಅರಬರು ಈ ಪ್ರದೇಶವನ್ನು ಆಕ್ರಮಿಸಿದರು. ಬಹುಶಃ ಈ ಕಾಲದಿಂದ ಗಾಂಧಾರ ಪ್ರಾಂತ್ಯ ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡಿತು. ಮುಂದೆ ಈ ಭಾಗ ಶಾಹಿ ಮುಂತಾದ ಅನೇಕ ಹಿಂದೂರಾಜರು, ದೆಹಲಿಯ ಸುಲ್ತಾನರು, ಆಫ್ಘಾನಿಸ್ತಾನದ ರಾಜವಂಶೀಯರು, ಮೊಗಲರು, ಸಿಕ್ಖರು ಮುಂತಾದವರ ಆಧೀನವಾಗಿ 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಆಫ್ಘಾನಿಸ್ತಾನ ಮತ್ತು ಬ್ರಿಟಿಷ್ ಭಾರತಗಳಲ್ಲಿ ಹಂಚಿಹೋಯಿತು.

ಗಾಂಧಾರ ಕಾಲಕಾಲಕ್ಕೆ ಭಾರತೀಯರ ಇಲ್ಲವೇ ಪರಕೀಯರ ಆಳ್ವಿಕೆಗೆ ಒಳಪಡುತ್ತಿದ್ದುದರಿಂದ ಇಲ್ಲಿಯ ಸಾಂಸ್ಕೃತಿಕ ಸ್ವರೂಪದ ಮೇಲೆ ಪರಿಣಾಮವುಂಟಾಗಿದೆ. ಈ ಪ್ರಾಂತ್ಯ ಹಿಂದೂ ಮತ್ತು ಅನ್ಯ ಸಂಸ್ಕೃತಿಗಳನ್ನು ಬೆಸೆಯುತ್ತಿದ್ದ ಪ್ರದೇಶ. ಆದರೂ ಹೊರದೇಶಗಳ ಸಂಸ್ಕೃತಿಗಳ ಪ್ರಭಾವವೇ ಇಲ್ಲಿ ವಿಶೇಷವಾಗಿತ್ತು. ಗಾಂಧಾರದ ಜನ ವೇದಧರ್ಮ ನಿಷ್ಠರಲ್ಲವೆಂದೂ ಆದ್ದರಿಂದ ಅಲ್ಲಿಗೆ ಹೋದವರು ಪ್ರಾಯಶ್ಚಿತ್ತ ಮಾಡಿಕೊಳ್ಳ ಬೇಕೆಂದೂ ಕೆಲವು ಪ್ರಾಚೀನ ಹಿಂದೂ ಧರ್ಮಗ್ರಂಥಗಳಲ್ಲಿ ವಿಧಿಸಲಾಗಿದೆ. ಈ ಪ್ರದೇಶಗಳಲ್ಲಿ ಹರಡಿದ್ದುದು ಮೊದಲು ಪ್ರಾಚೀನ ಇರಾನೀಯ, ಅನಂತರ ವೇದಕಾಲೀನ ಹಿಂದು, ಅನಂತರ ಬಹುಮಟ್ಟಿಗೆ ಗ್ರೀಕ್-ರೋಮನ್ ಸಂಸ್ಕೃತಿಗಳು. ಪ್ರಚಲಿತ ಶಕದ ಆರಂಭದ ಶತಮಾನಗಳಲ್ಲಿ ಮಹಾಯಾನ ಬೌದ್ಧಧರ್ಮ ಇಲ್ಲಿ ಪ್ರಬಲಿಸಿ ಗ್ರೀಕ್-ರೋಮನ್ ಮತ್ತು ಭಾರತೀಯ ಅಂಶಗಳನ್ನೊಳಗೊಂಡಿದ್ದು ಒಂದು ವಿಶಿಷ್ಟ ಸಂಸ್ಕೃತಿ ಹರಡಿತು. 11–12ನೆಯ ಶತಮಾನಗಳಿಂದ ಇಸ್ಲಾಂ ಇಲ್ಲಿಯ ಪ್ರಧಾನ ಧರ್ಮವಾಗಿ, ಇಸ್ಲಾಮೀ ಸಂಸ್ಕೃತಿ ಇಲ್ಲಿ ಹರಡಿತು.

ಇಸ್ಲಾಮೀ ಸಂಸ್ಕೃತಿ ಹರಡಿದ ಮೇಲೆ ಗಾಂಧಾರ ಪ್ರಾಂತ್ಯದ ಕಲೆಯಲ್ಲಿ ಸತ್ವವೇನೂ ಕಾಣುವುದಿಲ್ಲ. ಇದಕ್ಕೆ ಮುನ್ನ ಶ್ವೇತಹೂಣರ ಅಥವಾ ಅರಬ್ಬರ ಆಕ್ರಮಣದಿಂದಾಗಿ ಈ ಪ್ರದೇಶ ಆರ್ಥಿಕ ಹಾಗೂ ಸಾಂಸ್ಕೃತಿವಾಗಿ ಜರ್ಝರಿತವಾದ್ದರಿಂದ ಆ ಕಾಲದ ಕೃತಿಗಳೂ ಕಲ್ಯೈತಿಹಾಸಿಕ ದೃಷ್ಟಿಯಿಂದ ಬರಡೇ. ಆದರೆ ಅದಕ್ಕೂ ಹಿಂದೆ, ಎಂದರೆ ಪ್ರ.ಶ. 6ನೆಯ ಶತಮಾನಕ್ಕೆ ಹಿಂದೆ, ಇಲ್ಲಿ ಬೆಳೆದ ಕಲಾ ಸಂಪ್ರದಾಯ ವೈಭವಯುತವಾಗಿತ್ತು.

ಗಾಂಧಾರದ ಅತ್ಯಂತ ಪ್ರಾಚೀನ ಗಮನಾರ್ಹ ವಾಸ್ತುಕೃತಿಯೆಂದರೆ ಪ್ರ.ಶ.ಪೂ. 3ನೆಯ ಸಹಸ್ರಮಾನಕ್ಕೆ ಸೇರಿದ ಮಂಡಿಗಕ್‌ನ ಅರಮನೆ. ಇತ್ತೀಚೆಗೆ ಉತ್ಖನನದಲ್ಲಿ ಬೆಳಕಿಗೆ ಬಂದಿರುವ ಇದರ ಅವಶೇಷಗಳಲ್ಲಿ, ಆ ಕಾಲದಲ್ಲಾಗಲೇ ಇಲ್ಲಿ ಹರಡಿದ್ದ ಸುಮೇರಿಯ ವಾಸ್ತುಸಂಪ್ರದಾಯದ ಕುರುಹುಗಳು ಎದ್ದು ಕಾಣುತ್ತವೆ. ಸುಮಾರು ಚೌಕಾಕೃತಿಯಲ್ಲಿರುವ ಈ ಕಟ್ಟಡದ ಹೊರಗೋಡೆಗಳಲ್ಲಿ ಮೆಸಪೊಟೇಮಿಯದ ಸಮಕಾಲೀನ ದೇವಾಲಯಗಳ ರೀತಿಯ ಅರೆಗಂಬಗಳ ಅಲಂಕರಣ ಇದೆ. ಅಲ್ಲದೆ ಈ ಕಾಲದ ಚಿತ್ರಿತ ಮಡಕೆಗಳು, ಸುಟ್ಟ ಮಣ್ಣಿನ ಬೊಂಬೆಗಳು ಮತ್ತು ಇತರ ಶಿಲ್ಪಗಳು ಮೆಸಪೊಟೇಮಿಯ ಮತ್ತು ಹರಪ್ಪ ಸಂಸ್ಕೃತಿಯ ಸಂಪ್ರದಾಯದವುಗಳಾಗಿವೆ. ಅಶೋಕನ ಕಾಲದಲ್ಲಿ ಬೌದ್ಧಧರ್ಮ ಇಲ್ಲಿ ಹರಡಿದಾಗಿನಿಂದ ಶಿಲೆಯ ಬಳಿಯ ಧರ್ಮರಾಜಿಕಾ ಎಂಬ ಬೌದ್ಧ ಸ್ತೂಪವನ್ನು ಅನಂತರದ ಕಾಲದಲ್ಲಿ ಬಹುವಾಗಿ ನವೀಕರಿಸಲಾಗಿದ್ದರೂ, ಅದರ ಮೂಲಭಾಗ ಮೌರ್ಯಕಾಲದ್ದಾಗಿದೆ. ಧರ್ಮರಾಜಿಕಾ ಸ್ತೂಪ ಒಂದು ವೃತ್ತಾಕಾರದ ಕಟ್ಟಡ. ಇದರಲ್ಲಿ ತಳದಲ್ಲಿ ವೃತ್ತಾಕಾರದ ಜಗತಿಯೂ ಅದರ ಮೇಲೆ ಅರ್ಧಗೋಳಾಕಾರದ ಅಂಡವೂ ಇದ್ದವು. ಜಗತಿಗೆ ಹತ್ತಲು ನಾಲ್ಕು ಮುಖ್ಯದಿಕ್ಕುಗಳಲ್ಲಿ ಮೆಟ್ಟಿಲುಗಳಿದ್ದವು. ಸ್ತೂಪದ ಒಳಭಾಗವನ್ನು ಒರಟು ಕಲ್ಲುಗಳನ್ನು ಪೇರಿಸಿ ಕಟ್ಟಲಾಗಿದೆ. ಇದರ ಸುತ್ತ ಸಕೇಂದ್ರದ ಇನ್ನೊಂದು ವೃತ್ತಾಕಾರದ ಕಲ್ಲು ಗೋಡೆಯಿದೆ; ಒಳಹೊರಗೋಡೆಗಳನ್ನು ಅನೇಕ ಅಡ್ಡಗೋಡೆಗಳಿಂದ ಸೇರಿಸಲಾಗಿದೆ. ಈ ಭಾಗ ಕುಶಾಣರ ಕಾಲದ್ದಿರಬಹುದೆಂದು ಊಹೆ. ಸ್ತೂಪದ ಹೊರಮೈಯಲ್ಲಿ ಸುಣ್ಣಕಲ್ಲಿನ ಸೈಜುಗಲ್ಲುಗಳಿದ್ದು ಅವುಗಳ ಮಧ್ಯೆ ದೇವಕೋಷ್ಠಗಳೂ ಇವೆ. ಈಗ ಇರುವ ಜಗತಿ ಪ್ರಾಯಶಃ ಶಕ ಅರಸರ (ಪ್ರ.ಶ.ಪೂ. 1ನೆಯ ಶತಮಾನ) ಕಾಲದ್ದು.



ಶ್ರಾವಸ್ತಿಯ ಪವಾಡ, 3ನೆಯ ಶತಮಾನ

ಸ್ತೂಪದ ಸುತ್ತಲೂ ಪ್ರದಕ್ಷಿಣೆ ಮಾಡಲು ಇದರಲ್ಲಿ ಪ್ರದಕ್ಷಿಣಾಪಥವಿದೆ. ಗಾಂಧಾರದಲ್ಲಿ ಈ ಸ್ತೂಪವೇ ಬಹು ಪ್ರಸಿದ್ಧವಾದ್ದು. ಇಲ್ಲಿ ಕಂಡುಬರುವ ವಾಸ್ತುರೂಪ ಎಲ್ಲೆಡೆಯೂ ಹರಡಿ ಗಾಂಧಾರದ ಸ್ತೂಪ ಶೈಲಿಯ ಬೆಳವಣಿಗೆಗೆ ಕಾರಣವಾಯಿತು. ತಕ್ಷಶಿಲೆಯ ಸಿರ್ಸುಕ್ ಅವಶೇಷಗಳ ಬಳಿ ಇರುವ ಶಿರೋಧಾನ ಸ್ತೂಪ ಸುಮಾರು ಇದೇ ಮಾದರಿಯಲ್ಲಿ, ಪೂರ್ಣ ಭಾರತೀಯ ಸ್ತೂಪ ವಾಸ್ತುವಿನೊಡನೆ ಕೊರಿಂಥಿಯನ್ ಕಂಬ ಮುಂತಾದ ಗ್ರೀಕ್-ರೋಮನ್ ಅಂಶಗಳನ್ನೂ ಅಳವಡಿಸಿಕೊಂಡಿದೆ. ಈ ಪ್ರದೇಶದ ಸ್ತೂಪವಾಸ್ತು ಕುಶಾಣರ ಕಾಲದಲ್ಲಿ ಒಂದು ವಿಶಿಷ್ಟ ರೂಪ ತಳೆಯಿತು. ಇವುಗಳಲ್ಲಿ ಚೌಕದ ಜಗತಿ, ಮೇಲೆ ಅನೇಕ ಸ್ತರಗಳ ಸ್ತೂಪಪೀಠ, ಅದರ ಛತ್ರಾವಳಿ ಇರುತ್ತವೆ. ಅಲ್ಲದೆ ಸ್ತೂಪದ ಸುತ್ತಲೂ ದೇವಕೋಷ್ಠಗಳ ಅಥವಾ ಸುದ್ದೆಯ ಉಬ್ಬುಶಿಲೆಗಳ ಅಲಂಕರಣ ಸಾಮಾನ್ಯ. ಈ ರೀತಿಯ ಸ್ತೂಪಗಳು ಮೊಹ್ರಾಮೊರಡು, ಪಿಪ್ಪಲ, ಜೌಲಿಯನ್ ಮುಂತಾದೆಡೆಗಳಲ್ಲಿ ಕಂಡುಬಂದಿವೆ. ಅಲ್ಲದೆ ಈ ಕಾಲದ ಸ್ತೂಪಗಳ ಸುತ್ತಲೂ ಶ್ರದ್ಧಾನ್ವಿತರು ಆಗಿಂದಾಗ್ಗೆ ಸೇರಿಸಿದ ಅನೇಕ ಸಣ್ಣ ಸ್ತೂಪಗಳೂ ಬುದ್ಧಗೃಹಗಳೂ ಈ ಪ್ರಾಂತ್ಯದ ಸ್ತೂಪ ಕಟ್ಟಡಗಳಿಗೆ ಬೋರುಗಲ್ಲುಗಳನ್ನೇ ಸಾಮಾನ್ಯವಾಗಿ ಬಳಸುತ್ತಿದ್ದರು. ಹೊರಮೈ ಮಾತ್ರ ಕಡೆದ ಸೈಜುಗಲ್ಲುಗಳು ಮತ್ತು ಚಪ್ಪಡಿಗಳಿಂದ ಕೂಡಿರುತ್ತದೆ. ಒಮ್ಮೊಮ್ಮೆ ಇಟ್ಟಿಗೆಯನ್ನು ಬಳಸಿರುವುದೂ ಉಂಟು.

ಈ ಸ್ತೂಪಗಳ ಸಮೀಪದಲ್ಲೇ ಬೌದ್ಧ ಭಿಕ್ಷುಗಳಿಗಾಗಿ ವಿಹಾರಗಳು ಇದ್ದು ಇವುಗಳಲ್ಲಿ ಸಾಮಾನ್ಯವಾಗಿ ಚೌಕ ಅಂಗಳದ ಸುತ್ತ ಅನೇಕ ಕೋಣೆಗಳನ್ನು ಅಳವಡಿಸಲಾಗಿರುತ್ತದೆ. ಅನೇಕ ಗೋಡೆಗಳ ಮೇಲೆ ಬೌದ್ಧ ಪ್ರತಿಮೆಗಳು ಮತ್ತು ಚಿಹ್ನೆಗಳನ್ನು ಸುದ್ದೆಯಲ್ಲಿ

ರೂಪಿಸಿ ಇವನ್ನು ಬಣ್ಣದಿಂದ ಅಲಂಕರಿಸುತ್ತಿದ್ದರು. ಇದು ಗಾಂಧಾರ ಶೈಲಿಯ ಸಂಘಾರಾಮಗಳ ವೈಶಿಷ್ಟ್ಯ.

ಬೌದ್ಧವಾಸ್ತುವಲ್ಲದೆ ಇತರ ರೀತಿಯ ಕಟ್ಟಡಗಳೂ ಈ ಪ್ರದೇಶದಲ್ಲಿವೆ. ತಕ್ಷಶಿಲೆಯ ಬಳಿಯ ಜಂಡಿಯಾಲ್‍ನಲ್ಲಿರುವ ದೇವಾಲಯ ಅವುಗಳ ಪೈಕಿ ಮುಖ್ಯವಾದ್ದು. ಪ್ರ.ಶ.ಪೂ. 2ನೆಯ ಶತಮಾನದ್ದಿರಬಹುದಾದ ಈ ಕಟ್ಟಡ, ಗ್ರೀಕ್ ವಾಸ್ತುರೀತಿಯಲ್ಲಿದೆ. ಇದರ ವಿಸ್ತಾರ 47.40X24 ಚ.ಮೀ. ಮಾತ್ರ. ಆದರೂ ಗ್ರೀಕರ ದೇವಸ್ಥಾನಗಳಲ್ಲಿರುವಂತೆ ಒಂದು ಗರ್ಭಗೃಹ, ಮುಂಭಾಗದಲ್ಲಿ ಎರಡು ಕಂಬಗಳಿರುವ ಒಂದು ಮುಮ್ಮಂಟಪ, ಹಿಂಭಾಗದಲ್ಲೊಂದು ಸಣ್ಣ ಆವರಣ ಮತ್ತು ಸುತ್ತಲೂ ಕಂಬಗಳ ಮೇಲೆ ಎತ್ತಿರುವ ಪಡಸಾಲೆ ಇವೆ. ಇಲ್ಲಿ ಉಪಯೋಗಿಸಿರುವ ಕಂಬಗಳು ಐಯೋನಿಯನ್ ರೀತಿಯವು. ಕಟ್ಟಡ ಗ್ರೀಕ್ ಮಾದರಿಯಲ್ಲಿದ್ದರೂ ಇದು ಇರಾನಿನ ಝೋರೋಆಸ್ಟ್ರಿಯನ್ ಪಂಥದ ಅಗ್ನಿ ದೇವಾಲಯವಿರಬೇಕೆಂದು ವಿದ್ವಾಂಸರ ಊಹೆ.

ಗಾಂಧಾರ ಕಲಾ ಸಂಪ್ರದಾಯದ ಪರಮೋಚ್ಚಸಾಧನೆಯೆಂದರೆ ಶಿಲ್ಪಗಳು. ಈ ಶೈಲಿಯ ಶಿಲಾಶಿಲ್ಪಗಳು ತಕ್ಷಶಿಲೆ, ಹಡ್ಡ, ಚಾರ್ಸದ ಮುಂತಾದೆಡೆಗಳಲ್ಲಿ ಬಹುಸಂಖ್ಯೆಯಲ್ಲಿ ದೊರಕಿವೆ. ಆ ಪ್ರದೇಶದ ಸಾಂಸ್ಕೃತಿಕ ಸಂಕರವೇ ಆ ಶೈಲಿಯ ರೂಪಣೆಯಲ್ಲಿ ಮುಖ್ಯ ಪಾತ್ರ ವಹಿಸಿದೆ. ಇದುವರೆಗೆ ದೊರಕಿರುವ ಶಿಲ್ಪಗಳೇ ಬಹುಮಟ್ಟಿಗೆ ಬೌದ್ಧ ಶಿಲ್ಪಗಳು. ಇವುಗಳಲ್ಲಿ ಹಲವು ಬುದ್ಧ ಮತ್ತು ಬೋಧಿಸತ್ತ್ವ ವಿಗ್ರಹಗಳಿವೆ. ಸ್ತೂಪಗಳಲ್ಲಿ ಕಡೆದ ಅರೆ ಉಬ್ಬುಶಿಲ್ಪವಿರುವ ಚಪ್ಪಡಿಗಳೂ ವಿಶೇಷವಾಗಿವೆ. ಈ ಶಿಲ್ಪಗಳ ವಸ್ತು ಬೌದ್ಧಧರ್ಮವಾದರೂ ಇವುಗಳ ರೂಪಣೆಯ ರೀತಿ ಗ್ರೀಕ್ ರೋಮನ್. ಇದರಲ್ಲಿ ಕೆಲವು ಇರಾನೀಯ ಅಂಶಗಳೂ ಬೆರೆತುಕೊಂಡಿವೆ.

ಗಾಂಧಾರದ ಶಿಲಾ ಶಿಲ್ಪಗಳೆಲ್ಲ ಸಾಮಾನ್ಯವಾಗಿ ಒಂದು ರೀತಿಯ ಕಂದು ಬಣ್ಣದ ಪದರಶಿಲೆಯಲ್ಲಿ ಮಾಡಿದವಾಗಿವೆ. ಬುದ್ಧನನ್ನು ಭಾರತೀಯ ಬೌದ್ಧ ಸಂಪ್ರದಾಯದ ನಂಬಿಕೆಗಳಂತೆ ಕಾವಿ ಧರಿಸಿದ ಯತಿಯೊಬ್ಬ ಅಭಯ ನೀಡುತ್ತಿರುವಂತೆಯೋ ಧ್ಯಾನಾಸಕ್ತನಾಗಿರುವಂತೆಯೋ ನಿರೂಪಿಸಿದ್ದರೂ ಬುದ್ಧನ ಮುಖಭಾವ, ದೈಹಿಕ ಪ್ರಮಾಣಗಳು ಮುಂತಾದವುಗಳಲ್ಲಿ ಇವು ಗ್ರೀಕ್, ದೇವತೆಗಳ ಶಿಲ್ಪಗಳನ್ನು ಹೋಲುತ್ತವೆ. ಇಲ್ಲಿ ಭಾರತೀಯ ಆದರ್ಶವಾದ ಅಂತಃಶಕ್ತಿಯ ನಿರೂಪಣೆಗಿಂತಲೂ ಬಾಹ್ಯ ಸೌಂದರ್ಯಕ್ಕೇ ಹೆಚ್ಚು ಗಮನ ಕೊಡಲಾಗಿದೆ. ಕೆಲವು ಬುದ್ಧ ವಿಗ್ರಹಗಳಲ್ಲಿ ಮೀಸೆಯನ್ನು ತೋರಿಸಿರುವುದೂ ಉಂಟು. ತಲೆಗೂದಲು ಗುಂಗುರು ಗುಂಗುರಾಗಿ ಮೇಲೇರಿರುತ್ತದೆ. ಧರಿಸಿರುವ ಉಡುಪು ಗ್ರೀಕರ ಟೋಗ ಮಾದರಿಯದು. ಅಲ್ಲದೆ ಭಾರತೀಯ ಸಂಪ್ರದಾಯಗಳಲ್ಲಿರುವಂತೆ ತೆಳುವಾಗಿರದೆ ಅಂಗಗಳು ಪೂರ್ತ ಮುಚ್ಚುವಂತೆ ದಪ್ಪ ಬಟ್ಟೆಯಲ್ಲಿ ಮಾಡಿದಂತಿದ್ದು ಹಲವು ನೆರಿಗೆಗಳನ್ನು ರೂಪಿಸಲಾಗಿರುತ್ತದೆ. ಬುದ್ಧನ ಜನ್ಮ, ನಿಷ್ಕ್ರಮಣ, ಶ್ರಾವಸ್ತಿಯ ಪವಾಡ, ಚೇತವನದ ಆತಿಥ್ಯ, ಸಾರನಾಥದಲ್ಲಿ ಧರ್ಮಪ್ರಸಾರ ಮುಂತಾದವೂ ಕುರು, ಶಿಬಿ, ಮಹಾಕಪಿ ಮುಂತಾದ ಭಾರತೀಯ ಬೌದ್ಧ ಕಥೆಗಳೂ ಉಬ್ಬು ಶಿಲ್ಪಗಳಲ್ಲಿ ಕಂಡುಬಂದರೂ ಈ ನಿರೂಪಣೆಯಲ್ಲಿ ಬರುವ ಪಾತ್ರಧಾರಿಗಳೆಲ್ಲ ಗ್ರೀಕರಂತಿವೆ. ಇವುಗಳಲ್ಲಿಯೂ ದೇಹಸೌಂದರ್ಯ, ಮಾಟ, ನಿಲುವು ಎಲ್ಲವೂ ಗ್ರೀಕ್ ಸಂಪ್ರದಾಯದ್ದು. ಅಲ್ಲದೆ ದಪ್ಪ ಹಾರವನ್ನು ಹೊತ್ತಿರುವ ಬೆತ್ತಲೆ ಕುಬ್ಜರ ಚಿತ್ರಗಳೂ ಡೋರಿಕ್, ಐಯೋನಿಯನ್ ಮತ್ತು ಕೊರಿಂಥಿಯನ್ ಮಾದರಿಯ ಅರೆಗಂಬಗಳೂ ಇರುತ್ತವೆ. ಕೆಲವೊಮ್ಮೆ ಇಂದ್ರ, ಬ್ರಹ್ಮ ಮುಂತಾದ ಉಪದೇವತೆಗಳ ಅಥವಾ ಮಾಯಾದೇವಿ ಯಶೋಧರಾ ಮುಂತಾದ ವ್ಯಕ್ತಿಗಳ ನಿರೂಪಣೆ ಗ್ರೀಕ್ ದೇವತೆಗಳ ಪ್ರತಿಕೃತಿಗಳಂತೆ ಕಾಣುತ್ತವೆ. ಹಲವೊಮ್ಮೆ ಸುಂದರ ಸ್ತ್ರೀಯರು, ಮದ್ಯಪಾನಾಸಕ್ತರು ಮುಂತಾದವರ ನಿರೂಪಣೆಗಳು ಪೂರ್ಣ ಗ್ರೀಕ್ ಮಾದರಿಯಲ್ಲಿ ಬರುವುದೂ ಉಂಟು. ಈ ಶಿಲ್ಪಗಳಲ್ಲಿ ಅಲ್ಲಲ್ಲಿ ಕಂಡುಬರುವ ನಾನೀ ದೇವತೆ, ರೆಕ್ಕೆಯುಳ್ಳ ಸಿಂಹಗಳು, ನಿತಂಬಕ್ಕೆ ನಿತಂಬವನ್ನು ಅನಿಸಿ ಕುಳಿತ ಸಿಂಹಗಳು ಅಥವಾ ಗೂಳಿಗಳು ಇರುವ ಬೋದಿಗೆಗಳನ್ನೊಳಗೊಂಡ ಕಂಬಗಳು, ನರಶಿರಗಳುಳ್ಳ ಅನೇಕ ವಿಚಿತ್ರ ಪ್ರಾಣಿಗಳು ಇರಾನೀಯ ಶಿಲ್ಪಶೈಲಿಯಲ್ಲಿ ರೂಪಿಸಲಾದವು. ಇದೇ ರೀತಿಯಲ್ಲಿ ಸುದ್ದಿಯಲ್ಲಿ ಮಾಡಿದ ಅನೇಕ ಶಿಲ್ಪಗಳೂ ದೊರಕಿವೆ. ಇವು ಪ್ರಾಯಶಃ ಶಿಲಾಶಿಲ್ಪಗಳ ಅನಂತರದ ಕಾಲದವೆಂದು ಕೆಲವು ವಿದ್ವಾಂಸರ ಊಹೆ.

ಈ ಭಾರತೀಯ ಗ್ರೀಕ್ ರೋಮನ್ ಇರಾನಿ ಸಂಕರ ಶಿಲ್ಪಶೈಲಿ ಸು. 2ನೆಯ ಶತಮಾನದಿಂದ 6ನೆಯ ಶತಮಾನದವರೆಗೆ ಪ್ರಚಲಿತವಾಗಿತ್ತೆಂಬುದು ಅನೇಕ ಮಂದಿ ವಿದ್ವಾಂಸರ ಮತ. ಆದರೆ ಈ ಗಾಂಧಾರ ಶೈಲಿಯ ಕಾಲ ನಿಷ್ಕರ್ಷೆ ಅಷ್ಟೇನೂ ನಿಖರವಾಗಿಲ್ಲ. ಕೆಲವು ವಿದ್ವಾಂಸರ ಪ್ರಕಾರ ಇದು ಪ್ರ.ಶ.ಪೂ. 2ನೆಯ ಶತಮಾನದಲ್ಲೇ ಹುಟ್ಟಿ 7ನೆಯ ಶತಮಾನದ ವರೆಗೂ ಮುಂದುವರಿದಿತ್ತು. ಇನ್ನು ಕೆಲವು ವಿದ್ವಾಂಸರ ಪ್ರಕಾರ ಇದರ ಕಾಲ 1ನೆಯ ಶತಮಾನದಿಂದ 3ನೆಯ ಶತಮಾನದ ವರೆಗೆ ಮಾತ್ರ. ಈ ಶೈಲಿಯ ಸಹಸ್ರಾರು ಶಿಲ್ಪಗಳು ದೊರಕಿದ್ದರೂ ಕೇವಲ ನಾಲ್ಕು ಶಿಲ್ಪಗಳ ಮೇಲೆ ಮಾತ್ರ ತೇದಿಯಿರುವ ಶಾಸನಗಳಿವೆ. ಆದರೆ ಈ ತೇದಿಗಳ ಬಗ್ಗೆಯೇ ಭಿನ್ನಾಭಿಪ್ರಾಯ ಗಳಿರುವುದು ಸಮಸ್ಯೆಗೆ ಕಾರಣವಾಗಿದೆ. ಗಾಂಧಾರ ಶೈಲಿ ಒಂದು ಪ್ರದೇಶದ ಹೆಸರನ್ನು ಹೊತ್ತಿದ್ದರೂ ಅದು ಆ ಪ್ರದೇಶಕ್ಕಷ್ಟೇ ಸೀಮಿತವಾಗಿರಲಿಲ್ಲ. ಅದರ ಮುಖ್ಯ ಕೇಂದ್ರ ಮಾತ್ರ ಗಾಂಧಾರದಲ್ಲಿತ್ತು. ಈ ಶೈಲಿಯ ಶಾಖೆಗಳು ಗಾಂಧಾರದ ಉತ್ತರದ ಬ್ಯಾಕ್ಟ್ರಿಯದಲ್ಲೂ ಅಲ್ಲಿಂದಲೂ ಮುಂದೆ ಮಧ್ಯ ಏಷ್ಯದಲ್ಲೂ ಭಾರತದಲ್ಲೂ ಕಾಶ್ಮೀರದಲ್ಲೂ ಕಂಡುಬಂದಿದೆ. ಅಲ್ಲದೆ ಇದರ ಪ್ರಭಾವವನ್ನು ಭಾರತದ ಮಥುರಾ ಮತ್ತು ಅಮರಾವತಿ ಕಲಾಶೈಲಿಗಳಲ್ಲೂ ಟಿಬೆಟ್ ಚೀನಗಳ ಬೌದ್ಧ ಕಲೆಯಲ್ಲೂ ಕಾಣಬಹುದಾಗಿದೆ.

ಗಾಂಧಾರ ಶೈಲಿಗೆ ಸೇರಿದ ಅನೇಕ ಲೋಹ ಮತ್ತು ದಂತಕೃತಿಗಳು ಬೆಗ್ರಾಮ್ ಮುಂತಾದೆಡೆಗಳಲ್ಲಿ ದೊರೆತಿವೆ. (ಎಸ್.ಎನ್.)

**ಗಾಂಧಾರಿ** : ಮಹಾಭಾರತ ಮಹಾಕಾವ್ಯದ ಪ್ರಮುಖರಲ್ಲೊಬ್ಬಳು. ಧೃತರಾಷ್ಟ್ರನ ಪತ್ನಿ. ದುರ್ಯೋಧನಾದಿಗಳ ತಾಯಿ. ಮಗಳು ದುಶ್ಯಲೆ. ನೂರು ಜನ ಶೂರರ ತಾಯಿಯಾದರೂ ಅವರ ದುಷ್ಟತನದಿಂದ ದುಃಖಿಶತಜನನಿ ಎಂಬ ಹೆಸರಿಗೆ ಪಕ್ಕಾದವಳು. ವ್ಯಾಸರ ದಿವ್ಯ ಕುಂಚಿಕೆ ಇವಳನ್ನು ಉಜ್ವಲ ವರ್ಣಗಳಲ್ಲಿ ಚಿತ್ರಿಸಿವೆ. ಧರ್ಮದೇವತೆಯೆಂದು ಪ್ರಾಜ್ಞರು ಈಕೆಯನ್ನು ಕೈವಾರಿಸಿರುವರು. ಭಾರತದಲ್ಲಿ ತಮ್ಮ ಪಾತಿವ್ರತ್ಯದಿಂದ ತ್ಯಾಗತಪಗಳಿಂದ ಆದರ್ಶಪ್ರಾಯರಾಗಿರುವ ಸತೀಶಿರೋಮಣಿಯರಲ್ಲೀಕೆ ಅಪೂರ್ವಳು.

ಗಾಂಧಾರಿ ಗಾಂಧಾರ ದೇಶದ ಸುಬಲ ರಾಜನ ಕುಮಾರಿ. ಪರಮಚತುರನಾದ ಶಕುನಿ ಇವಳ ಸೋದರ. ಬಾಲ್ಯದಲ್ಲಿಯೇ ಈಶ್ವರನನ್ನು ಕುರಿತು ತೀವ್ರವಾಗಿ ತಪಸ್ಸುಮಾಡಿ ನೂರು ಜನ ಗಂಡುಮಕ್ಕಳಾಗುವಂತೆ ವರ ಪಡೆದಳು. ಇವಳ ಇಂಥ ಪುಣ್ಯವನ್ನೂ ಸದ್ಗುಣಗಳನ್ನೂ ಕೇಳಿ ತಿಳಿದ ಕುರುಕುಲಪಿತಾಮಹ ಗಾಂಗೇಯ ಧೃತರಾಷ್ಟ್ರನಿಗಾಗಿ ಈಕೆಯನ್ನು ಸುಬಲ ರಾಜನಲ್ಲಿ ಯಾಚಿಸಿದ. ಈಕೆಯ ಪುಣ್ಯದಿಂದಲಾದರೂ ಕುರುವಂಶದಲ್ಲಿ ನಿಯೋಗ ಪದ್ಧತಿ ತಪ್ಪಿ ಔರಸ ಸಂತಾನ ಸಂಪತ್ತು ಅಭಿವೃದ್ಧಿಗೊಳ್ಳಲಿ ಎಂಬುದು ಆ ಮಹಾಪ್ರಾಜ್ಞನ ಆಶಯ.

ಸುಬಲನಿಗಾದರೂ ಪ್ರಸಿದ್ಧವಾದ ಕುರುವಂಶದೊಡನೆ ಸಂಬಂಧ ಬೆಳೆಸುವ ಆಸೆಯಾದರೂ ಧೃತರಾಷ್ಟ್ರ ಹುಟ್ಟುಕುರುಡನೆಂಬ ಹಿಂಜರಿಕೆ ಇತ್ತು. ಹೇಗಾದರೂ ಆತನ ವಂಶವಿಭವ ಸಂಪತ್ತು ಅಧಿಕಾರಿಗಳಿಗೆ ಮನಸೋತು ಆ ಮೂಲಕ ತನ್ನ ಗೌರವ ಘನತೆಗಳು ಬೆಳೆಯುವವೆಂದು ಆಶಿಸಿ ಆ ಸಂಬಂಧ ಬೆಳೆಸಲು ಒಪ್ಪಿದ. ತಂದೆ ತನ್ನನ್ನು ಒಬ್ಬ ಜನ್ಮಾಂಧ ರಾಜಕುವರನಿಗೆ ಕೊಡಲಿರುವುದನ್ನು ತಿಳಿದರೂ ಗಾಂಧಾರಿ ಅದರ ವಿರುದ್ಧ ಒಂದು ಮಾತನ್ನೂ ಆಡಲಿಲ್ಲ. ಅದಕ್ಕೆ ಪ್ರತಿಯಾಗಿ ಮಂಟಪಕ್ಕೆ ಬರುವ ಮುನ್ನ ದಪ್ಪನಾದೊಂದು ಬಟ್ಟೆಯಿಂದ ತನ್ನ ಕಣ್ಣುಗಳನ್ನು ಕಟ್ಟಿಕೊಂಡು ತಾನೂ ನಯನವಿಹೀನೆಯಾದಳು. ಇದನ್ನು ಕಂಡ ವ್ಯಾಸ ಮಹರ್ಷಿಗಳು ಈಕೆಯನ್ನು ಪಾತಿವ್ರತ್ಯಪರಾಯಣಳೆಂದರು. ಇವಳ ಲೋಕೋತ್ತರವಾದ ಪತಿಭಕ್ತಿ ತ್ಯಾಗಶಕ್ತಿಗಳನ್ನು ಕಂಡು ಹಸ್ತಿನಾವತಿಯೇ ಕೈಮುಗಿಯಿತು.

ಈಕೆಗೆ ತನ್ನ ಮಕ್ಕಳಲ್ಲಿ ಹೇಗೊ ಹಾಗೆಯೇ ಪಾಂಡುಪುತ್ರರಲ್ಲೂ ಅಕ್ಕರೆ. ದ್ರೌಪದಿಯ ಸ್ವಯಂವರಾನಂತರ ಆಸ್ಥೆಯಿಂದ ಕೃಷ್ಣೆಯನ್ನು ಮನೆ ತುಂಬಿಕೊಂಡು ಉಪಚರಿಸಿದಳು. ಸುಂದರಿಯಾದ ಹೊಸ ಸೊಸೆಯನ್ನು ಅಧರ್ಮಿಗಳಾದ ತನ್ನ ಮಕ್ಕಳಿಂದ ದೂರವಿಟ್ಟು ಕಾಪಾಡುವ ಜಾಗ್ರತೆಯನ್ನೂ ತೋರಿದಳು.

ಕ್ರಮೇಣ ತನ್ನ ಮಕ್ಕಳಿಗೆ ಪಾಂಡವರಲ್ಲಿ ಬೆಳೆಯುತ್ತಿದ್ದ ಹಗೆಯನ್ನು ಗುರುತಿಸಿ ಅದನ್ನು ತಡೆಯಲು ಪ್ರಯತ್ನಿಸಿ ವಿಫಲಳಾದಾಗ ತುಂಬ ಕೊರಗಿದಳು.

ಸಂಧಾನಕ್ಕಾಗಿ ಆಗಮಿಸಿದ ಕೃಷ್ಣ ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡಬೇಕೆಂದು ಕೇಳಿದಾಗ, ಕರ್ಣ ದುಶ್ಯಾಸನ ಶಕುನಿ ಮುಂತಾದ ಸುಯೋಧನನ ಪಕ್ಷದವರಿಗೂ ಭೀಷ್ಮ ದ್ರೋಣ ವಿದುರ ಮುಂತಾದ ನ್ಯಾಯನಿಷ್ಠರಾದ ವೃದ್ಧರಿಗೂ ಬಿರುಸಿನ ಚರ್ಚೆಯಾಗುತ್ತದಷ್ಟೆ. ಪಾಂಡವರು ಅರ್ಧರಾಜ್ಯಕ್ಕೆ ಹಕ್ಕುದಾರರೆಂದು ಹಿರಿಯರೆಲ್ಲರ ವಾದವನ್ನು ಗಾಂಧಾರಿ ಅನುಮೋದಿಸಿ ಧರ್ಮಜ್ಞಾ.ದೂರದರ್ಶಿನಿ ಎಂಬ ವ್ಯಾಸಸ್ತುತಿಗೆ ತಕ್ಕವಳಾಗುತ್ತಾಳೆ. 'ಇದು ಪಾಂಡುವಿನ ರಾಜ್ಯ. (ಧೃತರಾಷ್ಟ್ರ ಹುಟ್ಟುಕುರುಡನಾದುದರಿಂದ ಅವನಿಗೆ ರಾಜ್ಯದ ಹಕ್ಕೇ ಹುಟ್ಟಲಿಲ್ಲ.) ಅವನ ಮಕ್ಕಳಾದ ಪಾಂಡವರೇ ಇದಕ್ಕೆಲ್ಲ ನಿಜವಾದ ವಾರಸುದಾರರು. ಆದ್ದರಿಂದ ಅರ್ಧ ರಾಜ್ಯವನ್ನಲ್ಲ, ಸಂಪೂರ್ಣ ರಾಜ್ಯವನ್ನೂ ದುರ್ಯೋಧನ ಧರ್ಮಪುತ್ರನಿಗೆ ಒಪ್ಪಿಸತಕ್ಕದ್ದು' ಎಂಬುದು ಈಕೆಯ ಅಭಿಮತ.

ಗಾಂಧಾರಿ ಎಂಥ ದೀರ್ಘದರ್ಶಿನಿ ಮತ್ತು ಮಹಾಪ್ರಜ್ಞಳು ಎಂಬುದು ಆಕೆ ಮಗನಿಗೆ ಮಾಡುವ ಉಪದೇಶದಿಂದ ಚೆನ್ನಾಗಿ ತಿಳಿಯುತ್ತದೆ. ಅರ್ಥ ಗಾಂಭೀರ್ಯ ದಿಂದ ಉನ್ನತ ಭಾವಗಳಿಂದ ಕೂಡಿದ ಆಕೆಯ ಉಕ್ತಿಗಳು ಆಕೆಯ ಅಂತರ್ದೃಷ್ಟಿಯನ್ನು ವ್ಯಕ್ತಪಡಿಸುತ್ತವೆ. ಹಠಮಾರಿಯಾದ ಮಗನಿಗೆ ಈಕೆ ಹೇಳುವ ಬುದ್ಧಿವಾದವಿದು: 'ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಟ್ಟು ನೀನು ಹೋರಾಟಕ್ಕೆ ನಿಂತೆಯಾದರೆ ಭೀಷ್ಮ ದ್ರೋಣ

ಕೃಪ ಕರ್ಣ ಭೀಮಸೇನ ಧನಂಜಯ ಧೃಷ್ಟದ್ಯುಮ್ನ ಮುಂತಾದವರೆಲ್ಲರ ಉಗ್ರಾಸ್ತ್ರಗಳ ಅಮೋಘವರ್ಷದಿಂದ ಇಡಿಯ ಭೂಮಂಡಲವೆಲ್ಲ ನಾಶವಾಗುವುದು. ನಿನ್ನೊಬ್ಬನ ಕಾರಣದಿಂದ ವಂಶವೂ ಪ್ರಜೆಗಳೂ ನಾಶವಾಗುವುದಕ್ಕಿಂತ ಬೇರೆ ಅನರ್ಥ ವಿದೆಯೇ? ಬಲಿಷ್ಠರಾದ ಆ ಪಾಂಡವರನ್ನು ಮಣಿಸಲು ನೀನು ನಂಬಿ ಕುಳಿತ ಕರ್ಣನಾಗಲೀ ಶೀಘ್ರಕೋಪಿಯಾದ ದುಶ್ಶಾಸನನಾಗಲೀ ಶಕ್ತರಲ್ಲ. ನಿಜವಾಗಿ ಹಾಗೆ ಮಾಡಲು ಸಮರ್ಥ ರಾದವರು ಭೀಷ್ಮ ದ್ರೋಣ ಕೃಪಾದಿಗಳು. ಆದರೆ ಕೈಯಾರೆ ಸಾಕಿದ ಮೊಮ್ಮಕ್ಕಳನ್ನು ತಾತನಾಗಲೀ ವಿದ್ಯೆಯೂಡಿದ ಗುರುವಾಗಲೀ ಕೊಂದಾರೆಂದು ನೀನೆಣಿಸಬೇಡ. ಆ ವೃದ್ಧವೀರರು ನಿನ್ನ ಅನ್ನದ ಋಣಕ್ಕಾಗಿ ನಿನ್ನ ಕಡೆ ನಿಂತು ಯುದ್ಧ ಮಾಡುವರು. ಆ ತಬ್ಬಲಿಗಳಾದ ಪಾಂಡುಪುತ್ರರನ್ನು ಕೊಲ್ಲುವುದರ ಬದಲು ಆನಂದದಿಂದ ಅವರೆಲ್ಲ ಜೀವವನ್ನೇ ಬಿಟ್ಟಾರು. ಆದ್ದರಿಂದ ಮಗು ನೀನೀಗ ಹದಿಮೂರು ವರ್ಷ ಅವರಿಗೆ ಮೋಸಮಾಡಿ ರಾಜ್ಯವಾಳಿದ್ದೀಯೆ, ಈಗ ಅವರು ಬದುಕಿ ಉಳಿದಿರುವುದೇ ಹೆಚ್ಚು. ನನ್ನ ಹೊಟ್ಟೆಯ ಪುಣ್ಯ. ಇನ್ನೂ ಅತಿಯಾಸೆ ಮಾಡಬೇಡ. ಅವರ ಅರ್ಧರಾಜ್ಯವನ್ನು ಅವರಿಗೆ ಕೊಟ್ಟುಬಿಡು. ನಿನಗೂ ನಿನ್ನ ಮಂತ್ರಿ ಮಿತ್ರರಿಗೂ ಸುಖವಾಗಿ ಉಂಡು ಗೌರವದಿಂದ ಬಾಳಲು ವಿಶಾಲವಾದ ಕುರುರಾಜ್ಯದ ಅರ್ಧಭಾಗವೇನೂ ಕಡಿಮೆಯಿಲ್ಲ. ಅತ್ಯಾಸೆಯಿಂದ ಸ್ವಾಭಿಮಾನಿಗಳೂ ಶೂರರೂ ಸಂಯಮಿಗಳೂ ಜನಪ್ರಿಯರೂ ಆದ ಪಾಂಡವರ ವಿರುದ್ಧ ಯುದ್ಧವನ್ನು ಹೂಡಬೇಡ. ಅವರ ಜೊತೆಗೆ ಯುದ್ಧವೆಂದರೆ ನಿನಗೆ ಸುಖಭ್ರಂಶ, ಆತ್ಮಧ್ವಂಸ.'

ತನ್ನ ಮಾತಿಗೆ ಕಿವಿಗೊಡದೆ ಉತ್ಕಟ ದುರಭಿಮಾನದಿಂದ ಪಾಂಡವದ್ವೇಷವನ್ನು ಸಾಧಿಸಲು ದುರ್ಯೋಧನ ಮುಂದಾದಾಗ ಗಾಂಧಾರಿ ಅವನಿಗೆ ಬೆಂಬಲ ಕೊಟ್ಟ ಧೃತರಾಷ್ಟ್ರನನ್ನು ಚೇಡಿಸುತ್ತಾಳೆ. 'ಇಂಥ ಅಯೋಗ್ಯನಿಗೆ ರಾಜ್ಯವನ್ನು ಒಪ್ಪಿಸಿದ್ದೇ ಮಹಾಪರಾಧ. ಇಲ್ಲಿ ತಪ್ಪು ಮೊದಲು ನಿನ್ನದಿದ್ದು ಈ ವಿಷಯದಲ್ಲಿ ಪುತ್ರಲಂಪಟನಾದ ನಿನ್ನನ್ನೇ ಬೈಯಬೇಕಾಗಿದೆ. ಏಕೆಂದರೆ ಅವನ ಈ ದೌರ್ಜನ್ಯವನ್ನು ತಿಳಿದೂ ಮತ್ತೆ ನೀನು ಅವನ ಬೆನ್ನುಹತ್ತುವೆ' ಎಂದು ಆಕ್ಷೇಪಿಸುತ್ತಾಳೆ.

ಇಡೀ ಭಾರತದಲ್ಲಿ ಹೀಗೆ ದೂರದೃಷ್ಟಿಯುಳ್ಳ ತರ್ಕಬುದ್ಧಿಯ, ಧ್ಯೇಯ ನಿಷ್ಠ ವ್ಯಕ್ತಿಗಳು ಕಾಣುವುದು ಅಪೂರ್ವ. ಅಲ್ಲಲ್ಲಿ ಹರಡಿಕೊಂಡಿರುವ ಗಾಂಧಾರಿಯ ಮಾತುಕಥೆಗಳನ್ನೆಲ್ಲ ಕ್ರೋಢೀಕರಿಸಿ ವಿಚಾರಮಾಡಿದರೆ ಹಲವು ಅರ್ಥ ಮತ್ತು ನೀತಿ ಶಾಸ್ತ್ರಗ್ರಂಥಗಳ ಸಾರವೇ ಅಲ್ಲಿ ಎರಕ ಹೊಯ್ದಂತೆ ಘನೀಭವಿಸುವುದು ಕಂಡುಬರುತ್ತದೆ. ಅವಳ ಲೋಕಾನುಭವ, ಮಾನವೀಯ ಹೃದಯಪರೀಕ್ಷಣೆ, ಸರ್ವಂಕಷ ಪ್ರತಿಭೆ, ನೀತಿ, ಪ್ರೀತಿ ಎಲ್ಲವೂ ಅವಳ ವಚೋವಿಸ್ತಾರದಲ್ಲಿ ನಿಚ್ಚಳವಾಗಿ ಮೂಡಿ ಬಂದಿದೆ.

ಅವಳ ಹೆಣ್ಣು ಹೃದಯದ ಭಾವ ಕೋಮಲತೆಯನ್ನೂ ಪ್ರೇಮಲ ಸ್ವಭಾವವನ್ನೂ ಹಲವು ಸನ್ನಿವೇಶಗಳಲ್ಲಿ ಕಾಣುತ್ತೇವೆ.

ರಾಜಸಭೆಯಲ್ಲಿ ದುರ್ಯೋಧನಾದಿಗಳು ದ್ರೌಪದಿಯನ್ನು ಅವಮಾನಗೊಳಿಸಲು ಯತ್ನಿಸಿದಾಗ ಅವಳ ಗೋಳಿನಿಂದ ನೊಂದ ಗಾಂಧಾರಿ ಕ್ರುದ್ಧಳಾಗಿ 'ಹುಟ್ಟಿದಾಗಲೇ ಕತ್ತೆಯಂತೆ ಕೂಗಿದ ಈ ದುಷ್ಟಪುತ್ರನನ್ನು ಕುಲನಾಶಕನನ್ನು ವಿದುರನ ಮಾತಿನಂತೆ ನಾವು ತ್ಯಜಿಸಲಿಲ್ಲವೇಕೆ?' ಎಂದು ಮರಗುತ್ತಾಳೆ; 'ಈಗಲೂ ಕುಲಘಾತಕನಾದ ಈ ಪುತ್ರನನ್ನು ಹೊರಗಟ್ಟಿಬಿಡು' ಎಂದು ಧೃತರಾಷ್ಟ್ರನಿಗೆ ಹೇಳುತ್ತಾಳೆ. ಇದರಿಂದ ಎಚ್ಚೆತ್ತ ಧೃತರಾಷ್ಟ್ರ ದುರ್ಯೋಧನನ ಅವಿವೇಕಕ್ಕೆ ತಡೆಹಾಕುತ್ತಾನೆ.

ಮುಂದೆ ಮಹಾಯುದ್ಧದಲ್ಲಿ ತನ್ನ ಐವರು ಮಕ್ಕಳನ್ನೂ ಕಳೆದುಕೊಂಡು ಗೋಳಿಡುವ ಕೃಷ್ಣೆಯನ್ನು ಕಂಡು ತನ್ನ ಎದೆಯಲ್ಲಿ ನೂರು ಅಗ್ನಿಕುಂಡಗಳು ಉರಿಯುತ್ತಿದ್ದರೂ ಗಾಂಧಾರಿ ಸಮಾಧಾನಪಡಿಸುತ್ತಾಳೆ: 'ನೂರು ಮಂದಿ ಮಕ್ಕಳನ್ನು ನುಂಗಿ ಕುಳಿತ ನನ್ನನ್ನು ನೋಡಿ ನಿನ್ನ ದುಃಖವನ್ನು ತಡೆದುಕೊ ಮಗುವೆ, ಸಮಾಧಾನ ತಂದುಕೊ' ಎನ್ನುವ ಇವಳ ಸಾಂತ್ವನ ವಚನ ಇವಳ ಹೃದಯದ ಔದಾರ್ಯವನ್ನು ಪರದುಃಖಕಾತರತೆಯನ್ನು ತೋರುತ್ತದೆ.

ಗಾಂಧಾರಿಯ ತೇಜವೂ ತಪಶ್ಯಕ್ತಿಯೂ ಅಷ್ಟೇ ಉಜ್ವಲವಾದುವು. ಯುದ್ಧಾನಂತರದಲ್ಲಿ ನಮಿಸಲು ಬಂದ ಧರ್ಮಪುತ್ರನನ್ನು ಸ್ಪರ್ಶಿಸಿದ ಇವಳ ಕಣ್ಣಂಚಿನ ಕಿರಣವೇ ಅವನಿಗೆ ಸಾಕಷ್ಟು ಘಾಸಿಯನ್ನು ಮಾಡುತ್ತದೆ; ಅವನ ಪಾದಗಳ ಉಗುರು ಸೀದು ಕಪ್ಪಿಡುತ್ತದೆ.

ಇನ್ನು ಈ ಸಾಧ್ವಿಯ ನುಡಿಯಾದರೋ ಕಿಡಿಯಾಗಿ ಹಣೆಯ ಬರೆಹವನ್ನು ತಿದ್ದುವ ಸಾಮರ್ಥ್ಯವನ್ನು ಪಡೆದಿತ್ತು. ಅದನ್ನು ಅರಿತ ದುರ್ಯೋಧನ ಯುದ್ಧದಲ್ಲಿ ಕೈಗಟ್ಟಿದ ಇವಳ ಆಶೀರ್ವಾದವನ್ನು ಬಯಸುತ್ತಾನೆ. ಆದರೆ ನ್ಯಾಯನಿಷ್ಠರಳಾದ ಆ ಮಹಾಮಾತೆ ಧರ್ಮಕ್ಕೆ ಜಯವಾಗಲಿ ಎನ್ನುತ್ತಾಳೆ.

ತೊಂಬತ್ತೊಂಬತ್ತು ಜನ ತಮ್ಮಂದಿರ ಅನಂತರ ತೊಡೆಮುರಿದು ನೆಲಕ್ಕೆ ಒದಗಿದ ದುರ್ಯೋಧನನ್ನು ಕಂಡು ಗಾಂಧಾರಿಯ ಕೋಮಲ ಹೃದಯ ಗೋಳಿಡುತ್ತದೆ. 'ಅಂಥ ವಿಭವಶಾಲಿಯಾದ ನೀನು, ನಾಯಿ, ನರಿಗಳ ಆಹಾರವಾಗಿ ಭೂಶಾಯಿಯಾದೆಯಾ'–ಎಂದು ಹಲಬುತ್ತಾಳೆ. ಕಪಟದಿಂದ ಪಾಂಡವರನ್ನು ಪಾಲಿಸಿ ಕೌರವರನ್ನು ನಿರ್ಮೂಲ ಮಾಡಿದ ದೈವದ ಮೇಲೆ ಮುನಿಯುತ್ತಾಳೆ. ಈಕೆಯ ತಪಶ್ಶಕ್ತಿಯನ್ನರಿತ ವಾಸುದೇವ ತಾನೇ ಬಂದು ಮುಂದೆ ನಿಂತು ಶಪಿತನಾಗಿ ಇವಳ ಕ್ರೋಧದಿಂದ ಇತರರನ್ನು ರಕ್ಷಿಸುತ್ತಾನೆ.

'ನೀನು ಇಚ್ಛಿಸಿದ್ದರೆ ಕೌರವರೂ ಬಾಳುತ್ತಿದ್ದರು. ಬೇಕೆಂದೇ ನೀನವರನ್ನು ಉಪೇಕ್ಷಿಸಿ ನಾಶಮಾಡಿದೆ. ಅದರ ಫಲವಾಗಿ ನನ್ನ ಶಾಪವನ್ನು ನೀನು ಅನುಭವಿಸು' ಎನ್ನುತ್ತ 'ನಿನ್ನ ಜ್ಞಾತಿಬಾಂಧವರು ನಿನ್ನೆದುರಿಗೇ ಹೊಡೆದಾಡಿ ಸಾಯಲಿ. ಅನಾಥನಾಗಿ ನೀನು ಯಾರೂ ಅರಿಯದಂತೆ ಎಲ್ಲಿಯೋ ಬಿದ್ದು ಸಾಯಿ' ಎಂದು ಗಾಂಧಾರಿ ಕೃಷ್ಣನನ್ನು ಶಪಿಸುತ್ತಾಳೆ.

ಹೀಗೆ ಮಹಾಭಾರತದುದ್ದಕ್ಕೂ ಗಾಂಧಾರಿಯ ಧರ್ಮಸಂಕಟದ ಪ್ರಸಂಗ ಬಹು ಉಜ್ವಲವಾಗಿ ಬಂದಿದೆ. (ಪಿ.ವಿ.ಸಿ.)

**ಗಾಂಧೀ–ಇರ್ವಿನ್ ಒಪ್ಪಂದ :** ಭಾರತದ ವೈಸ್‌ರಾಯ್ ಇರ್ವಿನ್ ಮತ್ತು ಮಹಾತ್ಮ ಗಾಂಧೀ ಇವರ ನಡುವೆ 1931ರ ಮಾರ್ಚ್ 5ರಂದು ಆದ ಒಪ್ಪಂದ. ಆಧುನಿಕ ಭಾರತದ ಇತಿಹಾಸದಲ್ಲಿ ಇದು ಒಂದು ಮುಖ್ಯ ಘಟನೆ. ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿ ವೈಸ್‌ರಾಯ್‌ನಿಗೂ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ರಾಷ್ಟ್ರೀಯ ಕಾಂಗ್ರೆಸಿನ ನೇತಾರರಾದ ಗಾಂಧಿಯವರಿಗೂ ಪ್ರಥಮ ಬಾರಿಗೆ ಸಮಾನ ಅಂತಸ್ತಿನಲ್ಲಿ ವಿಚಾರವಿನಿಮಯ ನಡೆದು ಅದು ಈ ಒಪ್ಪಂದದಲ್ಲಿ ಪರ್ಯವಸಾನ ವಾಯಿತು. ಇದರಿಂದ ಕಾಂಗ್ರೆಸಿಗೆ ಪ್ರಾಮುಖ್ಯ ಅಧಿಕವಾಗಿ ಅದರ ಕೀರ್ತಿಯೂ ಹೆಚ್ಚಿತು. ದುಂಡುಮೇಜಿನ ಪರಿಷತ್ತಿನ ಎರಡನೆಯ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸಲು ಅವಕಾಶವಾಯಿತು.

1930ರ ಏಪ್ರಿಲ್ 6ರಂದು ಗಾಂಧಿಯವರು ಆರಂಭಿಸಿದ ಕಾನೂನು ಭಂಗ ಚಳವಳಿಯ ಪ್ರತಿಭಟನೆಯನ್ನು ಹತ್ತಿಕ್ಕಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಸರ್ಕಾರ ಪ್ರಯತ್ನಿಸುತ್ತಿತ್ತು. ಭಾರತೀಯ ಜನರ ಮೇಲೆ ಕಾಂಗ್ರೆಸ್ ಹೊಂದಿದ್ದ ಪ್ರಭಾವವನ್ನು ಸರ್ಕಾರ ಸರಿಯಾಗಿ ಅರಿತಿರಲಿಲ್ಲ. ಕಾಂಗ್ರೆಸಿನಷ್ಟು ಪ್ರಭಾವಶಾಲಿಯಲ್ಲದ, ಪ್ರತಿಗಾಮಿಯಾಗಿದ್ದ ಹಲವಾರು ಸಣ್ಣಪುಟ್ಟ ಪಕ್ಷಗಳಿಗೆ ಅದು ವಿಶೇಷವಾಗಿ ಉತ್ತೇಜನ ನೀಡಲು ಯತ್ನಿಸಿತು. ಸರ್ಕಾರದ ದಮನನೀತಿಯಿಂದ ಸ್ವಾತಂತ್ರ್ಯ ಹೋರಾಟ ಇನ್ನೂ ಬಿರುಸಾಯಿತು. ಭಾರತದ ರಾಜಕೀಯ ಭವಿಷ್ಯದ ಬಗ್ಗೆ ಸಮಾಲೋಚಿಸಲು 1930ರ ನವೆಂಬರಿನಲ್ಲಿ ಸಮಾವೇಶಗೊಂಡಿದ್ದ ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪ್ರತಿನಿಧಿ ಯಾರೂ ಇರಲಿಲ್ಲ. ಕಾಂಗ್ರೆಸ್ ಇಲ್ಲದ ಯಾವ ಸಮಾಲೋಚನೆಯೂ ಫಲಪ್ರದವಾಗುವಂತಿರಲಿಲ್ಲ. ಪರಿಷತ್ತಿನ ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸುವುದೆಂಬುದು ಬ್ರಿಟಿಷ್ ಪ್ರಧಾನಿಯ ಆಶಯವಾಗಿತ್ತು. 1931ರ ಫೆಬ್ರವರಿ 17ರಂದು ಗಾಂಧೀ ಇರ್ವಿನರ ನಡುವೆ ಮಾತುಕತೆಗಳು ಆರಂಭವಾದುವು. ಮಾರ್ಚ್ 5ರಂದು ಒಪ್ಪಂದಕ್ಕೆ ಸಹಿಯಾಯಿತು.

ಇರ್ವಿನರ ಅಭಿಲಾಷೆಗಳು ಪ್ರಾಮಾಣಿಕವಾಗಿವೆಯೆಂದು ಗಾಂಧಿಯವರಿಗೆ ಖಚಿತವಾಗಿತ್ತು. ಲಿಬರಲ್ ಪಕ್ಷದ ನಾಯಕರಾದ ತೇಜ್‌ಬಹದ್ದೂರ್ ಸಪ್ರು, ಎಂ.ಆರ್. ಜಯಕರ್, ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಇವರು ಸಂಧಾನ ಫಲಪ್ರದವಾಗಲು ಪ್ರಮುಖ ಪಾತ್ರ ವಹಿಸಿದ್ದರು.

ಒಪ್ಪಂದದ ಮುಖ್ಯಾಂಶಗಳಿವು : ದಬ್ಬಾಳಿಕೆಯ ಸುಗ್ರೀವಾಜ್ಞೆಗಳನ್ನೂ ಇತ್ಯರ್ಥವಾಗದ ಆಪಾದನೆಗಳನ್ನೂ ಹಿಂತೆಗೆದುಕೊಳ್ಳಲೂ ಹಿಂಸೆಯಲ್ಲಿ ತೊಡಗಿದ್ದವರನ್ನು ಬಿಟ್ಟು ಉಳಿದ ಎಲ್ಲ ರಾಜಕೀಯ ಸೆರೆಯಾಳುಗಳ ಬಿಡುಗಡೆ ಮಾಡಲೂ ಸತ್ಯಾಗ್ರಹದಲ್ಲಿ ಭಾಗವಹಿಸಿ ಆಸ್ತಿ ಕಳೆದುಕೊಂಡಿದ್ದವರಿಗೆ ಅದನ್ನು ಹಿಂದಿರುಗಿಸಲೂ ಮದ್ಯ ಮತ್ತು ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಶಾಂತಿಯುತ ನಿರೋಧಕಾರ್ಯ ನಡೆಸುವುದಕ್ಕೆ ಮತ್ತು ಸಮುದ್ರತೀರದಿಂದ ನಿಯಮಿತ ದೂರದಲ್ಲಿ ವಾಸಿಸುವ ಜನ ತೆರಿಗೆಯಿಲ್ಲದೆ ಉಪ್ಪು ತಯಾರಿಸುವುದಕ್ಕೆ ಅವಕಾಶ ಕೊಡಲೂ ಸರ್ಕಾರದ ಪರವಾಗಿ ಇರ್ವಿನ್ ಒಪ್ಪಿಕೊಂಡ. ಪೋಲಿಸ್ ದೌರ್ಜನ್ಯ ಕುರಿತು ವಿಚಾರಣೆಗೆ ಒತ್ತಾಯಿಸದಿರಲೂ ಕಾನೂನುಭಂಗ ಚಳವಳಿ ನಿಲ್ಲಿಸಲೂ ಜವಾಬ್ದಾರಿ ಸರ್ಕಾರ ಸ್ಥಾಪನೆ ಮತ್ತು ಭಾರತ ಹಿತರಕ್ಷಣೆಯ ಆಧಾರದ ಮೇಲೆ ದುಂಡುಮೇಜಿನ ಪರಿಷತ್ತಿನ ಎರಡನೆಯ ಅಧಿವೇಶನದಲ್ಲಿ ಕಾಂಗ್ರೆಸ್ ಭಾಗವಹಿಸಲೂ ಬಹಿಷ್ಕಾರವನ್ನೆಲ್ಲ ನಿಲ್ಲಿಸಲೂ ಗಾಂಧಿಯವರು ಕಾಂಗ್ರೆಸಿನ ಪರವಾಗಿ ಸಮ್ಮತಿಸಿದರು. (ವಿ.ಕೆ.)

**ಗಾಂಧೀಗ್ರಾಮ :** ತಮಿಳುನಾಡಿನ ಮಧುರೈ ಜಿಲ್ಲೆಯಲ್ಲಿ ಇರುವ ಒಂದು ಆಶ್ರಮ, ವಸತಿ. ಇದರ ಪೂರ್ವದಲ್ಲಿ ಶಿರುಮಲೈ ಬೆಟ್ಟವೂ ಪಶ್ಚಿಮಕ್ಕೆ ಕೊಡೈ ಬೆಟ್ಟವೂ ಹಬ್ಬಿವೆ. ಇವುಗಳ ನಡುವೆ ಸು. 400 ಎಕರೆ ಪ್ರದೇಶದಲ್ಲಿರುವ ಗಾಂಧೀಗ್ರಾಮ 1947ರ ಅಕ್ಟೋಬರ್ 7ರಂದು ಸ್ಥಾಪಿತವಾಯಿತು. ಗಾಂಧೀ ತತ್ತ್ವಗಳ ಪ್ರಚಾರ,

ಗಾಂಧಿಯವರ ಜೀವನಮಾರ್ಗದ ಅನುಷ್ಠಾನ–ಈ ಉದ್ದೇಶದಿಂದ ಶ್ರೀಮತಿ ಸೌಂದರಂ ರಾಮಚಂದ್ರನ್ ಇದನ್ನು ಸ್ಥಾಪಿಸಿದರು. ಜಿ. ರಾಮಚಂದ್ರನ್ ಇದರ ನಿರ್ದೇಶಕರು.

ಆರಂಭದಲ್ಲಿ ಇಲ್ಲಿ ಎರಡು ಕಟ್ಟಡಗಳು ಮಾತ್ರ ಇದ್ದುವು. ಕೆಲವು ಅಧ್ಯಾಪಕರು ಮತ್ತು ನೂರಕ್ಕೂ ಕಡಮೆ ವಿದ್ಯಾರ್ಥಿಗಳಿದ್ದರು. ಮೂಲಶಿಕ್ಷಣ ಶಾಲೆ, ಮೂಲ ಶಿಕ್ಷಕ ಶಿಕ್ಷಣ ಶಾಲೆ, ಸಣ್ಣ ವೈದ್ಯಶಾಲೆ ಇವು ಮಾತ್ರ ಇದ್ದ ಈ ಎಡೆಯಲ್ಲಿ ಈಗ ಅನೇಕ ಶಾಲೆಗಳೂ ಉತ್ಪಾದನ ಸಂಸ್ಥೆಗಳೂ ಸಹಕಾರ ಸಂಸ್ಥೆಗಳೂ ಸಂಶೋಧನಾಲಯಗಳೂ ಇವೆ. ಶಿಶುಮಂದಿರ, ಮೂಲಶಿಕ್ಷಣ ಶಾಲೆ, ಕಸ್ತೂರಬಾ ಸೇವಿಕಾಶ್ರಮ, ಗ್ರಾಮ ಪ್ರೌಢವಿದ್ಯಾ ಶಾಲೆ, ಲಕ್ಷ್ಮೀ ಶಿಕ್ಷಣ ಕಾಲೇಜ್, ಗಾಂಧೀ ಶತಾಬ್ದಿ ಕುಶಲಕಲಾ ಶಾಲೆ, ಕುಮಾರಪ್ಪ ಗ್ರಾಮ ಕೈಗಾರಿಕಾ ಕೇಂದ್ರ, ಕಸ್ತೂರಬಾ ಆಸ್ಪತ್ರೆ, ಗ್ರಾಮ ಆರೋಗ್ಯ ಮತ್ತು ಕುಟುಂಬ ಯೋಜನಾ ಕೇಂದ್ರ, ಮಕ್ಕಳ ಕ್ಷೇಮಾಭಿವೃದ್ಧಿ ತರಬೇತು ಕೇಂದ್ರ, ಖಾದಿ ಭವನ, ಕಲಾ ಭವನ, ಸತ್ಯಮಿತ್ರರ ಸಹಯೋಗ ಸಂಸ್ಥೆ, ಶಾಂತಿಸೇನೆ ಮುಂತಾದ 30 ಸಂಸ್ಥೆಗಳಿವೆ. 2,500 ವಿದ್ಯಾರ್ಥಿಗಳೂ 500 ಮಂದಿ ಶಿಕ್ಷಕರೂ ಇದ್ದಾರೆ.

ಮಕ್ಕಳ ಕಲ್ಯಾಣ ಕೇಂದ್ರದ ಹೆಸರು ಸೌಭಾಗ್ಯಂ. ಇದು ಅನಾಥ ಶಿಶುಗಳ ಗೃಹ, ಮಕ್ಕಳ ಮನಸ್ಸಿನಲ್ಲಿ ತಾವು ಅನಾಥರೆಂಬ ಭಾವನೆಯೇ ಬೆಳೆಯದಂತೆ ಅವುಗಳ ರಕ್ಷಣೆ, ಶಿಕ್ಷಣ ನಡೆಯುತ್ತಿವೆ. ಮಕ್ಕಳ ಮನವರಿತು, ಅವರ ಸಾಮರ್ಥ್ಯಕ್ಕೂ, ಇಚ್ಛೆಗೂ ತಕ್ಕಂತೆ ಶಿಕ್ಷಣದ ಜೊತೆಗೆ ಕೈಕಸುಬನ್ನು ಕಲಿಸಲಾಗುವುದು. ಕಸ್ತೂರಬಾ ಸೇವಿಕಾಶ್ರಮ ವಿಧವೆಯರ, ಪರಿತ್ಯಕ್ತೆಯರ, ಸಮಾಜದ ದಬ್ಬಾಳಿಕೆಗೆ ಒಳಗಾದ ನತದೃಷ್ಟ ಅನಾಥಸ್ತ್ರೀಯರ ರಕ್ಷಣೆಯ ಕೇಂದ್ರವಾಗಿದೆ. ಇಲ್ಲಿ ಬಂದು ಸೇರುವ ಮಹಿಳೆಯರಿಗೆ ಪ್ರೌಢಶಾಲೆಯ ವರೆಗೆ ಶಿಕ್ಷಣ ನೀಡಿ ಅನಂತರ ಅವರ ಇಚ್ಛೆಯಂತೆ ಶಿಕ್ಷಕಿಯರೋ ದಾದಿಯರೋ ಕುಶಲ ಕಲಾ ಶಿಕ್ಷಕಿಯರೋ ಆಗಲು ಅಗತ್ಯವಾದ ತರಬೇತು ನೀಡಲಾಗುತ್ತದೆ.

ಗ್ರಾಮೀಣ ಉನ್ನತ ಶಿಕ್ಷಣ ಸಂಸ್ಥೆಗಳೂ ಇಲ್ಲುಂಟು. ಗ್ರಾಮಸೇವಾ ಕಾಲೇಜು, ಗ್ರಾಮಸಮಾಜಶಾಸ್ತ್ರ ಮತ್ತು ಸಮುದಾಯ ಅಭಿವೃದ್ಧಿ ಡಿಪ್ಲೊಮ ನೀಡುವ ಸ್ನಾತಕೋತ್ತರ ಶಿಕ್ಷಣ ಕಾಲೇಜು, ಕೃಷಿವಿಜ್ಞಾನ ಕಾಲೇಜು ಇವು ಇಂಥವು. ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಗಾಂಧೀಗ್ರಾಮದ ಸುತ್ತಣ ಹಳ್ಳಿಗಳೇ ಜೀವಂತ ಪ್ರಯೋಗಶಾಲೆಗಳಾಗಿವೆ. ಇದರಿಂದ ಸುತ್ತಣ ಗ್ರಾಮದ ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ. ವಿದ್ಯಾರ್ಥಿಗಳು ಗ್ರಾಮ ಸಮಸ್ಯೆಗಳನ್ನು ಅಭ್ಯಸಿಸಲು ಆ ಗ್ರಾಮಗಳಲ್ಲೆ ಕೆಲವು ದಿನಗಳನ್ನು ಕಳೆಯುತ್ತಾರೆ. ಗ್ರಾಮ ಸೇವಕರೊಡನೆ ಕೆಲವು ಕಾಲ ಇದ್ದು ತಮ್ಮ ಇಚ್ಛೆಯಂತೆ ಗ್ರಾಮಕ್ಕೆ ಸಂಬಂಧಪಟ್ಟ ಯಾವುದಾದರೂ ವಿಷಯವನ್ನು ಅಭ್ಯಾಸಮಾಡಿ ಪರಿಣತಿಗಳಿಸಿಕೊಳ್ಳುತ್ತಾರೆ.

ಗಾಂಧೀಗ್ರಾಮದ ವಿದ್ಯಾರ್ಥಿಗಳು ತಮ್ಮ ತರಬೇತಿಗೆ ಪೂರಕವಾಗಿ ಸಮಾಜಕಲ್ಯಾಣ ಕಾರ್ಯಗಳನ್ನು ಸ್ವಯಂಸೇವಕರಂತೆ ನಿರ್ವಹಿಸುತ್ತಾರೆ. ಬಡವರಿಗೆ ಮನೆಕಟ್ಟಿಕೊಳ್ಳಲು ಸಹಾಯಮಾಡುವುದು, ಉಚಿತವಾಗಿ ಶಾಲೆಗಳನ್ನು ನಡೆಸಿ ವಿದ್ಯಾದಾನ ಮಾಡುವುದು, ವಯಸ್ಕರ ಶಿಕ್ಷಣ, ಕೃಷಿ ಅಭಿವೃದ್ಧಿ, ನೀರಿನ ಸೌಕರ್ಯ ಹೆಚ್ಚಿಸುವುದು, ಆರೋಗ್ಯ ರಕ್ಷಣೆಯ ವಿಚಾರ ತಿಳಿಸುವುದು, ಮಕ್ಕಳಿಗೆ ಸಿಡುಬು ಮತ್ತು ಕಾಲರ ನಿರೋಧಕ ಸೂಜಿಮದ್ದನ್ನು ಹಾಕುವುದು ಮುಂತಾದ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಕೈಗೊಂಡು ಗ್ರಾಮಸ್ಥರಿಗೆ ಉಪಕಾರ ಮಾಡುತ್ತಿದ್ದಾರೆ. ಸುತ್ತಣ 25 ಗ್ರಾಮಗಳನ್ನು ಇದಕ್ಕಾಗಿ ಆಯ್ದುಕೊಳ್ಳಲಾಗಿದೆ. ದಿಂಡಿಗಲ್ ಮತ್ತು ರೆಡ್ಡಿಯಾರ್ ಚತ್ರಂ ಪಂಚಾಯತಿಯ ವ್ಯಾಪ್ತಿಯಲ್ಲಿರುವ 13 ಹಳ್ಳಿಗಳನ್ನು ಸಾಂದ್ರ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಆರಿಸಿಕೊಳ್ಳಲಾಗಿದೆ. ಇದಕ್ಕೆ ಜರ್ಮನ್ ಸಂಸ್ಥೆಯೊಂದು ಆರ್ಥಿಕ ನೆರವು ನೀಡಿದೆ.

ಕುಶಲ ಕಲಾ ಶಿಕ್ಷಣ ಶಾಲೆಯಲ್ಲಿ ಕುಶಲ ಕಲೆಗಳ ಬಗ್ಗೆ ತರಬೇತಿ ನೀಡಿ ಜೊತೆಗೆ ಸುತ್ತಣ ರೈತಜನಕ್ಕೆ ಕೃಷಿ ಉಪಕರಣಗಳ ಸೌಲಭ್ಯ ಒದಗಿಸಲಾಗುತ್ತದೆ. ಗಾಂಧೀಗ್ರಾಮದ ಕುಟುಂಬಯೋಜನಾ ಕೇಂದ್ರವೂ ಕಸ್ತೂರಬಾ ಆಸ್ಪತ್ರೆಯೂ ಅತ್ಯಂತ ಅಮೂಲ್ಯವಾದ ಸೇವೆ ನೀಡುತ್ತಿವೆ. ಗಾಂಧೀಗ್ರಾಮದ ಶಾಂತಿಸೇನೆಯ ಸೇವೆ ವಿಶಿಷ್ಟವಾದ್ದು, ಸಾಮೂಹಿಕ ಶಿಸ್ತನ್ನು ಬೆಳೆಯಿಸುವುದು ಇದರ ಉದ್ದೇಶ. ಗಾಂಧೀಗ್ರಾಮದ ಸುತ್ತ ಪೌಳಿಗೋಡೆಗಳಿಲ್ಲ. ಶಾಂತಿ ಸೇನೆಯ ಸದಸ್ಯರು ಸಣ್ಣ ಸಣ್ಣ ತಂಡಗಳಲ್ಲಿ ಅಹರ್ನಿಶಿ ಅದಕ್ಕೆ ಕಾವಲಾಗಿರುತ್ತಾರೆ. 1956ರಲ್ಲಿ ಸಂಭವಿಸಿದ ಚಂಡಮಾರುತದಿಂದ ನೊಂದವರಿಗೆ ಪರಿಹಾರ ನೀಡುವ ಕಾರ್ಯದಲ್ಲೂ ಸ್ವಲ್ಪ ಕಾಲಾನಂತರ ರಾಮನಾಥಪುರಂ ಜಿಲ್ಲೆಯಲ್ಲಿ ನಡೆದ ಕೋಮುವಾರು ಗಲಭೆಗಳ ಸಮಯದಲ್ಲೂ ಗಾಂಧೀಗ್ರಾಮದ ಶಾಂತಿಸೇನೆ ನೀಡಿದ ಸೇವೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಗಾಂಧೀಗ್ರಾಮದ ಕಲಾಭವನದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂಗೀತ, ನೃತ್ಯ, ನಾಟಕ, ಚಿತ್ರಕಲೆಗಳಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದೆ.

ಗಾಂಧೀಗ್ರಾಮದ ಆಶ್ರಮವಾಸಿಗಳು ಸಂಪೂರ್ಣವಾಗಿ ವಿಕಾಸಗೊಂಡು ತಮ್ಮ ಹೊಣೆಗಳನ್ನು ನಿರ್ವಹಿಸುವಂತೆ ಅವರಿಗೆ ವಿಶೇಷ ಅನುಭವ ದೊರಕಿಸಿ ಕೊಡಲಾಗುತ್ತದೆ. ಅದೇ ರೀತಿ ಅಲ್ಲಿಯ ಜೀವನವನ್ನು ಸಂಘಟಿಸಲಾಗಿದೆ. ವಿದ್ಯಾರ್ಥಿಗಳಿಗೆ ಸಂಘಜೀವನವನ್ನು ಕಲಿಸಲಾಗುತ್ತದೆ. ಆಡಳಿತ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ವ್ಯವಸ್ಥಾಪಕರಿಗೆ ತಿಳಿಸಲು ಆಂ ಸಭಾ ಎಂಬ ವಿಧಾನಸಭೆಯೊಂದುಂಟು. ಗಾಂಧೀಗ್ರಾಮದ ಆಡಳಿತ ಮಂಡಳಿಯಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಿಗೂ ಸ್ಥಾನವುಂಟು. ಧರ್ಮಸಮನ್ವಯ ದೃಷ್ಟಿಯಿಂದ ಆಶ್ರಮದ ಸಾಮೂಹಿಕ ಪ್ರಾರ್ಥನೆಯನ್ನು ರೂಪಿಸಲಾಗಿದೆ. *

**ಗಾಂಧೀ, ದೇವದಾಸ್ :** 1900–1958. ಮಹಾತ್ಮ ಗಾಂಧೀ ಮತ್ತು ಕಸ್ತೂರಬಾ ಗಾಂಧೀಯರ ಕೊನೆಯ ಮಗ ದೇವದಾಸ್ ಗಾಂಧೀ 1900ರಲ್ಲಿ ದಕ್ಷಿಣ ಆಫ್ರಿಕದ ಡರ್ಬನಿನಲ್ಲಿ ಜನಿಸಿದರು. ಗಾಂಧೀಯವರ ಇತರ ಮಕ್ಕಳಂತೆ ಇವರಿಗೂ ಸಾಮಾನ್ಯ ರೀತಿಯ ಶಾಲಾ–ಕಾಲೇಜ್ ಶಿಕ್ಷಣ ದೊರಕಲಿಲ್ಲ. ಇವರು ಗಾಂಧಿಯವರೊಂದಿಗೆ ಇದ್ದುದೇ ದೊಡ್ಡ ಶಿಕ್ಷಣವಾಯಿತು. ಇವರು ಯಂಗ್ ಇಂಡಿಯ ಪತ್ರಿಕೆಯಲ್ಲಿ ಕೆಲಸ ಮಾಡಿ, ಪತ್ರಿಕೋದ್ಯಮದ ಅನುಭವ ಪಡೆದರು. ಮಹಾತ್ಮ ಗಾಂಧೀಯವರ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಹವರ್ತಿಯಾದ ರಾಜಗೋಪಾಲ ಚಾರ್ಯರ ಮಗಳಾದ ಲಕ್ಷ್ಮೀಯನ್ನು 1933ರಲ್ಲಿ ವಿವಾಹವಾದರು.

1923ರಲ್ಲಿ ದೆಹಲಿಯಲ್ಲಿ ಸ್ಥಾಪಿತವಾದ ಹಿಂದೂಸ್ಥಾನ್ ಟೈಮ್ಸ್ ಎಂಬ ಇಂಗ್ಲಿಷ್ ದಿನಪತ್ರಿಕೆಗೆ 1940ರಲ್ಲಿ ದೇವದಾಸ್ ಗಾಂಧಿಯವರು ಕಾರ್ಯನಿರ್ವಾಹಕ ಸಂಪಾದಕರಾಗಿ ನೇಮಕಗೊಂಡರು. ಆಗ ಇವರ ಅನುಭವ ಒಳ್ಳೆಯ ಪ್ರಯೋಜನಕ್ಕೆ ಬಂತು. ಸಹ ಸಂಪಾದಕರಾಗಿದ್ದ ದುರ್ಗಾದಾಸ್ ಅವರ ನೆರವಿನಿಂದ ಪತ್ರಿಕೆಯನ್ನು ಹೆಚ್ಚು ಜನಪ್ರಿಯವನ್ನಾಗಿ ಮಾಡಲು ಪ್ರಯತ್ನಿಸಿದರು. ಸ್ವಾತಂತ್ರ್ಯ ಹೋರಾಟ, ಕಾಂಗ್ರೆಸ್ ಧ್ಯೇಯ ಇವನ್ನು ಪ್ರತಿಪಾದಿಸುತ್ತಿದ್ದ ಈ ಪತ್ರಿಕೆ 1947ರಲ್ಲಿ, ರಾಷ್ಟ್ರಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ, ಸರ್ಕಾರದ ನೀತಿ–ಧೋರಣೆಗಳ ವಾಣಿಯಾಯಿತು. ಇದರ ಹಿಂದೀ ಅವತಾರಗಳಾದ ಹಿಂದೂಸ್ತಾನ್, ಹಿಂದೂಸ್ತಾನ್ ಸಾಪ್ತಾಹಿಕ ಇವೂ ಜನಪ್ರಿಯತೆ ಗಳಿಸಿದುವು. ಇದರ ಸಾಗರೋತ್ತರ ಆವೃತ್ತಿ ವಿದೇಶಗಳಲ್ಲಿಯ ರಾಷ್ಟ್ರೀಯರ ಪ್ರೀತಿಗೆ ಪಾತ್ರವಾಯಿತು. ದೇವದಾಸ್ ಗಾಂಧಿಯವರು 1947ರಲ್ಲಿ ಅಖಿಲಭಾರತ ಪತ್ರಕರ್ತರ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1958ರಲ್ಲಿ ನಿಧನವಾದರು. (ಜಿ.ವಿ.ಎಸ್.)

**ಗಾಂಧೀನಗರ :** ಗುಜರಾತ್ ರಾಜ್ಯದ ರಾಜಧಾನಿ; ಸಾಬರ್ಮತಿ ನದಿಯ ದಡದ ಮೇಲೆ, ಅಹಮದಾಬಾದಿನಿಂದ ಸು. 24 ಕಿಮೀ ಅಂತರದಲ್ಲಿದೆ. ಈ ನಗರ ಸಂಪೂರ್ಣವಾಗಿ ಬೆಳೆದಾಗ 2163 ಚ.ಕಿಮೀ ವಿಸ್ತೀರ್ಣವುಳ್ಳದ್ದಾಗಿರುತ್ತದೆ. ಜನಗಣತಿಯ ಪ್ರಕಾರ ಇದರ ಜನಸಂಖ್ಯೆ 2,08,299 (2011).

1960ರಲ್ಲಿ ಗುಜರಾತ್ ರಾಜ್ಯ ರಚಿತವಾದಾಗ ಅಹಮದಾಬಾದ್ ಅದರ ರಾಜಧಾನಿಯಾಯಿತು. ಆದರೆ ಹೊಸ ರಾಜ್ಯಕ್ಕೆ ಹೊಸದೊಂದು ರಾಜಧಾನಿಯ ಅವಶ್ಯಕತೆಯಿತ್ತು. ಅಹಮದಾಬಾದ್ ಒಂದು ದೊಡ್ಡ ಕೈಗಾರಿಕಾ ಕೇಂದ್ರ. ಇದರ ಜನಸಂಖ್ಯೆ ತೀವ್ರವಾಗಿ ಬೆಳೆಯುತ್ತಿದೆ. ಅಹಮದಾಬಾದ್ ನಗರಗಳಲ್ಲಿ ಜಮೀನಿನ ಬೆಲೆ ಹೆಚ್ಚು ಅತಿಯಾದ ಜನಸಂದಣಿಯಿರುವ ಆ ನಗರದಲ್ಲಿ ವಸತಿಯದೊಂದು ಸಮಸ್ಯೆ. ಜನಸಂಖ್ಯೆಯ ಬೆಳೆವಣಿಗೆಯ ವೇಗಕ್ಕೆ ಅನುಗುಣವಾಗಿ ನಾಗರಿಕ ಸೌಲಭ್ಯಗಳನ್ನು ಒದಗಿಸುವುದು ಕಷ್ಟ ಈ ಕಾರಣಗಳಿಂದಾಗಿ ರಾಜ್ಯದ ಆಡಳಿತಕ್ಕಾಗಿ ಅಹಮದಾಬಾದಿನ ಹತ್ತಿರದಲ್ಲಿ ಹೊಸ ರಾಜಧಾನಿಯೊಂದನ್ನು ರಚಿಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು. ಹೊಸ ರಾಜಧಾನಿಗಾಗಿ ಆಯ್ಕೆ ಮಾಡಿದ ನಿವೇಶನದ ಅಡಿಯಲ್ಲಿ ತೈಲ ಸೆಲೆಗಳಿಲ್ಲವೆಂಬುದನ್ನು ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ 1964ರಲ್ಲಿ ಖಚಿತವಾಗಿ ಸಾರಿದ ಬಳಿಕ 1965ರ ಜೂನ್ ತಿಂಗಳಲ್ಲಿ ಈ ನಗರಯೋಜನೆಯ ಅನ್ವಯಕ್ಕೆ ಕ್ರಮ ಕೈಗೊಳ್ಳಲಾಯಿತು. ಅನಂತರದ ಐದು ವರ್ಷಗಳಲ್ಲಿ ರಾಜಧಾನಿಯ ಮುಖ್ಯ ಭಾಗಕ್ಕೆ ಒಂದು ರೂಪು ಬಂದು 1974ರಲ್ಲಿ ಇದು ಗುಜರಾತ್ ರಾಜ್ಯದ ಹೊಸ ರಾಜಧಾನಿಯಾಯಿತು.

ಅಹಮದಾಬಾದಿಗಿಂತ 21 ಮೀ ಹೆಚ್ಚು ಎತ್ತರದಲ್ಲಿರುವ, 5,500 ಹೆಕ್ಟೇರ್ ವಿಸ್ತಾರವುಳ್ಳ ಗಾಂಧೀನಗರ ನಿವೇಶನ ವಿಶೇಷವಾಗಿ ಫಲವತ್ತಾದ ಉಸುಕಿನ ಪ್ರದೇಶ; ಇದು ಸುಂದರವಾದ ಮಾವಿನ ಮರಗಳ ಸಾಲುಗಳಿಂದ ಕಂಗೊಳಿಸುತ್ತದೆ. ನಗರರಚನೆಯ ಅನಂತರವೂ ಇಲ್ಲಿಯ ನಿಸರ್ಗ ಸೌಂದರ್ಯ ಕೆಡದಂತೆ ಎಚ್ಚರಿಕೆ ವಹಿಸಲಾಗಿದೆ. ಈ ನಗರರಚನೆಯಲ್ಲಿ ಮುಖ್ಯವಾದ ಐದು ವಿಭಾಗಗಳಿವೆ: 1. ರಾಜಧಾನಿ ವಿಭಾಗ ಮತ್ತು ಸರ್ಕಾರಿ ಕಾರ್ಯಾಲಯಗಳು. 2. ಔದ್ಯೋಗಿಕ ವಿಭಾಗ, 3. ನಗರ ವಿಭಾಗ, 4. ಸಾರ್ವಜನಿಕ ಸಂಸ್ಥೆಗಳ ವಿಭಾಗ ಮತ್ತು 5. ಮಾರುಕಟ್ಟೆ ಮತ್ತು ದಾಸ್ತಾನು ಮಳಿಗೆಗಳ ವಿಭಾಗ.

ರಾಜಧಾನಿ ಮತ್ತು ಸರ್ಕಾರಿ ಕಾರ್ಯಾಲಯಗಳು: ಗಾಂಧೀನಗರ ರಾಜಧಾನಿಯ ಸಮಗ್ರ ಯೋಜನೆಯಲ್ಲಿ ಇದು ಅತ್ಯಂತ ಮಹತ್ತ್ವದ ವಿಭಾಗ. ಇದರಲ್ಲಿ ರಾಜ್ಯ ಸರ್ಕಾರದ ಸಚಿವಾಲಯ ಮತ್ತು ಇತರ ಕಚೇರಿಗಳು, ವಿಧಾನಸಭಾ ಗೃಹ, ಉಚ್ಚ ನ್ಯಾಯಾಲಯ, ರಾಜ್ಯ ಕೇಂದ್ರ ಸರ್ಕಾರಗಳ ವಿವಿಧ ಇಲಾಖೆಗಳ ಕಚೇರಿಗಳು ಇವೆ.

ಒಟ್ಟು 150 ಹೆಕ್ಟೇರ್ ಜಮೀನಿನ ಮೇಲೆ ಸಾಬರ್ಮತಿಯ ದಂಡೆಗುಂಟ ಹರಡಿಕೊಂಡಿರುವ ಈ ವಿಭಾಗದ ಹೊಸ ರಾಜಧಾನಿಯ ಆಕರ್ಷಕ ಭಾಗಗಳಲ್ಲೊಂದು.

ಔದ್ಯೋಗಿಕ ವಿಭಾಗ: ಗುಜರಾತ್ ರಾಜ್ಯದ ರಾಜಧಾನಿಯಾಗಿರಬೇಕೆಂಬುದು ಗಾಂಧೀನಗರದ ರಚನೆಯ ಮುಖ್ಯ ಉದ್ದೇಶವಾದರೂ ಆರ್ಥಿಕ ಚಟುವಟಿಕೆಗಳಿಗೂ ಇಲ್ಲಿ ಎಡೆಯುಂಟು. ಇದಕ್ಕಾಗಿ ಸಣ್ಣಮಟ್ಟ ಕೈಗಾರಿಕೆಗಳ ವಿಭಾಗವನ್ನು ಸೇರ್ಪಡೆ ಗೊಳಿಸಿದೆ. ಆದರೂ ಕೈಗಾರಿಕೆಗಳ ಹೊಗೆಯಿಂದ ಇಲ್ಲಿಯ ಬದುಕಿನ ಬಗೆ ಕೆಡದಂತೆ ಎಚ್ಚರಿಕೆ ವಹಿಸಲಾಗಿದೆ. 100 ಹೆಕ್ಟೇರ್ ಜಮೀನನ್ನು ವ್ಯಾಪಿಸಿದ ಈ ವಿಭಾಗದಲ್ಲಿ 9,000 ಕೆಲಸಗಾರರ ದುಡಿಮೆಗೆ ಅವಕಾಶವಿದೆ.

ನಗರ ವಿಭಾಗ : 75 ಹೆಕ್ಟೇರ್ ಜಮೀನನ್ನು ವ್ಯಾಪಿಸಿಕೊಂಡಿರುವ ನಗರ ವಿಭಾಗ ಜನಕ್ಕೆ ನಾಗರಿಕ ಸೌಕರ್ಯಗಳನ್ನು ಸಾಂಸ್ಕೃತಿಕ ಅನುಕೂಲತೆಗಳನ್ನೂ ವ್ಯಾಪಾರ ವ್ಯವಹಾರಗಳ ಅವಕಾಶಗಳನ್ನೂ ಒದಗಿಸಿಕೊಡುತ್ತದೆ.

ಸಾರ್ವಜನಿಕ ಸಂಸ್ಥೆಗಳ ವಿಭಾಗ : 50 ಹೆಕ್ಟೇರ್ ಜಮೀನನ್ನೊಳಗೊಂಡ ಈ ವಿಭಾಗದಲ್ಲಿ ರಾಜ್ಯಮಟ್ಟದಲ್ಲಿ ಮಹತ್ತ್ವದ್ದೆನಿಸುವ ಸಂಸ್ಥೆಗಳ ಕಟ್ಟಡಗಳು, ಶಾಲೆ ಕಾಲೇಜುಗಳು ಮತ್ತು ಅವುಗಳಲ್ಲಿ ಉದ್ಯೋಗನಿರತರಾದವರ ಮನೆಗಳು ಇವೆ.


ಮಾರುಕಟ್ಟೆ ಮತ್ತು ದಾಸ್ತಾನು ವಿಭಾಗ : ನಿತ್ಯದ ಬದುಕಿಗೆ ಬೇಕಾಗುವ ಸರಕುಗಳನ್ನು ಪೂರೈಸುವ ಅಂಗಡಿಗಳಿಗೆ ಮತ್ತು ಸುತ್ತಲಿಂದ ಬರುವ ಸರಕುಗಳ ದಾಸ್ತಾನಿಗೆ ಮೀಸಲಾದ ಈ ವಿಭಾಗ ನಗರ ವಿಭಾಗದೊಡನೆ ಸಂಪರ್ಕವಿರಿಸಿಕೊಂಡು ಇಲ್ಲಿಯ ನಿವಾಸಿಗಳಿಗೆ ಬಹು ಅನುಕೂಲವಾಗಿದೆ.

ವಸತಿ ವ್ಯವಸ್ಥೆ : ಸು. 1,50,000 ಜನಕ್ಕೆ ವಸತಿ ಸೌಕರ್ಯ ಒದಗಿಸುವ ಯೋಜನೆಯನ್ನು ಈ ನಗರರಚನೆಯಲ್ಲಿ ಅಳವಡಿಸಲಾಗಿದೆ. ಸರ್ಕಾರಿ ಕಾರ್ಯಕರ್ತರಿಗಾಗಿ ಅವರವರ ಸಂಬಳಶ್ರೇಣಿಗನುಸಾರವಾಗಿ ಎಂಟು ಪ್ರಕಾರಗಳ ಮನೆಗಳನ್ನು ಒದಗಿಸಲಾಗಿದೆ. ರಾಜಧಾನಿಯ ವಸತಿ ಸೌಕರ್ಯ ಕೇವಲ ಸರ್ಕಾರಿ ಕಾರ್ಯಕರ್ತರಿಗೇ ಮೀಸಲಾಗಿರಬೇಕೆಂಬ ಉದ್ದೇಶವಿಲ್ಲ. ಅರ್ಧದಷ್ಟು ಮನೆಗಳನ್ನು ಸಾರ್ವಜನಿಕರ ವಸತಿಗಾಗಿ ಕೊಡುವ ಏರ್ಪಾಡು ಮಾಡಲಾಗಿದೆ. ಒಟ್ಟು 30 ಚೌಕಾಕಾರದ ವಸತಿ ಘಟಕಗಳುಳ್ಳ ಈ ನಗರದಲ್ಲಿ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ, ಮಾರುಕಟ್ಟೆ, ಆಸ್ಪತ್ರೆ, ಶಾಲೆ, ಕಾಲೇಜುಗಳಂಥ ಸಕಲ ನಾಗರಿಕ ಸೌಕರ್ಯಗಳನ್ನು ಹೊಂದಿದ 7,570 ಮನೆಗಳನ್ನು ಸರ್ಕಾರಿ ಕಾರ್ಯನಿರತರಿಗಾಗಿ ಮೀಸಲಾಗಿಟ್ಟರೂ ಮಧ್ಯೆ ಸಾರ್ವಜನಿಕರಿಗೆ ವಸತಿ ಸೌಕರ್ಯವನ್ನೊದಗಿಸಿಕೊಟ್ಟು ಸಮನ್ವಯ ಜೀವನದ ಅವಕಾಶ ಮಾಡಿಕೊಟ್ಟಿರುವುದು ಒಂದು ವಿಶೇಷವಾಗಿದೆ. 3–4 ಸಾವಿರ ಜನಕ್ಕೆ ಒಂದರಂತೆ ಪ್ರಾಥಮಿಕ ಶಾಲೆಯನ್ನೂ 10–12 ಸಾವಿರ ಜನಕ್ಕೆ ಒಂದರಂತೆ ಮಾಧ್ಯಮಿಕ ಶಾಲೆಯನ್ನೂ ಇಲ್ಲಿ ಒದಗಿಸಲಾಗಿದೆ. ಒಂದೊಂದು ಘಟಕದಲ್ಲಿಯೂ ಒಂದೊಂದು ಆಸ್ಪತ್ರೆ ಇದೆ. ನಗರಕ್ಕೆ ಸಾಬರ್ಮತೀ ನದಿಯಿಂದ ಕುಡಿಯುವ ನೀರಿನ ಪೂರೈಕೆ ಆಗುತ್ತದೆ. ಅವಶ್ಯಕ ಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಪೂರೈಕೆಯ ವ್ಯವಸ್ಥೆಯನ್ನೂ ಮಾಡಲಾಗಿದೆ.

ಈ ಹೊಸ ನಗರದ ನಿರ್ಮಾಣಕ್ಕೆ ಕೈಹಾಕುವ ಮುನ್ನ ಇಲ್ಲಿ ವಾಸವಾಗಿದ್ದ 783 ರೈತ ಕುಟುಂಬಗಳ ಬೇಸಾಯದ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡು ಅಂಥ ಕುಟುಂಬಗಳಿಗೆ ಅವಶ್ಯಕ ಏರ್ಪಾಡು ಮಾಡಿಕೊಡಬೇಕಾಯಿತು. ಸಾಬರ್ಮತೀ ನದೀಪ್ರದೇಶವನ್ನೂ ಒಳಗೊಂಡು ಒಟ್ಟು 1350 ಎಕರೆ ಭೂಮಿಯನ್ನು ವ್ಯಾಪಿಸಿದ ಈ ನಗರದ ರಚನೆಯನ್ನು ಅತ್ಯಂತ ಯೋಜನಾಬದ್ಧವಾಗಿ ಕೈಗೊಳ್ಳಲಾಗಿದ್ದು, ಹಳೆಯ ರಾಜಧಾನಿಗೂ ಹೊಸ ರಾಜಧಾನಿಗೂ ಸಜೀವ ಸಂಪರ್ಕವಿರಿಸಿಕೊಳ್ಳುವ ಏರ್ಪಾಡು ಮಾಡಲಾಗಿದೆ. ಅಹಮದಾಬಾದಿನಿಂದ ಗಾಂಧೀನಗರಕ್ಕೆ ಸುಂದರವಾದ ರಸ್ತೆಗಳನ್ನು ರಚಿಸಲಾಗಿದೆ. ಅಹಮದಾಬಾದ್ ವಿಮಾನ ನಿಲ್ದಾಣ ಇರುವುದು ಎರಡು ನಗರಗಳ ಮಧ್ಯದಲ್ಲಿ. ಮುಂಬೈ ದಿಲ್ಲಿಗಳನ್ನು ಕೂಡಿಸುವ ರಾಷ್ಟ್ರೀಯ ಹೆದ್ದಾರಿಗೆ (ನಂ.8) 5 ಕಿಮೀ. ಅಂತರದಲ್ಲಿ ಈ ನಗರವುಂಟು. ಇಲ್ಲಿಂದ ಖೋಡಿಯಾರ ರೈಲು ನಿಲ್ದಾಣಕ್ಕೆ ಹೋಗುವ ರಸ್ತೆ ಅಹಮದಾಬಾದ್–ಮೌಂಟ್ ಅಬೂ ನಡುವಣ ರಾಜ್ಯ ಹೆದ್ದಾರಿಗೂ ಸಂಪರ್ಕ ಕಲ್ಪಿಸುತ್ತದೆ. ನಗರದ ಒಳಗಡೆಯಲ್ಲಿ 45–100 ಮೀ. ಅಗಲದ ಸುಯೋಜಿತ ಸುಂದರ ರಸ್ತೆಗಳ ನಕ್ಷೆಯನ್ನೇ ಬರೆದಿರಿಸಿದಂತಿದೆ. ಈ ನಗರದ ಯಾವುದೇ ವಿಭಾಗದಲ್ಲಾಗಲಿ ಬಸ್ಸಿನಲ್ಲಿ ಸಂಚರಿಸುವಾಗ ಸೂರ್ಯ ಕಿರಣಗಳಿಂದ ಪ್ರಯಾಣಿಕರ ಕಣ್ಣುಗಳಿಗೆ ತೊಂದರೆಯಾಗದಂತೆ ರಸ್ತೆಗಳ ರಚನಾವಿನ್ಯಾಸವುಂಟು. ಹೀಗೆ ಈ ನಗರದ ಒಳಹೊರಗಿನ ಸಂಪರ್ಕ ಸೌಕರ್ಯಗಳಿಂದಾಗಿ ಇದಕ್ಕೆ ವಿಶೇಷ ಮಹತ್ತ್ವ ಲಭ್ಯವಾಗಿದೆ.

ಗಾಂಧೀನಗರ ಜಿಲ್ಲೆ : ಗಾಂಧೀನಗರ ಮತ್ತು ಸುತ್ತಲಿನ ಸ್ವಲ್ಪ ಪ್ರದೇಶವನ್ನು ಸೇರಿಸಿ ಹೊಸದೊಂದು ಜಿಲ್ಲೆಯನ್ನು ರಚಿಸಲಾಗಿದೆ. ಒಟ್ಟು 58,000 ಹೆಕ್ಟೇರ್ ವಿಸ್ತಾರವುಳ್ಳ ಈ ಜಿಲ್ಲೆ ನಗರದ ಸುತ್ತಮುತ್ತ ಸು.12 ಕಿಮೀ ವರೆಗೆ ಹರಡಿಕೊಂಡಿದೆ. ಇದರಲ್ಲಿ ಒಟ್ಟು 79 ಗ್ರಾಮಗಳಿವೆ. ನಾಲ್ಕು ಗ್ರಾಮಗಳು ಗಾಂಧೀನಗರದ ನಿವೇಶನದಲ್ಲಿ ಸೇರಿಹೋಗಿವೆ. ಜಿಲ್ಲೆಯ ಒಟ್ಟು ಜನಸಂಖ್ಯೆ 13,87,478 (2011). (ಬಿ.ಎ.ಎಸ್.)

**ಗಾಂಧೀ, ಫಿರೋಜ್ :** 1912–1960. ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರ ಪತಿ. ಜಹಾಂಗೀರ್ ಗಾಂಧಿಯವರ ಪುತ್ರ. 1912ರ ಸೆಪ್ಟೆಂಬರ್ 12ರಂದು ಜನಿಸಿದರು. ಮುಂಬಯಿಯಲ್ಲೂ ಲಂಡನಿನಲ್ಲೂ (ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್) ವಿದ್ಯಾಭ್ಯಾಸ ಮಾಡಿದರು. ಲಂಡನಿನಲ್ಲಿದ್ದಾಗಲೇ ಇವರು ಭಾರತೀಯ ವಿದ್ಯಾರ್ಥಿಗಳು ಮತ್ತು ಬ್ರಿಟಿಷ್ ಬುದ್ಧಿಜೀವಿಗಳಲ್ಲಿ ಗಾಂಧೀಜಿಯವರ



ವಿಚಾರಧಾರೆಯನ್ನು ಪ್ರಚಾರ ಮಾಡುವ ಕಾರ್ಯದಲ್ಲಿ ನಿರತರಾಗಿದ್ದರು. ಲಂಡನ್ನಿನ ಇಂಡಿಯನ್ ಮಜ್ಲಿಸ್‌ನ ಅಧ್ಯಕ್ಷರಾಗಿದ್ದರು. ಭಾರತದ ಸ್ವಾತಂತ್ರ್ಯದ ಬಗ್ಗೆ ಇವರಿಗಿದ್ದ ಅಮಿತೋತ್ಸಾಹ, ಇವರು ಮಾಡುತ್ತಿದ್ದ ಕೆಲಸ–ಇವು ಮಹಾತ್ಮ ಗಾಂಧಿ, ಜವಹರಲಾಲ್ ನೆಹರೂ ಮುಂತಾದವರ ಗಮನ ಸೆಳೆದುವು. ಇವರು 1942ರ ಮಾರ್ಚ್ 26ರಂದು ನೆಹರೂ ಅವರ ಕುಮಾರಿ ಇಂದಿರಾ ಅವರನ್ನು ವಿವಾಹವಾದರು. 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಕಾರಾಗೃಹವಾಸ ಪ್ರಾಪ್ತವಾಯಿತು. ಅನಂತರ ಇವರು ಲಖನೌದಿಂದ ಪ್ರಕಟವಾಗುವ ಇಂಗ್ಲಿಷ್ ದಿನಪತ್ರಿಕೆ ನ್ಯಾಷನಲ್ ಹೆರಾಲ್ಡ್ ಮತ್ತು ಹಿಂದಿ ದಿನಪತ್ರಿಕೆ ನವಜೀವನ ಇವುಗಳ ಪ್ರಕಾಶನ ಸಂಸ್ಥೆಯಾದ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದರು. ಇವರ ಮಾರ್ಗದರ್ಶನದಲ್ಲಿ ನ್ಯಾಷನಲ್ ಹೆರಾಲ್ಡ್ ಉತ್ತರ ಭಾರತದ ಪ್ರಮುಖ ರಾಷ್ಟ್ರೀಯ ಪತ್ರಿಕೆಗಳಲ್ಲಿ ಒಂದಾಯಿತು. ಇವರು ಇತರ ಪತ್ರಿಕೆಗಳೊಂದಿಗೂ ಯುವಜನ ಚಳವಳಿಗೆ ಸಂಬಂಧಪಟ್ಟ ಹಲವಾರು ಸಾರ್ವಜನಿಕ ಸಂಘ ಸಂಸ್ಥೆಗಳೊಂದಿಗೂ ನಿಕಟ ಸಂಬಂಧ ಹೊಂದಿದ್ದರು.

ಸ್ವಾತಂತ್ರ್ಯಾನಂತರ 1950ರಲ್ಲಿ ಫಿರೋಜ್ ಗಾಂಧಿಯವರು ಸಂಸತ್ತನ್ನು ಪ್ರವೇಶಿಸಿದರು. 1952ರಲ್ಲಿ ನಡೆದ ಪ್ರಥಮ ಮಹಾ ಚುನಾವಣೆಗಳಲ್ಲಿ ಜಯಗಳಿಸಿ ಲೋಕಸಭೆಯ ಸದಸ್ಯರಾದರು. 1957ರಲ್ಲಿ ಇವರು ಮತ್ತೊಮ್ಮೆ ಲೋಕಸಭೆಗೆ ಆಯ್ಕೆಯಾದರು. ಇವರು ಸಂಸತ್ತಿನಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ ಸದಸ್ಯರಾಗಿದ್ದರು. ಇವರು ದಕ್ಷ ಭಾಷಣಕಾರರೆಂದೂ ಸಮರ್ಥರಾದ ವಾದ ಚತುರರೆಂದೂ ಖ್ಯಾತಿ ಗಳಿಸಿದ್ದರು. ಇವರ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿದ್ದುವು.

ಜೀವವಿಮಾ ಕಾರ್ಪೊರೇಷನ್ ಮುಂತಾದ ಸರ್ಕಾರಿ ಉದ್ಯಮಗಳ ವ್ಯವಹಾರಗಳು, ಸರ್ಕಾರದಲ್ಲಿ ಮಿತವ್ಯಯ ಸಾಧನೆ–ಇಂಥ ನಾನಾ ವಿಚಾರಗಳಲ್ಲಿ ಗಾಂಧಿಯವರು ಆಸಕ್ತಿ ತಳೆದಿದ್ದರು. ಕೇಂದ್ರ ಸರ್ಕಾರದ ಉದ್ಯೋಗಿಗಳ ಮುಷ್ಕರದಲ್ಲಿ ಇವರು ಪ್ರಭಾವಪೂರ್ಣವಾದ ಮಧ್ಯಸ್ಥಿಕೆ ವಹಿಸಿದ್ದರು.


ಗಾಂಧಿಯವರು ಗೌಹಾತಿ (ಗುವಾಹಟಿ) ಯಲ್ಲಿರುವ ಇಂಡಿಯನ್ ಆಯಿಲ್ ರಿಫೈನರೀಸ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು. ಇವರು 1960ರ ಸೆಪ್ಟೆಂಬರ್ 8ರಂದು ಹೃದಯಾಘಾತದಿಂದ ನಿಧನರಾದರು. ರಾಜೀವ್ ಗಾಂಧಿ ಮತ್ತು ಸಂಜಯ್ ಗಾಂಧಿ ಇವರು ಫಿರೋಜ್ ಗಾಂಧಿಯವರ ಪುತ್ರರು. (ಎಸ್.ಎಸ್.ಆರ್.)

**ಗಾಂಧೀ, ಮೋಹನ್‌ದಾಸ್ ಕರಮ್‌ಚಂದ್ :** 1869–1948. ಭಾರತದ ಸ್ವಾತಂತ್ರ್ಯ ಶಿಲ್ಪಿ, ಅಹಿಂಸಾತ್ಮಕ ಕ್ರಾಂತಿಯಿಂದ ಬ್ರಿಟಿಷರ ಚಕ್ರಾಧಿಪತ್ಯವನ್ನು ಭಾರತದಲ್ಲಿ ಕೊನೆಗೊಳಿಸಿದ ಕಾರಣಪುರುಷ. ತನ್ನ ಇಡೀ ಬಾಳನ್ನು ಸತ್ಯಶೋಧನೆಗಾಗಿ ಮುಡಿಪಿಟ್ಟ ಮಹಾತ್ಮ. ಹಲವಾರು ಶತಮಾನಗಳಿಂದ ನಿಸ್ಸತ್ತ್ವಯುತವೂ ನಿರ್ವೀರ್ಯವೂ ವಿವಶವೂ ಆಗಿ ಪರಿಣಮಿಸಿದ್ದ ಭಾರತೀಯ ಸಮಾಜವನ್ನು ಕ್ರಾಂತಿಕಾರಿ ಪರಿವರ್ತನೆಗಳಿಗೆ ಒಳಪಡಿಸಿದ ದ್ರಷ್ಟಾರ. ಜನನ 1869ರ ಅಕ್ಟೋಬರ್ 2ರಂದು. ಕಾಠಿಯಾವಾಡದ ಪೋರ್‌ಬಂದರಿನಲ್ಲಿ. ತಂದೆ ಕರಮ್‌ಚಂದ್ ಗಾಂಧೀ ರಾಜಕೋಟೆಯಲ್ಲೂ ವಾಂಕನೇರಿನಲ್ಲೂ ದಿವಾನರಾಗಿದ್ದರು. ಗಾಂಧಿಯವರ ತಾಯಿ ಪುತಲಿಬಾಯಿ. ತಂದೆ ಸ್ವಾಮಿಭಕ್ತ, ಸತ್ಯನಿಷ್ಠ, ಧೈರ್ಯಶಾಲಿ, ಉದಾರಿ. ತಾಯಿಯ ಧರ್ಮಶ್ರದ್ಧೆ ಅನುಪಮವಾದ್ದು. ಗಾಂಧಿಯವರು ಆಕೆಯಿಂದ ಬಹಳಮಟ್ಟಿಗೆ ಪ್ರಭಾವಿತರಾಗಿದ್ದರು.

ಗಾಂಧಿಯವರ ವಿದ್ಯಾಭ್ಯಾಸ ಪೋರ್‌ಬಂದರ್ ಮತ್ತು ರಾಜಕೋಟೆಗಳಲ್ಲಿ ನಡೆಯಿತು. ಶಾಲೆಯಲ್ಲಿ ಅವರು ಸಾಮಾನ್ಯ ವಿದ್ಯಾರ್ಥಿಯಾಗಿದ್ದರು. ಅವರು ಎಂದಿಗೂ ಕಾಲ ತಪ್ಪಿ ನಡೆಯುತ್ತಿರಲಿಲ್ಲ. ಹಿರಿಯರಲ್ಲಿ ವಿಧೇಯತೆ, ಎಲ್ಲ ಬಾಲಕರಂತೆ ಅವರೂ ಕೆಟ್ಟ ಸಹವಾಸ ಸೇರಿ, ಹೊಗೆ ಸೇದಿದರು, ಕಳ್ಳತನವನ್ನೂ ಮಾಡಿದರು, ಮಾಂಸ ಕೂಡ ತಿಂದರು. ಆದರೆ ಇವು ಮಾಡಬಾರದ ಕೃತ್ಯಗಳೆಂದು ಬಹಳ ಬೇಗ ಅರಿತುಕೊಂಡರು. ಪಶ್ಚಾತ್ತಾಪಪಟ್ಟು, ಇವನ್ನು ತ್ಯಜಿಸಿದರು.

ಗಾಂಧಿಯವರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಹದಿಮೂರನೆಯ ವಯಸ್ಸಿನಲ್ಲಿ, ಕಸ್ತೂರ ಬಾರೊಂದಿಗೆ ಅವರ ವಿವಾಹವಾಯಿತು. ಕಸ್ತೂರ ಬಾ ಅವರಿಗೂ ಗಾಂಧಿಯವರಿಗಾಗಿದಷ್ಟೇ ವಯಸ್ಸಾಗಿತ್ತು. ಉತ್ತರೋತ್ತರದಲ್ಲಿ ಅವರಿಗೆ ನಾಲ್ವರು ಗಂಡುಮಕ್ಕಳಾದರು (**ನೋಡಿ– ಕಸ್ತೂರಬಾ**).

ಗಾಂಧಿಯವರ ಎಳಮನಸ್ಸಿನ ಮೇಲೆ ಅದ್ಭುತ ಪರಿಣಾಮ ಮಾಡಿದ ನಾಟಕ ಹರಿಶ್ಚಂದ್ರ. ತಾವೂ ಸತ್ಯಸಂಧರಾಗಬೇಕೆಂಬುದು ಅವರು ಮನಸ್ಸು ಮಾಡಿದರು.



**ಪೋರ್‌ಬಂದರನಲ್ಲಿರುವ ಮನೆ, ಗಾಂಧೀ ಇಲ್ಲಿ ಜನಿಸಿದರು**

ರಂಭಾ ಎಂಬ ದಾದಿ ಅವರಿಗೆ ರಾಮನಾಮ ಕಲಿಸಿದ್ದಳು. ಸತ್ಯ, ರಾಮನಾಮ, ಇವೆರಡೂ ಗಾಂಧೀ ಜೀವನದ ಪರಮ ಆದರ್ಶಗಳಾಗಿದ್ದುವು.

ಗಾಂಧಿಯವರು 18ನೆಯ ವಯಸ್ಸಿನಲ್ಲಿ ರಾಜಕೋಟೆಯ ಆಲ್ಫ್ರೆಡ್ ಪ್ರೌಢಶಾಲೆಯಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿದರು. ಅನಂತರ ಅವರು ಕಾಲೇಜು ಸೇರಿದರಾದರೂ ಅವರ ವಿದ್ಯಾಭ್ಯಾಸ ಚೆನ್ನಾಗಿ ಆಗಲಿಲ್ಲ. ಆಗ ಹಿತೈಷಿಗಳೊಬ್ಬರ ಸಲಹೆಯಂತೆ ಅವರು ಇಂಗ್ಲೆಂಡಿಗೆ ಹೋಗಿ ನ್ಯಾಯಶಾಸ್ತ್ರ ವ್ಯಾಸಂಗ ಮಾಡಿಬರಬೇಕೆಂದು ನಿರ್ಧಾರವಾಯಿತು. ವಿದೇಶದಲ್ಲಿರುವಾಗ ಮದ್ಯಪಾನ, ಪರಸ್ತ್ರೀಸಂಗ, ಮಾಂಸಾಹಾರ ಸೇವನೆ ಮಾಡುವುದಿಲ್ಲವೆಂದು ತಾಯಿಗೆ ವಚನವಿತ್ತು, 1888ರ ಸೆಪ್ಟೆಂಬರ್ 4ರಂದು ಗಾಂಧಿಯವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಮೋಢ್ ಬನಿಯ ಜಾತಿಯಲ್ಲಿ ಮೊಟ್ಟಮೊದಲು ಸಮುದ್ರಯಾನ ಮಾಡಿದವರು ಅವರೇ. ಇದು ಜಾತಿಪದ್ಧತಿಗೆ ನಿಷಿದ್ಧವೆಂದು ಮುಖಂಡರು ಅವರಿಗೆ ಬಹಿಷ್ಕಾರ ಹಾಕಿದರು. ಆಗ ಗಾಂಧಿಯವರಿಗೆ 19 ವರ್ಷ. ಕಸ್ತೂರ ಬಾ ಆ ವೇಳೆಗೆ ಒಂದು ಗಂಡು ಮಗುವಿನ ತಾಯಿಯಾಗಿದ್ದರು.

ಗಾಂಧಿಯವರು ಲಂಡನಿನಲ್ಲಿ ಮೂರು ವರ್ಷಗಳ ಕಾಲ ಇದ್ದರು. ಅಪ್ಪಟ ಆಂಗ್ಲ ಗೃಹಸ್ಥನಂತೆ ಆಗಬೇಕೆಂಬುದು ಆರಂಭದಲ್ಲಿ ಇವರ ಪ್ರಯತ್ನವಾಗಿತ್ತು. ನೃತ್ಯ, ಫ್ರೆಂಚ್, ಉಪನ್ಯಾಸ ಕಲೆ ಇವನ್ನು ಅಭ್ಯಸಿಸಬೇಕೆಂದು ಪ್ರಯತ್ನಿಸಿ, ಅವು ತಮಗೆ ಸಾಧ್ಯವಿಲ್ಲವೆಂದು ಕೈಬಿಟ್ಟರು. ಕರ್ತವ್ಯದ ಕಡೆ ಚೆನ್ನಾಗಿ ಗಮನವಿಟ್ಟು ವ್ಯಾಸಂಗ ಮಾಡಿದರು.

ಗಾಂಧಿಯವರು ತಮ್ಮ ತಾಯಿಗೆ ಕೊಟ್ಟಿದ್ದ ವಚನಗಳನ್ನು ಈಡೇರಿಸಲು ಬಹಳ ಶ್ರಮಪಟ್ಟರು. ಮಾಂಸಾಹಾರ ಸೇವಿಸದೆ ಲಂಡನಿನಲ್ಲಿ ಇರುವುದಾದರೂ ಹೇಗೆ ಎಂದು ಸಂಶಯ ಪಡುತ್ತಿದ್ದ ಅವರು ಒಂದು ನಿದರ್ಶನವಾದರು. ಮೊದಮೊದಲು ಶಾಖಾಹಾರದ ಭೋಜನಗೃಹಗಳಲ್ಲಿ ಊಟಮಾಡುತ್ತಿದ್ದರು. ಕೊನೆಗೆ ತಾವೇ ಅಡಿಗೆ ಮಾಡಿಕೊಳ್ಳಲಾರಂಭಿಸಿ ಸಸ್ಯಾಹಾರಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಯೋಗಗಳನ್ನು ಮಾಡಿದರು. ರುಚಿಯ ಅಧಿಷ್ಠಾನ ಮನಸ್ಸೇ ಹೊರತು ನಾಲಗೆಯಲ್ಲವೆಂಬುದು ಅವರ ಅರಿವಿಗೆ ಬಂತು. ಅಸ್ವಾದ ಅವರ ಜೀವನದ ಒಂದು ನಿಯಮವಾಯಿತು. ನೀತಿ ತಪ್ಪುವಂಥ ಪ್ರಸಂಗವೂ ಒಮ್ಮೆ ಗಾಂಧಿಯವರಿಗೆ ಬರುವುದರಲ್ಲಿತ್ತು. ಲಂಡನಿನಲ್ಲಿದ್ದಾಗಲೇ ಗಾಂಧಿಯವರು ಭಗವದ್ಗೀತೆಯನ್ನು ಮೊದಲನೆಯ ಬಾರಿಗೆ ಓದಿದ್ದು. ಆ ಮಹಾಗ್ರಂಥ ಅವರ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಬೀರಿತು. ಅವರ ಬೈಬಲಿನ ಹೊಸ ಒಡಂಬಡಿಕೆಯನ್ನು ಓದಿದ್ದೂ ಅದೇ ಕಾಲದಲ್ಲಿ. ಕೇಡುಕಿಗೆ ಕೇಡುಕನ್ನು ಮಾಡಬೇಡ–ಎಂಬ ಸೂಕ್ತ ಅವರಿಗೆ ಬಹಳ ಹಿಡಿಸಿತು. ಅವರು ಚಿಕ್ಕವರಿದ್ದಾಗ ಓದಿದ್ದ, ಗುಜರಾತೀ ಕವಿ ಶಾಮಲಾಲ್ ಭಟ್ಟನ, ಒಂದು ಸೀಸಪದ್ಯದ ಉದಾತ್ತ ಭಾವಗಳನ್ನು ಅದು ಸಮರ್ಥಿಸಿತು.

ಗಾಂಧಿಯವರು ಇಂಗ್ಲೆಂಡಿನಲ್ಲಿ ವ್ಯಾಸಂಗ ಮುಗಿಸಿ ಬ್ಯಾರಿಸ್ಟರ್ ಪದವಿ ಪಡೆದು 1891ರ ಜೂನ್ 12ರಂದು ಭಾರತಕ್ಕೆ ಹಿಂದಿರುಗಿ ಎರಡು ವರ್ಷಕಾಲ ಮುಂಬಯಿ ರಾಜಕೋಟೆಗಳಲ್ಲಿ ವಕೀಲ ವೃತ್ತಿ ಮಾಡಿದರು. ಆದರೆ ಅವರಿಗೆ ಯಶಸ್ಸು ದೊರಕಲಿಲ್ಲ. ಅವರಲ್ಲಿ ಆತ್ಮವಿಶ್ವಾಸ, ವಾದಚಾತುರ್ಯ ಇರಲಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದ ಮುಸ್ಲಿಂ ವರ್ತಕರೊಬ್ಬರಿಂದ ಅವರಿಗೆ ಅನಿರೀಕ್ಷಿತವಾಗಿ ಬೇಡಿಕೆಯೊಂದು ಬಂತು. ತಮ್ಮ ಐರೋಪ್ಯ ವಕೀಲರಿಗೆ ಸಹಾಯಕರಾಗಬೇಕೆಂದು ಆ ವರ್ತಕರು ಬಯಸಿದರು. ಇದು ಗಾಂಧಿಯವರ ಬಾಳಿನ ಒಂದು ಮುಖ್ಯ ತಿರುವಾಗಿ ಪರಿಣಮಿಸಿತು. 1893ರ ಮೇ ತಿಂಗಳಿನಲ್ಲಿ ಡರ್ಬನಿನಲ್ಲಿ ಬಂದು ಇಳಿದ ಒಂದು ವಾರದ ಮೇಲೆ ಗಾಂಧಿಯವರು ಅಲ್ಲಿಯ ನ್ಯಾಯಾಲಯಕ್ಕೆ ಹೋದಾಗ ಅವರು ತಲೆಗೆ ಸುತ್ತಿದ್ದ ಪೇಟವನ್ನು ತೆಗೆಯಬೇಕೆಂದು ನ್ಯಾಯಾಧೀಶ ಆಜ್ಞೆ ಮಾಡಿದ. ಅಲ್ಲಿಯ ಬಿಳಿಯರು ಭಾರತೀಯರನ್ನು ಕಾಣುತ್ತಿದ್ದ ರೀತಿ ಎಂಥದೆಂಬುದು ಗಾಂಧಿಯವರಿಗೆ ಪ್ರಥಮವಾಗಿ ಅರಿವಿಗೆ ಬಂತು. ಇದಕ್ಕಿಂತ ಅತ್ಯಂತ ತೀವ್ರತರವಾದ ಆಘಾತವೊಂದು ಅವರಿಗೆ ಕಾದಿತ್ತು. ಅವರು ಡರ್ಬನಿನಿಂದ ಪ್ರಿಟೋರಿಯಕ್ಕೆ ರೈಲ್ವೆಯ ಮೂಲಕ ಒಂದನೆಯ ತರಗತಿಯ ಡಬ್ಬಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿತು. ಮಾರಿಟ್ಸ್‌ಬರ್ಗ್‌ನಲ್ಲಿ ಬಿಳಿಯನೊಬ್ಬ ಆ ಡಬ್ಬಿಯನ್ನು ಹೊಕ್ಕ. ಗಾಂಧಿಯವರ ಬಳಿ ಒಂದನೆಯ ತರಗತಿಯ ಟಿಕೆಟ್ ಇದ್ದರೂ ಆತ ಗಾಂಧಿಯವರನ್ನು ಹೊರತಳ್ಳಿಸಿದ. ವರ್ಣೀಯರು ಒಂದನೆಯ ತರಗತಿಯಲ್ಲಿ ಬಿಳಿಯರೊಂದಿಗೆ ಪ್ರಯಾಣಮಾಡುವುದಕ್ಕೆ ನಿಷೇಧವಿತ್ತು. ಕತ್ತಲು ತುಂಬಿದ ವಿಶ್ರಾಂತಿಮಂದಿರದಲ್ಲಿ ಗಾಂಧಿಯವರು ಚಳಿಯಿಂದ ನಡುಗುತ್ತ ರಾತ್ರಿ ಕಳೆಯಬೇಕಾಯಿತು. ನನ್ನ ಗಂಟುಮೂಟೆ ಎಲ್ಲಿತ್ತೆಂಬುದು ನನಗೆ ಗೊತ್ತಿರಲಿಲ್ಲ. ಅದು ಎಲ್ಲಿದೆಯೆಂದು ಯಾರನ್ನಾದರೂ ಕೇಳುವ ಧೈರ್ಯವೂ ನನಗಿರಲಿಲ್ಲ. ಹಾಗೆ ಮಾಡಿದರೆ ಮತ್ತೆ ಅವಮಾನ ಹಲ್ಲೆಗಳಿಗೆ ಗುರಿಯಾಗಬೇಕಾಗುತ್ತಿತ್ತು. ನಿದ್ದೆ ಮಾಡುವ ಪ್ರಶ್ನೆಯೇ ಇರಲಿಲ್ಲ. ನನ್ನ ಮನಸ್ಸು ಸಂಶಯದ ಪ್ರಭುತ್ವಕ್ಕೆ ಒಳಗಾಯಿತು. ಭಾರತಕ್ಕೆ ಓಡಿಹೋಗುವುದು ಹೇಡಿತನವೆಂದು ಸರಿರಾತ್ರಿಯಲ್ಲಿ ತೀರ್ಮಾನಕ್ಕೆ ಬಂದೆ–ಎಂದು ಅವರು ಬರೆದುಕೊಂಡಿದ್ದಾರೆ. ನನ್ನ ಕರ್ತವ್ಯವೇನೆಂದು ನನ್ನನ್ನು ನಾನೇ ಕೇಳಿಕೊಂಡೆ. ನಾನು ಭಾರತಕ್ಕೆ ಮರಳಬೇಕೇ? ಅಥವಾ, ದೇವರ ನೆರವಿಗಿರುವನೆಂದು ನಂಬಿ, ಮುಂದುವರಿದು, ಅನುಭವಿಸಬೇಕಾದ್ದನ್ನೆಲ್ಲ ಅನುಭವಿಸಲೆ? ಎಂದು ಅವರು ತಮ್ಮನ್ನು ತಾವೇ ಪ್ರಶ್ನಿಸಿಕೊಂಡರು. ಅಲ್ಲೇ ಉಳಿದು ಕಷ್ಟ ಅನುಭವಿಸಬೇಕೆಂದು ತೀರ್ಮಾನಿಸಿದೆ. ನನ್ನ ಕ್ರಿಯಾತ್ಮಕ ಅಹಿಂಸೆ ಆರಂಭವಾದ್ದು ಅಂದಿನಿಂದ.

ದಕ್ಷಿಣ ಆಫ್ರಿಕದಲ್ಲಿ ಭಾರತೀಯ ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸಬೇಕೆಂದು ನಿರ್ಧರಿಸಿದ ಗಾಂಧಿಯವರು ಈ ಉದ್ದೇಶಕ್ಕಾಗಿ 1894ರಲ್ಲಿ ನಟಾಲ್ ಇಂಡಿಯನ್ ಕಾಂಗ್ರೆಸ್ ಎಂಬ ಪಕ್ಷ ಸ್ಥಾಪಿಸಿದರು. ಬ್ರಿಟಿಷ್ ಚಕ್ರಾಧಿಪತ್ಯದ ಒಳ್ಳೆಯತನದಲ್ಲಿ ಅವರಿಗೆ ಆಗ ನಂಬಿಕೆಯಿತ್ತು. ದಕ್ಷಿಣ ಆಫ್ರಿಕ ಯುದ್ಧದಲ್ಲೂ (1899–1902) ಝುಲು ದಂಗೆಯಲ್ಲೂ ಅವರು ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಸ್ವಯಂ ಸೇವಕ ದಳವೊಂದನ್ನು ನಿರ್ಮಿಸಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಮನಃಪೂರ್ವಕವಾಗಿ ನೆರವು ನೀಡಿದರು. ಇದಕ್ಕೆ ಬ್ರಿಟಿಷ್ ಸರ್ಕಾರದ ಮೆಚ್ಚುಗೆ ಲಭಿಸಿತಾದರೂ ಭಾರತೀಯರ ಬಗ್ಗೆ ಅದರ ಧೋರಣೆ ಬದಲಾಗಲಿಲ್ಲ. ಪ್ರತಿಯಾಗಿ ಇನ್ನೂ ಕ್ರೂರವಾಯಿತು. ಈ ವೇಳೆಗೆ ಗಾಂಧಿಯವರು ವಕೀಲಿಯಲ್ಲಿ ವಿಶೇಷವಾದ ಕೀರ್ತಿಯನ್ನೂ ಯಶಸ್ಸನ್ನೂ ಗಳಿಸಿದ್ದರು. ಜೀವನದ ಬಗ್ಗೆ, ತಾವು ನಿರ್ವಹಿಸಬೇಕಾದ ಕರ್ತವ್ಯದ ಬಗ್ಗೆ ಅವರ ಮನಸ್ಸು ಹೆಚ್ಚು ಹೆಚ್ಚು ಖಚಿತಗೊಂಡಿತು. ಈ ನಡುವೆ ಅವರು ಭಾರತಕ್ಕೂ ಹೋಗಿ ಬರುತ್ತಿದ್ದರು. ಗೋಪಾಲಕೃಷ್ಣ ಗೋಖಲೆಯವರ ಪರಿಚಯವಾಗಿ ಅದು ಗಾಢ ಸ್ನೇಹವಾಗಿ ಪರಿಣಮಿಸಿತು. ಗೋಖಲೆಯವರನ್ನು ಗಾಂಧಿಯವರು ತಮ್ಮ ರಾಜಕೀಯ ಗುರುವೆಂದೇ ಭಾವಿಸಿದರು. ಭಾರತೀಯ ನೆಲಸುಗಾರರ ಹಕ್ಕುಗಳಿಗಾಗಿ ಹೋರಾಟ ನಡೆಸಲು ಇಂಡಿಯನ್ ಒಪಿನಿಯನ್ ಎಂಬ ಪತ್ರಿಕೆಯೊಂದು 1904ರಲ್ಲಿ ಪ್ರಾರಂಭವಾಯಿತು.

ಪ್ರತಿಯೊಬ್ಬ ಭಾರತೀಯನೂ ತನ್ನ ಬೆರಳ ಗುರುತುಗಳನ್ನು ನೋಂದಾಯಿಸ ಬೇಕೆಂದು ವಿಧಿಸುವ ಮಸೂದೆಯೊಂದಕ್ಕೆ ಟ್ರಾನ್ಸ್‌ವಾಲ್ ಸರ್ಕಾರ 1906ರಲ್ಲಿ ಅನುಮೋದನೆ ನೀಡಿದಾಗ ಹೋರಾಟ ಬಿರುಸಾಯಿತು. ಸ್ತ್ರೀಪುರಷರೆಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಅನ್ವಯಿಸುತ್ತಿದ್ದ ಈ ಕಾನೂನಿನಂತೆ ನಡೆಯದವರು ದಂಡ ಕಾರಾಗೃಹವಾಸಗಳ ಶಿಕ್ಷೆಗೆ ಒಳಗಾಗಬೇಕಾಗುತ್ತಿತ್ತು. ಅಪಮಾನಕವಾದ ಈ ಕಾನೂನಿಗೆ ವಿಧೇಯತೆ ತೋರಿಸಬಾರದೆಂದು ಗಾಂಧಿಯವರು ಭಾರತೀಯರಿಗೆ ಹೇಳಿದರು. ಅವರ ನಾಯಕತ್ವದಲ್ಲಿ 2,000 ಸ್ತ್ರೀಯರು ಪ್ರತಿಭಟನೆಯ ಮೆರವಣಿಗೆ ನಡೆಸಿದರು. ಜೈಲಿಗೂ ನಡೆದರು.

ಗಾಂಧಿಯವರು ಆರಂಭಿಸಿದ ಸತ್ಯಾಗ್ರಹದಲ್ಲಿ ಅನೇಕ ಭಾರತೀಯ ವರ್ತಕರೂ ವಕೀಲರೂ ಸಾಮಾನ್ಯರೂ ಭಾಗವಹಿಸಿ ಕಾರಾಗೃಹವಾಸ ಅನುಭವಿಸಿದರು. ಗಡೀಪಾರು, ಆರ್ಥಿಕ ಒತ್ತಾಯ ಮುಂತಾದ ಯಾವುದಕ್ಕೂ ಸತ್ಯಾಗ್ರಹಿಗಳು ಜಗ್ಗಲಿಲ್ಲ. ಗಾಂಧಿಯವರ ನಾಯಕತ್ವದಲ್ಲಿ ಅವರ ನಂಬಿಕೆ ಅಷ್ಟು ಅಗಾಧವಾಗಿತ್ತು. 1912ರಲ್ಲಿ ಗೋಪಾಲಕೃಷ್ಣ ಗೋಖಲೆಯವರ ದಕ್ಷಿಣ ಆಫ್ರಿಕಕ್ಕೆ ಭೇಟಿಯಿತ್ತುದರ ಪರಿಣಾಮವಾಗಿ ವರ್ಣಭೇದನೀತಿ



ಪಠಾಣರ ನಡುವೆ

ನಿಲ್ಲುವುದೆಂದೂ ಭಾರತೀಯರು ತೆರಬೇಕಾಗಿದ್ದ ತೆರಿಗೆ ರದ್ದಾಗುವುದೆಂದೂ ಆಶೆ ಜನಿಸಿತು. ಆದರೆ ಅದು ಭಗ್ನವಾಯಿತು. ಕ್ರೈಸ್ತ ವಿವಾಹಪದ್ಧತಿಗನುಗುಣವಾಗಿ ವಿವಾಹ ದಾಖಲಾತಿ ಹೊಂದದ ಎಲ್ಲ ಹಿಂದೂ, ಮುಸ್ಲಿಂ ಮತ್ತು ಪಾರ್ಸೀ ವಿವಾಹಗಳೂ ನ್ಯಾಯಬದ್ಧವಲ್ಲವೆಂಬುದು ಶ್ರೇಷ್ಠ ನ್ಯಾಯಾಲಯವಿತ್ತ ಒಂದು ತೀರ್ಪಿನ ಫಲ. ಇದು ಭಾರತೀಯರ ಆತ್ಮಗೌರವವನ್ನು ಪೂರ್ಣವಾಗಿ ನಾಶಮಾಡಿತು. ಸತ್ಯಾಗ್ರಹ ಚಳವಳಿಗೆ ಇದರಿಂದ ಪುಟವಿಟ್ಟಂತಾಯಿತು.

ಈ ಸತ್ಯಾಗ್ರಹ ಹೋರಾಟದಲ್ಲಿ ಪುರುಷರ ಜೊತೆಗೆ ಸ್ತ್ರೀಯರೂ ಭಾಗವಹಿಸಿದರು. ಶಾಸನವನ್ನು ಉಲ್ಲಂಘಿಸಿ ನಟಾಲಿನಿಂದ ಟ್ರಾನ್ಸ್‌ವಾಲಿಗೆ ಪ್ರವೇಶಿಸುವುದೇ ಆಗಿನ ಸತ್ಯಾಗ್ರಹದ ಕ್ರಮ. 1913ರ ನವೆಂಬರ್ 6ರಂದು ನಡೆದ ಶಾಸನೋಲ್ಲಂಘನ ಯಾತ್ರೆಯಲ್ಲಿ ಅಸಂಖ್ಯ ಹೆಂಗಸರೂ ಗಂಡಸರೂ ಮಕ್ಕಳೂ ಭಾಗವಹಿಸಿದರು. ದಕ್ಷಿಣ ಆಫ್ರಿಕ ಸರ್ಕಾರ ಸತ್ಯಾಗ್ರಹಿಗಳ ಮೇಲೆ ನಡೆಸಿದ ಅತ್ಯಾಚಾರ ಬಹಳ ಹೇಯವಾದ್ದು. ಕೊನೆಗೆ ಗಾಂಧೀ ಮತ್ತು ಜನರಲ್ ಸ್ಮಟ್ಸರ ನಡುವೆ ಮಾತುಕತೆ ನಡೆದು ಒಂದು ಒಪ್ಪಂದವಾಯಿತು. 8 ವರ್ಷಗಳ ಸತ್ಯಾಗ್ರಹ ಕೊನೆಗೊಂಡಿತು. ಭಾರತೀಯರ ಬೇಡಿಕೆಗಳು ಸ್ವೀಕೃತವಾದುವು. ತೆರಿಗೆ ರದ್ದಾಯಿತು. ಭಾರತೀಯ ಸಂಪ್ರದಾಯದ ಪ್ರಕಾರ ನಡೆದ ವಿವಾಹಗಳು ಶಾಸನಬದ್ಧವೆಂದು ಘೋಷಿತವಾದುವು. ಇದರಿಂದ ದಕ್ಷಿಣ ಆಫ್ರಿಕದ ಭಾರತೀಯರ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕದಿದ್ದರೂ ಭಾರತೀಯರು ಆತ್ಮಗೌರವಕ್ಕಾಗಿ ಹೋರಾಡುವ ಶಕ್ತಿಯನ್ನು ಕಂಡುಕೊಂಡರು. ಅಲ್ಲದೆ ಈ ಹೋರಾಟದ ನಾಯಕತ್ವ ವಹಿಸಿದ್ದ ಗಾಂಧಿಯವರು ಅಪಾರ ಅನುಭವ ಪಡೆದಿದ್ದರು. ಸಾಮಾಜಿಕ, ರಾಜಕೀಯ ಚಳವಳಿಗಳನ್ನು ನಡೆಸಲು ಹೊಸದೊಂದು ತಂತ್ರವೇ ಅವರಿಂದ ಸೃಷ್ಟಿಯಾಗಿತ್ತು.

ಗಾಂಧಿಯವರು ಹೂಡಿದ ಈ ಹೋರಾಟವನ್ನು ಮೊದಲು ನಿಶ್ಶಸ್ತ್ರ ಪ್ರತಿಭಟನೆ ಎಂದೇ ಕರೆಯಲಾಗುತ್ತಿತ್ತು. ಅನಂತರ ಅವರು ಇದನ್ನು ಸದಾಗ್ರಹವೆಂದೂ ಕೊನೆಗೆ ಸತ್ಯಾಗ್ರಹ ಎಂದೂ ಕರೆದರು. 1906ರಿಂದ 1914ರ ವರೆಗೆ ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ ಚಳವಳಿ ನಡೆಯಿತು.

ತಮ್ಮ ವಕೀಲಿಯಿಂದ ಚೆನ್ನಾಗಿ ಸಂಪಾದನೆ ಮಾಡುತ್ತಿದ್ದ ಗಾಂಧಿಯವರು ಕ್ರಮೇಣ ಅದನ್ನೂ ಬಿಟ್ಟುಕೊಟ್ಟರು. ತಮ್ಮ ವೇಳೆಯನ್ನೆಲ್ಲ ಅವರು ಮುಂದಿರಿಸಿಕೊಂಡ ಉದ್ದೇಶಕ್ಕಾಗಿಯೇ ಮೀಸಲಾಗಿರಿಸಿದರು. ಜೀವನದ ಬಗ್ಗೆ ಅವರ ಧೋರಣೆ ಶೀಘ್ರವಾಗಿ ಬದಲಾಗುತ್ತಿತ್ತು. ಗೀತೆ ಉಪನಿಷತ್ತು ಕುರಾನ್ ಬೈಬಲ್‌ಗಳನ್ನು ಅವರು ಆಳವಾಗಿ ಅಭ್ಯಾಸ ಮಾಡಿದರು. ಗೀತೆಯಂತೂ ಅವರಿಗೆ ಬಾಯಿಪಾಠವಾಗಿತ್ತು. ಅದು ಅವರ ಜೀವನಧರ್ಮಸೂತ್ರ. ಅವರ ಮೇಲೆ ತುಂಬ ಪರಿಣಾಮ ಮಾಡಿದ ಇನ್ನೊಂದು ಪುಸ್ತಕವೆಂದರೆ ರಸ್ಕಿನನ ಅಂಟು ದಿಸ್ ಲಾಸ್ಟ್. ಎಲ್ಲರ ಒಳಿತಾದಾಗಲೇ ವ್ಯಕ್ತಿಯ ಒಳಿತು; ದುಡಿಮೆಯ ಬಾಳೇ ಸಾರ್ಥಕವಾದ್ದು–ಎಂಬುದು ಅವರು ಗ್ರಹಿಸಿದ ತತ್ತ್ವ. ಬ್ರಹ್ಮಚರ್ಯವನ್ನು ಅವರು ಅನುಷ್ಠಾನಕ್ಕೆ ತಂದರು. ತಮ್ಮ ಸಂಸಾರದೊಂದಿಗೂ ಸ್ನೇಹಿತರೊಂದಿಗೂ ಅವರು ಫೀನಿಕ್ಸ್ ಆಶ್ರಮವನ್ನೂ 1910ರಲ್ಲಿ ಟಾಲ್‌ಸ್ಟಾಯ್ ಆಶ್ರಮವನ್ನೂ ಸ್ಥಾಪಿಸಿದರು. ದೇಹ ಮನಸ್ಸುಗಳೆರಡರ ಸಾಮರಸ್ಯ ಸಾಧಿಸಿದರು. ಗುಡಿಸುವುದು, ಮಚ್ಚೆ ಹೊಲಿಯುವುದು, ಕೃಷಿ, ಮುದ್ರಣ–ಹೀಗೆ ಎಲ್ಲ ಬಗೆಯ ಕೆಲಸಗಳನ್ನೂ ಮಾಡಿದರು. ಯಾವ ಕೆಲಸವೂ ತುಚ್ಛವಲ್ಲ, ಯಾವುದೂ ದೊಡ್ಡದಲ್ಲ–ಎಂಬುದು ಅವರು ಸ್ವತಃ ಕಲಿತ, ಕಲಿಸಿದ ಪಾಠ. ಅವರೊಬ್ಬ ವಸ್ತುನಿಷ್ಠ ಆದರ್ಶವಾದಿ.

ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿದ್ದ 21 ವರ್ಷಗಳ ಕಾಲ ಅದು ಅವರಿಗೊಂದು ಪ್ರಯೋಗ ಶಾಲೆ ಆಯಿತು. ಅವರ ವ್ಯಕ್ತಿತ್ವ ವಿಕಾಸ ಹೊಂದಿದ್ದಲ್ಲದೆ, ಅವರ ಜೀವನತತ್ತ್ವದ ವಿಕಾಸವೂ ಆಯಿತು. ನೈತಿಕ ಪ್ರಶ್ನೆಗಳ ಬಗ್ಗೆ ಜಿಜ್ಞಾಸೆ ಅವರ ಬಾಲ್ಯದಿಂದಲೇ ಮುಂದುವರಿದಿದ್ದರೂ ಅದನ್ನು ಆಗ ವ್ಯವಸ್ಥಿತ ರೂಪದಲ್ಲಿ ನಡೆಸಿದರು. ಗೀತಾಧ್ಯಯನದಿಂದ ಅವರು ಅಸಂಗ್ರಹದ–ಐಚ್ಛಿಕ ದಾರಿದ್ರ್ಯದ–ಆದರ್ಶವನ್ನು ರೂಢಿಸಿಕೊಂಡರು. ನಿಷ್ಕಾಮಸೇವೆ, ಬ್ರಹ್ಮಚರ್ಯ ಇವು ಅವರ ಸಾರ್ವಜನಿಕ ಜೀವನಕ್ಕೆ ಶಕ್ತಿಯನ್ನು ನೀಡಿದವು. ಟಾಲ್‌ಸ್ಟಾಯಿಯ ಗ್ರಂಥಗಳ ಅಧ್ಯಯನ ಅವರ ಅಭಿಪ್ರಾಯಗಳನ್ನು ಮತ್ತಷ್ಟು ದೃಢಪಡಿಸಿತು. ಅವರು ಕಾಯಕದ ಪ್ರಭಾವವನ್ನು ಅರಿತರು. ಜಾನ್ ರಸ್ಕಿನ್ನನ ಅಂಟು ದಿಸ್ ಲಾಸ್ಟ್ ಗ್ರಂಥವಂತೂ ಅವರ ಜೀವನಪರಿವರ್ತನೆಗೆ ಪ್ರಧಾನ ಕಾರಣವಾಯಿತು. ಟಾಲ್‌ಸ್ಟಾಯಿಯೊಂದಿಗೆ ಅವರು ಪತ್ರವ್ಯವಹಾರ ಬೆಳೆಸಿದರು. ಸತ್ಯಾಗ್ರಹ ವಿಶ್ವವ್ಯಾಪಕವಾಗುವಷ್ಟು ಪ್ರಾಮುಖ್ಯವುಳ್ಳ ಒಂದು ಪರಿಕಲ್ಪನೆ ಎಂದು ಟಾಲ್‌ಸ್ಟಾಯ್ ಹೊಗಳಿದ. ಗಾಂಧಿಯವರು ಒಂದು ನೂತನ ಜೀವನದರ್ಶನವನ್ನೇ ಕಂಡುಕೊಂಡು ಅದಕ್ಕೆ ತಮ್ಮ ಬಾಳನ್ನು ಮುಡುಪಾಗಿ




ಲ್ಯಾಂಕಷೈರ್ ಸ್ತ್ರೀ ಕಾರ್ಮಿಕರ ನಡುವೆ

ಇಟ್ಟರು. ಅದನ್ನು ಸರ್ವೋದಯ–ಸರ್ವರ ಕ್ಷೇಮ–ಎಂದು ಕರೆದರು. ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿದ್ದಾಗ ತಮ್ಮ ಮನಸ್ಸಿನಲ್ಲಿ ರೂಪುಗೊಂಡ ಭಾವನೆಗಳನ್ನೆಲ್ಲ ಅಭಿವ್ಯಕ್ತಿಸಿ ಬರೆದ ಪುಸ್ತಕ ಹಿಂದ್ ಸ್ವರಾಜ್ ಅಥವಾ ಇಂಡಿಯನ್ ಹೋಂ ರೂಲ್ (1909). ಇದು ಗಾಂಧೀ ಚಿಂತನದ ಸಾರದಂತಿದೆ. ಸಾಮಾನ್ಯ ವ್ಯಕ್ತಿಯ ಹಕ್ಕುಗಳಿಗೆ ಮಾನ್ಯತೆ ಇರುವ, ಅವನ್ನು ಅವನು ರಕ್ಷಿಸಿಕೊಳ್ಳಲು ಅವಕಾಶವಿರುವ, ಶೋಷಣರಹಿತವಾದ ಸಮಾಜವೇ ತಮ್ಮ ಗುರಿಯೆಂದು ಅವರು ಇದರಲ್ಲಿ ಪ್ರತಿಪಾದಿಸಿದ್ದಾರೆ. ಯಂತ್ರ ನಾಗರಿಕತೆಯನ್ನು ಅವರು ಇಲ್ಲಿ ಖಂಡಿಸಿರುವ ರೀತಿ ಅನುಪಮವಾದ್ದು. ಟಾಲ್‌ಸ್ಟಾಯಿಗೆ ಈ ಪುಸ್ತಕ ತುಂಬ ಪ್ರಿಯವಾಯಿತು.

ಗಾಂಧಿಯವರು 1915ರ ಜನವರಿಯಲ್ಲಿ ಭಾರತಕ್ಕೆ ಬಂದರು. ರವೀಂದ್ರನಾಥ ಠಾಕೂರರು ಅವರನ್ನು ಮಹಾತ್ಮ ಎಂದು ಕರೆದರು. ಗೋಪಾಲಕೃಷ್ಣ ಗೋಖಲೆಯವರ ಸಲಹೆಯಂತೆ ಗಾಂಧಿಯವರು ಒಂದು ವರ್ಷ ಕಾಲ ಯಾವ ಸಾರ್ವಜನಿಕ ಕಾರ್ಯದಲ್ಲೂ ತೊಡಗಲಿಲ್ಲ. ಭಾರತದ ಪರಿಸ್ಥಿತಿಯ ಅಧ್ಯಯನವನ್ನು ಆರಂಭಿಸಿದರು. 1915ರ ಮೇ ತಿಂಗಳಲ್ಲಿ ಅಹಮದಾಬಾದಿನ ಬಳಿ ಸತ್ಯಾಗ್ರಹ ಆಶ್ರಮ ಆರಂಭವಾಯಿತು. ಆಶ್ರಮವಾಸಿಗಳು ಖಾದಿ ಧರಿಸಬೇಕಾಗಿತ್ತು; ಸತ್ಯ ಅಹಿಂಸೆ ಬ್ರಹ್ಮಚರ್ಯಗಳನ್ನು ಪಾಲಿಸುತ್ತ, ಅಸ್ಪೃಶ್ಯತಾ ನಿವಾರಣೆ, ಮಾತೃಭಾಷೆಯ ಮೂಲಕ ಶಿಕ್ಷಣ ಮುಂತಾದ ಕಾರ್ಯಗಳಲ್ಲಿ ಪ್ರವೃತ್ತರಾಗುವುದಾಗಿ ಅವರು ವ್ರತ ತೊಟ್ಟಿದ್ದರು.

ಗಾಂಧಿಯವರು ಎರಡು ವರ್ಷಗಳ ಕಾಲ ಭಾರತದಲ್ಲಿ ಸಂಚಾರ ಮಾಡಿದರು. ಒಂದನೆಯ ಮಹಾಯುದ್ಧ ಅಂತಿಮಘಟ್ಟ ಮುಟ್ಟಿದ್ದ ಆ ಕಾಲದಲ್ಲಿ ಬಿಹಾರದ ಚಂಪಾರಣ್‌ನ ರೈತರ ಕರುಣಾಜನಕ ಸ್ಥಿತಿ ಗಾಂಧಿಯವರ ಗಮನ ಸೆಳೆಯಿತು.

ಅಲ್ಲಿಯ ರೈತರು ದೀರ್ಘಕಾಲದಿಂದ ಐರೋಪ್ಯ ಮತ್ತು ಭಾರತೀಯ ಭೂಮಾಲೀಕರ ಶೋಷಣೆಗೆ ಒಳಗಾಗಿದ್ದರು. ಗಾಂಧಿಯವರು ರಾಜೇಂದ್ರ ಪ್ರಸಾದರೊಂದಿಗೆ ಅಲ್ಲಿಯ ರೈತರ ಸ್ಥಿತಿಯನ್ನು ಕುರಿತ ವಿಚಾರಣೆಯಲ್ಲಿ ತೊಡಗಿದರು. ಬ್ರಿಟಿಷ್ ಸರ್ಕಾರ ಇದನ್ನು ಸಹಿಸಲಿಲ್ಲ. ಗಾಂಧಿಯವರು ಆ ಜಿಲ್ಲೆಯಿಂದ ಹೊರಗೆ ಹೋಗಬೇಕೆಂಬ ಆಜ್ಞೆ ಜಾರಿಯಾಯಿತು. ಗಾಂಧಿಯವರು ಅದನ್ನು ಉಲ್ಲಂಘಿಸಿದರು. ಭಾರತದಲ್ಲಿ ಮೊಟ್ಟ



3ನೆಯ ತರಗತಿಯ ರೈಲು ಡಬ್ಬಿಯಲ್ಲಿ ಪ್ರಯಾಣ ಮಾಡುತ್ತಿರುವುದು

ಮೊದಲನೆಯ ಸತ್ಯಾಗ್ರಹವಿದು. ನ್ಯಾಯಾಲಯದಲ್ಲಿ ಅವರ ವಿಚಾರಣೆಯಾಯಿತು. ತಾವು ಆಜ್ಞೋಲ್ಲಂಘನೆ ಮಾಡಿದ್ದುಂಟೆಂದು ಗಾಂಧಿಯವರು ಒಪ್ಪಿಕೊಂಡರು. ಗವರ್ನರ್ ನಡುವೆ ಪ್ರವೇಶಿಸಿ, ವಿಚಾರಣಾ ಸಮಿತಿಯೊಂದನ್ನು ನೇಮಕ ಮಾಡಿದರು.



ಲಂಡನಿನ್ನಲ್ಲಿ ಬಹುಮಾನಿತ ಆಡಿನೊಂದಿಗೆ (1931)

ಗಾಂಧಿಯವರೂ ಸದಸ್ಯರಾಗಿದ್ದ ಆ ಸಮಿತಿಯ ಶಿಫಾರಸುಗಳ ಮೇರೆಗೆ ಚಂಪಾರಣ್ ರೈತರ ಸುಧಾರಣೆಗಾಗಿ ಕಾಯಿದೆ ಜಾರಿಗೆ ಬಂತು. ಅನಂತರ ಗಾಂಧಿಯವರ ಗಮನ ಅಹಮದಾಬಾದಿನ ಗಿರಣಿ ಕಾರ್ಮಿಕರತ್ತ ಹರಿಯಿತು. ಅವರಿಗೆ ನ್ಯಾಯವಾದ ವೇತನ ದೊರಕಬೇಕೆಂದು ಅವರು ಇಪ್ಪತ್ತೊಂದು ದಿನಗಳ ಮುಷ್ಕರವನ್ನು ಸಂಘಟಿಸಿದರು. ಅದೂ ಫಲಪ್ರದವಾಯಿತು.

ಬ್ರಿಟಿಷ್ ನ್ಯಾಯದಲ್ಲಿ ವಿಶೇಷ ನಂಬಿಕೆ ಇಟ್ಟಿದ್ದ ಮಹಾತ್ಮ ಗಾಂಧಿಯವರು ವೈಸ್‌ರಾಯ್ ಲಾರ್ಡ್ ಚೆಮ್ಸ್‌ಫರ್ಡನ ಅಪೇಕ್ಷೆಯಂತೆ ಒಂದನೆಯ ಮಹಾಯುದ್ಧದಲ್ಲಿ ಬ್ರಿಟನಿಗೆ ತಮ್ಮ ಬೆಂಬಲ ನೀಡಿದರು. ಆದರೆ ಅವರ ಈ ನಂಬಿಕೆ ಅಲುಗುವಂಥ ಘಟನೆಯೊಂದು ಅಷ್ಟರಲ್ಲಿ ಸಂಭವಿಸಿತು. ಜನರ ರಾಜಕೀಯ ಆಶೋತ್ತರಗಳನ್ನು ಸರ್ಕಾರ ಈಡೇರಿಸುವ ಬದಲು ಅವನ್ನು ಹತ್ತಿಕ್ಕುವ ಕ್ರಮ ಕೈಗೊಂಡಿತು. ಬ್ರಿಟಿಷ್ ಸರ್ಕಾರಕ್ಕೆ ವಿರುದ್ಧವಾದ ಕಲಾಪಗಳಲ್ಲಿ ತೊಡಗಿರುವರೆಂಬ ಸಂಶಯಕ್ಕೆ ಒಳಗಾದವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಲು ಸರ್ಕಾರಕ್ಕೆ ಅಧಿಕಾರ ನೀಡುವ ರೌಲತ್ ಕಾಯಿದೆ ಜಾರಿಗೆ ಬಂದಿತು. ಗಾಂಧಿಯವರು ಇದನ್ನು ಪ್ರತಿಭಟಿಸಿದರು. ಏಪ್ರಿಲ್ 6ರಂದು ಹರತಾಳವನ್ನಾಚರಿಸಬೇಕೆಂದು ಕರೆ ಇತ್ತರು. ಅವರು ದೆಹಲಿಗೆ ಹೋಗುತ್ತಿದ್ದಾಗ ಹಾದಿಯಲ್ಲಿ ದಸ್ತಗಿರಿಯಾದರು. ಇದರಿಂದ ಮುಳಿದ ಜನ ಹಿಂಸಾಚರಣೆ ಮಾಡಿದರು. ಗಾಂಧಿಯವರು ಸತ್ಯಾಗ್ರಹವನ್ನು ನಿಲ್ಲಿಸಬೇಕಾಯಿತು. ಅದೇ ಸಮಯದಲ್ಲಿ ಇನ್ನೊಂದು ಮಹಾ ದುರ್ಘಟನೆ ನಡೆಯಿತು. ಅಮೃತಸರದ ಜಲಿಯನ್‌ವಾಲಾಬಾಗಿನಲ್ಲಿ ಸೇರಿದ್ದ ನಿಶ್ಶಸ್ತ್ರಜನರ ಮೇಲೆ ಸರ್ಕಾರ ಮಷೀನ್-ಗನ್ ಪ್ರಯೋಗಿಸಿತು. ಪಂಜಾಬಿನಲ್ಲಿ ಲಷ್ಕರಿ ಕಾನೂನು ಜಾರಿಗೆ ಬಂತು. ಇದರಿಂದ ಇಡೀ ಭಾರತದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಕ್ರೋಧ ಹಬ್ಬಿತು.



ಲಂಡನಿನ ದುಂಡುಮೇಜಿನ ಪರಿಷತ್ತಿನಲ್ಲಿ

ಈ ಸಮಯದಲ್ಲಿ ಮಹಾತ್ಮ ಗಾಂಧಿಯವರು ಜನರಿಗೆ ಅಹಿಂಸೆಯನ್ನೂ ನಿರ್ಭಯವನ್ನೂ ಬೋಧಿಸಿದರು. ಇದಕ್ಕಾಗಿಯೇ ಇಂಗ್ಲಿಷಿನಲ್ಲಿ ಯಂಗ್ ಇಂಡಿಯ ಎಂಬ ಪತ್ರಿಕೆಯೂ ಗುಜರಾತಿಯಲ್ಲಿ ನವಜೀವನ ಎಂಬ ಪತ್ರಿಕೆಯೂ ಆರಂಭವಾದುವು. (1919). ಯಂಗ್ ಇಂಡಿಯ ಪತ್ರಿಕೆಯಲ್ಲಿ ಇವರ ಕೊನೆಯ ಮಗ ದೇವದಾಸ್ ಗಾಂಧೀ ಕೆಲಸ ಮಾಡುತ್ತಿದ್ದರು.

1920ರಲ್ಲಿ ಆರಂಭವಾದ ಒಂದು ಮುಖ್ಯ ಚಳವಳಿ ಖಿಲಾಫತ್. ತುರ್ಕಿಯ ಖಲೀಫನ ಅಧಿಕಾರಕ್ಕೆ ಚ್ಯುತಿ ಬಾರದಂತೆ ಬ್ರಿಟನಿಗೆ ಒತ್ತಾಯ ಹಾಕಲು ಭಾರತೀಯ ಮುಸ್ಲಿಮರು ಆರಂಭಿಸಿದ್ದ ಚಳವಳಿಯಿದು. ಮುಸ್ಲಿಮರ ಮನಸ್ಸನ್ನು ಕಲಕಿದ್ದ ಈ ಚಳವಳಿಯಲ್ಲಿ ಹಿಂದುಗಳು ಸಹಾನುಭೂತಿಯಿಂದ ಪಾಲ್ಗೊಳ್ಳಬೇಕೆಂಬುದು ಗಾಂಧಿಯವರ ಅಭಿಮತವಾಗಿತ್ತು. ಹಿಂದೂ ಮುಸ್ಲಿಂ ಐಕ್ಯ ಸಾಧನೆ ಇದರ ಉದ್ದೇಶ. ಬ್ರಿಟಿಷ್ ಸಾಮ್ರಾಜ್ಯಾಧಿಕಾರದ ಸಂಕೇತವಾದ ಎಲ್ಲ ಬಿರುದುಗಳನ್ನೂ ಗೌರವಗಳನ್ನೂ ಭಾರತೀಯರು ಹಿಂದಕ್ಕೊಪ್ಪಿಸಬೇಕು. ಶಾಲೆ ಕಾಲೇಜು ನ್ಯಾಯಾಲಯ ವಿಧಾನಸಭೆಗಳನ್ನು ಬಹಿಷ್ಕರಿಸಬೇಕು-ಎಂದು ಗಾಂಧಿಯವರು ಕರೆ ಕೊಟ್ಟರು. ತಮಗೆ ಬ್ರಿಟಿಷ್ ಸತ್ತೆಯಿಂದ ದತ್ತವಾಗಿದ್ದ ಪದಕವೇ ಮುಂತಾದವನ್ನೆಲ್ಲ ಅವರು ಹಿಂದುರುಗಿಸಿದರು. ಸತ್ಯಾಗ್ರಹ ಆರಂಭವಾಯಿತು. ಭಾರತದ ಜನರನ್ನು ಅವರು ಅಹಿಂಸಾತ್ಮಕ ಹೋರಾಟದ ಪಥದಲ್ಲಿ ಕೊಂಡೊಯ್ಯಲು ಸತತವಾಗಿ ಯತ್ನಿಸಿದರು. ಚರಖಾ ಅವರ ಸ್ವರಾಜ್ಯದ ಪ್ರತೀಕ ವಾಯಿತು. ಚರಖಾ ಅನಾರ್ಥಿಕವೆನ್ನಬಹುದು. ಆದರೆ ಇದು ಅತ್ಯಂತ ಅಗ್ಗ. ನಿರುದ್ಯೋಗಿಗಳಿಗೆ ಇದರಿಂದ ಇಷ್ಟಷ್ಟಾದರೂ ಉದ್ಯೋಗ ದೊರಕುತ್ತದೆ. ಭಾರತವನ್ನು ಲ್ಯಾಂಕಷೈರಿನ ಯಂತ್ರದ ಹಿಡಿತದಿಂದ ಬಿಡಿಸಲು ಇದೊಂದೇ ಮಾರ್ಗ. ಬೇರೆಲ್ಲ ವಿದೇಶೀ ವಸ್ತುಗಳನ್ನು ಬಹಿಷ್ಕರಿಸಿದರೂ ವಸ್ತ್ರಕ್ಕಾಗಿ ಅನ್ಯರನ್ನು ಅವಲಂಬಿಸಬೇಕಾದ ಪರಿಸ್ಥಿತಿಯನ್ನು ತಪ್ಪಿಸಲಿಕ್ಕಾಗಿ ಇದು ಅಗತ್ಯ-ಎಂಬುದು ಗಾಂಧಿಯವರ ವಾದ.

ಅಸಂಖ್ಯಾತ ಜನರಿಗೆ ತಮ್ಮ ಹರಿದ ಬಟ್ಟೆಯ ಬದಲು ಖಾದಿ ಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದ್ದದ್ದನ್ನು ಕಂಡು ಅವರ ಮನಸ್ಸು ಬಲು ನೊಂದಿತು. ಅಂಥವರಿಗೆ ಒಂದು ತುಂಡು ದಟ್ಟಿಯಿದ್ದರೂ ಸಾಕಿತ್ತು. ಹಾಗಿರುವಾಗ ತಾವಾದರೂ ಹೇಗೆ ಮೈ ತುಂಬ ಬಟ್ಟೆ ತೊಟ್ಟುಕೊಂಡಾರು? 1921ರಲ್ಲಿ ಗಾಂಧಿಯವರೂ ತುಂಡುಲುಂಗೀ ಧಾರಿಯಾದರು. ಅಸಹಕಾರ ಚಳವಳಿಯನ್ನು ಬಲಪಡಿಸಿದರು. ಅಸಹಕಾರ ಧಾರ್ಮಿಕ ಹಾಗೂ ನೈತಿಕ ಚಳವಳಿಯಾದರೂ ಸರ್ಕಾರವನ್ನು ಉರುಳಿಸುವುದೇ ಅದರ ಧ್ಯೇಯ–ಎಂದು ಸಾರಿದರು. ಬ್ರಿಟಿಷ್ ಚಕ್ರಾಧಿಪತ್ಯವನ್ನು ಸೈತಾನನ ಪ್ರಭುತ್ವವೆಂದು ಕರೆದರು.

1922ರಲ್ಲಿ ಗಾಂಧಿಯವರು ಗುಜರಾತಿನ ಬಾರ್ಡೋಲಿ ಜಿಲ್ಲೆಯಲ್ಲಿ ಸಾಮೂಹಿಕ ಕರನಿರಾಕರಣೆಯ ಚಳವಳಿಯ ನಾಯಕತ್ವ ವಹಿಸಲು ನಿರ್ಧರಿಸಿದರು. ಆದರೆ ಆ ಸಮಯಕ್ಕೆ ಸರಿಯಾಗಿ ಉತ್ತರ ಪ್ರದೇಶದ ಚೌರಿಚೌರಾದಲ್ಲಿ ಜನರು ಹಿಂಸಾಕಾರ್ಯದಲ್ಲಿ ತೊಡಗಿದರು. ಪೋಲೀಸರ ಮೇಲೆ ಹಲ್ಲೆ ಮಾಡಿದರು. ಜನರಿನ್ನೂ ಅಹಿಂಸಾತ್ಮಕ



ಎಸ್.ಎಸ್. ರಾಜಪುಟಾಣ ಹಡಗಿನ ಮೇಲೆ (ಆಗಸ್ಟ್ 1931)

ಚಳವಳಿಗೆ ಸಿದ್ಧರಾಗಿಲ್ಲವೆಂದು ಗಾಂಧಿಯವರಿಗೆ ಮನವರಿಕೆಯಾಗಿ ಸಾಮೂಹಿಕ ಚಳವಳಿಯನ್ನು ನಿಲ್ಲಿಸಿದರು. ಗಾಂಧಿಯವರ ಈ ನಿರ್ಣಯವನ್ನು ಅನೇಕರು ಒಪ್ಪಲಿಲ್ಲ. ಗಾಂಧಿಯವರು ಪ್ರಾಯಶ್ಚಿತ್ತರೂಪವಾಗಿ ಐದು ದಿನಗಳ ಉಪವಾಸ ಕೈಗೊಂಡರು. 1922ರ ಮಾರ್ಚ್ 13ರಂದು ಸರ್ಕಾರ ಅವರನ್ನು ಬಂಧಿಸಿತು. ಗಾಂಧಿಯವರು ಯಂಗ್ ಇಂಡಿಯ ಪತ್ರಿಕೆಯಲ್ಲಿ ಬರೆದಿದ್ದ ಲೇಖನಗಳು ರಾಜದ್ರೋಹಾತ್ಮಕವೆಂದು ಅದು ಅಪಾದಿಸಿತು. ನ್ಯಾಯಾಲಯ ಅವರಿಗೆ ಆರು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿತು. ಪುಣೆಯ ಕಾರಾಗೃಹದಲ್ಲಿ ಎರಡು ವರ್ಷ ಕಳೆದ ಮೇಲೆ ಗಾಂಧಿಯವರಿಗೆ ಅಂತ್ರಪುಚ್ಛ ವ್ಯಾಧಿಗಾಗಿ ಶಸ್ತ್ರಚಿಕಿತ್ಸೆ ನಡೆಯಬೇಕಾಗಿದ್ದುದರಿಂದ ಅವರು ಬಿಡುಗಡೆ ಹೊಂದಿದರು.

ಆ ವೇಳೆಗೆ ಖಿಲಾಫತ್ ಚಳವಳಿ ವಿಫಲವಾಗಿತ್ತು. ವಿಧಾನ ಮಂಡಲಗಳನ್ನು ಪ್ರವೇಶಿಸಿ ಅಲ್ಲಿಂದ ಸರ್ಕಾರವನ್ನು ವಿರೋಧಿಸಬೇಕೆಂಬವರು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದ್ದರು. ವಿಧಾನಮಂಡಲ ಪ್ರವೇಶ ಮಾಡಬೇಕೆಂಬುದು ಕಾಂಗ್ರೆಸಿನ ಬಹುಮತಾಭಿಪ್ರಾಯವಾಗಿತ್ತು. ಗಾಂಧಿಯವರು ರಾಜಕೀಯದಿಂದ ದೂರವಾದರು. ಖಾದಿ ಪ್ರಚಾರಕ್ಕೆ ಅವರು ಹೆಚ್ಚು ಗಮನ ನೀಡಿದರು. 1924ರಲ್ಲಿ ಬೆಳಗಾಂವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧಿಯವರು ಅಧ್ಯಕ್ಷರಾಗಿದ್ದರು.

1927ರಲ್ಲಿ–ಇರ್ವಿನ್ ವೈಸ್‌ರಾಯ್ ಆಗಿದ್ದಾಗ–ಭಾರತದ ರಾಜ್ಯಾಂಗ ಸುಧಾರಣೆಗಳಿಗಾಗಿ ಸರ್ ಜಾನ್ ಸೈಮನ್ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಆಯೋಗವನ್ನು ನೇಮಿಸಿತು. ಒಬ್ಬನಾದರೂ ಭಾರತೀಯ ಸದಸ್ಯನಿಲ್ಲದ ಆ ಆಯೋಗವನ್ನು ಭಾರತೀಯರು ವಿರೋಧಿಸಿದರು. ಕಾಂಗ್ರೆಸ್ ಬಹಿಷ್ಕಾರ ಹಾಕಿತು. ಭಾರತದ ರಾಜಕೀಯ ಭವಿಷ್ಯವನ್ನು ನಿರ್ಧರಿಸಲು ಬ್ರಿಟಿಷ್ ಮತ್ತು ಭಾರತೀಯ ಪ್ರತಿನಿಧಿಗಳನ್ನೊಳಗೊಂಡ ದುಂಡುಮೇಜಿನ ಪರಿಷತ್ತೊಂದು ನಡೆಯುವುದಾಗಿ ಪ್ರಕಟನೆ ಹೊರಬಿತ್ತು. ಭಾರತಕ್ಕೆ ಅಧಿರಾಜ್ಯ ಸ್ಥಾನವನ್ನು (ಡೊಮಿನಿಯನ್ ಸ್ಟೇಟಸ್) ನೀಡುವುದಾಗಿ ಪರಿಷತ್ತು ತೀರ್ಮಾನಿಸುವ ಬಗ್ಗೆ ವೈಸ್‌ರಾಯ್‌ಯಿಂದ ಭರವಸೆ ಬರಲಿಲ್ಲ. ಸಂಪೂರ್ಣ ಸ್ವರಾಜ್ಯವೇ ತನ್ನ ಗುರಿಯೆಂದು ಕಾಂಗ್ರೆಸ್ ಘೋಷಿಸಿತು. ಮತ್ತೊಂದು ಮಹಾ ಚಳವಳಿಗಾಗಿ ಸಿದ್ಧತೆಗಳು ನಡೆದುವು.

1930ರ ಮಾರ್ಚ್ 12ರಂದು ಗಾಂಧಿಯವರು ತಮ್ಮ ಸುಪ್ರಸಿದ್ಧ ಉಪ್ಪಿನ ಸತ್ಯಾಗ್ರಹವನ್ನಾರಂಭಿಸಿದರು. 78 ಮಂದಿ ಅನುಯಾಯಿಗಳೊಂದಿಗೆ ಗಾಂಧಿಯವರು ಅಹಮದಾಬಾದಿನಿಂದ 384 ಕಿಮೀ ದೂರದಲ್ಲಿ ಸಮುದ್ರ ದಂಡೆಯಲ್ಲಿರುವ ದಂಡಿಗೆ ಹೊರಟರು. ಉಪ್ಪಿನ ತಯಾರಿಕೆಯಲ್ಲಿ ಸರ್ಕಾರ ಹೊಂದಿದ್ದ ಏಕಸ್ವಾಮ್ಯವನ್ನು ವಿರೋಧಿಸಿ ಕಾನೂನು ಭಂಗ ಮಾಡುವುದು ಅವರ ಉದ್ದೇಶ. ಏಪ್ರಿಲ್ 6ರಂದು ಅವರು ದಂಡಿಯನ್ನು ತಲಪಿ, ಸಮುದ್ರಸ್ನಾನ ಮಾಡಿ ನೈಸರ್ಗಿಕ ಉಪ್ಪನ್ನು ಕೈಯಲ್ಲಿ ಹಿಡಿದರು. ನಾಡಿನಾದ್ಯಂತ ಜನರು ಗಾಂಧಿಯವರ ಕರೆಯಂತೆ ಸತ್ಯಾಗ್ರಹವನ್ನಾಚರಿಸಿದರು. ಸುಮಾರು ಒಂದು ಲಕ್ಷ ಜನ ದಸ್ತಗಿರಿಯಾದರು. ಮೇ 4ರಂದು ಗಾಂಧಿಯವರ ದಸ್ತಗಿರಿಯಾಯಿತು. 1931ರ ಜನವರಿ 26ರ ವರೆಗೂ ಸರ್ಕಾರ ಅವರನ್ನು ಸೆರೆಯಲ್ಲಿಟ್ಟಿತ್ತು. ಸತ್ಯಾಗ್ರಹವನ್ನು ಅಂತ್ಯಗೊಳಿಸುವ ಬಗ್ಗೆ ಮಾರ್ಚ್ 5ರಂದು ಗಾಂಧಿ–ಇರ್ವಿನ್ ಒಪ್ಪಂದಕ್ಕೆ ಸಹಿಯಾಯಿತು. ಸತ್ಯಾಗ್ರಹಿಗಳು ಬಿಡುಗಡೆಯಾದರು. ಕೆಲವೊಂದು ಮಿತಿಗಳೊಳಗೆ, ಸ್ವಂತ ಉಪಯೋಗಕ್ಕಾಗಿ ಉಪ್ಪನ್ನು ತಯಾರಿಸಲು ಅವಕಾಶ ಲಭ್ಯವಾಯಿತು.



ಮುಂಬಯಿಯ ಕಡಲದಂಡೆಯಲ್ಲಿ ಸಂಚಾರ (1937)

1931ರಲ್ಲಿ ಲಂಡನಿನಲ್ಲಿ ನಡೆದ ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧಿಯವರು ಪ್ರಯಾಣ ಬೆಳೆಸಿದರು. ಅವರ ಭೇಟಿಯಿಂದಾಗಿ ಇಂಗ್ಲೆಂಡ್–ಭಾರತಗಳ ಸಾಮಾನ್ಯ ಜನಗಳ ನಡುವೆ ಹೆಚ್ಚು ನಿಕಟ ಬಾಂಧವ್ಯ ಬೆಳೆಯಿತು. ಆದರೆ ಸಮ್ಮೇಳನದಲ್ಲಿ ಅಲ್ಪಸಂಖ್ಯಾತರಿಗೆ ಸರ್ಕಾರ ವಿಶೇಷ ಪ್ರಾಮುಖ್ಯ ನೀಡಿತು. ಭಾರತೀಯರಿಗೆ ಸ್ವಯಮಾಡಳಿತ ನೀಡುವುದಕ್ಕಿಂತ ಇದಕ್ಕೇ ಆದ್ಯ ಗಮನ ನೀಡುವುದಕ್ಕೆ ಗಾಂಧಿಯವರು ಒಪ್ಪಲಿಲ್ಲ. ಸರ್ಕಾರ ಅನಾವಶ್ಯಕವಾಗಿ ಭಾರತದ ಜನಗಳ ನಡುವೆ ಕೋಮುವಾರು ಭೇದಭಾವವನ್ನು ಬೆಳೆಸುತ್ತಿದೆಯೆಂಬ ವಿಷಯ ಅವರಿಗೆ ಮನವರಿಕೆಯಾಯಿತು. ಬ್ರಿಟನ್ ತನ್ನ ಅಧಿಕಾರವನ್ನು ಹಿಂದೆಗೆದುಕೊಂಡರೆ ಕೋಮುವಾರು ಸಮಸ್ಯೆಗಳೆಲ್ಲ ತಾವಾಗಿಯೇ ಬಗೆಹರಿದಾವೆಂಬುದು ಅವರ ಭಾವನೆ. ಆದರೆ ಅವರ ವಾದ ಫಲಿಸಲಿಲ್ಲ. ಸಮ್ಮೇಳನದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಎತ್ತಿ ಹಿಡಿಯುವವರ ಸಂಖ್ಯೆಯೇ ಹೆಚ್ಚಾಗಿರುವಂತೆ ಸರ್ಕಾರ ತಂತ್ರ ಹೂಡಿತ್ತು.



ಮುಂಬಯಿಯಲ್ಲಿ ಮಹಾದೇವ ದೇಸಾಯಿ ಅವರೊಂದಿಗೆ

1931ರ ಕೊನೆಯಲ್ಲಿ ಗಾಂಧಿಯವರು ಹಿಂದಿರುಗಿದಾಗ ಭಾರತದ ರಾಜಕೀಯ ಪರಿಸ್ಥಿತಿ ತೀವ್ರವಾಗಿತ್ತು. ಹಲವು ನಾಯಕರು ಬಂಧಿತರಾಗಿದ್ದರು. ನಿಷೇಧಾಜ್ಞೆಗಳು ಜಾರಿಯಲ್ಲಿದ್ದುವು. ಆಗ ವೈಸ್‌ರಾಯ್ ಆಗಿದ್ದ ವಿಲಿಂಗ್ಡನನಿಗೆ ಗಾಂಧಿಯವರು ಪತ್ರ ಬರೆದರು. ಪರಿಸ್ಥಿತಿ ಕೈಮೀರದಂತೆ ಯತ್ನಿಸಬೇಕೆಂದೂ ಅನಿವಾರ್ಯವಾದರೆ ಕಾಂಗ್ರೆಸ್ಸು ಸತ್ಯಾಗ್ರಹ ಹೋರಾಟವನ್ನು ಮತ್ತೆ ಆರಂಭಿಸಲಾಗುವುದೆಂದೂ ಎಚ್ಚರಿಸಿದರು.

ಆದರೆ ಸರ್ಕಾರ ಲಕ್ಷಿಸಲಿಲ್ಲ. 1932ರ ಜನವರಿ 4ರಂದು ಗಾಂಧಿಯವರು ದಸ್ತಗಿರಿಯಾದರು. ಪಟೇಲರನ್ನೂ ಅವರನ್ನೂ ಸರ್ಕಾರ ಪುಣೆಯ ಎರವಾಡ ಸೆರೆಮನೆಯಲ್ಲಿಟ್ಟಿತು. ಹರಿಜನರನ್ನು ಪ್ರತ್ಯೇಕ ಗೊಳಿಸಲು ಸರ್ಕಾರ ಕೈಗೊಳ್ಳಲಿದ್ದ ಕ್ರಮವೊಂದನ್ನು

ವಿರೋಧಿಸಿ ಭಾರತ ಕಾರ್ಯದರ್ಶಿಗೆ ಗಾಂಧಿಯವರು ಪತ್ರ ಬರೆದರು. ಗಾಂಧಿಯವರ ಅಭಿಪ್ರಾಯಗಳನ್ನು ಸರ್ಕಾರ ಕಡೆಗಣಿಸಿತು. ಸೆಪ್ಟೆಂಬರ್ 20 ರಂದು ಗಾಂಧಿಯವರು ಉಪವಾಸ ಆರಂಭಿಸಿದರು. ಅನೇಕ ದೇವಸ್ಥಾನ ಗಳು ಹರಿಜನರಿಗೆ ತೆರೆದುವು. ಐದು ದಿನಗಳ ಅನಂತರ ಹಲವು ಒತ್ತಾಯದಂತೆ ಗಾಂಧಿಯವರು ತಮ್ಮ ಉಪವಾಸವನ್ನು ಕೊನೆಗೊಳಿಸಿದರು.

ಅಸ್ಪೃಶ್ಯರೆನಿಸಿಕೊಂಡ ಹರಿ ಜನರ ಹಿತಸಾಧನೆಗೆ ಗಾಂಧಿ ಯವರು ಪಣತೊಟ್ಟರು. ಅವರಿಗೆ ಹರಿಜನರೆಂಬ ಹೆಸರು ಕೊಟ್ಟವರು ಗಾಂಧಿಯವರೇ. 1933ರಲ್ಲಿ ಅವರು ಹರಿಜನ ಎಂಬ ಹೆಸರಿನ ವಾರಪತ್ರಿಕೆ ಯೊಂದನ್ನು ಸ್ಥಾಪಿಸಿದರು. ಮುಂದೆ ಇದು ಹತ್ತು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು.

ಗಾಂಧಿಯವರು ವರ್ಧಾದಲ್ಲಿ ಸ್ಥಾಪಿಸಿದ ಆಶ್ರಮದಲ್ಲಿ ಸ್ವಲ್ಪಕಾಲ ವಿಶ್ರಾಂತಿ ಪಡೆದರು. ಆದರೆ ಆ ಜೀವ ದೀರ್ಘಕಾಲ ವಿಶ್ರಾಂತಿ ಬಯಸಲಿಲ್ಲ. ಹರಿಜನೋದ್ಧಾರಕ್ಕಾಗಿ ದೇಶಾದ್ಯಂತ ಅವರು ಸಂಚಾರ ಕೈಗೊಂಡು ಹಣ, ಒಡವೆ, ಸಂಗ್ರಹಿಸಿದರು.

ಕಾಂಗ್ರೆಸಿನ ಹಾದಿಯ ಬಗ್ಗೆ ಅವರಿಗೆ ಆ ವೇಳೆಗಾಗಲೇ ಅತೃಪ್ತಿ ಮೂಡಿತ್ತು. ಗಾಂಧಿಯವರ ದೃಷ್ಟಿಯಲ್ಲಿ ಅಹಿಂಸೆ ಒಂದು ವ್ರತ. ಆದರೆ ಕಾಂಗ್ರೆಸ್ಸು ಅದನ್ನು ಹಾಗೆಂದು ಪರಿಗಣಿಸಿರಲಿಲ್ಲ. ಅದರ ದೃಷ್ಟಿಯಲ್ಲಿ ಅದೊಂದು ಉಪಾಯ; ಸ್ವಾತಂತ್ರ್ಯ ಗಳಿಸಲು ಅದೊಂದು ಸಾಧನ ಮಾತ್ರ. ಗಾಂಧಿಯವರು ಕಾಂಗ್ರೆಸಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಗ್ರಾಮೋದ್ಧಾರ ಕಾರ್ಯಕ್ಕೇ ತಮ್ಮ ಸಮಯವನ್ನು ಮುಡಿಪಾಗಿಟ್ಟರು. ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘ ಸ್ಥಾಪಿತವಾಯಿತು. ಅವರು ವರ್ಧಾ ಬಳಿಯ ಸೇವಾಗ್ರಾಮದಲ್ಲಿ ನೆಲಸಿದರು.



ಆಗಾಖಾನ್ ಅರಮನೆ : ಗಾಂಧೀಯವರನ್ನು ಬಂಧನದಲ್ಲಿಟ್ಟಿದ್ದ ಸ್ಥಳ

1935ರ ಕಾಯಿದೆಯ ಪ್ರಕಾರ 1937ರಲ್ಲಿ ಭಾರತದ ವಿವಿಧ ಪ್ರಾಂತ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಮತ ಗಳಿಸಿತು. 11 ಪ್ರಾಂತ್ಯಗಳ ಪೈಕಿ ಒಂಬತ್ತರಲ್ಲಿ ಕಾಂಗ್ರೆಸ್ ಸರ್ಕಾರಗಳು ಸ್ಥಾಪಿತವಾದುವು. ಪಾನನಿರೋಧ, ಮೂಲ ಶಿಕ್ಷಣ, ರೈತರ ಋಣ ಪರಿಹಾರ, ಗ್ರಾಮಹಿತರಕ್ಷಣೆ–ಇವು ಕಾಂಗ್ರೆಸ್ ಸರ್ಕಾರಗಳ ಮುಂದೆ ಗಾಂಧಿಯವರು ಇಟ್ಟ ಗುರಿಗಳು.

1939ರ ಸೆಪ್ಟೆಂಬರಿನಲ್ಲಿ ಎರಡನೆಯ ಮಹಾಯುದ್ಧ **(ನೋಡಿ– ಎರಡನೆಯ– ಮಹಾಯುದ್ಧ)** ಆರಂಭವಾದಾಗ ಬ್ರಿಟಿಷ್ ಸರ್ಕಾರಕ್ಕೆ ತಮ್ಮ ನೈತಿಕ ಬೆಂಬಲ ನೀಡಲು ಗಾಂಧಿಯವರು ಸಿದ್ಧವಾಗಿದ್ದರು. ಈ ಬಿಕ್ಕಟ್ಟಿನ ಕಾಲದಲ್ಲಿ ಬ್ರಿಟನನ್ನು ತೊಡಕಿಗೆ ಸಿಲುಕಿಸುವ ಯಾವ ಕ್ರಮಕ್ಕೂ ಗಾಂಧಿಯವರು ಸಿದ್ಧವಿರಲಿಲ್ಲ. ಜರ್ಮನಿ ಜಪಾನ್‌ಗಳ ಸೈನಿಕ ನೆರವು ಪಡೆದು ಭಾರತದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕೆಂದು ಸುಭಾಷ್ ಚಂದ್ರ ಭೋಸರ ವಾದ ಅವರಿಗೆ ಒಪ್ಪಿಗೆಯಾಗಲಿಲ್ಲ. ಆದರೆ ಯುದ್ಧ ಮುಗಿದ ಮೇಲೆ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಾಗಿ ಭರವಸೆ ನೀಡಿದರೆ ಮಾತ್ರ ಬ್ರಿಟನಿನ ಯುದ್ಧಕಾರ್ಯಕ್ಕೆ ಸಹಕಾರ ನೀಡುವುದೆಂಬುದು ಕಾಂಗ್ರೆಸ್ ಅಭಿಪ್ರಾಯವಾಗಿತ್ತು. ಬ್ರಿಟಿಷ್ ಸರ್ಕಾರದಿಂದ ಅಂಥ ಭರವಸೆಯೇನೂ ಬರಲಿಲ್ಲ.

1940ರಲ್ಲಿ ಗಾಂಧಿಯವರು ವೈಯಕ್ತಿಕ ಸತ್ಯಾಗ್ರಹವನ್ನಾರಂಭಿಸಿದರು. ಗಾಂಧಿಯವರ ಕರೆಯಂತೆ ಸತ್ಯಾಗ್ರಹ ಮಾಡಿ ಕಾರಾಗೃಹ ಹೊಕ್ಕವರ ಪೈಕಿ ವಿನೋಬಾ ಭಾವೆ ಮೊದಲಿಗರು. 1941ರ ಅಂತ್ಯದ ವೇಳೆಗೆ ಯುದ್ಧದಲ್ಲಿ ಬ್ರಿಟನಿನ ಸ್ಥಿತಿ ಆತಂಕಕಾರಿಯಾಗಿ ಪರಿಣಮಿಸಿತ್ತು. ಜಪಾನೀಯರ ಆಕ್ರಮಣಕಾರ್ಯ ತೀವ್ರವಾಗಿತ್ತು. ಸರ್ಕಾರ ಸತ್ಯಾಗ್ರಹಿಗಳನ್ನು ಸೆರೆಯಿಂದ ಬಿಟ್ಟಿತು. ಭಾರತದ ರಾಜಕೀಯ ಸಮಸ್ಯೆಯ ಇತ್ಯರ್ಥ ಮಾಡುವುದು ಬ್ರಿಟನಿನ ಹಿತದಿಂದಲೇ ಆವಶ್ಯವಾಗಿತ್ತು. ಬ್ರಿಟಿಷ್ ಸಚಿವ ಸ್ಟ್ಯಾಫರ್ಡ್ ಕ್ರಿಪ್ಸ್ 1942ರ ಮಾರ್ಚ್ ತಿಂಗಳಲ್ಲಿ ಭಾರತಕ್ಕೆ ಸಲಹೆಯೊಂದನ್ನು ತಂದ. ಗಾಂಧಿಯವರಿಗೆ ಅದು ಪರಿಶೀಲನಯೋಗ್ಯವೆನಿಸಲಿಲ್ಲ. ಭಾರತ ಬಿಟ್ಟು ತೊಲಗಿ ಎಂಬ ಚಳವಳಿಯ ಪರಿಕಲ್ಪನೆ ಗಾಂಧಿಯವರಲ್ಲಿ ಮೂಡಿಬಂತು. ಹರಿಜನದಲ್ಲಿ ಈ ಬಗ್ಗೆ ಲೇಖನಗಳು ಪ್ರಕಟವಾದುವು. ಆ ವರ್ಷ ಆಗಸ್ಟ್ 8ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈ



ನೌಖಾಲಿಯಲ್ಲಿ ಒಂಟಿ ನಡಿಗೆ

ಚಳವಳಿಯನ್ನು ಹೂಡಲು ನಿರ್ಣಯ ಮಾಡಿತು. ಮರುದಿನ ಸರ್ಕಾರ ಗಾಂಧಿಯ ವರನ್ನೂ ಅವರ ಅನುಯಾಯಿಗಳನ್ನೂ ಕಾಂಗ್ರೆಸ್ಸಿನ ಎಲ್ಲ ಮುಖಂಡರನ್ನೂ ದಸ್ತಗಿರಿ ಮಾಡಿತು. ಗಾಂಧಿಯವರ ಕಾರ್ಯದರ್ಶಿ ಮಹಾದೇವ ದೇಸಾಯಿ, ಪತ್ನಿ ಕಸ್ತೂರ ಬಾ ಇವರು ಗಾಂಧಿಯವರೊಂದಿಗೆ ಪುಣೆಯಲ್ಲಿ ಬಂಧನಕ್ಕೊಳಪಟ್ಟರು. ಇವರಿಬ್ಬರೂ ಸೆರೆಮನೆಯಲ್ಲೇ ತೀರಿಕೊಂಡರು. 1943ರ ಜನವರಿಯಲ್ಲಿ ಗಾಂಧಿಯವರು ವೈಸ್‌ರಾಯ್ ಲಿನ್‌ಲಿತ್‌ಗೋಗೆ ಒಂದು ಪತ್ರ ಬರೆದು, ಸರ್ಕಾರದ ಹಿಂಸಾಚಾರವನ್ನು ಖಂಡಿಸಿದರು. ಫೆಬ್ರುವರಿ 10 ರಿಂದ 21. ದಿನಗಳ ಕಾಲ ಉಪವಾಸ ಕೈಗೊಂಡರು. 1944ರ ಮೇ 6ರಂದು ಸರ್ಕಾರ ಅವರನ್ನು ಆರೋಗ್ಯನಿಮಿತ್ತ ಬಿಡುಗಡೆ ಮಾಡಿತು.

1946ರಲ್ಲಿ ಎರಡನೆಯ ಮಹಾಯುದ್ಧ ಮುಗಿಯಿತು. ಬ್ರಿಟನಿನಲ್ಲಿ ಕಾರ್ಮಿಕ ಸರ್ಕಾರ ಸ್ಥಾಪಿತವಾಯಿತು. ಸಂಪುಟ ನಿಯೋಗವೊಂದು ಭಾರತಕ್ಕೆ ಬಂತು. ಪಾಕಿಸ್ತಾನದ ನಿರ್ಮಾಣವಾಗಬೇಕೆಂಬುದು ಮಹಮ್ಮದ್ ಆಲಿಜಿನ್ನಾ ಬೇಡಿಕೆಯಾಗಿತ್ತು. ದ್ವಿರಾಷ್ಟ್ರ ಸಿದ್ಧಾಂತವನ್ನು ಗಾಂಧಿಯವರು ಪ್ರಬಲವಾಗಿ ವಿರೋಧಿಸಿದರು.

ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಕೊನೆಗೊಳಿಸುವರೆಂದು ಆ ನಿಯೋಗ ಸಾರಿತು. ಅಖಂಡ ಭಾರತ ಸರ್ಕಾರ ಸ್ಥಾಪನೆಯಾಗಲೆಂಬುದು ಅವರ ಸಲಹೆ.

ಮುಸ್ಲಿಂ ಲೀಗ್ ಈ ಸಲಹೆಗೆ ತನ್ನ ಬೆಂಬಲ ನೀಡಲು ನಿರಾಕರಿಸಿತು. ನೇರ ಕಾರ್ಯಾಚರಣೆ ಕೈಗೊಳ್ಳಲು ತೀರ್ಮಾನಿಸಿತು. ಅಂತೂ ಕೊನೆಗೆ 1946ರ ಸೆಪ್ಟೆಂಬರ್ 2ರಂದು ನೆಹರೂ ಅವರ ನಾಯಕತ್ವದಲ್ಲಿ ತಾತ್ಕಾಲಿಕ ಸರ್ಕಾರವೊಂದು ಸ್ಥಾಪಿತ ವಾಯಿತು. ಮುಸ್ಲಿಂ ಲೀಗ್ ಆಗಸ್ಟ್ 16ರಂದು ನೇರ ಕಾರ್ಯಾಚರಣೆ ಆರಂಭಿಸಿದ್ದರ ಪರಿಣಾಮವೆಂದರೆ ಕೋಮು ಗಲಭೆ. ಹಲವು ಎಡೆಗಳಿಗೆ ಗಲಭೆಗಳು ಹಬ್ಬಿದುವು. 1946ರ ಕೊನೆಯಲ್ಲಿ ಗಾಂಧಿ ಯವರು ಪೂರ್ವ ಬಂಗಾಳದ ಹಳ್ಳಿಗಳಲ್ಲಿ ಸಂಚರಿಸುತ್ತ



ಅಂತಿಮ ದರ್ಶನ

ಜನಕ್ಕೆ ಪ್ರೀತಿ ಅಹಿಂಸೆಗಳ ಸಂದೇಶವನ್ನು ಸಾರಿದರು. ಬಿಹಾರದಲ್ಲೂ ಅವರು ಸಂಚಾರ ಕೈಗೊಂಡರು.

1947ರ ಜೂನ್ 3ರಂದು ಬ್ರಿಟನ್ ಭಾರತವಿಭಜನೆಯ ಯೋಜನೆಯನ್ನು ಘೋಷಿಸಿತು. ಕಾಂಗ್ರೆಸ್–ಮುಸ್ಲಿಂ ಲೀಗ್‌ಗಳು ಅದನ್ನೊಪ್ಪಿದುವು. ಆದರೆ ಗಾಂಧಿಯವರು ಅದನ್ನೊಂದು ದುರಂತವೆಂದು ಕರೆದರು. ಮೂವತ್ತೆರಡು ವರ್ಷಗಳ ಕಾರ್ಯ ವೆಲ್ಲ ವ್ಯರ್ಥವಾಯಿತೆಂಬುದು ಗಾಂಧಿಯವರ ಭಾವನೆ. ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದಾಗ ಅವರು ಕಲ್ಕತ್ತದಲ್ಲಿ ಹಿಂಸೆಯಿಂದ ನೊಂದ ಜನರ ನಡುವೆ ಇದ್ದರು.

ಅಶಾಂತಿಯನ್ನು ಕಂಡು ಅವರು ಪರಿತಪಿಸುತ್ತಿದ್ದರು. ಆ ದಿನವಿಡೀ ಅವರು ಉಪವಾಸ ಪ್ರಾರ್ಥನೆಗಳಲ್ಲಿ ನಿರತವಾಗಿದ್ದರು. ಅವರು ಅಂದು ದೇಶಕ್ಕೆ ಯಾವ ಸಂದೇಶವನ್ನೂ ನೀಡಲಿಲ್ಲ. ಕೆಲವು ದಿನಗಳಲ್ಲಿ ಕಲ್ಕತ್ತದಲ್ಲಿ ಮತ್ತೆ ಭೀಕರ ಗಲಭೆಗಳು ಸಂಭವಿಸಿದುವು. ಗಾಂಧಿಯವರು ಅನಿರ್ದಿಷ್ಟ ಕಾಲ ಉಪವಾಸ ಕೈಕೊಂಡರು. ಗಲಭೆಗಳು ನಿಂತುವು.


ಆದರೂ ಪರಿಸ್ಥಿತಿ ಶಾಂತವಾಗಿರಲಿಲ್ಲ. ಭಾರತ-ಪಾಕಿಸ್ತಾನಗಳಲ್ಲಿಯ ಅಲ್ಪಸಂಖ್ಯಾತರಿಗೆ ನೆಮ್ಮದಿಯಿರಲಿಲ್ಲ. ಭೀತರಾದ ಹಿಂದೂ ಮುಸ್ಲಿಂ ನಿರಾಶ್ರಿತರು ಅಗಾಧ ಸಂಖ್ಯೆಯಲ್ಲಿ ಗಡಿ ದಾಟುತ್ತಿದ್ದರು. ಅಲ್ಪ ಸಂಖ್ಯಾತರ ಹಿತ ರಕ್ಷಿಸುವುದು ಉಭಯ ರಾಷ್ಟ್ರಗಳ ಹೊಣೆಯೆಂದು ಗಾಂಧಿಯವರು ಹೇಳಿದರು. 1948ರ ಜನವರಿ 13ರಂದು ಗಾಂಧಿಯವರು ಇನ್ನೊಮ್ಮೆ ಉಪವಾಸ ಆರಂಭಿಸಿದರು. ಮತೀಯ ಸೌಹಾರ್ದ ಬೆಳೆಸುವುದಾಗಿ ಮುಖಂಡರು ಒಪ್ಪಂದ ಮಾಡಿಕೊಂಡಾಗಲೇ ಅವರು ಉಪವಾಸವನ್ನು ಕೊನೆಗೊಳಿಸಿದ್ದು.

ಗಾಂಧಿಯವರ ದೃಷ್ಟಿಯಿಂದ ಅತೃಪ್ತರಾದ ಕೆಲವರು ಅವರ ಕೊಲೆಗೆ ಪ್ರಯತ್ನಿಸುತ್ತಿದ್ದರು. ಜನವರಿ 20 ರಂದು ಅವರ ಪ್ರಾರ್ಥನಾಸಭೆ ಯಲ್ಲಿಒಬ್ಬ ಯುವಕ ಬಾಂಬೊಂದನ್ನು ಎಸೆದ. ಅದರಿಂದ ಪ್ರಾಣಾಪಾಯ ವಾಗಲಿಲ್ಲ. ಆ ಯುವಕನ ವಿಚಾರದಲ್ಲಿ ಗಾಂಧಿಯವರು ದ್ವೇಷ ವ್ಯಕ್ತಪಡಿಸಲಿಲ್ಲ. ಗಾಂಧಿಯವರ ಕೊನೆಯ ದಿನ ಬಳಿಸಾರಿತು. 1948ರ ಜನವರಿ 30ರಂದು ಸಂಜೆ 5 ಗಂಟೆ ದಾಟಿತ್ತು. ಗಾಂಧಿಯವರು ಎಂದಿನಂತೆ ಪ್ರಾರ್ಥನಾಸಭೆಯ ಮೆಟ್ಟಲು ಹತ್ತುತ್ತಿದ್ದರು. ನಾಥುರಾಂ ವಿನಾಯಕ ಗೋಡ್ಸೆಯೆಂಬ ಹಿಂದೂವೊಬ್ಬ ಗುಂಪಿನಿಂದ ಮುನ್ನುಗ್ಗಿ ಗಾಂಧಿಯವರತ್ತ ಮೂರು ಬಾರಿ ಗುಂಡು ಹಾರಿಸಿದ. ಹೇ ರಾಂ ಎನ್ನುತ್ತ ಗಾಂಧಿಯವರು ಕೆಳಗೆ ಬಿದ್ದರು. ಅವರ ಇಹಲೋಕ ಯಾತ್ರೆ ಪೂರೈಸಿತ್ತು.

ಸಮಕಾಲೀನ ಜಗತ್ತಿನ ಮೇಲೆ ಮಾತ್ರವಲ್ಲದೆ ಭವಿಷ್ಯತ್ತಿನ ಮೇಲೆ ಕೂಡ ತಮ್ಮ ಪ್ರಭಾವದ ಮುದ್ರೆಯೊತ್ತಿದ ವ್ಯಕ್ತಿ ಗಾಂಧೀಜಿ. ಅವರು ಸತ್ಯ ಅಹಿಂಸೆಗಳ ಪ್ರವಾದಿ. ಗುರಿ ಶುದ್ಧವಾಗಿದ್ದರೆ ಸಾಲದು; ಅದನ್ನು ನಿಲುಕುವ ಮಾರ್ಗವೂ ಶುದ್ಧವಾಗಿರಬೇಕು- ಎಂದು ಅವರು ಹೇಳಿದರು. ಮಾರ್ಗವೆಂತೋ ಗುರಿಯಂತು-ಎಂದರು. ಜನರು ತಮ್ಮ ಹಕ್ಕುಗಳಿಗಾಗಿ ಹೊಡೆದಾಡುವಾಗ ಜೀವನದ ಬಗ್ಗೆ ಅಗೌರವದಿಂದ ವರ್ತಿಸ ಬಾರದು-ಎಂಬುದು ಅವರ ಬೋಧನೆ.

ಗಾಂಧಿಯವರು ಜನತೆಯ ನಾಯಕ. ರಾಜಕೀಯ ಸಾಮಾಜಿಕ ಬಂಡಾಯಗಾರ. ತಮ್ಮ ದೇಶವನ್ನು ಸ್ವಾತಂತ್ರ್ಯದ ಗುರಿ ಮುಟ್ಟಿಸುವ ಪ್ರಯತ್ನವೇ ಅವರ ಅಭಿವ್ಯಕ್ತಿಗೆ ಮಾಧ್ಯಮವಾಯಿತು. ತನ್ಮೂಲಕವಾಗಿ ಅವರು ಇಡೀ ಮಾನವತೆಯನ್ನೇ ಪ್ರೀತಿಸಿದರು.

ಜೈನ ವೈಷ್ಣವ ಧರ್ಮಗಳಿಂದ ಗಾಂಧಿಯವರು ತುಂಬ ಪ್ರಭಾವಿತರಾಗಿದ್ದರು. ಮಾರ್ಕ್ಸ್ ಡಾರ್ವಿನ್ ಸಿದ್ಧಾಂತಗಳು ಅತ್ಯಂತ ಪ್ರಚಾರದಲ್ಲಿದ್ದ ಕಾಲದಲ್ಲಿ ಅವರು ಲಂಡನಿನಲ್ಲಿ ವಿದ್ಯಾರ್ಥಿಯಾಗಿದ್ದರು. ಎಪ್ಪತ್ತೈದರ ಪ್ರಾಯದಲ್ಲಿ ಅವರು ಮಾರ್ಕ್ಸ್‌ನ ಕ್ಯಾಪಿಟಲ್ ಉದ್ಗ್ರಂಥವನ್ನೋದಿದ್ದರು. ಎಲ್ಲ ಧರ್ಮಗಳ ಸಮನ್ವಯವನ್ನು ಬೋಧಿಸಿದರೂ ಅವರು ಮೂಲತಃ ಹಿಂದುವಾಗಿ ಉಳಿದರು. ಸನಾತನ ಧರ್ಮದ ಉತ್ಕೃಷ್ಟ ಉತ್ಪನ್ನ ಗಾಂಧಿ ಯವರು. ತಮ್ಮ ಇಡೀ ಬಾಳನ್ನೇ ತಮ್ಮ ವಿಚಾರದ ಪ್ರಯೋಗ ಶಾಲೆಯನ್ನಾಗಿ ಮಾಡಿ ಕೊಂಡ ಗಾಂಧಿಯವರು ಸ್ವಂತ ಅನುಭವ ದಿಂದಕಂಡುಕೊಳ್ಳದ ಯಾವುದನ್ನೂ ಬೋಧಿಸಲಿಲ್ಲ. ದೇವರು ಸತ್ಯ ಮಾತ್ರವಲ್ಲ, ಸತ್ಯವೇ ದೇವರು- ಎಂದು ಅವರು ಪ್ರತಿಪಾದಿಸಿದರು. ಇಷ್ಟಾದರೂ ಅವರು ಅತ್ಯಂತ ವಿನಯಶೀಲರು. ತಮಗೆ ಯಾವ ದೈವಿಕ ಶಕ್ತಿಯೂ ಇಲ್ಲವೆಂದೇ ಅವರು ಸಾರಿದರು. ಗಾಂಧಿಯವರು ಕಣ್ಮರೆಯಾದರೂ ಅವರ ವಿಚಾರಗಳ ಪ್ರಭಾವ ಮಾತ್ರ ನಿಧಾನವಾದರೂ ಖಂಡಿತವಾಗಿಯೂ ಅಗೋಚರವಾಗಿಯೂ ಜಗತ್ತನ್ನೆಲ್ಲ ವ್ಯಾಪಿಸುತ್ತಿದೆ. ದೇಶವಿದೇಶ ಗಳಲ್ಲಿ ಅವರ ಬೋಧನೆಯನ್ನು ನಂಬಿ ನಡೆವ ಹಲವಾರು ಮಂದಿ ಇದ್ದಾರೆ. (ಜಿ.ವಿ.ಎನ್.)


ಗಾಂಧಿಯವರು ಬಳಸುತ್ತಿದ್ದ ವಸ್ತುಗಳು

ಗಾಂಧಿಯವರ ಸಾಧನೆಗಳು, ಸಿದ್ಧಿ ಮತ್ತು ಪ್ರಭಾವಗಳ ಬಗ್ಗೆ ಈ ಲೇಖನದಲ್ಲಿ ಕೆಳಕಂಡ ಶೀರ್ಷಿಕೆ ಗಳಲ್ಲಿ ವಿಷಯ ಸಂಗ್ರಹ ಮಾಡಲಾಗಿದೆ : ಗಾಂಧೀ ತತ್ತ್ವ ದರ್ಶನ; ಗಾಂಧಿಯವರ ರಾಜನೀತಿ; ಗಾಂಧೀ ಸಮಾಜದರ್ಶನ; ಗಾಂಧೀ ಸಾಹಿತ್ಯ; ಗಾಂಧೀ ಅರ್ಥಶಾಸ್ತ್ರ; ಗಾಂಧಿಯವರ ಶಿಕ್ಷಣ ತತ್ತ್ವದೃಷ್ಟಿ; ಗಾಂಧೀ ದೃಷ್ಟಿಯಲ್ಲಿ ಸ್ವರಾಜ್ಯ; ಗಾಂಧೀ ದೃಷ್ಟಿಯಲ್ಲಿ ಸತ್ಯಾಗ್ರಹ; ಗಾಂಧೀ ಮತ್ತು ಅಹಿಂಸೆ; ಗಾಂಧೀಯವರ ಅನಾಸಕ್ತಿಯೋಗ; ಗಾಂಧೀ ಆಶ್ರಮಗಳು. ಗಾಂಧಿಯವರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸಾಮಾನ್ಯ ವಿಷಯಸೂಚಿಯನ್ನು ನೋಡತಕ್ಕದ್ದು.

**ಗಾಂಧೀ ತತ್ತ್ವದರ್ಶನ:** ಗಾಂಧಿಯವರ ವಿಪುಲವಾದ ಬರೆವಣಿಗೆ, ಮಾತುಕತೆ, ಭಾಷಣಗಳು, ಸತ್ಯಾನ್ವೇಷಣೆಗಾಗಿ ಮುಡುಪಿಟ್ಟ ಅವರ ಜೀವನ-ಇವುಗಳಲ್ಲಿ ಸ್ಫುರಿಸುವ ಅವರ ತತ್ತ್ವದರ್ಶನವನ್ನು ಇಲ್ಲಿ ಸಂಗ್ರಹವಾಗಿ ತಿಳಿಸಿದೆ.

ಗಾಂಧಿಯವರ ತತ್ತ್ವದೃಷ್ಟಿ ಕೇವಲ ತಾತ್ತ್ವಿಕವಾಗಿರದೆ ಅತ್ಯಂತ ಪ್ರಾಯೋಗಿಕ ವಾಗಿತ್ತು. ಜೀವನವನ್ನು ಕುರಿತ ಸತ್ಯಾನ್ವೇಷಣೆ ಮತ್ತು ಅತ್ಯುನ್ನತ ಆದರ್ಶಗಳಿಂದ ಪ್ರಭಾವಿತವಾದ ಅವರ ದರ್ಶನವನ್ನು ಪ್ರಾಯೋಗಿಕ ಧ್ಯೇಯವಾದವೆನ್ನಬಹುದು.

ದರ್ಶನಗಳಲ್ಲಿ ಪ್ರಧಾನವಾದ ವಿಷಯಗಳು ಜೀವ, ಜಗತ್ತು ಮತ್ತು ಈಶ್ವರ. ಇವುಗಳನ್ನು ಕುರಿತು ಗಾಂಧಿ ತಮ್ಮ ಅಭಿಪ್ರಾಯಗಳನ್ನು ಅಲ್ಲಲ್ಲಿ ವಿವರಿಸಿದ್ದಾರೆ. ಈಶ್ವರ ಸತ್ಯಸ್ವರೂಪನೆಂದು ತಾತ್ತ್ವಿಕರು ವರ್ಣಿಸುತ್ತಾರೆ. ಆದರೆ ಗಾಂಧಿ ಈಶ್ವರ ಸತ್ಯ ಎನ್ನುವುದಕ್ಕಿಂತಲೂ ಸತ್ಯವೇ ಈಶ್ವರ ಎಂದು ಹೇಳುವುದು ಹೆಚ್ಚು ಉಚಿತ ಎನ್ನುತ್ತಾರೆ. ದರ್ಶನಗಳಲ್ಲಿ ಈಶ್ವರನ ಆಸ್ತಿತ್ವವನ್ನು ಸ್ಥಾಪಿಸಲು ಅನೇಕ ವಾದಗಳು ಮಂಡಿಸಲ್ಪಟ್ಟಿವೆ ಯಷ್ಟೆ. ಗಾಂಧೀಜಿಯವರ ದೃಷ್ಟಿಯಲ್ಲಿ ಈಶ್ವರನ ಅಸ್ತಿತ್ವವನ್ನು ಕೇವಲ ತರ್ಕದಿಂದ ಸಾಧಿಸಲು ಸಾಧ್ಯವಿಲ್ಲ. ಇದು ಶ್ರದ್ಧೆಯ ವಿಷಯ ಮತ್ತು ಅನುಭವದ ವಿಷಯ. ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಎನ್ನುವ ಗೋಜಿಗೆ ಹೋಗದೆ ತಮ್ಮಲ್ಲಿ ಇವೆಲ್ಲದರ ಸ್ವಲ್ಪ ಸ್ವಲ್ಪ ಅಂಶವಿದೆಯೆಂದು ಅವರು ಒಪ್ಪಿಕೊಳ್ಳುತ್ತಾರೆ. ತಾವು ಒಂದು ದೃಷ್ಟಿಯಿಂದ ಅದ್ವೈತಿ ಎಂದೂ ಮತ್ತೊಂದು ದೃಷ್ಟಿಯಿಂದ ದ್ವೈತಿ ಎಂದೂ ಹೇಳಿಕೊಳ್ಳುತ್ತಾರೆ. ಹಾಗೆಯೇ ಜೈನದರ್ಶನದ ಅನೇಕಾಂತವಾದ, ಸ್ಯಾದ್ವಾದಗಳಿಂದ ಕೆಲವು ಅಂಶಗಳನ್ನವರು ತೆಗೆದುಕೊಂಡಿದ್ದಾರೆ. ತಮಗೆ ಬೇಕಾದ ಹಾಗೆ ಆ ಸಿದ್ಧಾಂತಗಳನ್ನು ಬೆಳೆಸಿಕೊಂಡಿದ್ದಾರೆ. ವೈಷ್ಣವದರ್ಶನದ ಕೆಲವು ಅಂಶಗಳೂ ಇವರ ದರ್ಶನದಲ್ಲಿ ಸಮಾವೇಶಗೊಂಡಿವೆ. ಬ್ರಹ್ಮ ಸತ್ಯ, ಜಗತ್ತು ಸ್ಫೂರ್ತಿದಾಯಕವಾದದ್ದು ಮತ್ತು ಇಡೀ ಮಾನವಜೀವನ ಸತ್ಯಶೋಧನೆಯ ಕ್ಷೇತ್ರ ಎಂಬ ಅಭಿಪ್ರಾಯಗಳು ಇವರ ದರ್ಶನಕ್ಕೆ ಮೂಲಭೂತವಾಗಿವೆ. ಜಗತ್ತಿನ ಎಲ್ಲ ಧರ್ಮಗಳ ಮೂಲ ಉದ್ದೇಶ ಭಗವಂತನ ಸಾಕ್ಷಾತ್ಕಾರವೆನ್ನುತ್ತಾರೆ, ಗಾಂಧಿ. ಪ್ರತಿ ಧರ್ಮದಲ್ಲಿಯೂ ಸತ್ಯಾಂಶದ ಸಂಗತಿಗಳಿವೆ. ಹಾಗೆಯೇ ಅದರೊಡನೆ ಅಸತ್ಯಾಂಶಗಳೂ ಕಾಲಾನುಕ್ರಮವಾಗಿ ಸೇರಿಕೊಂಡಿವೆ. ಈ ಕಾರಣದಿಂದ ಧರ್ಮಗಳನ್ನೂ ಆಗಿಂದಾಗ್ಗೆ ಶುದ್ಧಿಗೊಳಿಸುವ ಅಗತ್ಯವಿದೆ. ಎಲ್ಲ ಧರ್ಮಗಳೂ ನ್ಯಾಯವಾದ ಜೀವನಮಾರ್ಗವನ್ನೇ ಬೋಧಿಸುತ್ತವೆ. ಆದ್ದರಿಂದ ತಮ್ಮ ತಮ್ಮ ಮತಧರ್ಮದಂತೆ ಜನ ನಡೆಯುವುದನ್ನು ಕಲಿಯಬೇಕು. ಸತ್ಯಶೀಲತೆ, ಅಹಿಂಸಾಪಾಲನೆ, ಅಪರಿಗ್ರಹ, ಸ್ವದೇಶೀ ಭಾವನೆ ಇತ್ಯಾದಿ ಆರು ನಿಯಮಗಳನ್ನು ಪ್ರತಿಯೊಬ್ಬನೂ ಪಾಲಿಸುವುದು ಅಗತ್ಯ. ಗಾಂಧೀಜಿಯವರ ದೃಷ್ಟಿಯಲ್ಲಿ ಈ ಜಗತ್ತು ಮತ್ತು ಇಲ್ಲಿ ನಡೆಸುವ ಬಾಳ್ವೆ ಈಶ್ವರ ಸಾಕ್ಷಾತ್ಕಾರಕ್ಕೆ ನಮಗೆ ಬೇಕಾದ ಸಾಧನ ಸಂಪತ್ತನ್ನು ಒದಗಿಸಿಕೊಡುತ್ತವೆ. ಅಂದಮೇಲೆ ಈ ಜಗತ್ತನ್ನು ಕುತ್ಸಿತ ಭಾವದಿಂದ ಕಾಣಬಾರದು. ಈಸಬೇಕು ಇದ್ದು ಜೈಸಬೇಕು ಎನ್ನುವುದೇ ಇದರ ತಾತ್ಪರ್ಯ. ಈಶ್ವರ ಮಾನವನ ಎಲ್ಲ ಮೌಲ್ಯಗಳ ಪರಿಪೂರ್ಣಸ್ವರೂಪ. ಆತ ಸತ್ಯ, ಶಿವ, ಸುಂದರ. ಮಾನವರು ಅಪೂರ್ಣರು, ಈಶ್ವರ ಪೂರ್ಣ. ಈ ಪೂರ್ಣತೆಯ ಕಡೆಗೆ ಮಾನವರು ಸಾಗಬೇಕು; ಇರುವ ಅಪೂರ್ಣತೆಯನ್ನು ಪರಿಶ್ರಮದಿಂದ ಹೋಗಲಾಡಿಸಿಕೊಳ್ಳಬೇಕು. ಬಾಳು ಪ್ರೇಮಪೂರ್ಣ ವಾಗಬೇಕು. ಮಾನವನ ಮಾನವತ್ವದ ಆಧಾರ ಸತ್ಯ, ಅಹಿಂಸೆಗಳು. ಇವನ್ನು ಅಭ್ಯಾಸ ಮಾಡದಿದ್ದರೆ ಮಾನವ ಪಶುವಾಗುತ್ತಾನೆ. ಮಾನವ ಸಮಾಜದ ನಿಯಮ ಅರಣ್ಯದ ನಿಯಮವಲ್ಲ, ಮತ್ಸ್ಯನ್ಯಾಯವಲ್ಲ. ಪೈಪೋಟಿ ಘರ್ಷಣೆಗಳಲ್ಲ. ಸಹಬಾಳ್ವೆಯ ಸಹಾನುಭೂತಿಯ ಆವಿಷ್ಕಾರವೇ ಮಾನವ ಜೀವನದ ವೈಶಿಷ್ಟ್ಯ. ಸರ್ವೋದಯವೇ ಮಾನವನ ಸಾಮಾಜಿಕ ಜೀವನದ ಸಾರಸರ್ವಸ್ವ. ಸರ್ವೋದಯ ಸರ್ವರ ಉದಯ ಮತ್ತು ಎಲ್ಲ ವ್ಯಕ್ತಿಗಳ ಸಮಗ್ರ ಉದಯ. ವ್ಯಕ್ತಿಯ ಮತ್ತು ರಾಷ್ಟ್ರದ ಜೀವನದಲ್ಲಿ ಉದಾತ್ತ ಧ್ಯೇಯಗಳಿರಬೇಕು. ಅವನ್ನು ಸಾಧನೆ ಮಾಡುವ ದಾರಿಯೂ ಕ್ರಮವೂ ಅಷ್ಟೇ ಉದಾತ್ತವಾದುದಾಗಿರಬೇಕು. ಗುರುಸಾಧನೆಯೇ ಮುಖ್ಯವೆಂದು ಅಡ್ಡದಾರಿಗಳಿಂದ, ಅಧರ್ಮ, ಹಿಂಸೆಗಳಿಂದ ಅದನ್ನು ಸಾಧಿಸಹೋಗುವುದು ಸಲ್ಲದು. ಆದ್ದರಿಂದ ರಾಜಕೀಯ ಹೋರಾಟದಲ್ಲೂ ಧರ್ಮದ ದಾರಿ ಒಳ್ಳೆಯದು. ಗೃಹಸ್ಥನ ಕುಟುಂಬ ಜೀವನ ಬಹಳ ಪವಿತ್ರವಾದುದು. ಮದುವೆ ಅಂಥ ಜೀವನದ ಒಂದು ಪವಿತ್ರ ಪ್ರಾರಂಭ. ಸಂತಾನಕ್ಕಾಗಿ ಮಾತ್ರ ಸಂಭೋಗ. ಉಳಿದಂತೆ ಎಲ್ಲರಿಗೂ ಸಂಯಮ, ಬ್ರಹ್ಮಚರ್ಯ ಅಗತ್ಯ. ದೇವರ ನಾಮಸ್ಮರಣೆ, ಪ್ರಾರ್ಥನೆ, ಕಾಯಕ, ಪರೋಪಕಾರ- ಇವು ಮಾನವನ ಏಳಿಗೆಯ ಸಾಧನಗಳು-ಇದು ಗಾಂಧೀದರ್ಶನದ ಬಹುಮುಖ್ಯ

ವಿಷಯ. ಗಾಂಧಿಯವರ ದೃಷ್ಟಿಯಲ್ಲಿ ಜೀವನ ಅಖಂಡವಾದುದು. ಇದರಲ್ಲಿ ಒಂದನ್ನು ಒಂದರಿಂದ ಪ್ರತ್ಯೇಕಗೊಳಿಸುವುದು ಅಸಾಧ್ಯ. ಮಾನವನ ಮನಸ್ಸು, ಮಾನವನ ಸಮಾಜ ಇವುಗಳಲ್ಲಿ ಪ್ರತ್ಯೇಕವಾದ ವಿಭಾಗಗಳಿಲ್ಲ. ಸಾಮಾಜಿಕ ರಾಜಕೀಯ ಮತ್ತು ಧಾರ್ಮಿಕ ಎನ್ನುವ ವಿಭಾಗಗಳಲ್ಲಿ ಇವುಗಳದು ಅನ್ಯೋನ್ಯಾಶ್ರಯ. (ಎಂ.ವೈ.: ಜಿ.ವಿ.ಎಸ್.)

**ಗಾಂಧಿಯವರ ರಾಜನೀತಿ:** ಗೋಪಾಲಕೃಷ್ಣ ಗೋಖಲೆಯವರು ಗಾಂಧಿಯವರ ರಾಜಕೀಯ ಗುರು. ಅಧ್ಯಾತ್ಮದಿಂದ ರಾಜಕಾರಣ ಪವಿತ್ರಗೊಳ್ಳಬೇಕು–ಎಂಬುದು ಗೋಖಲೆಯವರ ಅಭಿಮತವಾಗಿತ್ತು. ಗಾಂಧಿಯವರದೂ ಇದೇ ಧೋರಣೆ. ಧರ್ಮ ರಾಜಕಾರಣಗಳು ಅವಿಭಾಜ್ಯವೆಂದು ಗಾಂಧಿಯವರು ಹೇಳಿದ್ದಾರೆ. ಧರ್ಮವನ್ನು ಬಿಟ್ಟರೆ ರಾಜಕಾರಣದಲ್ಲಿ ಉಳಿದುದೆಲ್ಲ ಕಸವೆಂದು ಅವರ ನಂಬಿಕೆ. ರಾಷ್ಟ್ರಗಳ ಪ್ರಜೆಗಳೆಲ್ಲರ ಯೋಗಕ್ಷೇಮ ಸಾಧನೆಯೆಂದರೆ ಧರ್ಮಸಾಧನೆ. ಧರ್ಮ ಕಾಮಿತಾರ್ಥವನ್ನು ಕೊಡುತ್ತದೆ; ಧರ್ಮ ನೀಡಲಾಗದ ಯಾವುದಕ್ಕೂ ಯಾವ ಬೆಲೆಯೂ ಇಲ್ಲ. ಧರ್ಮವೆಂದರೆ ಕುರುಡು ನಂಬಿಕೆಯಲ್ಲ. ಪರಮತದ್ವೇಷವಲ್ಲ; ಎಲ್ಲ ಪ್ರಾಣಿಗಳನ್ನೂ ತನ್ನಂತೆಯೇ ಭಾವಿಸಿ, ನಡೆದುಕೊಳ್ಳುವುದು; ಎಲ್ಲ ಧರ್ಮಗಳನ್ನೂ ಸಹಿಷ್ಣುತೆಯಿಂದ ಕಾಣುವ ಔದಾರ್ಯ.

ರಾಜಕಾರಣ ಯಾರನ್ನೂ ಬಿಟ್ಟಿದ್ದಲ್ಲ. ರಾಜನೀತಿ ಹಾವಿನ ಸುರುಳಿಯಂತೆ ನಮ್ಮನ್ನು ಸುತ್ತಿಕೊಂಡಿದೆಯೆನ್ನುತ್ತಾರೆ ಅವರು. ಎಷ್ಟೇ ಹೆಣಗಿದರೂ ಅದರಿಂದ ಬಿಡಿಸಿಕೊಳ್ಳುವುದು ಸಾಧ್ಯವಿಲ್ಲ. ಜೀವನವೆಲ್ಲ ರಾಜಕಾರಣದಿಂದ ತುಂಬಿದೆ. ಜೀವನವನ್ನು ಆಧ್ಯಾತ್ಮಿಕ ಕ್ಷೇತ್ರ, ಸಾಮಾಜಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ, ರಾಜಕೀಯ ಕ್ಷೇತ್ರ ಎಂಬುದಾಗಿ ವಿಭಾಗ ಮಾಡಿ, ಒಂದು ಕ್ಷೇತ್ರಕ್ಕೂ ಇನ್ನೊಂದು ಕ್ಷೇತ್ರಕ್ಕೂ ಸಂಪರ್ಕವಿಲ್ಲದಂತೆ ಮಾಡಲಾಗದು. ಜೀವನ ಅಖಂಡ; ಅದನ್ನು ಖಂಡಗೊಳಿಸುವುದೆಂದರೆ ದುಃಖಕ್ಕೆ, ಘರ್ಷಣೆಗೆ, ನಾಶಕ್ಕೆ ಆಹ್ವಾನ ಕೊಟ್ಟಂತೆ.

ಪ್ರತಿಯೊಬ್ಬ ರಾಜಕಾರಣಿಯೂ ಆಸ್ತಿಕನೂ ಸತ್ಯಶೋಧಕನೂ ಆಗಬೇಕು. ದೇವರಲ್ಲಿ ನಂಬಿಕೆ ಇಟ್ಟು ನಡೆಯುವ ಸತ್ಯವನ್ನು ಆಶ್ರಯಿಸಿರುವ ಪ್ರಜೆ ರಾಜಕಾರಣಿಯಾದಾಗ ಆ ದೇಶದ ಭಾಗ್ಯ ತೆರೆಯುತ್ತದೆ. ಇಂಥ ರಾಜಕಾರಣಿಗಳಿರುವ ದೇಶದಲ್ಲಿ ಸರ್ಕಾರದ ಅತಿಯಾದ ಪಾರುಪತ್ಯಕ್ಕೆ, ವಿಪರೀತ ಸರ್ಕಾರಕ್ಕೆ ಕಾರಣವೇ ಇರುವುದಿಲ್ಲ. ಗಾಂಧಿಯವರ ರಾಜನೀತಿ ಕಲುಷಿತವಲ್ಲ. ಅದಕ್ಕೂ ಸತ್ಯ–ಅಹಿಂಸೆಗಳಿಗೂ ಅವಿನಾಸಂಬಂಧ. ಸತ್ಯ ಅಹಿಂಸೆಗಳು ಅವಳಿಮಕ್ಕಳು. ಅವು ನಾಣ್ಯದ ಎರಡು ಬದಿಗಳಂತೆ. ಸತ್ಯಕ್ಕೆ ಸಂಚಕಾರ ಬರುವುದಾದರೆ ನನಗೆ ಸ್ವರಾಜ್ಯವೇ ಬೇಡ, ಎಂದು ಗಾಂಧಿಯವರು ಹೇಳಿದರು. ಯಾವುದನ್ನೇ ಸಾಧಿಸಬೇಕಾದರೂ ಅದರ ಮಾರ್ಗವೂ ಪರಿಶುದ್ಧವಾಗಿರಬೇಕೆಂಬುದು ಗಾಂಧಿಯವರ ಅಪೇಕ್ಷೆ. ಮಾರ್ಗವೆಷ್ಟು ನಿರ್ಮಲವೋ ಅಷ್ಟರಮಟ್ಟಿಗೆ ಫಲಪ್ರಾಪ್ತಿ.

ಗಾಂಧಿಯವರು ಪ್ರಜಾತಂತ್ರವಾದಿ; ಪ್ರಾಪ್ತವಯಸ್ಕರೆಲ್ಲ ಮತದಾನ ಮಾಡಿ ನಿರ್ಮಿಸಿದ ವಿಧಾನ ಸಭೆಗಳ ಮೂಲಕ ಮಂತ್ರಿಮಂಡಲಗಳನ್ನು ರಚಿಸುವ, ಆಡಳಿತ ನಡೆಸುವ, ಸಂಯಮಪೂರಿತ ವಿವೇಕಯುತ ಪ್ರಜಾತಂತ್ರದ ಪ್ರತಿಪಾದಕರವರು. ಪ್ರಜಾತಂತ್ರ ಹಿಂಸೆಯಿಂದ ಮುಕ್ತವಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವೂ ಸುರಕ್ಷಿತವಾಗಬೇಕಾದರೆ ಪ್ರಜಾತಂತ್ರ ಶುದ್ಧ ಅಹಿಂಸಾತ್ಮಕವಾಗಿರಲೇಬೇಕು. ಆಗ ಮಾತ್ರ ಬಲಶಾಲಿ, ದುರ್ಬಲ ಇಬ್ಬರಿಗೂ ಸಮಾನಾವಕಾಶವೂ ಸಮಾನಾಧಿಕಾರವೂ ಇರುತ್ತವೆ.

ಅಲ್ಪಸಂಖ್ಯಾತ ನೌಕರಶಾಹಿಯ ಸರ್ಕಾರ ಎಷ್ಟು ಅನಪೇಕ್ಷಿತವೋ, ಬಹುಸಂಖ್ಯಾತ ಪಕ್ಷದ ಸರ್ಕಾರವೂ ಅಷ್ಟೇ ಅನಪೇಕ್ಷಿತ. ವಿಚಾರಸ್ವಾತಂತ್ರ್ಯವನ್ನೂ ಕ್ರಿಯಾಸ್ವಾತಂತ್ರ್ಯವನ್ನೂ ಬಯಸುವುದಾದರೆ ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನೂ ಕಾಪಾಡಬೇಕಾಗುತ್ತದೆ. ಬಹುಮತ ಪದ್ಧತಿಯ ಪ್ರಭುತ್ವದಲ್ಲಿ ವ್ಯಕ್ತಿಸಮಷ್ಟಿಯಲ್ಲಿ ಮುಳುಗಿಹೋಗುವ ಸಂಭವವೇ ಹೆಚ್ಚು. ಹಾಗಾಗಬಾರದು. ಸ್ನೇಹದಿಂದ, ಮಧುರಮಾರ್ಗದಿಂದ ಅಲ್ಪಸಂಖ್ಯಾತರನ್ನು ಒಲಿಸಿಕೊಳ್ಳಬೇಕು; ಬೇರೆ ದಾರಿ ಇಲ್ಲ. ಬಹುಮತವಾದ ಅಸಹನೀಯ ಹಿಂಸೆಗೆ ಮೂಲ. ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯವನ್ನು ತಾನು ಪಾಲಿಸಿದಾಗ ಅವನ ಪಾಲಿನ ಹಕ್ಕು ಅವನಿಗೆ ಕ್ರಮಪ್ರಾಪ್ತವಾಗುತ್ತದೆ–ಎಂದು ಗಾಂಧಿಯವರು ಹೇಳಿದ್ದಾರೆ. ಪ್ರಜಾತಂತ್ರವೆಂದರೆ ಪ್ರಜೆಗಳು ಸದಾ ವಿಧೇಯರಾಗಿ ವರ್ತಿಸುವುದಲ್ಲ. ಬಹುಸಂಖ್ಯಾತರಿಂದ ಭಿನ್ನವಾದ ಅಭಿಪ್ರಾಯ ಉಳ್ಳವರಾಗಿ ವರ್ತಿಸುವ ಹಕ್ಕು ಅಲ್ಪಸಂಖ್ಯಾತರಿಗೆ ಉಂಟೆಂದು ಅವರ ವಾದ. ವ್ಯಕ್ತಿ ಗಣನೆಗೆ ಬಾರದೆ ಹೋದರೆ ಸಮಾಜದಲ್ಲಿ ಏನೂ ಉಳಿಯದು. ವ್ಯಕ್ತಿಗೆ ಸ್ವಾತಂತ್ರ್ಯವಿದ್ದಾಗ ಮಾತ್ರ ಅವನು ತಾನಾಗಿ ತಾನೇ ಸಮಾಜದ ಅನುವರ್ತಿಯಾಗುತ್ತಾನೆ; ಅದಕ್ಕೆ ಸೇವೆ ಸಲ್ಲಿಸುತ್ತಾನೆ. ಆ ಸ್ವಾತಂತ್ರ್ಯವನ್ನು ಅವನಿಂದ ಕಸಿದುಕೊಂಡರೆ ಅವನು ಬರಿಯ ಯಂತ್ರವಾಗುತ್ತಾನೆ; ಸಮಾಜ ಹಾಳಾಗುತ್ತದೆ. ವ್ಯಕ್ತಿ ಎಲ್ಲಿ ಸ್ವಾತಂತ್ರ್ಯದಿಂದ ವಂಚಿತನಾಗುತ್ತಾನೋ ಅಲ್ಲಿ ಸಮಾಜವ್ಯವಸ್ಥೆ ಸಾಧ್ಯವಿಲ್ಲ. ವ್ಯಕ್ತಿ, ಸಮಾಜ ಎರಡೂ ಸುರಸವಾಗಿ ಸುಗಮವಾಗಿ ಬೆಳೆಯಬೇಕು. ವ್ಯಕ್ತಿಯೂ ತಾನು ಕೂಟಜೀವಿಯೆಂಬುದನ್ನು ನೆನಪಿನಲ್ಲಿಡಬೇಕು. ಸಮಾಜಪ್ರಗತಿಗೆ ಹೊಂದಿಕೊಂಡು ವ್ಯಕ್ತಿ ನೆಮ್ಮದಿಯ ಜೀವನ ನಡೆಸಬೇಕು. ಅವನು ಸ್ವಾತಂತ್ರ್ಯ ಬಯಸುವುದಾದರೂ ಸ್ವಸುಖಕ್ಕಾಗಿ ಅಲ್ಲ. ಸಕಲರ ಸುಖಕ್ಕಾಗಿ; ಸಕಲರ ಹಿತಕ್ಕಾಗಿ. ವ್ಯಕ್ತಿಸ್ವಾತಂತ್ರ್ಯವೆಂದರೆ ಒಬ್ಬ ಇನ್ನೊಬ್ಬನ ಮೇಲೆ ಸವಾರಿ ಮಾಡುವ ಅವಕಾಶವಲ್ಲ.

ಗಾಂಧಿಯವರು ಸಂಕುಚಿತ ರಾಷ್ಟ್ರವಾದಿಗಳಲ್ಲ. ಇಡೀ ವಿಶ್ವವೇ ಒಂದು ಕುಟುಂಬ–ಎಂಬುದೇ ಅವರ ಆದರ್ಶ. ವಿಶ್ವಕ್ಕೆಲ್ಲ ಲಾಭವಾಗಿ ಭಾರತ ಏಳಬೇಕು. ಇತರ ರಾಷ್ಟ್ರಗಳು ಹಾಳಾಗಿ ಅದರ ಮೇಲೆ ಭಾರತ ಏಳಬಾರದು–ಎಂದು ಅವರು ಹೇಳಿದ್ದಾರೆ. ರಾಷ್ಟ್ರವಾದಿಯಾಗದೆ ಅಂತಾರಾಷ್ಟ್ರೀಯವಾದಿಯಾಗುವುದು ಸಾಧ್ಯವಿಲ್ಲವೆಂಬುದು ಗಾಂಧಿಯವರ ಮತ. ರಾಷ್ಟ್ರವಾದದಲ್ಲಿ ಕುಂದೇನೂ ಇಲ್ಲ; ಸಂಕುಚಿತ ದೃಷ್ಟಿಯಲ್ಲಿ, ಸ್ವಾರ್ಥದಲ್ಲಿ ದೋಷವಿದೆ. ಭಾರತದ ರಾಷ್ಟ್ರವಾದವೂ ಅದರ ರಾಷ್ಟ್ರತ್ವ ಕಲ್ಪನೆಯೂ ಮಾನವ ಕುಲದ ಸೇವೆಗೆ ಮುಡುಪಾಗಿರತಕ್ಕದ್ದೆಂದು ಅವರು ಬೋಧಿಸಿದರು.

ವಿಶ್ವಕ್ಕೆಲ್ಲ ಒಂದು ಪ್ರಭುತ್ವವಿರಬೇಕೆಂಬುದು ಗಾಂಧಿಯವರ ಆದರ್ಶ. ಸೇವಾಗ್ರಾಮದ ಪರ್ಣಕುಟಿಯಲ್ಲಿ ಕೂತಿರುವಾಗಲೇ ನಾನು ಇಡೀ ಜಗತ್ತಿನೊಂದಿಗೆ ಸಂಪರ್ಕವನ್ನಿಟ್ಟುಕೊಂಡು, ಅಷ್ಟೇ ಏಕೆ, ಬ್ರಹ್ಮಾಂಡದೊಂದಿಗೆ ಸಂಪರ್ಕವನ್ನಿಟ್ಟುಕೊಂಡು, ಸುರಸವಾಗಿ ಬಾಳನ್ನು ನಡೆಸಲು ಬಯಸುತ್ತೇನೆ–ಎಂದು ಅವರು ಬರೆದಿದ್ದಾರೆ. ಅವರು ವಿಶ್ವ ಒಕ್ಕೂಟ ಸ್ಥಾಪಿಸುವ ವಿಚಾರ ಮಾಡಿದ್ದರು. ಇದನ್ನು ಅವರು ಅಹಿಂಸೆ, ಅಂತಾರಾಷ್ಟ್ರೀಯ ಸಹಕಾರ–ಇವುಗಳ ಅಸ್ತಿಭಾರದ ಮೇಲೆ ರಚಿಸುವ ಆಲೋಚನೆ ಮಾಡಿದ್ದರು. ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಚತುರಂಗ ಬಲಗಳನ್ನು ಕೊನೆಗೊಳಿಸಬೇಕು; ಸಂಪೂರ್ಣ ಶಸ್ತ್ರನಿರಾಕರಣ ನೀತಿಯನ್ನು ಪರಿಪಾಲಿಸಬೇಕು. ರಾಷ್ಟ್ರಗಳ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಸ್ನೇಹದಿಂದ, ಸಂಧಾನದಿಂದ ಪರಿಹರಿಸಿಕೊಳ್ಳಬೇಕು. ವಿಶ್ವಶಾಂತಿಯ ಪಾಲನೆಗಾಗಿ ವಿಶ್ವ ಒಕ್ಕೂಟ ಮಾತ್ರ ತಕ್ಕಷ್ಟು ಸೇನಾಬಲವನ್ನು ಇಟ್ಟುಕೊಳ್ಳಬಹುದು; ಶಸ್ತ್ರಧಾರಣ ಮಾಡಬಹುದು–ಎಂದು ಅವರು ಭಾವಿಸಿದ್ದರು. (ಟಿ.ಟಿ.ಎಸ್.)

**ಗಾಂಧೀ ಸಮಾಜದರ್ಶನ:** ಗಾಂಧೀಜಿ ಭಾರತದ ಸ್ವಾತಂತ್ರ್ಯ ಸಂಪಾದಕರಾದರೂ ಅಖಿಲ ಜಗತ್ತಿನ ಪ್ರಜೆಯಾಗಿ, ಜಗತ್ತಿನ ಕಲ್ಯಾಣವನ್ನು ತಮ್ಮ ಬೋಧನೆಯಿಂದಲೂ ಆಚರಣೆಯಿಂದಲೂ ಸಾಧಿಸಲು ತಮ್ಮ ಜೀವಮಾನವನ್ನೆಲ್ಲ ವಿನಿಯೋಗಿಸಿದರು. ಅವರು ರಾಜತಂತ್ರಜ್ಞರಾಗಿದ್ದುದಕ್ಕಿಂತ ಹೆಚ್ಚಾಗಿ ಧಾರ್ಮಿಕ ಪುರುಷರೂ ಆಧ್ಯಾತ್ಮ ಸಾಧಕರೂ ಆಗಿದ್ದರು. ಆದುದರಿಂದ ರಾಜಕೀಯ ಹೋರಾಟವೂ ಸೇರಿದಂತೆ, ಅವರ ಎಲ್ಲ ಚಟುವಟಿಕೆಗಳೂ ಸತ್ಯ ಧರ್ಮ ಅಹಿಂಸೆಯ ಮೇಲೆಯೇ ಆಧಾರಿತ ವಾಗಿದ್ದುವು. ವ್ಯಕ್ತಿಯ ಮಟ್ಟದಲ್ಲಿ, ರಾಷ್ಟ್ರದ ಮಟ್ಟದಲ್ಲಿ, ಅಂತಾರಾಷ್ಟ್ರ ಮಟ್ಟದಲ್ಲಿ, ಎಲ್ಲ ಕಾರ್ಯಗಳನ್ನು ನಿರ್ದೇಶಿಸುವ ಮೂಲಪ್ರೇರಣೆ ಸತ್ಯ ಮತ್ತು ಅಹಿಂಸೆಯಾಗಿರ ಬೇಕೆಂದು ಅವರು ಬಯಸಿದರು ಅಂಥ ಸಮಾಜವನ್ನು ರೂಪಿಸುವುದು ಅವರ ಉದ್ದೇಶವಾಗಿತ್ತು.

ಗಾಂಧೀಜಿಯವರ ಕಲ್ಪನೆಯ ಸಮಾಜರಚನೆಯಲ್ಲಿ ವ್ಯಕ್ತಿಯೇ ಪರಮಗಣ್ಯ. ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡ ಸಮಾಜದಲ್ಲಿ ಮಾತ್ರ ಶಾಂತಿ ಸುಖ ಸಮತೆ ಇರಬಲ್ಲದು. ವ್ಯಕ್ತಿ ಸ್ವಾತಂತ್ರ್ಯವೊಂದೇ ಮಾನವ ಪೂರ್ಣ ಆತ್ಮ ಸಂತೋಷದಿಂದ ತನ್ನನ್ನು ಸಮಾಜಸೇವೆಗೆ ಅರ್ಪಿಸಿಕೊಳ್ಳುವ ಸ್ಫೂರ್ತಿಯನ್ನು ನೀಡಬಲ್ಲದು. ಪ್ರಜಾ ಪ್ರಭುತ್ವದ ಹೆಸರಿನಲ್ಲಾಗಲೀ ಬಹುಮತದ ಬಲಪ್ರಯೋಗದಿಂದಾಗಲೀ ವ್ಯಕ್ತಿ ಸ್ವಾತಂತ್ರ್ಯ ಹರಣ ಸಲ್ಲದು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಎಲ್ಲ ಬಗೆಯ ವಿರೋಧದಮನ ಅಥವಾ ವಿರೋಧಿಗಳ ನಿರ್ನಾಮವಾದರೆ ಅದು ನಿಜವಾದ ಜನತಂತ್ರ ಅಥವಾ ಜನತಾಸ್ವರಾಜ್ಯ ವಾಗದು. ವ್ಯಕ್ತಿ ತನ್ನ ಪೂರ್ಣತೆಗೆ ಬೆಳೆದು, ತನ್ನ ಶಕ್ತಿಗಳನ್ನೆಲ್ಲ ಸಾಧಿಸಿಕೊಂಡು ಅದರ ಎಲ್ಲ ಫಲಗಳನ್ನೂ ಸಮಾಜಕ್ಕೆ ಹಿಂದಿರುಗಿಸುವುದೇ ನಿಜವಾದ ವ್ಯಕ್ತಿ ಸ್ವಾತಂತ್ರ್ಯದ ಅರ್ಥ. ಇಂಥ ಸಮಾಜದಲ್ಲಿ ಬಡತನವಿರದು, ಯುದ್ಧವಿರದು, ಕ್ರಾಂತಿಯಿರದು, ರಕ್ತಪಾತವಿರದು.

ಆದರ್ಶ ಸಮಾಜದಲ್ಲಿ, ಮನಸ್ಸಿನ ಹಾಗೂ ನೀತಿಯ ಪೂರ್ಣ ವಿಕಾಸದಿಂದ ಕೂಡಿದ ಮಾನವಸೌಖ್ಯವೇ ಜೀವನದಲ್ಲಿ ಆರಿಸುವ ಗುರಿಯಾಗುತ್ತದೆ. ಇಲ್ಲಿ ನೀತಿಯೆಂದರೆ ಆಧ್ಯಾತ್ಮಿಕ ಎಂದೂ ಅರ್ಥ. ಬರಿಯ ದೇಹದ ಸೌಖ್ಯವೇ ಮಾನವನಿಗೆ ಎಂದಿಗೂ ಪೂರ್ಣ ಸೌಖ್ಯವಾಗಲಾರದು. ಅದು ಪಶುಗಳಿಗೆ ಮಾತ್ರ ಸರ್ವಸ್ವವಾಗಬಹುದು. ಇಂಥ ಸಮಾಜದಲ್ಲಿ ವಿಕೇಂದ್ರೀಕರಣ ಒಂದು ಮುಖ್ಯ ಅಂಶ. ಹಳ್ಳಿಗಳು ಸಮಾಜ ಜೀವನದ ಕೇಂದ್ರಬಿಂದುಗಳಾಗಬೇಕು. ಕೇಂದ್ರೀಕರಣ ಪದ್ಧತಿ, ಅಹಿಂಸಕ ಸ್ವರೂಪವುಳ್ಳ ಸಮಾಜರಚನೆಯೊಂದಿಗೆ ಹೊಂದಿಕೊಳ್ಳಲಾರದು. ವ್ಯಕ್ತಿ ತನ್ನ ಹಳ್ಳಿಗಾಗಿ ಪ್ರಾಣಾರ್ಪಣೆ ಮಾಡಲೂ ಸಿದ್ಧನಾಗಿ, ಸಮುದಾಯಕ್ಕಾಗಿ ಸದಾ ದುಡಿಯುತ್ತಾನೆ. ಇಂಥ ಸಮಾಜದಲ್ಲಿ ವ್ಯಕ್ತಿ ಪರಿವರ್ತನೆಹೊಂದಿ ಸ್ವಾರ್ಥರಹಿತನಾಗಿರುತ್ತಾನೆ. ಪ್ರತಿ ಹಳ್ಳಿಯೂ ವ್ಯವಸಾಯ, ಗ್ರಾಮೋದ್ಯೋಗ, ಮೂಲಶಿಕ್ಷಣಶಾಲೆ, ಆಟದ ಬಯಲು, ಪ್ರಕೃತಿ ಚಿಕಿತ್ಸಾಲಯ, ಸಹಕಾರಸಂಘ, ಶಿಶುವಿಹಾರ, ಶುದ್ಧವಾದ ಕುಡಿಯುವ ನೀರು, ಮಕ್ಕಳಿಗೆ ಹಾಲು–ಇವೆಲ್ಲ ದೊರೆಯುವ ಘಟಕವಾಗುತ್ತದೆ. ಹಳ್ಳಿ ಪಟ್ಟಣಿಗರ ಅಥವಾ ಇತರರ ಲೂಟಿಗೆ ತುತ್ತಾಗದೆ ಸ್ವಾವಲಂಬಿಯಾಗಿರುತ್ತದೆ. ಭಾರತದ ಪ್ರತಿಹಳ್ಳಿಯೂ

ಗಣರಾಜ್ಯವಾಗಿ ಯಾವುದೂ ಶ್ರೇಷ್ಠವೂ ಕನಿಷ್ಠವೂ ಆಗದೆ ಕಡೆಯದೂ ಮೊದಲದೂ ಆಗದೆ ಎಲ್ಲವೂ ಸಮಾನವಾಗಿರುತ್ತವೆ.

ಇಂಥ ಸಮಾಜದಲ್ಲಿ, ಸರ್ಕಾರದ ಸಂಪರ್ಕ, ಹಳ್ಳಿಗಳೊಂದಿಗೆ ಎಷ್ಟು ಕಡಿಮೆ ಇದ್ದರೆ ಅಷ್ಟು ಒಳ್ಳೆಯದು. ಜನತೆ ಮಾಡಬೇಕಾದ ಕಾರ್ಯಗಳನ್ನೆಲ್ಲ ತಾನೇ ಮಾಡುತ್ತ ಜನತೆಯನ್ನು ನಿಷ್ಕ್ರಿಯವನ್ನಾಗಿ ಮಾಡಿ, ಅದರ ಕಾರ್ಯಶಕ್ತಿಯನ್ನು ಉಡುಗಿಸುವುದು ಯಾವ ಸರ್ಕಾರಕ್ಕೂ ಒಳ್ಳೆಯದಲ್ಲ. ಅದು ಜನತೆಯ ವ್ಯಕ್ತಿ ಸ್ವಾತಂತ್ರ್ಯವನ್ನೂ ಹರಣಮಾಡುತ್ತದೆ.

ಯಾವ ವ್ಯಕ್ತಿಯೂ ಸಮಾಜಕ್ಕೆ ಕಂಟಕನಾಗಿ ಬೆಳೆಯಕೂಡದು. ಮಾನವ ಪ್ರಧಾನವಾಗಿ ಸಮಾಜಜೀವಿ ಎಂಬುದನ್ನು ಮರೆಯಬಾರದು. ಸಾಮಾಜಿಕ ಪ್ರಗತಿಯ ಆವಶ್ಯಕತೆಗಳಿಗೆ ಅನುಗುಣವಾಗಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತ ಅವನು ಇಂದಿನ ಹಂತಕ್ಕೆ ಏರಿದ್ದಾನೆ. ಇಡೀ ಸಮಾಜದ ಕಲ್ಯಾಣದೃಷ್ಟಿಯಿಂದ ವ್ಯಕ್ತಿ ಇಚ್ಛಾಪೂರ್ವಕವಾಗಿ ಸಾಮಾಜಿಕ ನಿಗ್ರಹಕ್ಕೆ ಒಳಗಾಗುವುದರಿಂದ ಸಮಾಜದ ಸದಸ್ಯರಲ್ಲೊಬ್ಬನಾದ ಅವನಿಗೂ ಸಮಾಜಕ್ಕೂ ಒಳಿತಾಗುವುದು.

ಶ್ರೀಮಂತರು ಧರ್ಮದ ಪಾರುಪತ್ಯಗಾರರಾಗಬೇಕು. ಅನಾಸಕ್ತರಾದ ಯಜಮಾನರಾಗಬೇಕು-ಎಂಬ ಮಾತಿನಲ್ಲಿ ಗಾಂಧೀಜಿ ಈ ಮಾರ್ಗವನ್ನು ವಿವರಿಸಿದರು.

ಸರ್ವಸಮಭಾಗ ಎಂಬ ಮಾತಿಗೆ ಗಾಂಧೀಜಿಯ ದೃಷ್ಟಿಯಲ್ಲಿ ಹೀಗೆ ಅರ್ಥ: ಸರ್ವಸಮಭಾಗವೆಂದರೆ ಜಗತ್ತಿನ ಸಂಪತ್ಸಾಮಗ್ರಿಯನ್ನೆಲ್ಲ ಯಾರೋ ಒಬ್ಬರು ಕೂತು ತಮ್ಮ ಮನಸ್ಸಿಗೆ ಬಂದ ಹಾಗೆ ಹಂಚಿಹಾಕುವುದಲ್ಲ. ಪ್ರತಿಯೊಬ್ಬನಿಗೂ ತನತನಗೆ ಸಹಜವಾಗಿ ಎಷ್ಟು ಬೇಕೋ ಅಷ್ಟು ಸಾಮಗ್ರಿ ದೊರೆಯಬೇಕು. ಒಂದು ಕವಡೆಯೂ ಹೆಚ್ಚಾಗಿ ಯಾರಿಗೂ ಸಿಗಬೇಕಾದ್ದಿಲ್ಲ.

ಈ ಸರ್ವಸಮ ವಿಭಾಗ ಹೇಗೆ ಆಗಬೇಕು, ಲೋಕದಲ್ಲಿ? ಕ್ರಾಂತಿಯಿಂದಲೇ ರಕ್ತಪಾತದಿಂದಲೇ? ಹಣವಂತರ ಸಂಪತ್ತನ್ನೆಲ್ಲ ಬಲಾತ್ಕಾರವಾಗಿ ದೋಚುವುದರಿಂದಲೇ? ಕೂಡದು ಎನ್ನುತ್ತದೆ ಅಹಿಂಸೆ. ಬಲಾತ್ಕಾರವಾದ ಸಂಪತ್ತಿನ ಆಕ್ರಮಣದಿಂದ ಲೋಕ ಇನ್ನೂ ಪಾತಾಳಕ್ಕಿಳಿದೀತು. ಹಣವಂತನ ಕೌಶಲವೆಲ್ಲ ಮಾಯವಾಗಿ ಲೋಕಕ್ಕೆ ಆ ಪ್ರಭಾವದ ಲಾಭ ಇಲ್ಲವಾದೀತು. ಅವನಿಗೆ ಸೃಷ್ಟಿಕೌಶಲ, ನಿರ್ಮಾಣ ಶಕ್ತಿಯಿದೆ. ಆ ಸಾಮರ್ಥ್ಯವನ್ನು ಕಳೆದುಕೊಳ್ಳುವುದು ಉಚಿತವಲ್ಲ. ಆತನ ಧನ ಅವನಿಗಿರಲಿ. ತನ್ನ ಬದುಕಿಗೆ ಅಗತ್ಯವಿದ್ದಷ್ಟನ್ನು ಆತ ಬಳಸಲಿ. ಉಳಿದುದಕ್ಕೆ ಬರೀ ಯಜಮಾನನಾಗಿರಲಿ. ದೇಶದ ಹಿತಕ್ಕಾಗಿ ಅದನ್ನು ಬೆಳೆಸಲಿ. ಗಾಂಧೀತತ್ತ್ವದಂತೆ ಹಿಂಸೆಯ ಮೂಲಕ ಉಂಟಾಗುವ ಸಹಕಾರ, ಬಲತ್ಕಾರದಿಂದ ಉಂಟಾದ ಒಳಿತು, ವ್ಯಕ್ತಿತ್ವವನ್ನು ನಾಶ ಮಾಡುತ್ತದೆ.

ಮಾನವಕುಟುಂಬದ ಪ್ರತಿಯೊಬ್ಬ ಪುರುಷನಿಗೂ ಮಹಿಳೆಗೂ ಅವರೆಷ್ಟೇ ಅಶಕ್ತರಾಗಿದ್ದರೂ ತಮ್ಮ ಆತ್ಮಗೌರವ ಮತ್ತು ಸ್ವಾತಂತ್ರ್ಯಗಳ ರಕ್ಷಣೆ ಮಾಡಿಕೊಳ್ಳಬೇಕೆಂಬ ಮನೋದಾರ್ಢ್ಯವನ್ನುಂಟುಮಾಡುವುದು ಅಗತ್ಯ.

ಆದರ್ಶ ಸಮಾಜದಲ್ಲಿ ಕುಟುಂಬ ಧರ್ಮವನ್ನು ರಾಷ್ಟ್ರಧರ್ಮವನ್ನಾಗಿಯೂ ರಾಷ್ಟ್ರಧರ್ಮವನ್ನು ವಿಶ್ವಧರ್ಮವನ್ನಾಗಿಯೂ ಎಂದಾದರೊಂದು ದಿನ ವಿಸ್ತರಿಸಲೇಬೇಕು.

ವ್ಯಕ್ತಿಸ್ವಾತಂತ್ರ್ಯ ಎಷ್ಟೇ ಇದ್ದರೂ ಮಾನವ ಸಮಾಜಜೀವಿಯಾಗಿಯೇ ಬೆಳೆಯಬೇಕು. ಆ ಸ್ವಾತಂತ್ರ್ಯ ಅವನನ್ನು ಸಮಾಜ ಜೀವನದಿಂದ ಪ್ರತ್ಯೇಕಗೊಳಿಸುವಷ್ಟು ದೂರ ಹೋಗಬಾರದು.

ವಿಕೇಂದ್ರೀಕರಣ ಕ್ರಮದಿಂದ ಸರ್ಕಾರ ಉತ್ಪಾದನೆಯ ಬಹುಭಾಗವನ್ನು ಜನತೆಗೆ ವಹಿಸಿ ವ್ಯಕ್ತಿಸ್ವಾತಂತ್ರ್ಯ ಸಾಮಾಜಿಕ ಅಪಾಯವಾಗುವ ಸ್ಥಿತಿಗೆ ಮುಟ್ಟಿದಾಗ ಮಾತ್ರ ತಾನು ಕೈಹಾಕಬೇಕು. ಈ ವ್ಯವಸ್ಥೆಯಿಂದ ಬಹುಮಟ್ಟಿಗೆ ನಿರುದ್ಯೋಗವೂ ಪೈಪೋಟಿಯೂ ಕಡಿಮೆಯಾಗುವುದು.

ಗಾಂಧೀಜಿ ಸೂಚಿಸಿದ ಈ ಸಮಾಜ ವ್ಯವಸ್ಥೆ ವಿಶ್ವದ ಹಿತದೃಷ್ಟಿಯಿಂದ ರೂಪಿತವಾದುದು. ಅವರು ಹಿಂದೂ ಸಮಾಜದಲ್ಲಿ ಜನಿಸಿದುದರಿಂದ ಹಿಂದೂ ಸಮಾಜದ ಗುಣದೋಷಗಳು, ಅವುಗಳ ನಿವಾರಣೆ-ಇವನ್ನು ಕುರಿತು ಯೋಚಿಸುವುದು ಅವರಿಗೆ ಅನಿವಾರ್ಯವಾಯಿತು. ಹಿಂದೂ ಸಮಾಜದಲ್ಲಿ ಅನೇಕ ಲೋಪದೋಷಗಳಿದ್ದರೂ ತಾನು ಹಿಂದೂ ಧರ್ಮವನ್ನೇ-ತನ್ನ ಹೆಂಡತಿಯನ್ನು ಪ್ರೀತಿಸುವಂತೆ-ಪ್ರೀತಿಸುತ್ತೇನೆಂದು ಗಾಂಧೀಜಿ ಹೇಳಿಕೊಂಡಿದ್ದಾರೆ. ಹಿಂದೂ ಧರ್ಮ ಹಿಂದೂ ಸಂಸ್ಕೃತಿ ಹಿಂದೂ ಸಮಾಜದ ವಿಷಯದಲ್ಲಿ ಅವರು ಆಳವಾಗಿ ಹತ್ತೂನಿಟ್ಟಿನಿಂದ ಯೋಚನೆ ಮಾಡಿದ್ದಾರೆ. ಭಾರತ ತನ್ನ ಪ್ರಾಚ್ಯ ಸಂಸ್ಕೃತಿಯ ಆಧಾರದಮೇಲೆ ಮಾತ್ರವೆ, ತನ್ನ ಸುಂದರವಾದ ರೀತಿ ನೀತಿಗಳಿಂದ ಬೆಳೆದು, ಭಾರತೀಯ ಸತ್ತ್ವಕ್ಕನುಗುಣವಾಗಿ ಇತರ ಪ್ರಾಚ್ಯ ಮತ್ತು ಪಾಶ್ಚಾತ್ಯದೇಶಗಳ ಸ್ನೇಹಸಂಬಂಧವನ್ನು ಸ್ಥಾಪಿಸಿಕೊಳ್ಳಬಲ್ಲದು. ಏಷ್ಯ ಖಂಡದವರು ಪಾಶ್ಚಾತ್ಯರಿಂದ ಬರುವುದೆಲ್ಲವನ್ನೂ ತಾರತಮ್ಯವಿಲ್ಲದೆ ವಿಚಾರಶೂನ್ಯತೆಯಿಂದ ಅನುಕರಿಸಬಾರದು. ಭಾರತ ತನ್ನ ನಾಗರಿಕತೆಯ ಮೇಲೆ ಅನ್ಯಾಯವಾಗಿ ಆಗುತ್ತಿರುವ ದಾಳಿಗಳನ್ನು ಶಾಂತಿಮಾರ್ಗದಿಂದ ಪ್ರತಿಭಟಿಸಬೇಕು. ಆಗ ವಿಶ್ವದ ಶಾಂತಿಗೂ ಸುಭದ್ರಪ್ರಗತಿಗೂ ಸಹಾಯಕವಾಗುವುದು. ಜನತೆಯ ಬಡತನದ ಸಮಸ್ಯೆಗೆ ಪಾಶ್ಚಾತ್ಯ ಸಮಾಜವಾದ, ಸಾಮ್ಯವಾದಗಳೇ ಅಂತಿಮಪರಿಹಾರವೆಂದು ಭಾವಿಸುವುದು ನಿಜವಾಗಿಯೂ ತಪ್ಪು.

ಹಿಂದೂ ಸಮಾಜ ಧಾರ್ಮಿಕ ತಳಹದಿಯಮೇಲೆ ರಚಿತವಾಗಿದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಹಿಂದೂ ಧರ್ಮ, ಪಶ್ಚಿಮ ದೇಶಗಳವರು ಭೌತ ವಿಷಯಗಳಲ್ಲಿ ಮಾಡಿರುವುದಕ್ಕಿಂತ ಹೆಚ್ಚು ಶೋಧನೆಗಳನ್ನು ಮಾಡಿದೆ. ಆದರೆ ಮಹತ್ತಮವೂ ಸುಂದರವೂ ಆದ ಆ ಶೋಧನೆಗಳನ್ನು ಕಾಣುವ ಕಣ್ಣುಗಳು ಜನಕ್ಕೆ ಇಲ್ಲ. ಇಂದು ಹಿಂದೂ ಧರ್ಮವನ್ನು ಅದರ ಅನುಯಾಯಿಗಳೇ ವಿಪರೀತಗೊಳಿಸಿ ಅಲ್ಲಗಳೆಯುತ್ತಿರುವರು. ಅದನ್ನು ಅಳಿಸಿಬಿಡುವುದು ಅದಕ್ಕೆ ಮದ್ದಲ್ಲ. ನಿಜವಾದ ಹಿಂದೂ ಭಾವನೆಯನ್ನು ಜನ ತಮ್ಮಲ್ಲಿ ಉಂಟುಮಾಡಿಕೊಳ್ಳಬೇಕು. ಹಿಂದೂ ಧರ್ಮ ಗಂಗಾನದಿಯಂತೆ ಉಗಮಸ್ಥಾನದಲ್ಲಿ ನಿರ್ಮಲವೂ ಶುದ್ಧವೂ ಆಗಿದೆ. ಗಂಗಾನದಿ ಹರಿದು ಬರುವಾಗ ಕೊಳೆಯನ್ನು ತೆಗೆದುಕೊಂಡು ಬರುವಂತೆ, ಹಿಂದೂ ಧರ್ಮವೂ ಬೆಳೆಯುತ್ತ ನಡೆದಂತೆ ಕೊಳೆ ಕೂಡಿದೆ ಆದರೆ ಗಂಗಾ ನದಿಯಂತೆ ಒಟ್ಟಿನಲ್ಲದು ಪರೋಪಕಾರಿಯಾಗಿದೆ.

ಹಿಂದೂ ಧರ್ಮ ಒಂದು ಅಧಿಕೃತ ಧರ್ಮವಲ್ಲ. ಅದು ಅದರ ಸುದೈವ. ಮತ್ತು ದುರ್ದೈವ. ಅದಕ್ಕೆ ಇತರ ಧರ್ಮಗಳಿಗಿರುವಂತೆ (ಬೈಬಲ್, ಕುರಾನ್, ಝೆಂಡ್ ಅವೆಸ್ತಗಳಂತೆ) ಒಂದು ಗ್ರಂಥವಿಲ್ಲ. ಆದರೆ ಭಗವದ್ಗೀತೆಯನ್ನು ಹಿಂದೂ ಧರ್ಮದ ಆಧಾರ ಗ್ರಂಥವೆಂದು ಭಾವಿಸಬಹುದು.

ಹಿಂದೂ ಧರ್ಮದ ಲಕ್ಷಣವನ್ನು ಗಾಂಧೀಜಿ ಹೀಗೆ ಹೇಳಿದ್ದಾರೆ. ಅಹಿಂಸಾ ಸಾಧನಗಳ ಮೂಲಕ, ಸತ್ಯವನ್ನು ಹುಡುಕುವುದೇ ಈ ಧರ್ಮದ ಉದ್ದೇಶ. ಸತ್ಯದ ಕಠೋರ ಶೋಧನವೇ ಹಿಂದೂತ್ವ. ಹಿಂದೂ ಧರ್ಮ ಅತ್ಯಂತ ಸಹಿಷ್ಣು ಧರ್ಮ, ಸಮದರ್ಶಿ ಧರ್ಮ, ಸರ್ವಗ್ರಾಹಿಧರ್ಮ. ಈ ಸರ್ವಗ್ರಾಹಿತ್ವವೇ ಅದರ ವಿಶಿಷ್ಟ ಸೌಂದರ್ಯ. ಬೇರೆ ಧರ್ಮಗಳಲ್ಲಿ ಇರುವುದೆಲ್ಲವನ್ನೂ ಹಿಂದೂ ಧರ್ಮದಲ್ಲಿ ಕಾಣಬಹುದು. ಅದರಲ್ಲಿಲ್ಲದುದು ಅಮುಖ್ಯವೂ ಅನಾವಶ್ಯಕವೂ ಆಗಿದೆ.

ಅಸ್ಪೃಶ್ಯತೆ, ಅಸಂಖ್ಯಾತವಾದ ಜಾತಿಗಳು, ಜಾತಿಭೇದ, ಮೂಢನಂಬಿಕೆಗಳು, ಬಾಲ್ಯವಿವಾಹ, ವೈಧವ್ಯದ ಕಠೋರ ನಿಯಮಗಳು, ಎಲ್ಲ ಪ್ರಾಚೀನ ಪದ್ಧತಿಗಳನ್ನೂ ತಾರತಮ್ಯ ಜ್ಞಾನವಿಲ್ಲದೆ ನಿರಾಕರಿಸಿ ನವೀನವಾದುದೆಲ್ಲದರ ಅಂಧಾನುಕರಣೆ, ವ್ಯವಹಾರಗಳಿಂದ ದೇವರನ್ನು ಸಂಪೂರ್ಣವಾಗಿ ಬಹಿಷ್ಕರಿಸಿರುವುದು, ಧರ್ಮ, ನೀತಿ ಮುಂತಾದ ನಿಜವಾದ ಆರ್ಷೇಯದ ಮೌಲ್ಯಗಳನ್ನು ನಿರಾಕರಿಸಿರುವುದು, ಬಡತನ ಬಲ್ಲಿದತನ ಬಂಡವಾಳ ಕೂಲಿ ಸರ್ವಸಮಾನತೆ ಇವುಗಳಿಗೆಲ್ಲ ಪಾಶ್ಚಾತ್ಯ ಮಾರ್ಗಗಳ ಹೊರತು ಬೇರೆ ದಾರಿ ಇಲ್ಲವೆಂದು ಅವನ್ನೇ ಅನುಸರಿಸುವುದು-ಇವೇ ಹಿಂದೂ ಸಮಾಜದ ದೌರ್ಬಲ್ಯವಾಗಿದೆ. ಹಿಂದೂ ಧರ್ಮದಲ್ಲಿ ಅನ್ಯಧರ್ಮದಿಂದ ಹಿಂದೂ ಧರ್ಮಕ್ಕೆ ಮತಾಂತರವಿಲ್ಲದುದನ್ನು ಗಾಂಧೀಜಿ ದೊಡ್ಡ ದೋಷವೆಂದು ಎಣಿಸುವುದಿಲ್ಲ. ಯಾವ ಧರ್ಮದ ಯೋಗ್ಯತೆಯೂ ಬರಿಯ ಸಂಖ್ಯಾಬಲವಲ್ಲ. ಮತಾನುಯಾಯಿಗಳೆಲ್ಲ ತಮ್ಮ ಧರ್ಮದ ತಿರುಳನ್ನು ಅರಿತು ಅದರಂತೆ ಆಚರಿಸುವುದು ಆ ಧರ್ಮದ ಶಕ್ತಿ.

ಹಿಂದೂ ಸಮಾಜದ ಜಾತಿಪದ್ಧತಿ, ಅಸ್ಪೃಶ್ಯತೆ, ಮೂಢನಂಬಿಕೆ, ಬಾಲ್ಯವಿವಾಹ, ವಿಧವೆಯರ ಕಷ್ಟಸ್ಥಿತಿ, ಸ್ತ್ರೀಸ್ವಾತಂತ್ರ್ಯ ಇವನ್ನೆಲ್ಲ ತಿದ್ದಲು ಸುಧಾರಣೆ ಆವಶ್ಯಕವೆಂದು ಗಾಂಧೀಜಿ ಅಭಿಮತ. ಸಮಾಜಸುಧಾರಣೆ ರಾಜಕೀಯಕ್ಕಿಂತ ಕಡಿಮೆಯದಲ್ಲ. ಸಮಾಜ ಸುಧಾರಕರು ತೆವಳುತ್ತ ನಡೆಯಬೇಕು. ಶಾಂತರಾಗಿರಬೇಕು. ನಿಸ್ಸ್ವಾರ್ಥತೆಯಿಂದಲೂ ಆತ್ಮತ್ಯಾಗದಿಂದ, ಮನವೊಲಿಸುವ ಮಾರ್ಗದಿಂದಲೂ ಸೇವೆ ಸಲ್ಲಿಸಬೇಕು. ಹಿಂದೂ ಸಮಾಜವನ್ನು ಒಂದೇ ಸಲಕ್ಕೆ ವಿವೇಚನೆಯಿಲ್ಲದೆ ಪಾಶ್ಚಾತ್ಯ ಸಮಾಜವಾಗಿ ಪರಿವರ್ತಿಸಲು ಪ್ರಯತ್ನಿಸುವುದು ವಿವೇಚನಾ ರಹಿತಕಾರ್ಯ. ಯಾವ ರೀತಿಯಲ್ಲಿಯೂ ಹಿಂಸಾಮಾರ್ಗ ವರ್ಜ್ಯ.

ಆದರ್ಶ ಸಮಾಜದಲ್ಲಿ ಸ್ತ್ರೀಪುರುಷರಲ್ಲಿ ಮೇಲು-ಕೀಳೆಂಬ ಭೇದವಿಲ್ಲ. ಅವರು ವಿವಾಹದಲ್ಲಿ ಗೆಳೆಯರಾಗಿ ಸಮಾನರಾಗಿ ಕೂಡುತ್ತಾರೆ. ಪತಿ ಸ್ವಾಮಿನ್ ಎಂದು ಕರೆಯಲ್ಪಟ್ಟರೆ, ಪತ್ನಿ, ಸ್ವಾಮಿನಿ. ಪತ್ನಿಗೆ ಪತಿ ಗುರು. ಪತಿಗೆ ಪತ್ನಿ ನೆರವೀವ ಸಂಗಾತಿ. ಜೀವನದ ಕಾರ್ಯವನ್ನು ಮತ್ತು ಕರ್ತವ್ಯಗಳನ್ನು ಎಸಗುವುದರಲ್ಲಿ ಒಬ್ಬರು ಮತ್ತೊಬ್ಬರ ಜೊತೆ ಸಹಕರಿಸುವರು. ಒಬ್ಬರ ಅಭಿವೃದ್ಧಿ ಮಾರ್ಗದಲ್ಲಿ ಒಬ್ಬರು ಅಡ್ಡಿಯಾಗರು. ಒಬ್ಬರಲ್ಲೆ (ಹೆಣ್ಣಾಗಲಿ, ಗಂಡಾಗಲಿ) ಭಾವಸಂಪತ್ತಿಯುಳ್ಳವರಾದರೆ, ಆ ಭಾವ ತಮ್ಮ ಸಹಭಾಗಿಗೂ ಉಂಟಾಗುವಂತೆ ಮಾಡುತ್ತಾರೆ. ಒಬ್ಬರಿಗೆ ಒಬ್ಬರು ನಿಜವಾದ ಗುರುಗಳೂ ಮಾರ್ಗದರ್ಶಕರೂ ಆಗುತ್ತಾರೆ. ಇಬ್ಬರಲ್ಲಿ ಯಾರೊಬ್ಬರ ಬುದ್ಧಿ ಭಾವ ಸಂಯಮ ಆದರ್ಶಾನುಕರಣೆ ದೈವಭಕ್ತಿ ಬ್ರಹ್ಮಚರ್ಯಗಳಿಗೆ ಎಂದಿಗೂ ಚ್ಯುತಿಬಾರದು. ಒಂದು ಸುವ್ಯವಸ್ಥಿತ ಸಮಾಜದಲ್ಲಿ, ಕುಟುಂಬಕ್ಕೆ ಜೀವನೋಪಾಯ ಕಲ್ಪಿಸುವ ಹೆಚ್ಚುವರಿ

ಹೊರೆ ಸ್ತ್ರೀಯ ಪಾಲಿಗೆ ಬರಬಾರದು. ಮಕ್ಕಳ ಪೋಷಣೆ, ಗೃಹಕೃತ್ಯನಿರ್ವಹಣೆ ಇವೇ ಆಕೆಯ ಸರ್ವಶಕ್ತಿಗಳನ್ನೂ ಪೂರ್ಣವಾಗಿ ಆಕರ್ಷಿಸಲು ಸಾಕು. ಆಕೆಗೆ ಇನ್ನೂ ಹೆಚ್ಚು ವ್ಯವಧಾನವೂ ಶಕ್ತಿಯೂ ಇದ್ದಲ್ಲಿ ಅದು ಸಮಾಜಸೇವೆಗೆ ಮೀಸಲಾಗಬೇಕು.

ವಿವಾಹ, ಗಂಡು ಹೆಣ್ಣು ಇಬ್ಬರಿಗೂ ಒಂದು ಪವಿತ್ರ ಸಂಸ್ಕಾರ. ಸತಿಪತಿಯರ ಸಂಯೋಗ, ಬರಿಯ ದೈಹಿಕ ಸಂಯೋಗವಲ್ಲ; ಅದು ಎರಡು ಆತ್ಮಗಳ ನಿಜಸಂಯೋಗ.

ಇಂಥ ಗೃಹಸ್ಥಾಶ್ರಮ ಉಳಿದ ಎಲ್ಲ ಆಶ್ರಮಗಳಿಗಿಂತ ಉತ್ತಮ.

ಗಾಂಧೀ ಸಮಾಜವಾದದಲ್ಲಿ ವಿವಾಹ ಒಂದು ನೈಸರ್ಗಿಕ ಅಂಶ. ಅದನ್ನು ಯಾವ ಅರ್ಥದಲ್ಲಿಯೂ ಕೀಳೆಂದುಭಾವಿಸುವುದು ಶುದ್ಧಾಂಗ ತಪ್ಪು. ವಿವಾಹವನ್ನು ಒಂದು ಪವಿತ್ರ ಸಂಸ್ಕಾರವೆಂದು ಭಾವಿಸಿ, ಅದರ ಅನಂತರವೂ ಆತ್ಮಸಂಯಮದ ಜೀವನವನ್ನು ನಡೆಸುವುದು ಆದರ್ಶ. ಹಿಂದೂ ಧರ್ಮದ ನಾಲ್ಕು ಆಶ್ರಮಗಳಿಗೂ ಅದೇ ಆಧಾರ. ಆದರೆ ದುರದೃಷ್ಟವಶಾತ್ ಆಧುನಿಕ ಕಾಲದಲ್ಲಿ ವಿವಾಹ ಒಂದು ದೈವಿಕ ಸಂಯೋಗವೆಂದು ಪರಿಗಣಿಸಲ್ಪಟ್ಟಿದೆ. ವಿವಾಹದ ಕಟ್ಟು ಸಡಿಲವಾದಾಗ ಸಂಯಮದ ಆಚರಣೆಯಿಲ್ಲದ ಸ್ತ್ರೀ, ವೈಮನಸ್ಯದ ಮೂಲವಾದಾಳು. ನಿಗ್ರಹವಿಲ್ಲದೆ ಹೋದಾಗ ಮಾನವರು ಪಶುಗಳಂತೆ.

ವಿವಾಹ ಮತ್ತು ಕಾಮತೃಪ್ತಿಗಳ ವಿಷಯದಲ್ಲಿ ಗಾಂಧೀಜಿ ಸ್ಪಷ್ಟ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿವಾಹದ ಗುರಿ ಸಂತಾನಾಪೇಕ್ಷೆಗಾಗಿ ಮಾತ್ರ. ಸಂತಾನಾಪೇಕ್ಷೆಯಿಲ್ಲದಿದ್ದರೆ ವಿವಾಹ ಖಂಡಿತ ಕೂಡದು. ಸಂತಾನ ಹೊಂದಬೇಕೆಂಬ ಆಸೆ ಸ್ವಾಭಾವಿಕವಾದುದು. ಅದು ತೃಪ್ತಿಯಾದ ಕೂಡಲೇ ಸಂಭೋಗವೇ ಕೂಡದು. ಕಾಮತೃಪ್ತಿಯ ವಿಷಯದಲ್ಲಿ ಸ್ತ್ರೀ ಪುರುಷರು ಒಬ್ಬರನ್ನೊಬ್ಬರು ಬಲಾತ್ಕರಿಸಬಾರದು. ಸಂತಾನಾಪೇಕ್ಷೆ ಮುಗಿದ ಕೂಡಲೇ ಕಾಮರಹಿತ ವಿವಾಹಜೀವನವನ್ನು ನಡೆಸಬೇಕು. ಕಾಮವನ್ನು ತೃಪ್ತಿಮಾಡಿಕೊಳ್ಳದೆ ಇದ್ದರೆ ದೇಹಾರೋಗ್ಯ ಕೆಡುತ್ತದೆ ಎಂಬ ಭಾವನೆ ಶುದ್ಧತಪ್ಪು. ವೀರ್ಯನಾಶದಿಂದ ಯಾರಿಗೂ ಯಾವ ಕಾಲದಲ್ಲಿಯೂ ಒಳ್ಳೆಯದಾಗಿಲ್ಲ. ದಂಪತಿಗಳಲ್ಲಿ ಯಾರೊಬ್ಬರೂ ಸಂಯಮದ ಎಲ್ಲ ಕಟ್ಟುಪಾಡುಗಳನ್ನು ಮುರಿಯುವುದಾದರೆ, ವಿವಾಹಿತ ಜೀವನ ಅಸಹ್ಯವೆನಿಸುತ್ತದೆ. ದಂಪತಿಗಳು ಒಮ್ಮತದಿಂದ, ಸಂಯೋಗ ಅಪೇಕ್ಷಣೀಯವೆಂದು ಭಾವಿಸುವುದಾದರೆ ಇತರರೆಲ್ಲರನ್ನೂ ಬಿಟ್ಟು ಅವರಿಬ್ಬರೇ ಸಂಯೋಗ ಹೊಂದುವ ಅಧಿಕಾರವನ್ನು ವಿವಾಹ ಸ್ಥಿರಪಡಿಸುತ್ತದೆಯೇ ಹೊರತು, ಇಬ್ಬರಲ್ಲಿ ಯಾರೊಬ್ಬರೂ ಮತ್ತೊಬ್ಬರ ಇಚ್ಛೆಯಂತೆ ಸಂಯೋಗಕ್ಕೆ ತಲೆಬಾಗುವಂತೆ ಬಲಾತ್ಕರಿಸುವ ಅಧಿಕಾರವನ್ನು ನೀಡುವುದಿಲ್ಲ. ಇಬ್ಬರಲ್ಲಿ ಯಾರೊಬ್ಬರಾಗಲಿ, ನೈತಿಕ ಅಥವಾ ಇತರ ಯಾವ ಕಾರಣಕ್ಕೇ ಆಗಲಿ, ಮತ್ತೊಬ್ಬರ ಇಚ್ಛೆಯಂತೆ ನಡೆಯದಿದ್ದರೆ, ವಿಚ್ಛೇದನವೇ ಆಯ್ದುಕೊಳ್ಳಬೇಕಾದ ಅವಕಾಶವೆನಿಸಿದಲ್ಲಿ, ಅದನ್ನು ಒಪ್ಪಿಕೊಳ್ಳಲು ಹಿಂದೆಗೆಯಬಾರದು. ಆದರೆ ಅದು ನೈತಿಕ ಅಥವಾ ಸಂಯಮದ ಕಾರಣಗಳಿಗಾಗಿ ಆಗಬೇಕೇ ಹೊರತು ಅನ್ಯಸುಖಲೋಲುಪತೆಗಾಗಿ ಆಗಕೂಡದು. ಪತ್ನಿ ತನ್ನ ಸ್ವತಂತ್ರವಾದ ಮಾರ್ಗವನ್ನು ಆರಿಸಿಕೊಂಡು, ತಾನು ಸರಿ ಎಂದು ಭಾವಿಸಿರುವ ಘನವಾದ ಉದ್ದೇಶಕ್ಕಾಗಿ ನಮ್ರಪೂರ್ವಕ ಧೈರ್ಯದಿಂದ ಪರಿಣಾಮಗಳನ್ನು ಎದುರಿಸಬೇಕು.

ವಿವಾಹ ಬಾಳಿನಲ್ಲಿ ಸ್ವಾಭಾವಿಕ ಅಂಶ. ಭೋಗಾಪೇಕ್ಷೆಯಿಂದ ಚೆನ್ನಾಗಿಯೂ ನಿಜವಾಗಿಯೂ ನಡೆಸುವ ವೈವಾಹಿಕ ಜೀವನ ಅನೇಕ ವಿಧಗಳಲ್ಲಿ ಅವಿವಾಹಿತ ಜೀವನಕ್ಕಿಂತ ಹೆಚ್ಚು ಕಷ್ಟವಾದುದು. ಸಮಾಜಸೇವೆಯನ್ನು ಅಜೀವ ಪರ್ಯಂತ ಮಾಡುವ ದೃಷ್ಟಿಯಿಂದ ಕೆಲವು ಮಹಿಳೆಯರು ಅವಿವಾಹಿತರಾಗಿಯೇ ಉಳಿಯಲು ಬಯಸಬಹುದು. ಅಂಥವರೂ ವಿವಾಹಿತರಾಗಿ ಪತಿಪತ್ನಿಯರಿಬ್ಬರೂ ಪರಸ್ಪರ ಸಹಾಯಕರಾಗಿ ಸಮಾಜಸೇವೆಯನ್ನು ನಡೆಸುವುದು ಉತ್ತಮ. ವಿವಾಹಿತರಾಗಿ ಕುಟುಂಬ ಸೇವೆ ನಡೆಸುವುದು ನಿರರ್ಥಕವಲ್ಲ. ರಾಷ್ಟ್ರಸೇವೆ ಎಂದರೆ ಮಾನವಸೇವೆ. ಹಾಗೆಯೇ ನಿಸ್ವಾರ್ಥ ಕುಟುಂಬ ಸೇವೆಯೂ ರಾಷ್ಟ್ರಸೇವೆ ಎನಿಸೀತು. ಧರ್ಮ ಅರ್ಥ ಕಾಮಗಳಲ್ಲಿ, ಪತಿಪತ್ನಿಯರಲ್ಲಿ ಸಹಮತವಿರಬೇಕೆಂಬುದು ಹಿಂದೂ ವಿವಾಹದ ಆರ್ಷೇಯ ಕಟ್ಟಳೆ. ಆತ್ಮಸಾಕ್ಷಿಗೆ ವಿರೋಧವಾದ ಕಟ್ಟಳೆಯನ್ನು ಗಂಡನಾಗಲೀ ಹೆಂಡತಿಯಾಗಲೀ ನಡೆಸಬೇಕಾದುದಿಲ್ಲ. ಗಂಡಹೆಂಡಿರು ಪರಸ್ಪರ ಪ್ರೇಮವುಳ್ಳವರಾಗಿ ವಶವರ್ತಿಗಳಾಗಿರಬೇಕು. ಹಿಂದೂ ಧರ್ಮ ಪುರುಷ–ಸ್ತ್ರೀ ಇಬ್ಬರಿಗೂ ಅವರು ಅಪೇಕ್ಷಿಸುವ ರೀತಿಯಲ್ಲಿ ಅವರ ಹುಟ್ಟಿನ ಏಕಮಾತ್ರ ಗುರಿಯಾದ ಆತ್ಮಸಾಕ್ಷಾತ್ಕಾರವನ್ನು ಹೊಂದಲು ಪೂರ್ಣ ವ್ಯಕ್ತಿಸ್ವಾತಂತ್ರ್ಯವನ್ನು ನೀಡುತ್ತದೆ. ಸ್ತ್ರೀಪುರುಷರಿಗೆ, ಹಿಂದೂ ವಿಧವೆಯರು ಇಂದ್ರಿಯ ನಿಗ್ರಹಮಾಡಿ ಕುಟುಂಬದ ಮತ್ತು ಸಮಾಜದ ಸೇವೆ ಸಲ್ಲಿಸುತ್ತಿರುವುದು ಉನ್ನತ ಧ್ಯೇಯದಿಂದಲೆ. ಆದರೆ ಬಾಲವಿಧವೆಯರು ಪುನರ್ವಿವಾಹವಾಗಬಹುದು. ಯಾರೇ ಆಗಲಿ, ಸಂಯಮ ಸಾಧ್ಯವಿಲ್ಲದಿದ್ದರೆ ಪುನರ್ವಿವಾಹಿತರಾಗಿ ಗೃಹಸ್ಥಾಶ್ರಮ ನಡೆಸಬೇಕೇ ಹೊರತು ಸ್ವೇಚ್ಛಾಚಾರಿಗಳಾಗಬಾರದು.

ಗಾಂಧೀಜಿಯ ದೃಷ್ಟಿಯಲ್ಲಿ ಬ್ರಹ್ಮಚರ್ಯವೆಂಬುದು ಮನುಷ್ಯನಿಗೆ ದೊರಕಿರುವ ಅತ್ಯಮೂಲ್ಯ ವಸ್ತು: ಭಾರತೀಯ ಸಮಾಜವಿಜ್ಞಾನ ಜಗತ್ತಿಗೆ ಕೊಟ್ಟಿರುವ ಶುಕ್ರಸಮ ಪ್ರಕಾಶಮಾನವಾದ ತೇಜೋನಿಧಿ. ಮೇಲುನೋಟಕ್ಕೆ ಬರಿಯ ಜನನೇಂದ್ರಿಯ ನಿಯಂತ್ರಣವಷ್ಟೇ ಬ್ರಹ್ಮಚರ್ಯವೆಂದು ತೋರಿದರೂ ಅದಕ್ಕೆ ಎಲ್ಲ ಬಗೆಯ ನಿಗ್ರಹಗಳೂ ಅಗತ್ಯವಾಗುತ್ತವೆ. ಧ್ಯೇಯಸಾಧನೆಯ ಉತ್ಕಟೇಚ್ಛೆಯ ಜೊತೆಯಲ್ಲಿಯೇ ಅನುಷ್ಠಾನವೂ ಅಗತ್ಯ. ಬ್ರಹ್ಮಚಾರಿ ಮನೋ ವಾಕ್ ಕಾಯಗಳನ್ನು ನಿಯಂತ್ರಿಸಬೇಕು. ಆಲೋಚನೆಯ ಮೇಲೆ ನಿಯಂತ್ರಣವಿಲ್ಲದಿದ್ದರೆ ಉಳಿದೆರಡರ ನಿಯಂತ್ರಣ ವ್ಯರ್ಥ. ಬ್ರಹ್ಮಚಾರಿ ನಿರೋಗಿಯೂ ದೀರ್ಘಾಯುವೂ ಆಗಿರುವನು. ಅವನಿಗೆ ಮುಪ್ಪೂ ಬುದ್ಧಿಮಾಂದ್ಯವೂ ಇಲ್ಲ. ಗೀತೆಯಲ್ಲಿ ಬಣ್ಣಿಸಿದ ಸ್ಥಿತಪ್ರಜ್ಞನ ಲಕ್ಷಣಗಳನ್ನೆಲ್ಲ ಅವನು ತೋರುವನು.

ಬ್ರಹ್ಮಚರ್ಯಕ್ಕೆ ಸಾಧನ ಯಾವುದು? ಸತ್ಯದಲ್ಲಿ ಪರಮಾತ್ಮನಲ್ಲಿ ಅವಲಂಬನೆ. ವಿವರವಾಗಿ ಹೇಳುವುದಾದರೆ ಅಹಿಂಸೆ, ಸತ್ಯ, ಅಸ್ತೇಯ (ಇತರರದನ್ನು ಅಪಹರಿಸದಿರುವುದು), ಬ್ರಹ್ಮಚರ್ಯ, ಅಪರಿಗ್ರಹ, ಕಾಯಕ, ಜಿಹ್ವಾ ನಿಗ್ರಹ, ಅಭಯ, ಸರ್ವಧರ್ಮಸಮನ್ವಯ, ಸ್ವದೇಶಿ ಮತ್ತು ಅಸ್ಪೃಶ್ಯತಾ ನಿವಾರಣೆ ಈ ಎಲ್ಲ ನಿಯಮಗಳನ್ನೂ ತಪ್ಪದೆ ಆಚರಿಸುವವನು ಮಾತ್ರ ಬ್ರಹ್ಮಚಾರಿ.

ಬ್ರಹ್ಮಚರ್ಯದ ಗುರಿ ಯಾವುದು? ಪರಮಾತ್ಮಸಾನ್ನಿಧ್ಯ ಅಥವಾ ಬ್ರಹ್ಮಸಾಮೀಪ್ಯ. ಬ್ರಹ್ಮಚರ್ಯ ಪಾಲನೆಗೆ ನೇರವಾದ ದಾರಿ ಪರಮಾತ್ಮಸ್ಮರಣೆ, ರಾಮನಾಮ.

ಇಂಥ ಆದರ್ಶ ಬ್ರಹ್ಮಚರ್ಯ, ಸ್ಥಿತಪ್ರಜ್ಞರಿಗೆ ಮಾತ್ರ ಸಾಧ್ಯವೆಂದು ಉಳಿದವರು ಇಂದ್ರಿಯಗಳ ಸ್ವೇಚ್ಛಾವರ್ತನೆಗೆ ಬಲಿಯಾಗಬಾರದು. ಸಂಯಮ ಎಲ್ಲರಿಗೂ ಆವಶ್ಯಕ. ಗೃಹಸ್ಥರಾದ ಸ್ತ್ರೀಪುರುಷರು ಸಹ ಸಂತಾನಾಪೇಕ್ಷೆ ತೀರಿದ ಅನಂತರ ಬ್ರಹ್ಮಚರ್ಯವನ್ನು ಅನುಸರಿಸುವುದರಿಂದ ಅವರ ಬಾಳಿನಲ್ಲಿ ಹೆಚ್ಚು ಕಾಂತಿಯೂ ಸುಖವೂ ದೇಹದಲ್ಲಿ ಬಲವೃದ್ಧಿಯೂ ಉಂಟಾಗುವುದಲ್ಲದೆ, ದಂಪತಿಗಳಾದುದೇ ಇಂದ್ರಿಯ ಲಂಪಟತನಕ್ಕಾಗಿ ಎಂಬ ತಪ್ಪು ಭಾವ ಮರೆಯಾಗಿ ಪರಸ್ಪರರಲ್ಲಿರುವ ಗುಣೌನ್ನತ್ಯವನ್ನರಿತು ಸೇವಾಕಾರ್ಯದಲ್ಲಿ ಒಬ್ಬರಿಗೊಬ್ಬರು ಮಿತ್ರರಾಗಿ ಪರಸ್ಪರ ಆತ್ಮೋದ್ಧಾರಕ್ಕೆ ತೊಡಗಲು ಸಹಾಯಕವಾಗುವುದು. ಸ್ವತಃಗಾಂಧೀಜಿಯೇ ತಮ್ಮ ಮೂವತ್ತೈದನೆಯ ವಯಸ್ಸಿನಿಂದಲೇ ಕಸ್ತೂರ ಬಾ ಅವರೊಂದಿಗೆ ದೈಹಿಕ ಸಂಪರ್ಕವನ್ನು ತೊರೆದರಾದರೂ ಶ್ರೀರಾಮ ಸೀತೆಯರಂತೆ ಆದರ್ಶ ದಂಪತಿಗಳಾಗಿದ್ದರು.

ಸಂತತಿನಿಯಂತ್ರಣದ ವಿಷಯದಲ್ಲಿ ಗಾಂಧೀಜಿ ಸ್ಪಷ್ಟವಾದ ಮತ್ತು ಖಚಿತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಜನನವನ್ನು ನಿಯಂತ್ರಿಸಬೇಕೆಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಪ್ರಾಚೀನಕಾಲದಿಂದಲೂ ಇದಕ್ಕಾಗಿ ಅನುಸರಿಸಿದ ಮಾರ್ಗ ಬ್ರಹ್ಮಚರ್ಯ ಅಥವಾ ಸಂಯಮ. ಸಂತತಿ ನಿಯಂತ್ರಕರು (ಸರ್ಕಾರವೇ ಆಗಲಿ, ಅದರ ಪ್ರಚಾರಕರೇ ಆಗಲಿ) ಕೃತಕ ಉಪಾಯಗಳನ್ನು ಹುಡುಕುವ ಬದಲು ಆತ್ಮನಿಗ್ರಹದ ಸಾಧನಗಳನ್ನು ಶೋಧಿಸಿದರೆ ಮಾನವ ಕುಲವೇ ಅವರಿಗೆ ಋಣಿಯಾಗಿರುವುದು. ಸ್ತ್ರೀಪುರುಷ ಸಂಯೋಗ ಬರಿ ಭೋಗಕ್ಕಾಗಿರದೆ ಸಂತತಿ ಜನನಕ್ಕಾಗಿದೆ. ಸಂತತಿಜನನದ ಇಚ್ಛೆಯಿಲ್ಲದೆ ಮಾಡಿದ ಸ್ತ್ರೀಸಂಭೋಗ ಮಹಾಪರಾಧ. ಕೃತಕ ಉಪಾಯಗಳಿಂದ ದುರಾಚಾರಕ್ಕೆ ಉತ್ತೇಜನ ದೊರೆಯುತ್ತದೆ. ಅಲ್ಲದೆ ಅಂಥ ಉಪಾಯಗಳ ಅಂಗೀಕಾರದಿಂದ ನಪುಂಸಕತ್ವವೂ ಸ್ನಾಯು ದೌರ್ಬಲ್ಯವೂ ಹುಚ್ಚೂ ಉಂಟಾಗುತ್ತದೆ. ಕೃತಕ ಉಪಾಯಗಳನ್ನು ಪುರಸ್ಕರಿಸುವ ಜನರು, ತಮ್ಮ ಅಪಾಯಕರಚಟುವಟಿಕೆಯನ್ನು ತಡೆಹಿಡಿದು, ವಿವಾಹಿತರಿಗೂ ಅವಿವಾಹಿತರಿಗೂ ಬ್ರಹ್ಮಚರ್ಯೆಯಿಂದಾಗುವ ಹಿತವನ್ನು ಬಿಂಬಿಸಬೇಕು. ಸಂತತಿ ನಿಯಮನಕ್ಕೆ ಇದೊಂದೇ ನೇರವಾದ ಹಾಗೂ ಉದಾತ್ತವಾದ ಉಪಾಯ.

ಪ್ರಕೃತಿಯ ನಿಯಮ ಕಠೋರ. ತಾನು ಎಸಗಿದ ಕರ್ಮಗಳ ಫಲವನ್ನು ತಪ್ಪಿಸಿಕೊಳ್ಳಲೆತ್ನಿಸುವುದು ತಪ್ಪು ಹಾಗೂ ಅನೀತಿ. ಯಾವ ಸಮಾಜ, ಆಗಲೇ ಅನೇಕ ಕಾರಣಗಳಿಂದ ಸತ್ತ್ವಹೀನವಾಗಿದೆಯೋ ಅದು ಕೃತಕ ಸಾಧನಗಳಿಂದ ಇನ್ನೂ ಸತ್ತ್ವಹೀನವಾಗುತ್ತದೆ. ಕೃತಕ ಸಾಧನಗಳಿಂದ ಸ್ತ್ರೀಯನ್ನು ಪುರುಷ ಮತ್ತಷ್ಟು ತನ್ನ ಭೋಗಪಾಲನೆಯ ಸಾಮಗ್ರಿಮಾಡಿಕೊಂಡು ಅಧೋಗತಿಗಿಳಿಸುತ್ತಾನೆ. ಪುರುಷ ನಿಜವಾಗಿಯೂ ಸ್ತ್ರೀಗೆ ಒಳ್ಳೆಯದನ್ನು ಮಾಡಲು ಬಯಸುವುದಾದರೆ ಅವನು ತನ್ನ ಮೇಲೆ ನಿಗ್ರಹವನ್ನು ಹಾಕಿಕೊಳ್ಳಲಿ. ಅತಿಸಂತಾನ ಪಾಪಕರ. ಆದರೆ ತಮ್ಮ ಕರ್ಮದ ಪರಿಣಾಮವನ್ನು ತಪ್ಪಿಸಿಕೊಳ್ಳಲೆತ್ನಿಸುವುದು ಇನ್ನೂ ಹೆಚ್ಚು ಪಾಪಕರ. ಇದರಿಂದ ಮಾನವನ ಮಾನವತ್ವವೇ ಹೋಗುತ್ತದೆ.

ಜನನನಿಯಂತ್ರಣ ಪ್ರತಿಪಾದಕರು ಕೃತಕಸಾಧನಗಳ ಮೂಲಕ ಮಾನವನ ಸರ್ವಕಾಲವೂ ಇಂದ್ರಿಯಲಂಪಟನಾಗಲು ಸೌಕರ್ಯವನ್ನು ಒದಗಿಸುತ್ತಿದ್ದಾರೇ ಹೊರತು ಒಂದು ಸಲವಾದರೂ ಸಂಯಮದ ಆದರ್ಶವನ್ನು ಜನರ ಮುಂದೆ ಇಡುವುದು

ಆವಶ್ಯಕವೆಂಬುದನ್ನು ಪರಿಗಣಿಸಿಲ್ಲ. ಕೃತಕೋಪಾಯಗಳಿಗೆ ಅನೇಕ ಕೋಟಿ ರೂಪಾಯಿಗಳನ್ನು ವೆಚ್ಚಮಾಡುವಂತೆ ಸಂಯಮ ಸಂತಾನ ನಿಯಂತ್ರಣಕ್ಕೂ ಸ್ತ್ರೀ ಪುರುಷರು ಯಾವಾಗಲೂ ಭೋಗಲಾಲಸರೂ ಕಾಮುಕರೂ ಆದ ಪಶುಗಳಾಗಿರ ಬೇಕೆಂದು ನಿರ್ಣಯಿಸುವುದು ಸಮಂಜಸವಾಗಲಾರದು. ನಮ್ಮ ವಿಜ್ಞಾನ ಇಷ್ಟೊಂದು ಬೆಳೆದಿದ್ದರೂ ಮನುಷ್ಯದೇಹದ ರಹಸ್ಯದ ವಿಷಯ ನಮಗೆ ತಿಳಿದಿರುವುದು ಬಲು ಕಡಿಮೆ. ಅದರ ಮೇಲೆ ಈ ಬಗೆಯ ಕೃತಕ ಆಘಾತಗಳಿಂದ, ಮುಂದಲ ಜನಾಂಗದ ಮೇಲೆ ಏನು ಪರಿಣಾಮವಾಗುವುದೋ ಎಂಬ ಶಂಕೆ ಅನಿವಾರ್ಯ.

ಇವು ಸಮಾಜದ ಬಗ್ಗೆ ಗಾಂಧೀಜಿ ತಾಳಿದ್ದ ಕೆಲವು ಮೂಲಭೂತ ಅಭಿಪ್ರಾಯಗಳು.

(ಜಿ.ಆರ್.ಎ.)

**ಗಾಂಧೀ ಸಾಹಿತ್ಯ:** ಗಾಂಧೀಜಿ ತಮ್ಮ ಜೀವನದಲ್ಲಿ ಸುಮಾರು ಆರು ದಶಕಗಳ ಕಾಲವನ್ನು (1880–1948) ಒಂದಲ್ಲ ಒಂದು ಬಗೆಯ ಲೋಕಹಿತಕಾರ್ಯಕ್ಕೆ ವಿನಿಯೋಗಿಸಿದರು. ಅಂಥ ಸಮಯಗಳಲ್ಲಿ ಅವರು ಆಡಿದ ಮಾತು, ಬರೆದ ಪತ್ರ, ಮಾಡಿದ ಭಾಷಣ–ಇವೆಲ್ಲವನ್ನೂ ಒಟ್ಟಾಗಿ ಗಾಂಧೀ ಸಾಹಿತ್ಯವೆಂದು ಕರೆಯಬಹುದು.

ಅವರ ಬರೆಹಗಳ ರಾಶಿ ಬೆರಗುಪಡಿಸುವಷ್ಟಿದ್ದರೂ ಅದಾವುದನ್ನೂ ಅವರು ಬರೆಯಬೇಕೆಂದೇ ಬರೆದವರಲ್ಲ. ಅವರು ನಿಜಕ್ಕೂ ಯಾವ ಒಂದು ತತ್ತ್ವಪಂಥ ವನ್ನಾಗಲೀ ಜೀವನದರ್ಶನವನ್ನಾಗಲೀ ಸ್ಥಾಪಿಸ ಹೊರಟವರೂ ಅಲ್ಲ. ಹಾಗೆ ಮಾಡಲು ಅವರಿಗೆ ಸಾಕಷ್ಟು ಕಾಲಾವಕಾಶವಾಗಲೀ ಮಾಡುವ ಮನೋಧರ್ಮವಾಗಲೀ ಇರಲಿಲ್ಲ. ಅವರಿಗೆ ಸತ್ಯ ಮತ್ತು ಅಹಿಂಸೆಯಲ್ಲಿ ಅಪಾರ ಶ್ರದ್ಧೆ ಇತ್ತಾಗಿ ಅವು ತೋರಿದ ಮಾರ್ಗದಲ್ಲಿ ಅವರು ನಡೆಯಲು ಯತ್ನಿಸಿದರು; ತಮ್ಮ ಸುತ್ತಣ ಜನತೆಯನ್ನೂ ನಡೆಯುವಂತೆ ಪ್ರೇರಿಸಿದರು. ಹೀಗೆ ಮಾಡುವಾಗ ತಮಗೆ ಸತ್ಯವೆಂದು ಕಂಡದ್ದನ್ನು ಹೇಳಿದರು. ಇದೇ ಗಾಂಧೀ ತತ್ತ್ವ, ಗಾಂಧೀ ಸಾಹಿತ್ಯ.

ಗಾಂಧೀಜಿ ಜೀವನದ ಎಲ್ಲ ಕ್ಷೇತ್ರಗಳನ್ನು ಹೊಕ್ಕು ನೋಡಿದ್ದಾರೆ. ರಾಜಕೀಯ ಸಾಮಾಜಿಕ, ಧಾರ್ಮಿಕ, ಸಾಂಸಾರಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮಸ್ಯೆಗಳನ್ನವರು ಎದುರಿಸಿದ್ದಾರೆ. ಭಾಷೆ, ಸಾಹಿತ್ಯ, ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ, ಕಾರ್ಮಿಕರು–ಈ ಎಲ್ಲ ಕ್ಷೇತ್ರಗಳಲ್ಲೂ ಅವರು ಸತ್ಯಾನ್ವೇಷಕರಾಗಿ ಪ್ರವೇಶಿಸಿದ್ದುಂಟು. ಕೊನೆಗೆ ವ್ಯಕ್ತಿಜೀವನದಲ್ಲಿ ಆಹಾರ, ಉಡುಪು, ನಡೆವಳಿಕೆ ಹೇಗಿರಬೇಕೆಂಬುದರ ಬಗೆಗೂ ಅವರು ತೀವ್ರ ಆಸಕ್ತಿಯನ್ನು ತೋರಿಸಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಸಾಮಾಜಿಕವಾಗಿ ಶತಮಾನಗಳಿಂದ ಕಂಡು ಬರುತ್ತಿದ್ದ ಸಮಸ್ಯೆಗಳಿಗೆ ಸಮಂಜಸವಾದ ಉತ್ತರಗಳನ್ನು ಹುಡುಕಲು ಅವರು ಪ್ರಯತ್ನಿಸಿದ್ದಾರಾದರೂ ಅವರ ಅಭಿಪ್ರಾಯಗಳು ಯಾವ ಸಂಪ್ರದಾಯದ ಕಟ್ಟಿಗೂ ಒಳಗಾಗಿಲ್ಲ.

ಅವರ ಮಾರ್ಗವೂ ಅಷ್ಟೆ. ಸಮಸ್ಯೆ ದೊಡ್ಡದಾಗಿರಲಿ, ಸಣ್ಣದಾಗಿರಲಿ, ಪರಿಣಾಮ ಕಾರಿಯೂ ನೂತನವೂ ಆಗಿರುತ್ತಿತ್ತು. ಹೊಸ ಪ್ರಯೋಗಗಳಿಂದ ಹೊಳೆಯುತ್ತಿದ್ದ ಸತ್ಯಾಂಶಗಳಿಗೆ ಅವರೆಂದು ಕಣ್ಣು ಮುಚ್ಚಿಕೊಂಡವರಲ್ಲ.

ತೋರಿಕೆಯ ಸಾಮಂಜಸ್ಯಕ್ಕೆ ಅವರೆಂದೂ ಬೆಲೆ ಕೊಟ್ಟವರಲ್ಲ. ಆದ್ದರಿಂದ, ಮೇಲೆ ಮೇಲೆ ನೋಡುವವರಿಗೆ ಅವರಲ್ಲಿ ಅಸಮಂಜಸತೆ ಕಾಣಬರಬಹುದು. ತಮ್ಮದು ತಪ್ಪು ದಾರಿ ಎಂದು ಕಂಡುಬಂದಾಗ ಅವರು ನಾಚದೆ ಸಾರ್ವಜನಿಕವಾಗಿ ಅದನ್ನು ಒಪ್ಪಿಕೊಂಡು ಬೇರೆ ಮಾರ್ಗವನ್ನು ಅನುಸರಿಸುತ್ತಿದ್ದರು. ಅದೇ, ತಮ್ಮ ಮಾರ್ಗಸರಿಯೆನಿಸಿದಾಗ ಎಂಥ ಒತ್ತಾಯಕ್ಕೂ ಅವರು ಮಣಿದು ತಮ್ಮ ದಾರಿಯನ್ನು ಬದಲಿಸುತ್ತಿರಲಿಲ್ಲ. ಇದರಿಂದಾಗಿ ಅವರ ಅನೇಕ ಧೋರಣೆಗಳು ಬಹುವೇಳೆ ಅವರ ಟೀಕಾಕಾರರನ್ನು ಬೆರಗುಗೊಳಿಸುತ್ತಿದ್ದುವು. ಆದ್ದರಿಂದ ಗಾಂಧಿಯವರ ಜೀವನದ ನಿಲುವು, ತತ್ತ್ವಗಳನ್ನು ಅರಿಯಲು ಅವೆಲ್ಲವನ್ನೂ ಸಮಗ್ರವಾಗಿ ನೋಡಬೇಕಾಗುತ್ತದೆ. ಆಂಶಿಕವಾದ ಯಾವ ಅಧ್ಯಯನವೂ ಅವರ ಬೃಹದ್ ಜೀವನ, ಸಾಧನೆಗಳಿಗೆ ಸರಿಯಾದ ತಾತ್ಪರ್ಯವನ್ನು ಸೂಚಿಸವು.

**ಗಾಂಧೀ ಸಾಹಿತ್ಯ ಪ್ರಕಟಣೆ** : ಗಾಂಧೀಜಿ ಬರೆದ, ಆಡಿದ ಮಾತು ಅಪಾರ. ಅವು ಸತ್ಯದ ಜ್ಯೋತಿಯಲ್ಲಿ ಅಹಿಂಸೆಯ ಮೂಸೆಯಿಂದ ಉದ್ಭವಿಸಿ ಬಂದವು. ಅವು ಬದುಕಿನ ಅಂತರಾಳವನ್ನು ಸ್ಪರ್ಶಿಸಿ, ಜನಮಾನಸವನ್ನು ಮೀಟಿ ಎಬ್ಬುತ್ತಿದ್ದಂಥವು. ಐಹಿಕದ ಸಮಸ್ತ ವಿಷಯಗಳನ್ನು ಒಳಗೊಂಡು ಪರಮಾರ್ಥದ ಕಡೆಗೆ ಬಿಡದೆ ಸಾಗುತ್ತಿದ್ದ ಅವರ ವಿಚಾರವ್ಯಾಪ್ತಿ ಆಕಾಶದಂತೆ ಅನಂತ. ಅವರು ತಮ್ಮ ಚಿಂತನ ಮತ್ತು ವಿಚಾರಗಳನ್ನು ಸಂಯಮಕ್ಕೆ ಒಳಪಡಿಸಿಕೊಂಡು ಅವನ್ನು ಸಂಯಮದಿಂದಲೇ ಅಭಿವ್ಯಕ್ತಿಗಳಿಸಿದ ಮಾತು ಎಣೆಯಿಲ್ಲದ ಶಕ್ತಿಯಿಂದ ಹೊಮ್ಮಿಬಂದಂತೆಯೇ ಪ್ರಮಾಣದಲ್ಲಿಯೂ ಅಪಾರವಾಯಿತು. ಅವರ ಜೀವಮಾನ ಕಾಲದಲ್ಲಿ ಸೃಷ್ಟಿಯಾದ ಈ ಸಾಹಿತ್ಯರಾಶಿ ಯಾವ ಒಬ್ಬ ಸಾಹಿತಿಯ ಜೀವಮಾನಕಾಲದಲ್ಲಿ ಸೃಷ್ಟಿಯಾದ, ಯಾವ ಒಬ್ಬನೂ ಸೃಷ್ಟಿಸಬಹುದಾದ ಸಾಹಿತ್ಯದ ಪ್ರಮಾಣಕ್ಕಿಂತ ಯಾವ ವಿಧದಲ್ಲಿಯೂ ಕಡಿಮೆಯಿಲ್ಲ.

ಗಾಂಧಿಯವರೇ ಸ್ಥಾಪಿಸಿದ ನವಜೀವನ ನ್ಯಾಸದವರು ಅವರ ಬರೆಹಗಳನ್ನು ಅಚ್ಚುಹಾಕಿದ್ದಾರೆ. ಅವುಗಳೆಲ್ಲ ಗಾಂಧಿಯವರು ಭಾರತದಲ್ಲಿ ಕೈಗೊಂಡ ಕಾರ್ಯ ಕ್ರಮಗಳನ್ನು ಕುರಿತವಾಗಿವೆ. ನವಜೀವನ, ಯಂಗ್ ಇಂಡಿಯ, ಹರಿಜನ ಮೊದಲಾದ ಪತ್ರಿಕೆಯಲ್ಲಿ ಪ್ರಕಟವಾದ ಮತ್ತು ಮಿಕ್ಕಂತೆ ಅನೇಕ ಕಡೆ ಹಂಚಿಹೋಗಿರುವ ಗಾಂಧೀ ಸಾಹಿತ್ಯವನ್ನು ಈ ಸಂಸ್ಥೆ ಒಂದೆಡೆ ಸಂಗ್ರಹಿಸಿ ಅಚ್ಚು ಮಾಡಿದೆ. ಹೀಗೆ ಮಾಡುವಾಗ ಸತ್ಯ, ದೇವರು, ಅಹಿಂಸೆ, ಸತ್ಯಾಗ್ರಹ, ಸ್ವರಾಜ್ಯ, ಮಹಿಳೆಯರಿಗೆ ವಿದ್ಯಾರ್ಥಿಗಳಿಗೆ–ಹೀಗೆ ವಿಷಯಕ್ಕೆ ತಕ್ಕಂತೆ ಬರೆಹಗಳನ್ನು ಕೂಡಿಸಿ ಅಚ್ಚುಮಾಡಲಾಗಿದೆ. ಹೀಗೆ ಕೂಡಿಸುವಾಗ ಇಡೀ ಬರೆವಣಿಗೆಯ ಉಚಿತ ಭಾಗವನ್ನು ಮಾತ್ರ ಉದ್ಧರಿಸಿರುವುದರಿಂದ ಎಷ್ಟೋ ಕಡೆ ಗಾಂಧಿಯವರ ಸಮಗ್ರ ಬರೆವಣಿಗೆ ಒಂದು ಕಡೆ ಸಿಗುವಂತಾಗಿಲ್ಲ.

ಇನ್ನೂ ಗಾಂಧೀ ಸ್ಮಾರಕ ನಿಧಿಯವರು ಅವರ ಪತ್ರಗಳಲ್ಲಿ ಬಹುಪಾಲನ್ನು ಅಚ್ಚುಮಾಡಿದ್ದಾರೆ. ಇಲ್ಲಿಯೂ ಅವರ ಎಲ್ಲ ಪತ್ರಗಳು ಸಿಗುವುದಿಲ್ಲ.

ಗಾಂಧಿಯವರ ಎಲ್ಲ ಬರೆಹಗಳನ್ನೂ ಅಚ್ಚುಮಾಡುವ ದೊಡ್ಡ ಕೆಲಸವನ್ನು ಭಾರತ ಸರ್ಕಾರ ಕೈಗೆತ್ತಿಕೊಂಡು, ನವಜೀವನ ನ್ಯಾಸದ ಸಹಾಯದಿಂದಲೂ ಒಂದು ಪರಿಣತ ಸಂಪಾದಕ ಮಂಡಳಿಯ ಸಹಾಯದಿಂದಲೂ ಪ್ರಕಟಣೆಯ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ಮಾಲೆಯ ಮೊದಲ ಸಂಪುಟ ಅಚ್ಚಾದದ್ದು 1958ರ ಜನವರಿ 26ರಂದು. ಅದರಲ್ಲಿ 1884–1896ರ ವರೆಗಿನ ಗಾಂಧೀ ಬರೆಹಗಳು ಅಚ್ಚಾಗಿವೆ. ಮೊದಲ ಎಣಿಕೆಯಂತೆ ಗಾಂಧೀ ಸಾಹಿತ್ಯ 50 ಸಂಪುಟಗಳಾಗಬಹುದೆಂಬ ನಿರೀಕ್ಷೆ ಇತ್ತು. ಈಗ ಅವುಗಳ ಸಂಖ್ಯೆ 75ಕ್ಕೆ ಏರಿದೆ. 1971ರ ಜುಲೈ ತಿಂಗಳಲ್ಲಿ ಈ ಸರಣಿಯಲ್ಲಿ 45 ಸಂಪುಟಗಳು ಅಚ್ಚಾಗಿವೆ.

ಇಲ್ಲಿನ ಕ್ರಮ ಹೀಗಿದೆ. ಸಾಹಿತ್ಯ ಎಂದೆಂದು ಹುಟ್ಟಿತೋ ಅಂದಂದಿನ ಎಣಿಕೆಯಲ್ಲಿ, ಕಾಲಾನುಕ್ರಮವಾಗಿ, ಗಾಂಧಿಯವರ ಬರೆಹಗಳನ್ನು ಇಲ್ಲಿ ಅಚ್ಚುಹಾಕಲಾಗಿದೆ. ಅವರ ಕಾಗದಪತ್ರಗಳು, ಭಾಷಣಗಳು, ದಿನಚರಿ, ಪತ್ರಿಕೆಗೆ ಬರೆದ ಲೇಖನಗಳು, ಅಹವಾಲುಗಳು, ತಂತಿಗಳು, ಪ್ರವಚನಗಳು–ಹೀಗೆ ಗಾಂಧಿಯವರ ಎಲ್ಲ ಲೇಖನಗಳನ್ನೂ ಈ ಸಂಪುಟಗಳು ಒಳಗೊಂಡಿವೆ. ಈ ಸರಣಿ ಪೂರ್ಣವಾಗಿ ಅಚ್ಚಾದಾಗ ಗಾಂಧೀ ದರ್ಶನವೇನೆಂಬುದನ್ನು ನಿರ್ಣಯಿಸುವ ಸಂಶೋಧಕರಿಗೆ ತುಂಬ ಸಹಾಯವಾಗುತ್ತದೆ.

ಕನ್ನಡದಲ್ಲೂ ಗಾಂಧೀ ಸಾಹಿತ್ಯವನ್ನು ಪ್ರಕಟಿಸುವ ಯೋಜನೆ ಯಶಸ್ವಿಯಾಗಿ ಮುಂದುವರಿಯುತ್ತದೆ. ಗಾಂಧೀ ಸ್ಮಾರಕ ನಿಧಿಯವರು ಕನ್ನಡ ಗಾಂಧೀ ಸಾಹಿತ್ಯ ಮಾಲೆ ಎಂಬ ಹೆಸರಿನಲ್ಲಿ ಈಗಾಗಲೆ 15ಕ್ಕೂ ಮೇಲ್ಪಟ್ಟು ಗ್ರಂಥಗಳನ್ನು ಹೊರ ತಂದಿದ್ದಾರೆ. 1. ಸಂಕ್ಷಿಪ್ತ ಆತ್ಮಕಥೆ ಮತ್ತು ಹಿಂದ್ ಸ್ವರಾಜ್ 2. ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ 3. ಗೀತಾಮಾತೆ 4. ಸತ್ಯ–ಅಹಿಂಸೆ 5. ಧರ್ಮ–ನೀತಿ 6. ಸಮಾಜ ಧರ್ಮ 7. ಜೀವನ ಶಿಕ್ಷಣ 8. ಅರ್ಥವಿಚಾರ 9. ಸತ್ಯಾಗ್ರಹ 10. ಮಹಿಳೆಯರು 11. ಪತ್ರಗುಚ್ಛ–1 12. ಪತ್ರಗುಚ್ಛ–2 13. ನನ್ನ ಸಮಕಾಲೀನರು 14. ರಾಜನೀತಿ 15. ಪತ್ರಗುಚ್ಛ–3 ಈ ಶೀರ್ಷಿಕೆಗಳನ್ನು ನೋಡಿದರೆ ಕನ್ನಡದ ಈ ಗ್ರಂಥಗಳಿಗೆ ಮಾದರಿ ನವಜೀವನ ನ್ಯಾಸದವರ ಗ್ರಂಥಗಳು ಎಂಬುದು ಸ್ಪಷ್ಟವಾಗುತ್ತದೆ.

**ಗಾಂಧೀ ಸಾಹಿತ್ಯದ ಪ್ರಕಾರಗಳು** : ಗಾಂಧೀ ಸಾಹಿತ್ಯವನ್ನು, ಸಹಜವಾಗಿಯೇ, ಗಾಂಧೀಜಿ ಸ್ವತಃ ಬರೆದುವು ಮತ್ತು ಅವರು ಆಡಿದ ಮಾತಿನ ಮೂಲಕ ವ್ಯಕ್ತವಾಗಿ ಗ್ರಂಥರೂಪ ಪಡೆದುವು. ಹಾಗೂ ಗಾಂಧೀಜೀವನ–ಚಿಂತನ ಇವುಗಳ ಬಗೆಗೆ ಇತರರು ಬರೆದುವು ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಇಲ್ಲಿ ಗಾಂಧೀಯವರೇ ಬರೆದು ಗ್ರಂಥರೂಪಕ್ಕೆ ಬಂದುವುಗಳ ಸಂಗ್ರಹ ಪರಿಚಯವನ್ನು ಕೊಡಲಾಗಿದೆ. ಅವುಗಳಲ್ಲಿ 1. ಹಿಂದ್ ಸ್ವರಾಜ್ಯ, 2. ಸರ್ವೋದಯ, 3. ನೀತಿ ಧರ್ಮ, 4. ಆರೋಗ್ಯ ಮಾರ್ಗದರ್ಶಿನೀ, 5. ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ, 6. ನನ್ನ ಸತ್ಯಾನ್ವೇಷಣೆ ಅಥವಾ ಆತ್ಮಕಥೆ, 7. ಅನಾಸಕ್ತಿಯೋಗ, 8. ಮಂಗಳ ಪ್ರಭಾತ, 9. ರಚನಾತ್ಮಕ ಕಾರ್ಯಕ್ರಮ ಅಥವಾ ನಿರ್ಮಾಣ ಕಾರ್ಯಕ್ರಮ–ಇವುಗಳು ಪ್ರಧಾನವಾದುವು.

1. ಹಿಂದ್ ಸ್ವರಾಜ್ಯ : ಗಾಂಧೀ ವಿಚಾರಕ್ಕೆ ಮೂಲಗ್ರಂಥವಿದು. ಅವರು 1909ರಲ್ಲಿ ಲಂಡನ್ನಿನಿಂದ ದಕ್ಷಿಣ ಆಫ್ರಿಕಕ್ಕೆ ಹಿಂದಿರುಗುವಾಗ, ನವೆಂಬರ್ 13 ರಿಂದ 22ರ ವರೆಗೆ ಹಗಲು ರಾತ್ರಿ ಹಡಗಿನಲ್ಲಿ ಕುಳಿತು ಬರೆದ ಗ್ರಂಥ. ಇದರ ಕರಡುಪ್ರತಿಯ ಕೆಲವು ಪುಟಗಳನ್ನು ಅವರು ಎಡಗೈಯಲ್ಲೂ ಬರೆದರು. ಈ ಪುಸ್ತಕ ಆಧುನಿಕ ನಾಗರಿಕತೆಯ ತೀವ್ರಖಂಡನೆಯಾಗಿದೆ. ಇದು ಸಂವಾದರೂಪದಲ್ಲಿದ್ದು ಅಂದು ಹಿಂದೂಸ್ಥಾನದಲ್ಲಿ ಹೆಚ್ಚುತ್ತಿದ್ದ ಹಿಂಸಾವಾದಕ್ಕೆ ಯುಕ್ತ ಉತ್ತರವಾಗಿದೆ. ದ್ವೇಷಕ್ಕೆ ಪ್ರತಿಯಾಗಿ

ಆತ್ಮತ್ಯಾಗವನ್ನಿದು ಕಲಿಸುತ್ತದೆ. ಪಶುಬಲಕ್ಕೆ ಇದಿರಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ–ಎಂದು ಅವರು ವಿವರಿಸಿದ್ದಾರೆ. ಇದನ್ನು ಗಾಂಧೀಜಿ ಮೊದಲು ಗುಜರಾತೀ ಭಾಷೆಯಲ್ಲಿ ಬರೆದರು. ಅವರೇ ಇಂಗ್ಲಿಷಿಗೂ ಭಾಷಾಂತರಿಸಿದರು. ಈ ಗ್ರಂಥದಲ್ಲಿ ಪ್ರತಿಪಾದಿಸಿದ ಆದರ್ಶಕ್ಕೆ ಅವರ ಬದುಕು ವೈಯಕ್ತಿಕವಾಗಿ ಮೀಸಲಾಗಿತ್ತು. ಹಿಂದೂಸ್ತಾನ ಆ ಆದರ್ಶವನ್ನು ಸಾಧಿಸಲು ಕಾಲ ಮಾಗಿ ಬಂದಿರಲಿಲ್ಲವೆಂದು ಅವರು ಚೆನ್ನಾಗಿ ಅರಿತಿದ್ದರು. ಆದರೆ, ನನ್ನ ಸಾಮೂಹಿಕ ಪ್ರಯತ್ನ, ಭಾರತೀಯ ಅಭಿಮತದಂತೆ ಶಾಸನಸಮ್ಮತ ಪ್ರಜಾಪ್ರಭುತ್ವಕ್ಕಾಗಿ ನಡೆದಿದೆ–ಎಂದು ಅವರೇ ವ್ಯಕ್ತಪಡಿಸಿದ್ದರು.

ಹಿಂದ್ ಸ್ವರಾಜ್ಯವನ್ನು ಓದಿದವರು ಗಾಂಧೀಜಿ ನ್ಯಾಯಾಲಯಗಳು, ಗಿರಣಿ, ಯಂತ್ರ, ಸಂಸದಾತ್ಮಕ ಪ್ರಜಾಪ್ರಭುತ್ವ, ಇವೆಲ್ಲವುಗಳ ವಿರೋಧಿಯೆಂದು ಭಾವಿಸುವುದುಂಟು. ಆದರೆ, ವ್ಯಾವಹಾರಿಕ ಆದರ್ಶವಾದಿಯಾಗಿದ್ದ ಅವರು, ತಮ್ಮ ನಿಲುವನ್ನು ಅನುಮಾನಕ್ಕೆ ಎಡೆಯಿಲ್ಲದಂತೆ ವ್ಯಕ್ತಪಡಿಸಿದ್ದಾರೆ. ಇವು ಯಾವುವೂ ನಿಜ ನಾಗರಿಕತೆಯ ಲಕ್ಷಣಗಳಲ್ಲವೆಂದೂ ಸಹಜವಾಗಿಯೇ ಇವು ನಾಶವಾದರೆ ಲೋಕಕ್ಕೆ ಕ್ಷೇಮವೆಂದೂ ಆದರೆ ಆ ರೀತಿ ಆಗಬೇಕಾದರೆ ಮನುಜವರ್ಗ ಅಪಾರತ್ಯಾಗಕ್ಕೂ ಸರಳಜೀವನಕ್ಕೂ ಸಿದ್ಧವಾಗಿರಬೇಕೆಂದೂ ಅವರ ಅಭಿಪ್ರಾಯ. ಬ್ರಿಟಿಷ್ ಸಾಮ್ರಾಜ್ಯವಾದಿಯಾಗಿದ್ದ ಲಾರ್ಡ್ ಲೋದಿಯನ್ 1938ರಲ್ಲಿ ಸೇವಾಗ್ರಾಮದಲ್ಲಿ ಕೆಲವು ದಿನ ತಂಗಿದ್ದಾಗ ಹಿಂದ್ ಸ್ವರಾಜ್ಯದ ಪ್ರತಿ ಇದ್ದರೆ ಕೊಡಿ, ಗಾಂಧೀಜಿ ಹೇಳುವುದೆಲ್ಲ ಅದರಲ್ಲಿ ಬೀಜರೂಪದಲ್ಲಿದೆ, ಗಾಂಧೀಜಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಈ ಪುಸ್ತಕವನ್ನು ಎಷ್ಟು ಸಲ ಓದಿದರೂ ಸಾಲದು–ಎಂದು ನುಡಿದಿದ್ದರು. ಈ ಮಾತು ಪುಸ್ತಕದ ಮಹತ್ತ್ವವನ್ನು ತೋರಿಸುತ್ತದೆ.

2 ಸರ್ವೋದಯ : ಇದು ಇಂಗ್ಲೆಂಡಿನ ಪ್ರಸಿದ್ಧ ಲೇಖಕ ಜಾನ್ ರಸ್ಕಿನ್ನನ 'ಅಂಟು ದಿಸ್ ಲ್ಯಾಸ್ಟ್' ಎಂಬ ಪುಸ್ತಕದ ಸಾರಸಂಗ್ರಹ, ಇದಕ್ಕೆ ಗಾಂಧೀಜಿಯೇ ಇಟ್ಟ ಹೆಸರು–ಸರ್ವೋದಯ. ಇದರಲ್ಲಿ ಗಾಂಧೀಜಿ ಕಂಡುಕೊಂಡ ತತ್ತ್ವಗಳೂ ಮೂರು: (ಅ) ವ್ಯಕ್ತಿಯ ಒಳಿತು ಸಮಾಜದ ಒಳಿತಿನಲ್ಲಿ ಅಡಗಿದೆ. (ಆ) ನ್ಯಾಯ ವಾದಿಯ ಕೆಲಸ, ನಾಯಿಂದನ ಕೆಲಸ ಎರಡಕ್ಕೂ ಸಮಾನ ಬೆಲೆ; ಏಕೆಂದರೆ ಇಬ್ಬರಿಗೂ ತಮ್ಮ ಕೆಲಸದಿಂದ ಉದರಂಭರಣ ಮಾಡುವ ಸಮಾನ ಹಕ್ಕಿದೆ. (ಇ) ಶ್ರಮ ಜೀವಿಯ ಎಂದರೆ ಕೃಷಿಕನ ಮತ್ತು ಕೈಕಸಬುದಾರನ ಜೀವನವೇ ಯೋಗ್ಯಜೀವನ. ಈ ಮೂರು ಅಧ್ಯಾತ್ಮ ಅಥವಾ ತ್ಯಾಗತತ್ತ್ವ, ಆರ್ಥಿಕ ಸಮಾನತೆಯ ತತ್ತ್ವ, ಶ್ರಮಗೌರವ ಅಥವಾ ಶ್ರಮನಿಷ್ಠೆ ಇವನ್ನು ತಿಳಿಸುತ್ತದೆ. ಭಾರತದ ಅಷ್ಟೇ ಏನು ಜಗತ್ತಿನ ಸಮಾಜಗಳು ಈ ತತ್ತ್ವಗಳ ಆಧಾರದ ಮೇಲೆ ಪುನರ್‌ರಚಿತವಾಗಬೇಕೆಂಬುದು ಗಾಂಧೀಜಿಯ ಆಕಾಂಕ್ಷೆಯಾಗಿತ್ತು. ಸರ್ವೋದಯ ಅವರ ಬೋಧೆಯ ಸಾರ, ಅದಕ್ಕಾಗಿಯೇ ಅವರು ದುಡಿದು ಮಡಿದರು.

3 ನೀತಿತತ್ತ್ವ: ಈ ಗ್ರಂಥ ನೀತಿ ಜೀವನವೇ ಧಾರ್ಮಿಕ ಜೀವನದ ತಿರುಳು ಎಂಬುದನ್ನು ಪ್ರತಿಪಾದಿಸುತ್ತದೆ. ನೀತಿಯೆಂದರೆ ಆಚಾರ, ಸದಾಚಾರ, ಅದಿಲ್ಲದೆ ಯಾವ ಧರ್ಮವೂ ಸಾಧಿತವಾಗಲಾರದು. ನಿಜವಾಗಿ ನೋಡಿದರೆ ನೀತಿನಿಯಮಗಳಿಗೆ ವಿಧೇಯನಾಗಿ ನಡೆಯದವನು ಪೂರ್ಣಾರ್ಥದಲ್ಲಿ ಮನುಷ್ಯನೇ ಅಲ್ಲ ಎಷ್ಟೇ ಕಷ್ಟ ಬರಲಿ, ನಷ್ಟವಾಗಲಿ ಸತ್ಯಶೀಲಗಳಲ್ಲೇ ಸುಖವನ್ನು ಅನುಭವಿಸುವಂತೆ ಆಗಬೇಕು ಎಂಬುದು ನೀತಿಧರ್ಮದ ಮಥಿತಾರ್ಥ. ವೈಯಕ್ತಿಕ ಜೀವನದಲ್ಲಿಯೂ ವೃತ್ತಿಜೀವನ ದಲ್ಲಿಯು ಸಾರ್ವಜನಿಕ ಜೀವನದಲ್ಲಿಯೂ ನೀತಿಧರ್ಮವೇ ಪ್ರಧಾನ ಅಂಶವಾಗಬೇಕು. ನೀತಿಧರ್ಮದ ಬೆಲೆಯಿಲ್ಲದ ಕರ್ಮಗಳೆಲ್ಲ ಉಸುಬಿನ ಮೇಲೆ ಕಟ್ಟಿದ ಸೌಧಗಳಂತೆ.

4 ಆರೋಗ್ಯಮಾರ್ಗದರ್ಶಿನೀ : ಸ್ತ್ರೀಪುರುಷರು ಆರೋಗ್ಯದೃಢಕಾಯರಾಗಿ ಅನುಸರಿಸಬೇಕಾದ ನಿಯಮಗಳನ್ನು ಈ ಪುಸ್ತಕ ತಿಳಿಸುತ್ತದೆ. ಇವೆಲ್ಲ ಗಾಂಧೀಜಿಯೇ ಪ್ರಯೋಗಿಸಿದ ವಿಧಾನಗಳ ವಿವರಣೆ. ಗಾಳಿ, ಬೆಳಕು, ನೀರು, ಮೃತ್ತಿಕೆ ಇವುಗಳ ಉಪಯೋಗವೇ, ಇದರ ತಿರುಳು, ಇದನ್ನು ಗಾಂಧೀಜಿ ಪ್ರಕೃತಿಚಿಕಿತ್ಸೆ, ನಿಸರ್ಗಚಿಕಿತ್ಸೆ ಎನ್ನುತ್ತಾರೆ. ಮಾನವ ಪ್ರಕೃತಿಯಿಂದ ದೂರವಾದಷ್ಟೂ ರೋಗಗಳಿಗೆ ತುತ್ತಾಗುವುದು ಸಹಜ. ಹಾಗೆಯೇ ಪ್ರಕೃತಿಯೇ ಅವುಗಳಿಗೆ ನಿಜವಾದ ಚಿಕಿತ್ಸೆಯ ಮಾರ್ಗವನ್ನು ತೋರಿಸುತ್ತದೆಂದು ಗಾಂಧೀಜಿಯ ನಂಬಿಕೆಯಾಗಿತ್ತು.

5 ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ : ಗಾಂಧೀಜಿ ಸತ್ಯ ಅಹಿಂಸೆಗಳ ಮಾರ್ಗದಲ್ಲಿ ಪ್ರಥಮವಾಗಿ ನಡೆಸಿದ ಸವಿನಯ ಪ್ರತೀಕಾರದ, ಸವಿನಯ ಶಾಸನೋಲ್ಲಂಘನದ, ಪಾಶವೀ ಶಕ್ತಿಗೆ ವಿರುದ್ಧವಾಗಿ ನಿಲ್ಲಿಸಿದ ಸಾತ್ತ್ವಿಕ ಶಕ್ತಿಯ ಅಥವಾ ಪ್ರೇಮ ಶಕ್ತಿಯ ಹೋರಾಟದ ಇತಿಹಾಸವಿದು. ಈ ಹೋರಾಟ ಸತ್ಯಾಗ್ರಹ ಎಂಬ ಹೆಸರಿನಿಂದ ಜಗತ್ತಿನಲ್ಲೆಲ್ಲ ಪ್ರಸಿದ್ಧವಾಯಿತು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೂ ಇದು ಸ್ಫೂರ್ತಿ ನೀಡಿತು.

6 ಮಂಗಳ ಪ್ರಭಾತ : ಇದೊಂದು ಪುಟ್ಟ ಪುಸ್ತಕವಾದರೂ ಸರ್ವೋದಯಕ್ಕೆ ನೆರವಾಗುವ ವ್ಯಕ್ತಿಜೀವನ ಹಾಗೂ ಸಾಮಾಜಿಕ ಜೀವನಗಳನ್ನು ಬೆಳೆಸಿಕೊಳ್ಳಲು ಶಕ್ತಿ ನೀಡುವ ವ್ರತಗಳ ವಿವರಣೆಯನ್ನು ನೀಡುತ್ತದೆ. ಸತ್ಯ, ಅಹಿಂಸೆ, ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹ, ಶರೀರಶ್ರಮ, ಅಸ್ವಾದ, ಭಯಮುಕ್ತಿ, ಸರ್ವಧರ್ಮಸಮಭಾವ, ಸ್ವದೇಶೀ ಸ್ಪರ್ಶಭಾವನೆ (ಅಸ್ಪೃಶ್ಯತಾ ನಿವಾರಣೆ) ಇವನ್ನು ಸಾಧಿಸಲು ನಮ್ರತೆಯಿಂದ ಪ್ರಯತ್ನ ಮಾಡುವುದರ ಮಹತ್ತ್ವವನ್ನು ಇದು ವಿವರಿಸುತ್ತದೆ. ಈ ಪುಸ್ತಕ ಗಾಂಧಿ ಜೀವನವಿಧಾನದ ಕೈಪಿಡಿ ಎನ್ನಬಹುದು.

7 ಆತ್ಮಕಥೆ : ಗಾಂಧೀ ಸಾಹಿತ್ಯದಲ್ಲಿ ಎಂದೆಂದಿಗೂ ಶಿಖರಪ್ರಾಯವಾಗಿ ನಿಲ್ಲುವ ಕೃತಿ ಇದು. ಇದನ್ನು ಓದಿ ಅದೆಷ್ಟೋ ಮಂದಿ ಸ್ಫೂರ್ತಿ ಪಡೆದಿದ್ದಾರೆ ಗಾಂಧೀಜಿಯಂತೆಯೇ ಈಚೆಗೆ ಹಂತಕನ ಗುಂಡಿಗೆ ತುತ್ತಾಗಿ, ಹುತಾತ್ಮನಾದ ಅಮೆರಿಕದ ನೀಗ್ರೋನಾಯಕ ಮಾರ್ಟಿನ್ ಲೂಥರ್ ಕಿಂಗ್ ಇದನ್ನು ಓದಿ ಸ್ಫೂರ್ತಿ ಪಡೆದುದಲ್ಲದೆ ಸವಿನಯ ಪ್ರತೀಕಾರ ಚಳವಳಿಯನ್ನು ಬಿಳಿಯರ ದಬ್ಬಾಳಿಕೆಯ ವಿರುದ್ಧವಾಗಿ ನಡೆಸಿದ. ಜಗತ್ತಿನ ಮಹನೀಯರ ಆತ್ಮಕಥನ ಗ್ರಂಥಗಳಲ್ಲಿ ಇದಕ್ಕೆ ಅಗ್ರಸ್ಥಾನ ದೊರಕಿದೆ.

8 ಅನಾಸಕ್ತಿಯೋಗ : ಗಾಂಧೀಜಿ ಭಗವದ್ಗೀತೆಯನ್ನು ನನ್ನ ತಾಯಿ ಎಂದು ಕರೆದರು. ಅದರಲ್ಲಿ ಅವರು ಕಂಡ ಸತ್ಯವೇ ಅನಾಸಕ್ತಿಯೋಗ, ಅವರು ತಮ್ಮ ಜೀವನವನ್ನೂ ಅನಾಸಕ್ತಿಯೋಗದಿಂದಲೇ ನಡೆಸಿದರು. ಎಲ್ಲವನ್ನೂ ಭಗವಂತನಿಗೇ ಅರ್ಪಿಸಿ, ಸುಖ–ದುಃಖಗಳಿಂದ ಉದ್ವಿಗ್ನರಾಗದೆ, ಸೋಲು–ಗೆಲವುಗಳನ್ನು ಸಮನಾಗಿ



**ಗಾಂಧೀ ಜೀವನ ಕೃತಿಗಳ ಸ್ಮೃತಿಕೋಶವನ್ನು ಅವರು ಹತ್ಯೆಗೊಳಗಾದ ಸ್ಥಳದಲ್ಲಿ ಉಪರಾಷ್ಟ್ರಪತಿ ಜಿ.ಎಸ್. ಪಾಠಕ್ ಭೂಮಿಯೊಳಕ್ಕೆ ಇಳಿಯಬಿಡುತ್ತಿದ್ದಾರೆ (1973)**

ಕಂಡು, ಬಾಳಬೇಕಾದ ಪರಿ, ಜೀವನದ ವಿವೇಕ, ಇದರಲ್ಲಿ ಉಲ್ಲೇಖವಾಗಿದೆ. ಗೀತಾಮಾತೆಯ ಪೀಯೂಷಪಾನದಿಂದಲೇ ಗಾಂಧೀಜಿಯ ಆಧ್ಯಾತ್ಮಿಕ ಶಕ್ತಿ ವೃದ್ಧಿಯಾಯಿತು. ಅದು ಅವರ ಎಲ್ಲ ಲೌಕಿಕ ಕರ್ಮಗಳಿಗೂ ಪುಷ್ಟಿ ನೀಡಿತು.

9 ನಿರ್ಮಾಣ ಕಾರ್ಯಕ್ರಮ : ಸರ್ವೋದಯ ದರ್ಶನದ ಆಧಾರದ ಮೇಲೆ ಶಾಂತಿ ಸಮೃದ್ಧವಾದ, ಯುದ್ಧಭೀತಿಮುಕ್ತವಾದ ಸ್ವತಂತ್ರ ಭಾರತವನ್ನು ಸೃಷ್ಟಿಸುವುದಕ್ಕೂ ವಿಕೇಂದ್ರೀಕರಣ ಪ್ರಧಾನವಾದ ನಿಜವಾದ ಪ್ರಜಾಪ್ರಭುತ್ವ, ಆರ್ಥಿಕ ಸಮತೆ, ಮಾನವ ಸೋದರಭಾವ ಇವನ್ನು ಕಾರ್ಯರೂಪಕ್ಕೆ ತರುವುದಕ್ಕೂ ಕಾಲ ಕಾಲಕ್ಕೆ ಗಾಂಧೀಜಿ ರೂಪಿಸಿದ ಕಾರ್ಯಕ್ರಮಗಳ ವಿವರಣೆ ಈ ಪುಟ್ಟ ಪುಸ್ತಕದಲ್ಲಿದೆ. ನಿರ್ಮಾಣ ಕಾರ್ಯಕ್ರಮದ ಶ್ರದ್ಧಾಭರಿತ ಅನುಷ್ಠಾನದಿಂದ ನಿಜಸ್ವರಾಜ್ಯವನ್ನು ಸಾಧಿಸಬಹುದೆಂಬ ನಂಬಿಕೆ ಅವರಲ್ಲಿತ್ತು.

**ಗಾಂಧೀ ಸಾಹಿತ್ಯದ ಗುಣಲಕ್ಷಣಗಳು :** ಜೀವನದ ಸಮಗ್ರ ಚಿತ್ರವನ್ನು ಎದುರಿಗೆ ಇಟ್ಟುಕೊಂಡು ನ್ಯಾಯಸಮ್ಮತವೂ ಫಲಕಾರಿಯೂ ಆದ ಮಾತುಗಳನ್ನು ಗಾಂಧಿಯವರಂತೆ ಸೂಚಿಸಿದವರು ಅಪರೂಪ, 60 ವರ್ಷಗಳ ತುಂಬು ಜೀವನದಲ್ಲಿ ಅವರು ಎಂದಿಗೂ ಸಮಯಸಾಧಕರಾಗಿ ವರ್ತಿಸಿದವರಲ್ಲ. ದಾರಿ ಯಾವುದಾದರೂ ಸರಿ ಗುರಿ ಮುಟ್ಟಿದರಾಯಿತು, ಎಂದವರಲ್ಲ. ಜನತೆಯನ್ನು ಒಟ್ಟಾಗಿ ಬಿಡಿಬಿಡಿಯಾಗಿ ತಿದ್ದುವಲ್ಲಿ, ಪ್ರೋತ್ಸಾಹಿಸಿ ಹುರಿದುಂಬಿಸುವಲ್ಲಿ ಕಾರ್ಯೋನ್ಮುಖರನ್ನಾಗಿ ಮಾಡುವಲ್ಲಿ

ಹೊಸ ಜೀವನ ಮಾರ್ಗವನ್ನು ತೋರುವಲ್ಲಿ, ಎಲ್ಲ ಕಾಲಕ್ಕೂ ಎಲ್ಲ ದೇಶಗಳೂ ಅನ್ವಯವಾಗುವಂಥ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿವಲ್ಲಿ–ಈ ಎಲ್ಲವನ್ನೂ ಗಾಂಧೀಜಿಗೆ ಇದ್ದ ಮಾನವೀಯ ಧೋರಣೆ ಅವರ ಎಲ್ಲ ಬರೆಹಗಳಲ್ಲೂ ಎದ್ದುಕಾಣುತ್ತದೆ.

ಮಾನವನ ಹೃದಯಾಂತರಾಳದಲ್ಲಿ ಹುದುಗಿರುವ ಪ್ರೇಮ, ಪ್ರೀತಿ, ವಿಶ್ವಾಸಗಳ ಬಗ್ಗೆ ಗಾಂಧೀಯವರಿಗೆ ಅಪಾರ ಭರವಸೆ ಇತ್ತು. ಅದರ ವಿಕಸನದಿಂದ ಬಂದ ಸ್ವಾತಂತ್ರ್ಯ ನಿಲ್ಲುವಷ್ಟು ಕಾಲ ಕೇವಲ ರಾಜಕೀಯ ಆಂದೋಳನದಿಂದ ಬಂದ ಸ್ವಾತಂತ್ರ್ಯ ನಿಲ್ಲಲಾರದು ಎಂದು ಅವರು ಅರಿತಿದ್ದರು. ಅವರ ಈ ಮನೋಧರ್ಮ ಅವರ ಮಾತಿನಲ್ಲೂ ನೀತಿ ಬರೆಹದಲ್ಲೂ ಎದ್ದುಕಾಣುತ್ತದೆ.

ಅವರ ಆರ್ಥಿಕ ನೀತಿ ಕೇವಲ ಬಡತನದ ನೀತಿಯಲ್ಲ. ಅವರ ಜೀವನವಿವೇಕ ಕೇವಲ ಅಭಾವ ವೈರಾಗ್ಯದಿಂದ ಬಂದ ಸಪ್ಪೆಸರಕಲ್ಲ. ಆಶ್ರಮಜೀವನ ಬ್ರಹ್ಮಚರ್ಯ, ಸ್ವದೇಶಿ, ಸತ್ಯಾಗ್ರಹ, ಉಪವಾಸ, ಶಾಂತಿಯುತ ಅಸಹಕಾರ, ಇವೆಲ್ಲ ಜೀವನವನ್ನು ಒಣಗಿಸುವುದಕ್ಕಲ್ಲ. ಅದನ್ನು ವಿಕಸಿಸಿ ಬೆಳೆಸುವುದಕ್ಕೆ–ಎಂಬುದು ಅವರ ಧೋರಣೆ.

ಗಾಂಧಿ ಇಂಗ್ಲಿಷ್ ಮತ್ತು ಗುಜರಾತಿ –ಎರಡು ಭಾಷೆಗಳಲ್ಲೂ ಬರೆದರು. ಗುಜರಾತಿ ಅವರ ಮಾತೃಭಾಷೆ. ಅವರನ್ನು ಗುಜರಾತಿ ನವ್ಯ ಗದ್ಯದ ನಿರ್ಮಾಪಕರಲ್ಲೊಬ್ಬರೆಂದು ವಿದ್ವಾಂಸರು ಕೊಂಡಾಡಿದ್ದಾರೆ. ಇಂಗ್ಲಿಷಿನಲ್ಲೂ ಗಾಂಧೀಯವರದು ಅಂಥದೇ ಎತ್ತಿದ ಕೈ.

ಸರಳವಾಗಿ, ಸುಲಭವಾಗಿ, ನೇರವಾಗಿ ಹೇಳುವುದು ಅವರ ಮಾರ್ಗ ಅವರ ಬರವಣಿಗೆಯಲ್ಲಿ ಅನಾವಶ್ಯಕ ವಿವರಗಳಾಗಲಿ, ಚರ್ವಿತಚರ್ವಣವಾಗಲಿ ಎಲ್ಲಿಯೂ ಕಾಣದು, ಬೈಬಲ್, ಭಗದ್ಗೀತೆ, ಪಿಲ್ಗ್ರಿಮ್ಸ್ ಪ್ರಾಗ್ರೆಸ್, ಪಾಸ್ಟ ಅಂಡ್ ಪ್ರೆಸೆಂಟ್, ಅಂಟು ದಿಸ್ ಲ್ಯಾಸ್ಟ್ ಮೊದಲಾದ ಉದ್ಗ್ರಂಥಗಳಲ್ಲಿನ ಸುಲಭತೆಯನ್ನು ಗಾಂಧಿಯವರಲ್ಲಿ ನಾವು ಗುರುತಿಸಬಹುದು. ಮಾತು ಯವಾಗಲೂ ತರ್ಕಬದ್ಧ, ನ್ಯಾಯಸಮ್ಮತ ಹಾಗೆಂದ ಮಾತ್ರಕ್ಕೆ ವ್ಯಂಗ್ಯ, ವಿಡಂಬನ, ಹಾಸ್ಯ, ಸರಸ ಇಲ್ಲವೆಂದಲ್ಲ. ಅನೇಕ ಕಡೆ ಕವಿಯ ಮನೋಧರ್ಮ ಕೂಡ ಕಾಣುವುದುಂಟು.

**ಗಾಂಧೀ ಸಾಹಿತ್ಯದ ಪ್ರಭಾವ :** 'ನನ್ನ ಬರೆಹಗಳನ್ನು ನನ್ನ ದೇಹದ ಜೊತೆಯಲ್ಲೆ ಸುಟ್ಟುಬಿಡಬೇಕು. ನಾನು ಮಾಡಿರುವ ಕೆಲಸ ಉಳಿಯುತ್ತದೇ ಹೊರತು ನಾನು ಆಡಿದ್ದೂ ಬರೆದದ್ದೂ ಅಲ್ಲ' ಎಂದು ಗಾಂಧೀ ಹೇಳಿಕೊಂಡಿದ್ದಾರಾದದರೂ ಅವರ ಬರೆಹಗಳ ಪ್ರಭಾವ ಬಹು ವ್ಯಾಪಕವಾಗಿದೆ. ಪಾರ್ಥಿವವಾಗಿ ಅವರು ಇಲ್ಲವಾದರೂ ಸೂಕ್ಷ್ಮರೂಪಿಯಾಗಿ ಅವರು ತಮ್ಮ ಬರೆಹಗಳಲ್ಲಿ ಉಳಿದು ಬಂದಿದ್ದಾರೆ.

ಗಾಂಧೀಜಿಯ ವ್ಯಕ್ತಿತ್ವ ಹೇಗೆ ಜಗತ್ತಿನ ಮತ್ತು ಭಾರತದ ವಿಚಾರವಂತರ ಗಮನವನ್ನು ಸೆಳೆಯಿತೋ ಹಾಗೆಯೇ ಭಾರತೀಯ ಭಾಷೆಗಳು ಮತ್ತು ಸಾಹಿತ್ಯಗಳ ಮೇಲೂ ಪ್ರಭಾವ ಬೀರಿದೆ. ಅವರ ಆತ್ಮಕಥೆ ಭಾರತದ ಎಲ್ಲ ಭಾಷೆಗಳಲ್ಲೂ ಅನುವಾದವಾಗಿರುವಂತೆಯೇ ವಿವಿಧ ರಾಷ್ಟ್ರಗಳ ಭಾಷೆಗಳಲ್ಲಿಯೂ ಅನುವಾದವಾಗಿರುವುದನ್ನು ಗಮನಿಸಬಹುದು. ಗಾಂಧೀ ವಿಚಾರ ಜೀವನತತ್ತ್ವ ಸತ್ಯಾಗ್ರಹ ಇವು ಭಾರತೀಯ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಕಾದಂಬರಿ, ಕವನ, ನಾಟಕ ಇವುಗಳಲ್ಲೆಲ್ಲ ಪ್ರತಿಧ್ವನಿಗೊಂಡಿರುವುದನ್ನೂ ಕಾಣಬಹುದು. ಗಾಂಧೀ ಯುಗದ (1920–48) ವಿವಿಧ ಸತ್ಯಾಗ್ರಹ ಸಂಗ್ರಾಮಗಳು ಲೇಖಕರ, ಕವಿಗಳ ವಿಚಾರರಂಗಗಳನ್ನು ಕೆರಳಿಸಿದ್ದುಂಟು: ಭಾವೋತ್ಕರ್ಷ ಮಾಡಿದ್ದುಂಟು. ಕನ್ನಡದ ಕವಿಗಳಾದ ಕುವೆಂಪು, ಬೇಂದ್ರೆ ಆದಿಯಾಗಿ ಈವರೆಗೆ ಮೂರು ತಲೆಮಾರಿನ ಕವಿಗಳು ಗಾಂಧೀಜೀವನ, ವಿಚಾರ, ಚಿಂತನ, ಇವನ್ನೆಲ್ಲ ಕುರಿತು ಕವನಗಳನ್ನು ರಚಿಸಿದ್ದಾರೆಂಬುದು ಉಲ್ಲೇಖನೀಯ, ಗಾಂಧೀ ಸಾಹಿತ್ಯ ಸಾರಸರ್ವಸ್ವವನ್ನು ಕನ್ನಡದಲ್ಲೂ ಭಾರತದ ವಿವಿಧ ಭಾಷೆಗಳಲ್ಲೂ ಅನುವಾದ ಮಾಡಲಾಗಿದೆ. ಇವೆನ್ನೆಲ್ಲ ಗಮನಿಸಿದಾಗ, ಪ್ರಮಾಣದಲ್ಲಿಯೂ ಪ್ರಕಾರದಲ್ಲಿಯೂ ವಿಪುಲವಾಗಿರುವ ಗಾಂಧೀ ಸಾಹಿತ್ಯಕ್ಕೆ ಜಗತ್ತಿನ ವಿಚಾರ ಸಾಹಿತ್ಯ ಕ್ಷೇತ್ರದಲ್ಲಿ ಚಿರಂತನ ಸ್ಥಾನವಿದೆ. ಎಂಬುದು ಗೋಚರಿಸುತ್ತದೆ. (ಜಿ.ವಿ.ಎಸ್.)

ಗಾಂಧೀ ಅರ್ಥಶಾಸ್ತ್ರ: ಮಹಾತ್ಮ ಗಾಂಧಿಯವರು ಅರ್ಥಶಾಸ್ತ್ರದ ಮೇಲೆ ಯಾವ ಉದ್ಗ್ರಂಥವನ್ನೂ ಬರೆಯಲಿಲ್ಲ. ಸಾಂಪ್ರದಾಯಿಕವಾಗಿ ಅರ್ಥಶಾಸ್ತ್ರದ ಅಧ್ಯಯನ ಮಾಡಿ ಯಾವ ಪದವಿಯನ್ನು ಪಡೆದಿರಲಿಲ್ಲ. ಆದರೆ ಅವರು ಜೀವನದ ಬಹುಮುಖ ಸಮಸ್ಯೆಗಳನ್ನು ಅರಿತಿದ್ದು. ಅವಕ್ಕೆ ತಮ್ಮವೇ ಆದ ಪರಿಹಾರಗಳನ್ನು ಮೊದಲು ತಮ್ಮ ಜೀವನದ ಮೇಲೆ ಪ್ರಯೋಗ ಮಾಡಿಕೊಂಡು ಅನಂತರ ಭಾಷಣಗಳು ಹಾಗೂ ಲೇಖನಗಳ ಮೂಲಕ ಪ್ರಸಿದ್ಧಪಡಿಸುತ್ತಿದ್ದರು. ಮಾನವನ ಆರ್ಥಿಕ ಸಮಸ್ಯೆಗಳ ಬಗ್ಗೆ ಅವರು ಆಗಿಂದಾಗ್ಗೆ ಆಡುತ್ತಿದ್ದ ಮಾತುಗಳನ್ನು ಮತ್ತು ಲೇಖನಗಳನ್ನು ಸುಸಂಬದ್ಧವಾಗಿ ಸಂಕಲನ ಮಾಡಿದರೆ ಒಂದು ಆರ್ಥಿಕ ಸಿದ್ಧಾಂತವೇ ರೂಪು ತಳೆಯುತ್ತದೆ.

ಗಾಂಧೀಯವರು ಜೀವನವನ್ನು ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಎಂದು ಮುಂತಾಗಿ ಪ್ರತ್ಯೇಕ ಭಾಗಗಳಾಗಿ ಮಾಡಿ ಸಂಕೀರ್ಣವಾಗಿ ನೋಡದೆ ಅದನ್ನು ಸಮಗ್ರವಾಗಿ ವೀಕ್ಷಿಸುತ್ತಿದ್ದರು. ಮಾನವನ ಪರಿಪೂರ್ಣ ವಿಕಾಸಕ್ಕೆ ಪೋಷಕವಾಗುವಂತೆ ಆಧ್ಯಾತ್ಮಿಕ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ತತ್ತ್ವಗಳನ್ನು ಅನ್ವಯಿಸಬೇಕೆಂಬುದು ಅವರ ವಿಚಾರವಾಗಿತ್ತು. ಅರ್ಥಾತ್ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ವಿಚಾರಪೂರ್ವಕ, ನಿಷ್ಠಾವಂತ ಅನ್ವಯವೇ ಅವರ ಸಿದ್ಧಾಂತದ ಮೂಲಸೂತ್ರ ಎನ್ನಬಹುದು.

ಅರ್ಥವನ್ನು ಧರ್ಮ ನೀತಿಗಳಿಂದ ಬೇರ್ಪಡಿಸಿ, ಕೇವಲ ಸಂಪತ್ತಿನ ಉತ್ಪಾದನೆ ವಿತರಣೆಗಳ ದೃಷ್ಟಿಯಿಂದ ಅರ್ಥಶಾಸ್ತ್ರದ ವ್ಯಾಖ್ಯೆ ಮಾಡುವುದನ್ನು ಗಾಂಧಿಯವರು ವಿರೋಧಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ನೀತಿಬಾಹಿರವಾದ ಅರ್ಥಶಾಸ್ತ್ರ ಪಾಶವೀಶಾಸ್ತ್ರವೇ ಎನಿಸಿತು. ಅರ್ಥಶಾಸ್ತ್ರ ನಿಯಮಗಳು ಧರ್ಮನಿಷ್ಠವಾಗಿರಬೇಕು: ಉದಾತ್ತ ಜೀವನದ ಸಾಗಣೆಗೆ ಅನುವಾಗಬೇಕು. ಉದಾತ್ತ ಜೀವನವೆಂದರೆ ಸರಳಜೀವನ; ಉಚ್ಚವಿಚಾರಗಳ ಸೂತ್ರಕ್ಕೆ ಬದ್ಧವಾಗಿರುವಂಥದು. ಮಾನವನ ಜೀವಿತದ ಉದ್ದೇಶ ಧನ ಕನಕ ವಸ್ತು ವಾಹನಗಳ ಸಂಗ್ರಹವಾಗಬಾರದು. ಅದು ಆತ್ಮಶ್ರೀಯ ವಿಕಾಸದ ಸಾಧನೆಯಾಗಿರತಕ್ಕದ್ದು. ಆತ್ಮಶ್ರೀಯ ವಿಕಾಸವಾಗುವುದು ಮಿತಿಮೀರಿದ ಐಹಿಕ ಸುಖದ ಆಸೆಯಿಂದಲ್ಲ. ಬದಲಾಗಿ ಸರಳಜೀವನದಿಂದ ಆದ್ದರಿಂದ ಮನುಷ್ಯ ತನ್ನ ಆತ್ಮವಿಕಾಸವನ್ನೇ ಧ್ಯೇಯವನ್ನಾಗಿಟ್ಟುಕೊಂಡು ಜೀವನ ನಿರ್ವಾಹಕ್ಕೆ ಅತ್ಯಗತ್ಯವಾಗಿ ಎಷ್ಟು ಬೇಕೋ ಅಷ್ಟೇ ವಸ್ತುಗಳನ್ನು ಉಪಯೋಗಿಸಬೇಕು. ಹಾಗೆ ತನಗೆ ಬೇಕಾಗುವ ಅಗತ್ಯ ವಸ್ತುಗಳನ್ನು ಪಡೆಯಲು ಪ್ರತಿಯೊಬ್ಬನೂ ಶ್ರಮನಿಷ್ಠ ಜೀವನವನ್ನು ನಡೆಸಬೇಕು. ಇದೇ ಅನ್ನಕಾಯಕ. ಜೀವನ ನಿರ್ವಹಣೆಗಾಗಿ ಶ್ರಮ ಮಾಡದೇ ಕೂಡಿಟ್ಟ ಹಣದ ಬಲದಿಂದಲೂ ಬೇರೊಬ್ಬರ ಶ್ರಮದ ಶೋಷಣೆಯಿಂದಲೋ ಲೋಲುಪ್ತಿಯ ಜೀವನ ನಡೆಸುವುದು ಚೌರ್ಯಕ್ಕೆ ಸಮಾನ: ಸಮಾಜದ ವಿಷಮತೆಗೆ ಕಾರಣ. ಸುವ್ಯವಸ್ಥಿತ ಅಹಿಂಸಾತ್ಮಕ ಸಮಾಜಕ್ಕೆ ಶ್ರಮನಿಷ್ಠ ಕಾಯಕ ಅಥವಾ ಅನ್ನಕಾಯಕ ಆಧಾರವಾಗಿರತಕ್ಕದ್ದು.

ಸ್ವದೇಶೀವ್ರತ, ಗಾಂಧೀ ಅರ್ಥವಿಚಾರದ ಅವಿಭಾಜ್ಯ ಅಂಗ, ಸ್ವದೇಶೀ ಎಂದರೆ ತನ್ನ ನೆರೆಹೊರೆಯವರ, ಹಳ್ಳಿಯ, ರಾಜ್ಯದ ಅಥವಾ ದೇಶದ ಸಂಘಸಂಸ್ಥೆಗಳ ಬಗ್ಗೆ ಅಭಿಮಾನ ಮತ್ತು ಸ್ವದೇಶೀ ವಸ್ತುಗಳ ಉಪಯೋಗ, ಸ್ವದೇಶೀಗಳ ಬಗ್ಗೆ ಅಭಿಮಾನ ಮತ್ತು ಸ್ವದೇಶೀ ವಸ್ತುಗಳ ಉಪಯೋಗ. ಸ್ವದೇಶೀ ದೀಕ್ಷೆ ತನ್ನ ನೆರೆಹೊರೆಯವರ



ಮಹಾತ್ಮಗಾಂಧಿ ನೂಲುತ್ತಿರುವುದು

ಹಿತಚಿಂತನೆಯಿಂದಲೆ ಆರಂಭವಾಗುತ್ತದೆ. ನೆರೆಹೊರೆಯವರು ತಯಾರಿಸಿದ ವಸ್ತುಗಳನ್ನು ಕೊಳ್ಳಬೇಕು. ಸ್ಥಳೀಯ ಮತ್ತು ದೇಶೀಯ ಉದ್ಯಮಗಳಿಗೆ ಉತ್ತೇಜನ ನೀಡಬೇಕು. ಅವುಗಳನ್ನವಲಂಬಿಸಿರುವ ಜನರ ಹಿತವನ್ನು ಈ ಮೂಲಕ ರಕ್ಷಿಸಬೇಕು. ಇದು ಸ್ವದೇಶೀ ಧರ್ಮದ ಕಟ್ಟಲೆ. ಸ್ವದೇಶೀ ಎಂದಮಾತ್ರಕ್ಕೆ ಪರದೇಶೀಯವಾದ್ದನ್ನು ದ್ವೇಷಿಸಬೇಕೆಂಬುದಲ್ಲ. ಯಾವುದೇ ನೆರೆಹೊರೆಯಲ್ಲಿ, ಸ್ಥಳೀಯವಾಗಿ ಅಥವಾ ಸ್ವದೇಶದಲ್ಲಿ ಸಿಕ್ಕುವುದಿಲ್ಲವೋ ಅದನ್ನು ಬೇರೆಡೆಯಿಂದ, ಪರದೇಶಗಳಿಂದ ತರಿಸಿಕೊಳ್ಳಲು ಅಭ್ಯಂತರವಿಲ್ಲ. ಅದರೆ ನೆರೆಹೊರೆಯಲ್ಲಿ ತಯಾರಾದ ವಸ್ತುಗಳನ್ನು ಕೊಳ್ಳದೆ ತಯಾರಕರನ್ನು ಹಸಿವಿಗೆ ದೂಡಿ, ದೂರದಿಂದ ಪೈಪೋಟಿಯಿಂದ ಬರುವ ವಸ್ತುಗಳನ್ನು ಕೊಳ್ಳುವುದು ಸ್ವದೇಶೀ ಧರ್ಮಕ್ಕೆ ವಿರೋಧ, ಅದು ಅಮಾನುಷವೂ ಆದೀತು.

ಸ್ವದೇಶೀ ಎಂಬುದು ನಮ್ಮ ನಿಕಟ ವಾತಾರಣಕ್ಕೆ ಅನ್ವಯಿಸುವ ಸ್ವಧರ್ಮ ಎಂದು ಗಾಂಧೀಯವರು ಹೇಳಿದ್ದಾರೆ.

ಆರ್ಥಿಕ ನಿಯಮಗಳು ಸರ್ವಕಾಲಕ್ಕೂ ಸರ್ವದೇಶಕ್ಕೂ ಸಾರ್ವತ್ರಿಕವಾಗಿ ಸಮಾನವಾಗಿ ಅನ್ವಯಿಸುವ ನಿಯಮಗಳೇನೂ ಇಲ್ಲ. ಒಂದು ದೇಶಕ್ಕೆ ಲಾಭದಾಯಕ ವಾಗಿ ಅನ್ವಯಿಸಬಹುದಾದ ಆರ್ಥಿಕ ನಿಯಮಗಳು ಮತ್ತೊಂದು ದೇಶಕ್ಕೆ ಪ್ರಯೋಜನ ಕಾರಿಯಾಗಿರಬಹುದೆಂದು ಹೇಳಲಾಗುವುದಿಲ್ಲ. ಆರ್ಥಿಕ ಸಂಸ್ಥೆಗಳು, ಆಚಾರವಿಚಾರಗಳು ಆಯಾ ದೇಶಗಳ ವಾಯುಗುಣ, ಭೌಗೋಳಿಕ ಸನ್ನಿವೇಶ, ಜನರ ಸಂಖ್ಯೆ ಅವರ ಭಾವನೆಗಳು ಇತ್ಯಾದಿ ವಿಷಯಗಳನ್ನು ಅವಲಂಬಿಸಿರುತ್ತದೆ. ಚಳಿದೇಶದ ಜನರಿಗೆ ಅಗತ್ಯವಾಗಬಹುದಾದ ಉಡಿಗೆ ತೊಡಿಗೆ, ತಿಂಡಿ ತಿನಿಸು ಉಷ್ಣದೇಶದವರಿಗೆ ಅಗತ್ಯವಾಗದಿರಬಹುದು. ಜನಸಂಖ್ಯೆ ಕಡಿಮೆಯಿರುವ ದೇಶದಲ್ಲಿ ರೂಢವಾಗಿರುವ ಉತ್ಪಾದನೆ ವಿತರಣೆಗಳ ವ್ಯವಸ್ಥೆ ಜನನಿಬಿಡವಾದ ದೇಶಗಳಿಗೆ ಮಾರಕವಾಗಬಹುದು. ಅಂದರೆ ಯಾವುದೇ ಆರ್ಥಿಕ ನಿಯಮಗಳು ಅಥವಾ ಪದ್ಧತಿ ಸರ್ವವ್ಯಾಪಕವಾಗಿರುವುದು ಸಾಧ್ಯವಿಲ್ಲ. ಆಯಾ ದೇಶಗಳ ಸ್ಥಿತಿಗತಿಗಳಿಗನುಗುಣವಾಗಿ ಅರ್ಥಶಾಸ್ತ್ರದ ನಿಯಮಗಳನ್ನು, ಅರ್ಥವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಆದ್ದರಿಂದ ಸಂಖ್ಯಾಬಾಹುಳ್ಯವುಳ್ಳ ಗ್ರಾಮಾಧಾರಿತ ಭಾರತ ಪಾಶ್ಚಾತ್ಯ ರಾಷ್ಟ್ರಗಳ ಆರ್ಥಿಕ ಪದ್ಧತಿಯನ್ನು ಅನುಸರಿಸುವುದು ಸಾಧುವಲ್ಲ.

ಹಳ್ಳಿಗಳ ದೇಶವಾದ ಭಾರತದ ಅರ್ಥವ್ಯವಸ್ಥೆ ಗ್ರಾಮಸ್ವಾವಲಂಬನೆಯ ಆಧಾರದ ಮೇಲೆ ನಿರ್ಮಾಣವಾಗಬೇಕು. ಪ್ರತಿ ಹಳ್ಳಿಯೂ ಅದಕ್ಕೆ ಅಗತ್ಯವಾದ ವಸ್ತುಗಳನ್ನು ಉತ್ಪಾದನೆ ಮಾಡಿಕೊಳ್ಳಬೇಕು. ಗ್ರಾಮ ಅರ್ಥವ್ಯವಸ್ಥೆ ಕೃಷಿ ಮತ್ತು ಕುಟೀರ ಉದ್ಯಮಗಳ ಆಧಾರದ ಮೇಲೆ ನಿಲ್ಲಬೇಕು. ಗ್ರಾಮಕ್ಕೆ ಅಗತ್ಯವಾದ ಆಹಾರ ಧಾನ್ಯ, ಹತ್ತಿ, ಎಣ್ಣೆಕಾಳುಗಳು, ತರಕಾರಿ, ದನಗಳಿಗೆ ಮೇವು ಎಲ್ಲವನ್ನೂ ಗ್ರಾಮದಲ್ಲೇ ಉತ್ಪಾದನೆ ಮಾಡಿಕೊಳ್ಳಬೇಕು. ಹತ್ತಿ ನೂತು ಬಟ್ಟೆಯನ್ನು ನೆಯ್ದು ಕೊಳ್ಳಬೇಕು. ಕೃಷಿ ಗ್ರಾಮೋದ್ಯೋಗ ಗಳಿಗೆ ಬೇಕಾದ ಉಪಕರಣಗಳು ಗ್ರಾಮದಲ್ಲೇ ತಯಾರಾಗಬೇಕು. ಆರೋಗ್ಯರಕ್ಷಣೆ, ನೈರ್ಮಲ್ಯ, ಗ್ರಾಮರಕ್ಷಣೆ ಎಲ್ಲವೂ ಹಳ್ಳಿಯವರದೇ ಜವಾಬ್ದಾರಿ. ಈ ರೀತಿಯಲ್ಲಿ ವ್ಯವಸ್ಥೆಯಾದರೆ ಪ್ರತಿಗ್ರಾಮವೂ ಸ್ವಾವಲಂಬಿ ಘಟಕವಾಗುತ್ತದೆ. ಭಾರತ ಸ್ವಾವಲಂಬಿ ಗ್ರಾಮ ಘಟಕಗಳ ಅಜೇಯ ಗಣರಾಜ್ಯವಾಗುತ್ತದೆ.

ಉತ್ಪಾದನೆಯ ಗುರಿ ಲಾಭಸಂಪಾದನೆಯಾಗಿರಬಾರದು: ಸಾಮಾಜಿಕಹಿತ ಸಾಧನೆಯಾಗಿರಬೇಕು, ಉತ್ಪಾದನೆಯ ವ್ಯವಸ್ಥೆ ಜನರ ಅಗತ್ಯಗಳನ್ನು ಪೂರೈಸುವ ಶಕ್ತಿ ಪಡೆದಿರುವುದರ ಜೊತೆಗೆ, ಅದು ಶೋಷಣರಹಿತವು ಪರಮಾವಧಿ ಉದ್ಯೋಗ ಕಾರಕವೂ ಆಗಿರಬೇಕು. ಕೈಗಾರಿಕೆಗಳಲ್ಲಿ ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ದೊಡ್ಡ ಕೈಗಾರಿಕಾ ವ್ಯವಸ್ಥೆ ಆರ್ಥಿಕ ಶಕ್ತಿಯ ಕೇಂದ್ರಿಕರಣಕ್ಕೆ ಎಡೆ ಮಾಡಿ ಕೊಟ್ಟಿದೆ. ಹಿಡಿಜನ ಬಂಡವಾಳಗಾರರ ಕೈಯಲ್ಲಿ ಆರ್ಥಿಕ ಶಕ್ತಿ ಕೇಂದ್ರಿಕೃತವಾಗಿರುವುದರಿಂದ ಶ್ರಮವರ್ಗದ ಶೋಷಣೆ, ಅಹಿತಕರ ಪೈಪೋಟಿ, ಮಾರುಕಟ್ಟೆಗಳ ಸ್ವಾಮ್ಯಕ್ಕಾಗಿ ಹೋರಾಟ ಹಾಗೂ ಸಾಮ್ರಾಜ್ಯಶಾಹಿ ದುರಾಕ್ರಮಣಗಳಿಗೆ ಅವಕಾಶವಾಗಿದೆ: ಯುದ್ಧಗಳಿಗೆ ಕಾರಣವಾಗಿದೆ. ಆದ್ದರಿಂದ ಅಹಿಂಸೆ ಮತ್ತು ಚಿರಶಾಂತಿಯ ಆಧಾರದ ಮೇಲೆ ಸಮಾಜದ ರಚನೆಯಾಗ ಬೇಕಾದರೆ ಅರ್ಥವ್ಯವಸ್ಥೆ ವಿಕೇಂದ್ರೀಕೃತವಾಗಬೇಕು. ವಿಕೇಂದ್ರೀಕೃತ ಅರ್ಥವ್ಯವಸ್ಥೆಯಲ್ಲಿ ಮನುಷ್ಯ ಕೇಂದ್ರಬಿಂದುವಾಗಿರತಕ್ಕದ್ದು, ಶ್ರಮಶಕ್ತಿಯ ಉಪಯೋಗದಿಂದ ವಸ್ತುಗಳ ಉತ್ಪಾದನೆಯಾಗತಕ್ಕದ್ದು, ಪೈಪೋಟಿ ಮಾಯವಾಗಿ ಸಹಕಾರ ಸರ್ವವ್ಯಾಪಕವಾಗಿರುತ್ತದೆ. ಉತ್ಪಾದನೆ ವ್ಯವಸ್ಥೆ ಕೃಷಿ ಮತ್ತು ಗೃಹಕೈಗಾರಿಕೆಗಳ ಮೇಲೆ ನಿಂತಿರತಕ್ಕದ್ದಾಗಿದೆ. ಕೃಷಿ, ಗೋಪಾಲನೆ, ಸಿದ್ಧವಸ್ತುಗಳ ಮಾರಾಟ ಮುಂತಾದವು ಸಹಕಾರದ ಆಧಾರದ ಮೇಲೆ ಜರುಗಬೇಕು. ಲಕ್ಷಾಂತರ ಗ್ರಾಮಗಳ ಕೋಟಿಕೋಟಿ ಕುಟೀರಗಳಲ್ಲಿ ಅನುಭೋಗ ವಸ್ತುಗಳ ತಯಾರಿಕೆ ಸಮೃದ್ಧಿಯಾಗಿ ಆಗಬೇಕು. ಇಂಥ ವ್ಯವಸ್ಥೆಯಲ್ಲಿ ಪರಮಾವಧಿ ಉದ್ಯೋಗ, ಹೇರಳ ಉತ್ಪಾದನೆ, ಸ್ಥಳೀಯ ವಿತರಣೆ, ಶೋಷಣರಾಹಿತ್ಯ, ಕೆಲಸಗಾರನಿಗೆ ತಕ್ಕ ಕೌಶಲದ ಔನ್ನತ್ಯದ ಸಾಧನೆ ಮತ್ತು ತಾನೇ ಉತ್ಪಾದಿಸಿದೆನೆಂಬ ಸಂತೋಷ ಎಲ್ಲವೂ ಲಭ್ಯವಾಗುತ್ತವೆ. ಇಂಥ ಉತ್ಪಾದನೆಯ ವ್ಯವಸ್ಥೆಯಲ್ಲಿ ಯಂತ್ರಗಳ ಸ್ಥಾನ ಆದಷ್ಟು ಕಡಿಮೆಯಾಗಿರತಕ್ಕದ್ದು. ಯಂತ್ರಗಳ ಕುರಿತು ಭ್ರಾಂತಿ ಇರುವುದಿಲ್ಲ. ಯಂತ್ರ ಇಂದಿನಂತೆ ಮಾನವನ ಉದ್ಯೋಗಾವಕಾಶವನ್ನು ಚೌರ್ಯ ಮಾಡುವ ಮಾರಕಶಕ್ತಿ ಯಾಗಿರುವುದಿಲ್ಲ. ಯಾವ ಯಾವ ಕ್ಷೇತ್ರಗಳಲ್ಲಿ ಕೇವಲ ಅನಿವಾರ್ಯವೋ ಅಂಥ ಕಡೆ ಮಾತ್ರ ಯಂತ್ರ ಉಪಯೋಗಿಸಲ್ಪಡುತ್ತದೆ. ಅನಿವಾರ್ಯವಾಗಿ ಯಂತ್ರೋಪಕರಣಗಳ ಸಹಾಯದಿಂದ ದೊಡ್ಡ ಉದ್ಯಮಗಳೂ ರೈಲ್ವೆ ಸಾರಿಗೆ ಮುಂತಾದವು ಇರಲೇಬೇಕೋ ಅಂಥ ಎಡೆಗಳಲ್ಲಿ ಅವುಗಳ ಒಡೆತನ ಸರ್ಕಾರಕ್ಕೆ ಸೇರಿರಬೇಕು.

ಗಾಂಧಿಯವರು ಮೇಲೆ ಕಾಣಿಸಿದ ಆದರ್ಶ ಆರ್ಥಿಕ ವ್ಯವಸ್ಥೆಯ ರೂಪ ರೇಷೆಯನ್ನು ಕೊಟ್ಟಿದ್ದರೂ ಪ್ರಚಲಿತ ಸಮಸ್ಯೆಗಳ ಬಗ್ಗೆ ಅವರು ಗಮನಹರಿಸದೆ, ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸದೆ ಇರಲಿಲ್ಲ. ಬಂಡವಾಳವಾದ, ಸಾಮ್ಯವಾದ, ಸಮಾಜ ವಾದ ಇವುಗಳ ಬಗ್ಗೆ ಅವರ ಅಭಿಪ್ರಾಯ ಸ್ಪಷ್ಟವೂ ಖಚಿತವೂ ಆಗಿತ್ತು.

ಬಂಡವಾಳವಾದದ ಅಳಿವು ಆವಶ್ಯಕ. ಆದರೆ ಬಂಡವಾಳಗಾರರನ್ನು ಹಿಂಸಾಮಾರ್ಗದಿಂದ ನಿರ್ನಾಮ ಮಾಡಿದರೆ ಬಂಡವಾಳಶಾಹಿಯ ನಾಶವಾಗುವುದಿಲ್ಲ. ಮನುಷ್ಯನಲ್ಲಿ ರೂಢವಾಗಿರುವ ಲೋಭ ಮತ್ತು ಪರಿಗ್ರಹ ಪ್ರವೃತ್ತಿ ದೂರವಾಗುವಂತೆ ಪ್ರಯತ್ನಪಡಬೇಕು. ಅದಕ್ಕೆ ಹೃದಯಪರಿವರ್ತನ ಮಾರ್ಗವೇ ಶ್ರೇಷ್ಠ ಮಾರ್ಗ,

ಬಂಡವಾಳ ಮತ್ತು ಕಾರ್ಮಿಕರ ನಡುವೆ ನಿರಂತರ ಸಂಘರ್ಷವಿರುವುದು ಅನಿವಾರ್ಯವಲ್ಲ. ಕಾರ್ಮಿಕರ ಸಹಕಾರವಿಲ್ಲದೆ ಬಂಡವಾಳ ಏನನ್ನೂ ಸಾಧಿಸಲಾರದು. ಕೆಲಸಗಾರರ ವರ್ಗದಲ್ಲಿ ಸಂಘಟನೆ ಆಗಿ ಅದರ ಶಕ್ತಿಯ ಅರಿವಾದರೆ ಅದನ್ನು ಬಂಡವಾಳವರ್ಗ ಶೋಷಣೆ ಮಾಡಲು ಸಾಧ್ಯವೇ ಇಲ್ಲ. ಎಲ್ಲಿ ಶೋಷಣೆ, ಅನ್ಯಾಯ ತಲೆದೋರುತ್ತದೋ ಅಲ್ಲಿ ಕಾರ್ಮಿಕರು ಶೋಷಕರೊಡನೆ ಅಹಿಂಸಾತ್ಮಕವಾಗಿ ಅಸಹಕರಿಸುವುದರ ಮೂಲಕ ಮುಕ್ತರಾಗಬಹುದು.

ಉದ್ಯಮದ ಒಡೆಯರು ತಾವು ತಮ್ಮ ಸ್ವತ್ತಿನ ಧರ್ಮದರ್ಶಿಗಳೆಂದು ಮನಗಾಣ ಬೇಕು. ಕೆಲಸಗಾರನ್ನೂ ಉದ್ಯಮದ ಪಾಲುದಾರರೆಂದು ಭಾವಿಸಬೇಕು. ಯೋಗ್ಯ ವೇತನ ಮತ್ತು ಕೆಲಸದ ಭದ್ರತೆಯ ಭರವಸೆಯನ್ನು ಕೆಲಸಗಾರರಿಗೆ ದೊರಕಿಸಿಕೊಡಬೇಕು. ಅವರ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಪ್ರಗತಿಗೆ ಸೌಕರ್ಯಗಳನ್ನು ಒದಗಿಸತಕ್ಕದ್ದು. ಕೆಲಸಗಾರರು ತಮಗೆ ದೊರೆಯುವ ಬಿಡುವು ಮತ್ತು ಹೆಚ್ಚಿನ ವೇತನವನ್ನು ಸ್ವಚ್ಛ ಮನ ಸ್ವಚ್ಛ ಆತ್ಮ ಇವುಗಳ ಸಾಧನೆಗೆ ವಿನಿಯೋಗಿಸಬೇಕು.

ಸಮಾಜವಾದವನ್ನು ಸರಿಯಾದ ರೀತಿಯಲ್ಲಿ ಅನ್ವಯಿಸಿದ್ದಾದರೆ ಅದೊಂದು ಅತ್ಯುಚ್ಚ ತತ್ತ್ವವೇ ಸರಿ. ಆದರೆ ಅದನ್ನು ಬಲವಂತವಾಗಿ ಹಿಂಸಾಮಾರ್ಗದಲ್ಲಿ ಅನ್ವಯಿಸಲು ಹೋದರೆ ಅದೊಂದು ಪಾಶವೀಪ್ರಯೋಗವಾಗುತ್ತದೆ. ನಿಜವಾದ ಸಮಾಜವಾದವೆಂದರೆ ಅಮೂಲ್ಯವಾದ ಅಪರಿಗ್ರಹತತ್ತ್ವವನ್ನು ಸಮಾಜಕ್ಕೆ ಅನ್ವಯಿಸುವುದು. ಈ ಕಾರ್ಯ ಮನಃಪೂರ್ವಕವಾಗಿ ಅಹಿಂಸಾತ್ಮಕವಾಗಿ ಅನ್ವಯವಾದರೆ ಅದರಿಂದ ಮಾನವಕಲ್ಯಾಣ ಸಾಧಿತವಾಗುತ್ತದೆ. ಸಮಾಜವಾದ ಕೇಂದ್ರೀಕೃತ ಸರ್ಕಾರದಿಂದ ಇಳಿದು ಬರುವುದಿಲ್ಲ. ಅದರ ಆದರ್ಶವನ್ನು ಜನರು ತಾವಾಗಿಯೇ ಅಂಗೀಕರಿಸಿದರೆ ಅಥವಾ ಶಾಂತಿಯುತ ಪರಿವರ್ತನೆ ಮತ್ತು ಅನುನಯಗಳಿಂದ ಅವರು ಒಪ್ಪುವಂತೆ ಮಾಡಿದುದಾದರೆ, ಅದು ಯಶಸ್ವಿಯಾಗುತ್ತದೆ. ವ್ಯಕ್ತಿಗಳು ತಮ್ಮ ಆಸೆ ಅಪೇಕ್ಷೆಗಳನ್ನು ಕಡಿಮೆ ಮಾಡಿಕೊಂಡು, ಇರುವ ವಸ್ತುಗಳು ಸರ್ವರ ಉಪಯೋಗಕ್ಕೂ ಹಂಚಿಕೆಯಾಗ ಬೇಕೆಂಬ ಅಂತಃಕರಣದಿಂದ ಕೂಡಿ, ತಮಗೆ ಅತ್ಯಗತ್ಯವಾದಷ್ಟು ಮಾತ್ರವೇ ಆವಶ್ಯಕ ವಸ್ತುಗಳನ್ನು ಬಳಸಬೇಕು. ಸಮಾಜದ ಸಂಪತ್ತನ್ನು ಹೆಚ್ಚಿಸಲು ಹಿತವನ್ನು ಸಂವರ್ಧಿಸಲು ತಮ್ಮ ಸಕಲ ಶಕ್ತಿ ಸಾಮರ್ಥ್ಯಗಳನ್ನೂ ವಿನಿಯೋಗಿಸುವ ಮನೋಭಾವವನ್ನು ಅವರು ಹೊಂದಿರಬೇಕು. ಮೇಲಾಗಿ ಜಗತ್ತಿನಲ್ಲಿರುವ ಸರ್ವಸ್ವವೂ ಈಶ್ವರನದೆಂಬ ಸತ್ಯವನ್ನು ಅರಿತು. ತಮ್ಮಲಿರುವುದನ್ನೆಲ್ಲ ಜನತಾಜನಾರ್ಧನನ ಸೇವೆಗಾಗಿ ವಿನಿಯೋಗಿಸಬೇಕು. ಯಾರೊಬ್ಬರ ಸ್ವತ್ತಿಗಾಗಲಿ ಸಂಪತ್ತಿಗಾಗಲಿ ಆಸೆ ಪಡಬಾರದು. ಪ್ರತಿಯೊಬ್ಬನೂ ತನ್ನ ದೇಹಶಕ್ತಿ, ಬುದ್ಧಿ, ಸಂಪತ್ತು ಎಲ್ಲಕ್ಕೂ ತಾನು ಧರ್ಮದರ್ಶಿಯೆಂದು ಭಾವಿಸಿ, ಸಂಪಾದನೆಯ ಫಲದಲ್ಲಿ ತನ್ನ ಬದುಕಿಗೆ ಎಷ್ಟು ಅಗತ್ಯವೂ ಅಷ್ಟನ್ನು ತಾನು ಬಳಸಿಕೊಂಡು ಮಿಕ್ಕದ್ದನ್ನೆಲ್ಲ ಸಮಾಜದ ಹಿತಕ್ಕಾಗಿ ಧಾರೆ ಎರೆಯಬೇಕು. ಅಂಥ ವ್ಯಕ್ತಿಗಳನ್ನುಳ್ಳ ಸಮಾಜದಲ್ಲಿ ಸ್ವಾತಂತ್ರ್ಯ, ಸಮತೆ, ಸಮೃದ್ಧಿ ಮತ್ತು ಶಾಂತಿ ಶಾಶ್ವತವಾಗಿ ನೆಲೆಗೊಂಡಿರುತ್ತವೆ. (ಬಿ.ಆರ್.ಪಿ.)

**ಗಾಂಧಿಯವರ ಶಿಕ್ಷಣ ತತ್ತ್ವದೃಷ್ಟಿ:** ಶಿಕ್ಷಣದ ಬಗ್ಗೆಯೂ ಗಾಂಧಿ ಅವರು ತತ್ತ್ವ ಚಿಂತನೆ ನಡೆಸಿ ಪ್ರಯೋಗಗಳ ಮೂಲಕ ಅವನ್ನು ಪರೀಕ್ಷಿಸಿ ನೋಡಿದರು. ಅದರ ಫಲವಾಗಿ 20ನೆಯ ಶತಮಾನದ ನಾಲ್ಕನೆಯ ದಶಕದಲ್ಲಿ ಪೂರ್ಣವಾಗಿ ಭಾರತೀಯ ವೆನ್ನಬಹುದಾದ ನೂತನ ಶಿಕ್ಷಣ ಪದ್ಧತಿಯೊಂದು ರೂಪುಗೊಂಡಿತು. ಅವರ ಧಾರ್ಮಿಕ ದೃಷ್ಟಿಯಿಂದ ದೇವರೇ ಸತ್ಯ. ಅದನ್ನು ಸಾಧಿಸಲು ಅಹಿಂಸೆಯೇ ಮಾರ್ಗ. ಸ್ವಾತಂತ್ರ್ಯ ಸತ್ಯದ ಒಂದು ಮುಖ. ಪ್ರತಿರಾಷ್ಟ್ರಕ್ಕೂ ತನ್ನದೇ ಆದ ಶಿಕ್ಷಣಪದ್ಧತಿಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯ ಅಗತ್ಯ. ಭಾರತ ಆಧ್ಯಾತ್ಮಿಕ ದೃಷ್ಟಿಗೆ ಪ್ರಾಚೀನಕಾಲದಿಂದಲೂ ಜೀವನವನ್ನು ಮುಡಿಪಾಗಿರಿಸಿರುವುದರಿಂದ ಅಂಥ ಶಿಕ್ಷಣ ಆಧ್ಯಾತ್ಮಿಕ ತತ್ತ್ವ ದೃಷ್ಟಿಯನ್ನು ಅವಲಂಬಿಸಿರಬೇಕು. ಆದರೂ ಫಲಾಪೇಕ್ಷೆಯನ್ನು ಕಡೆಗಣಿಸುವಂತಿಲ್ಲ. ಆದ್ದರಿಂದ ಸತ್ಯ, ಅಹಿಂಸೆ, ಸೇವೆ, ಸಹಕಾರ, ಸಾಮಾಜಿಕ ನ್ಯಾಯ ಇವುಗಳ ಬುನಾದಿಯ ಮೇಲೆ ನೂತನ ಸಮಾಜದ ರಚನೆಗೆ ಅಂಥ ಶಿಕ್ಷಣಪದ್ಧತಿ ಉಪಕರಣವಾಗಬೇಕು. ಹೀಗೆ ತಮ್ಮ ಜೀವನದ ದೃಷ್ಟಿಯನ್ನು ಆಧಾರ ಮಾಡಿಕೊಂಡು ರೂಪಿಸಿದ ಅವರ ನೂತನ ಶಿಕ್ಷಣಪದ್ಧತಿ ಭಾರತದಲ್ಲಿ ಜೀವನಶಿಕ್ಷಣ, ಮೂಲಶಿಕ್ಷಣ, ನಯೀ ತಾಲೀಂ (ನೂತನ ಶಿಕ್ಷಣ) ಇತ್ಯಾದಿ ಹೆಸರುಗಳಿಂದ ಪ್ರಚಾರಕ್ಕೆ ಬಂದಿದೆ.

ಗಾಂಧೀಜಿ ತಮ್ಮ ಶಿಕ್ಷಣಪದ್ಧತಿಯನ್ನು ರೂಪಿಸುವ ವೇಳೆಗೆ ಶಿಕ್ಷಣಪ್ರಪಂಚದಲ್ಲಿ ನಿಸರ್ಗವಾದ, ಆದರ್ಶವಾದ, ಯಥಾರ್ಥವಾದ, ಫಲಪರಿಣಾಮಾನುಮೇಯವಾದ– ಎಂಬ ನಾಲ್ಕು ತತ್ತ್ವ ದೃಷ್ಟಿಗಳು ಪ್ರಚಾರದಲ್ಲಿದ್ದವು. ನಿಸರ್ಗ ಸತ್ಯದ ಸಮಗ್ರತೆ;

ನಿಸರ್ಗ ಸಮಸ್ತ ಪದಾರ್ಥಸ್ವರೂಪ: ನಿಸರ್ಗಕ್ಕೆ ಅನ್ವಯಿಸುವ ವಿಧಾನಗಳನ್ನು ಅನ್ವಯಿಸಲು ಆಗದ ಯಾವ ಜ್ಞಾನ ಅಥವಾ ಅನುಭವದ ಕ್ಷೇತ್ರವೂ ಇಲ್ಲ; ಅಸ್ತಿತ್ವಕ್ಕೆ ಅತಿಮಾನುಷ ಅಥವ ಆಧ್ಯಾತ್ಮಿಕ ಪ್ರಪಂಚವೊಂದರ ಕೈವಾಡವಿಲ್ಲ. ಹಾಗೆಯೇ ಎಲ್ಲ ಪ್ರಕ್ರಿಯೆಗಳನ್ನೂ ಪದಾರ್ಥದ ಚಲನೆಯ ರೂಪದಲ್ಲಿ ವಿವರಿಸುವ ಭೌತ ಅಥವಾ ಯಂತ್ರಕೌಶಲವಾದವೂ ಸರಿಯಲ್ಲ–ಎಂದು ಪ್ರತಿಪಾದಿಸುತ್ತದೆ, ಆಧುನಿಕ ನಿಸರ್ಗವಾದ. ಇದನ್ನು ಮೊದಲು ರೂಸೋ ಅನಂತರ, ಪೆಸ್ಟಲಾಜಿ, ಹರ್ಬಾರ್ಟ್, ಸ್ಟಾನ್ಲಿ ಹಾಲ್, ಜಾನ್ ಡ್ಯೂಯಿ ಇವರು ಆಧಾರಮಾಡಿಕೊಂಡು ಶಿಕ್ಷಣ ಕ್ಷೇತ್ರಕ್ಕೆ ಅಳವಡಿಸಿಕೊಂಡರು. ಈ ವಿಧಾನದಂತೆ ಶಿಕ್ಷಣ ಸ್ವಾಭಾವಿಕ ಬೋಧನ ಕ್ರಮಗಳನ್ನು ಅನುಸರಿಸಬೇಕು. ಮಗುವಿನ ಜೀವನದಲ್ಲಿ ಸ್ವಾಭಾವಿಕ ಬೆಳವಣಿಗೆಯ ಅಂತಸ್ತುಗಳನ್ನು ಇದು ಅಂಗೀಕರಿಸುತ್ತದೆ. ಹಾಗೆಯೇ, ಸಿದ್ಧತೆಯ ಮಟ್ಟ, ವೈಯಕ್ತಿಕ ಭಿನ್ನತೆಗಳು ಮತ್ತು ಆಧುನಿಕ ಶಿಕ್ಷಣದ ಪ್ರಗತಿಪರ ಅಂಶಗಳನ್ನು ಪುರಸ್ಕರಿಸುತ್ತದೆ. ಶಿಕ್ಷಣ ಮಕ್ಕಳ ಸ್ವಾಭಾವಿಕ ಬೆಳವಣಿಗೆಗೆ ಅನುಗುಣವಾಗಿರ ಬೇಕೆಂದೂ ಕೆಲವು ಚಟುವಟಿಕೆ ಮತ್ತು ಅನುಭವಗಳ ಆಧಾರದ ಮೇಲೆ ಸಾಗಬೇಕೆಂದೂ ಶಿಸ್ತು ಮಕ್ಕಳ ಸ್ವಪ್ರೇರಣೆಯಿಂದ ಮೂಡಬೇಕೆಂದೂ ವಾದಿಸುತ್ತದೆ. ವೈಯಕ್ತಿಕ ಗಮನ, ಇಂದ್ರಿಯಗಳ ಬಳಕೆ, ಆರೋಗ್ಯಜೀವನ, ಅನುಭವಗಳ ಫಲವಾಗಿ ಅಂತರ್ಜನ್ಯವಾಗಿ ವೃದ್ಧಿಸುವ ನೈತಿಕ ಬೆಳವಣಿಗೆ (ಹೊರಗಿನ ಕಟ್ಟುನಿಟ್ಟುಗಳಿಂದಲ್ಲ) –ಇವುಗಳಿಗೆ ಪ್ರಾಧಾನ್ಯ ವೀಯುತ್ತದೆ. ಆದರೆ 18ನೆಯ ಶತಮಾನದ ಅಧ್ಯಾತ್ಮವಾದವನ್ನೂ ತರ್ಕಪ್ರಮಾಣ ವಾದವನ್ನೂ ಇದು ವಿರೋಧಿಸುತ್ತದೆ. ಮುಖ್ಯವಾಗಿ ಕೃತಕರೀತಿಯ ಕಟ್ಟುಕಟ್ಟಳೆಗಳಿಗೆ ಬದಲಾಗಿ ಶಿಕ್ಷಣ ಸ್ವಾಭಾವಿಕ ರೀತಿಯದಾಗಿದ್ದು ನಿಸರ್ಗದ ಮಡಿಲಲ್ಲಿ ನಡೆಯಬೇಕೆಂದು ವಾದಿಸುತ್ತದೆ. ಒಂದು ದೃಷ್ಟಿಯಲ್ಲಿ ಇದು ಆದಿಕಾಲದ ಸಮಾಜ ರಚನೆಗೆ ಶರಣು ಹೋಗಬೇಕೆಂದೂ ಸೂಚಿಸುತ್ತದೆ.

ಆದರ್ಶವಾದ ವಿಚಾರವಿವರಣೆಯಲ್ಲಿ ಪ್ರಧಾನವಾಗಿ ಚಿತ್‌ಸತ್ಯತೆಯನ್ನು ಒತ್ತಿ ಹೇಳುತ್ತದೆ. 'ಪ್ರಪಂಚ ಮನಸ್ಸಿನ ಅಥವಾ ಬುದ್ಧಿಯ ಕಲ್ಪನೆ; ಶಾಶ್ವತವಾದ್ದು ಚಿತ್‌ಸ್ವರೂಪದ್ದು; ಆದ್ದರಿಂದ ಎಲ್ಲ ಜ್ಞಾನವೂ ಮನಸ್ಸನ್ನು ಅವಲಂಬಿಸಿದ್ದು ಅದರ ಕ್ರಿಯಾಪರಿಮಿತಿಯೊಳಗೇ ಇರತಕ್ಕದ್ದು. ಕಲೆ, ಶಿಕ್ಷಣ, ಧರ್ಮ, ವಿಜ್ಞಾನ, ತರ್ಕ ಇವೆಲ್ಲಕ್ಕೂ ಮೂಲಕಾರಕ ಚೈತನ್ಯ. ಇಂದ್ರಿಯಗೋಚರ ಬಾಹ್ಯ ಜಗತ್ತೆಲ್ಲ ಶಿಕ್ಷಣದಲ್ಲಿ ಭಾವನಾಮಯವಾದುದು' ಎಂದು ಪ್ರತಿಪಾದಿಸುತ್ತಿದೆ. ಇದರ ಪ್ರಭಾವದಿಂದ ಹಿಂದಿನವರ ಆದರ್ಶಗಳಿಗೂ ಸಂಪ್ರದಾಯಗಳಿಗೂ ಪ್ರಾಮುಖ್ಯ ಬಂತು. ಜೀವನದ ಉದ್ದೇಶ ಪರಮಾರ್ಥವೆಂಬುದನ್ನು ಎತ್ತಿಹಿಡಿದು ಅದರ ಸಾಧನೆಗಾಗಿ ಇಂದ್ರಿಯನಿಗ್ರಹ, ಭಾವ ಮತ್ತು ಬುದ್ಧಿಗಳ ಆದರ್ಶಪಥದಲ್ಲಿ ನಿರೂಪಣೆ ಇತ್ಯಾದಿಯಾದ ಶಿಕ್ಷಣ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಟ್ಟಿತು.

ಯಥಾರ್ಥವಾದ (ವಾಸ್ತವ) ಜ್ಞಾನ ವಸ್ತುಗಳನ್ನು ಅರಿಯುವ ಕಾರ್ಯಕ್ಕಿಂತ ಬೇರೆಯಾದ್ದೆಂದೂ ಅದು ಅರಿಯುವ ಕಾರ್ಯವನ್ನು ಅವಲಂಬಿಸಿರದೆ ಸ್ವತಂತ್ರ್ಯ ಅಸ್ತಿತ್ವ ತಳೆದಿದೆಯೆಂದೂ ಅದರ ಸ್ವಭಾವ ಮತ್ತು ಲಕ್ಷಣಗಳು ಅರಿಯುವ ಕಾರ್ಯದಿಂದ ರೂಪುಗೊಳ್ಳುವುದಿಲ್ಲ ಮತ್ತು ಬದಲಾಗುವುದಿಲ್ಲವೆಂದೂ ಪ್ರತಿಪಾದಿಸುತ್ತದೆ. ಶಿಕ್ಷಣದಲ್ಲಿ ಕೇವಲ ಶಬ್ದಗಳನ್ನೊಳಗೊಂಡ ಕಾರ್ಯಕ್ರಮಗಳಿಗೇ ಪ್ರಾಮುಖ್ಯವೀಯುವುದನ್ನು ಇದು ವಿರೋಧಿಸುತ್ತದೆ. ಶಿಕ್ಷಣದಿಂದ ವ್ಯಕ್ತಿಯಾದವನು ವಿಚಾರ ಮಾಡುವುದನ್ನು ಕಲಿತು ಜೀವನದಲ್ಲಿ ಒದಗಬಹುದಾದ ವಿವಿಧ ಸನ್ನಿವೇಶಗಳಿಗೆ ಹೊಂದಿಕೊಂಡು ಹೋಗುವ ಶಕ್ತಿಯನ್ನು ಸಾಧಿಸಬೇಕೆಂದು ಪ್ರತಿಪಾದಿಸುತ್ತದೆ. ಜ್ಞಾನ ಮತ್ತು ಅದರ ಸಾಧನೆಗಾಗಿ ನಡೆಸುವ ಚಟುವಟಿಕೆಗಳೆರಡಕ್ಕೂ ಶಿಕ್ಷಣದಲ್ಲಿ ಪ್ರಾಧಾನ್ಯವೀಯುತ್ತದೆ. ಮಾನವನ ವರ್ತನೆಯ ಪರಿವರ್ತನೆಯಲ್ಲಿ ಬಾಹ್ಯ ಸನ್ನಿವೇಶಗಳ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಶಿಕ್ಷಣದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶವಿರಬೇಕೆಂದು ಪ್ರತಿಪಾದಿಸಿದರೂ ಅದು ಇತರರ ಹಕ್ಕಿಗೂ ನೆಮ್ಮದಿಗೂ ಮಾರಕವಾಗಬಾರದೆಂದು ಸೂಚಿಸುತ್ತದೆ. ಮಾನವನ ಸ್ವಭಾವದಲ್ಲೂ ಸಮಾಜಜೀವನದಲ್ಲೂ ಬುದ್ಧಿಗ್ರಾಹ್ಯ ಅಂಶಗಳಿವೆಯೆಂದು ಅವು ವ್ಯಕ್ತಿಯ ಮತ್ತು ಸಮಾಜದ ಜೀವನಕ್ಕೆ ಮಾರ್ಗದರ್ಶನವಾಗ ಬಲ್ಲವೆಂದೂ ವಿವರಿಸುತ್ತದೆ.

ಫಲಪರಿಣಾಮಾನುಮೇಯವಾದವನ್ನು (ಪ್ರಾಗ್ಮಟಿಸಂ) ಪೇರ್ಸ್, ಡ್ಯೂಯಿ ಮುಂತಾದ ಅಮೆರಿಕದ ತತ್ತ್ವಚಿಂತಕರು ಪ್ರತಿಪಾದಿಸಿ ಶಿಕ್ಷಣಕ್ಷೇತ್ರಕ್ಕೆ ಅನ್ವಯಿಸಿಕೊಂಡರು. ವಿಲಿಯಂ ಜೇಮ್ಸ್ ಅದಕ್ಕೆ ಮನೋವಿಜ್ಞಾನದ ಬೆಳಕಿನಲ್ಲಿ ಅರ್ಥ ಕಲ್ಪಿಸಿಕೊಟ್ಟ. ಅದರ ಪ್ರಕಾರ ಒಂದು ಭಾವನೆಯ ಅರ್ಥ ಅದು ನಿರ್ದೇಶಿಸುವ ನಡೆವಳಿಕೆಯಲ್ಲಿರುತ್ತದೆ. ಎಲ್ಲ ಭಾವನೆಗಳಲ್ಲೂ ಅವುಗಳ ಅಭ್ಯಾಸದಲ್ಲಿರಬಹುದಾದ ವ್ಯತ್ಯಾಸಗಳಿಂದ ಅವುಗಳ ವೈಶಿಷ್ಟ್ಯ ಕಾಣಿಸಿಕೊಳ್ಳುತ್ತದೆ. ಚಿಂತನೆ ಕಾರ್ಯವನ್ನು ನಿರ್ದೇಶಿಸುವ ಒಂದು ಪ್ರಕ್ರಿಯೆ. ಸತ್ಯ ಒಂದು ಸಾಮಾಜಿಕ ಮೌಲ್ಯ. ಬಹಿರಂಗವಾಗಿ ಚರ್ಚಿಸಿ ಪರೀಕ್ಷಿಸಿದಂತೆ ಆ ಮೌಲ್ಯಗಳು ಭಾವನೆಗಳಲ್ಲಿ ಸಂಗ್ರಹವಾಗುತ್ತವೆ. ವಾಸ್ತವ್ಯ ಅಥವಾ ಸತ್ಯ ಅಂತಿಮ ಸ್ವರೂಪದಲ್ಲಿ ಬಹುತ್ವದ್ದಾಗಿರುತ್ತದೆ. ಕೆಲವರು ಇದೊಂದು ಉಪಯುಕ್ತವಾದವೆಂದು ಪರಿಗಣಿಸಿ ಯಾವುದು ಉದ್ದೇಶವನ್ನು ಸಾಧಿಸುವುದೋ ಯಾವುದು ಹಿತಕರ ಫಲನೀಡುವುದೋ ಅದೇ ಸತ್ಯ ಎಂದು ಭಾವಿಸುವುದುಂಟು. ಹೇಗೆ ಆಗಲಿ, ಶಿಕ್ಷಣದಲ್ಲಿ ಇದು ತೀವ್ರ ರೀತಿಯ ಪರಿಣಾಮವನ್ನು ಮೂಡಿಸಿದೆ. ಜೀವನದಲ್ಲಿ ಯಾವುದು ಫಲದಾಯಕವೋ ಅದೆಲ್ಲ ಶಿಕ್ಷಣದ ಕಾರ್ಯಕ್ರಮದಲ್ಲಿ ಸೇರಬೇಕೆಂದೂ ಶಾಲೆ ವಿಶಾಲವೂ ಬಹುವಿಧವೂ ಆದ ಅನುಭವಗಳನ್ನೊದಗಿಸುವ ಸ್ಥಳವಾಗಬೇಕೆಂದೂ ಜ್ಞಾನ ಅನುಭವದಿಂದ ಸಿದ್ಧಿಸಬೇಕೆಂದೂ ಸೂಚಿಸುತ್ತದೆ. ವಿಜ್ಞಾನಕ್ಕೆ ಪ್ರಧಾನ ಸ್ಥಾನವನ್ನು ದೊರಕಿಸಿಕೊಟ್ಟು ಈ ತತ್ತ್ವಪಂಥ ಅನುಭವಗಳೇ ಪ್ರಧಾನವಾಗುಳ್ಳ ಉದ್ಯಮ ಪದ್ಧತಿಯ (ಪ್ರೊಜೆಕ್ಟ್) ಉಗಮಕ್ಕೆ ಅವಕಾಶ ಮಾಡಿಕೊಟ್ಟಿತು. ಯಾವುದನ್ನೇ ಆಗಲಿ ಅದರ ಪರಿಣಾಮದಿಂದ ಅರಿತುಕೊಳ್ಳಬೇಕೆನ್ನುವ ಈ ತತ್ತ್ವ ಪಂಥದ ದೃಷ್ಟಿಯಲ್ಲಿ ಅಂತಿಮ ಸ್ವರೂಪದ ಸತ್ಯವೆಂಬುದೇ ಇಲ್ಲ. ಅದು ನಿರಂತರವೂ ಪರಿವರ್ತನೆಯಾಗುತ್ತಿರುತ್ತದೆ. ಶಿಕ್ಷಣದಲ್ಲೂ ನಿರಂತರ ಪರಿವರ್ತನೆಗಳನ್ನು ಪ್ರೋತ್ಸಾಹಿಸುತ್ತದೆ.

ಗಾಂಧೀಜಿಯ ಶಿಕ್ಷಣ ಧೋರಣೆ ಮೇಲಿನ ನಾಲ್ಕು ತತ್ತ್ವಪಂಥಗಳಲ್ಲಿ ಯಾವ ಒಂದು ಪಂಥವನ್ನೂ ಆಧಾರಮಾಡಿಕೊಳ್ಳದಿದ್ದರೂ ಅವುಗಳಲ್ಲೊಂದೊಂದರ ಹಲಕೆಲವು ಅಂಶಗಳನ್ನು ಒಳಗೊಂಡಿದೆ. ಎಂದ ಮಾತ್ರಕ್ಕೆ ಆ ನಾಲ್ಕರಿಂದಲೂ ಆಯ್ದ ತತ್ತ್ವದೃಷ್ಟಿಗಳ ಆಧಾರದ ಮೇಲೆ ಅವರು ತಮ್ಮ ದೃಷ್ಟಿಯನ್ನು ರೂಪಿಸಿದರೆಂದು ಭಾವಿಸಕೂಡದು ಅದನ್ನು ಅವರು ಪ್ರತ್ಯೇಕವಾಗಿ ತಮ್ಮ ಜೀವನದರ್ಶನದ ವಿಶಿಷ್ಟಪ್ರಭಾವದಿಂದ ರೂಪಿಸಿದರು. ಅದರೂ ಅವರ ತತ್ತ್ವದೃಷ್ಟಿ ಯಾವ ಯಾವ ಅಂಶಗಳಲ್ಲಿ ಮೇಲಿನ ತತ್ತ್ವಪಂಥಗಳನ್ನು ಹೋಲುತ್ತದೆಂಬುದನ್ನು ಪರಿಶೀಲಿಸಬೇಕಾಗಿದೆ.

ಗಾಂಧಿಯವರು ರೂಪಿಸಿದ ಮೂಲಶಿಕ್ಷಣ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಅನ್ವಯವಾಗುವಂಥದು. ಭಾರತದ ಜನತೆಯ ಶೇ. 80 ರಷ್ಟು ಭಾಗ ಗ್ರಾಮಗಳಲ್ಲಿ ಜೀವಿಸುವುದರಿಂದ ಭಾರತದಲ್ಲಿ ರೂಪಿಸುವ ಯಾವ ರಾಷ್ಟ್ರೀಯ ಶಿಕ್ಷಣ ಯೋಜನೆಯೇ ಆಗಲಿ ಪ್ರಥಮತಃ ಅವರ ಹಿತದೃಷ್ಟಿಗೆ ಒಪ್ಪುವಂತೆ ರೂಪಗೊಳ್ಳ ಬೇಕೆಂಬುದು ಸ್ವಾಭಾವಿಕ. ಗ್ರಾಮಗಳು ನಿಸರ್ಗದ ಮಡಿಲಲ್ಲಿರುವುದರಿಂದ ಅದರೊಡನೆ ಸಂಪರ್ಕ ಹೊಂದಿ ಅದರಿಂದ ಪರಿಣಾಮ ಹೊಂದಿ ಬೆಳೆಯಲು ಅವಕಾಶವಿದೆ. ಜೀವನದಲ್ಲಿ ಕಂಡುಬರುವ ಒಂದು ಸ್ವಾಭಾವಿಕ ಸನ್ನಿವೇಶವನ್ನು (ಕಸಬು) ಆಧಾರ ಮಾಡಿಕೊಂಡು ಅಲ್ಲಿ ಕಲಿಯುವ ರೀತಿಯಲ್ಲಿ ಶಾಲೆಯಲ್ಲೂ ಮಕ್ಕಳು ಶಿಕ್ಷಣ ಪಡೆಯಬೇಕೆಂಬ ಅವರ ದೃಷ್ಟಿ ನಿಸರ್ಗವಾದದ ತತ್ತ್ವದೃಷ್ಟಿಯನ್ನು ಅಳವಡಿಸಿಕೊಂಡಿದೆ. ಕೃತಕರೀತಿಯಲ್ಲಿ ವಿಷಯಗಳನ್ನು ಪ್ರತ್ಯೇಕಿಸಿ ವರ್ಗೀಕರಿಸುವುದರ ಬದಲು ಜೀವನದಲ್ಲಿ ಅವು ಪಾತ್ರವಹಿಸುವ ಸ್ವರೂಪದಲ್ಲಿ ಕಲಿಸುವುದೂ ಆ ತತ್ತ್ವದೃಷ್ಟಿಯನ್ನೇ ವ್ಯಕ್ತಪಡಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಪರಮಚೈತನ್ಯ ಸ್ವರೂಪನ ಒಂದು ಅಂಶವೆಂದು ಅವರು ನಂಬಿದ್ದುದರಿಂದ ಅದು ಆದರ್ಶವಾದದಲ್ಲಿ ಕಂಡುಬರುವ ಅಂಶವೆಂಬುದನ್ನು ಗುರುತಿಸಬಹುದು. ಅನ್ಯಭಾಷೆಯೊಂದರ ಮೂಲಕ ಅನ್ಯಸಂಸ್ಕೃತಿಯೊಂದನ್ನು ಕುರಿತ ವಿದ್ಯೆ ಕಲಿಯುವುದು ನಮ್ಮವರಿಗೆ ಅಸ್ವಾಭಾವಿಕವೆಂದು ಬಗೆದು 'ಇಲ್ಲಿನವರ ಶಿಕ್ಷಣ, ಇಲ್ಲಿನ ಜನತೆಯ ಜೀವನಕ್ಕೆ ಸಂಬಂಧಿಸಿದಂತೆ ನಡೆಯಬೇಕು; ಅವರ ಮಾತೃಭಾಷೆಯಲ್ಲಿ ನಡೆಯಬೇಕು; ಇಲ್ಲಿನವರ ಜೀವನ ವಿಧಾನದಲ್ಲಿ ನಡೆಯಬೇಕು. ಹಾಗೂ ಬಡತನದ ಈ ವಿಶಾಲ ದೇಶದಲ್ಲಿ ಅಷ್ಟಾಗಿ ಧನದ ಅಗತ್ಯವಿರದೆ ನಡೆಯಬೇಕು' ಎಂಬ ಅವರ ದೃಷ್ಟಿ ಯಥಾರ್ಥವಾದವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಸಮಾಜದಲ್ಲಿ ಜೀವನೋಪಾಯಕ್ಕಾಗಿ ಜನತೆ ಅನುಸರಿಸುತ್ತಿರುವ ಕಸಬೊಂದನ್ನು ಕೇಂದ್ರವಾಗಿ ಮಾಡಿಕೊಂಡು ಅದನ್ನು ಕಲಿಯಲು ಅಗತ್ಯವೆನಿಸುವ ಜ್ಞಾನ, ಕೌಶಲ, ಮನೋಭಾವ ಇವುಗಳನ್ನು ಕಲಿಸುವ ಯತ್ನ ಫಲ ಪರಿಣಾಮಾನುಮೇಯವಾದದ ಮುಖ್ಯ ಅಂಶವನ್ನು ಅಳವಡಿಸಕೊಂಡಿದೆ. ಹಾಗೂ ಅನುಭವಗಳ ಮೂಲಕ ಶಿಕ್ಷಣ ದೊರಕಿಸಬೇಕೆಂಬ ಆ ತತ್ತ್ವಪಂಥದ ವಿಧಾನವನ್ನು ಅನುಸರಿಸುತ್ತದೆ. ಸದ್ಯದಲ್ಲಿ ಎಲ್ಲ ದೇಶಗಳಲ್ಲೂ ಫಲ ಪರಿಣಾಮವಾದಕ್ಕೆ ಪ್ರಾಶಸ್ತ್ಯ ದೊರಕುತ್ತಿದೆ. ಅದನ್ನು ಆಧಾರಮಾಡಿಕೊಂಡು ಮೊಟ್ಟಮೊದಲು 20ನೆಯ ಶತಮಾನದ ಆದಿಯಲ್ಲಿ ಜಾನ್ ಡ್ಯೂಯಿಯವರು ಉದ್ಯಮ ಶಾಲೆಗಳನ್ನು ಅಮೆರಿಕದಲ್ಲಿ ಆರಂಭಿಸಿದರು. ಅವರ ತತ್ತ್ವದೃಷ್ಟಿಯನ್ನು ಪ್ರಪಂಚದಾದ್ಯಂತ ಪುರಸ್ಕರಿಸಲಾಯಿತು. 20ನೆಯ ಶತಮಾನದ ಪ್ರಧಾನ ತತ್ತ್ವಚಿಂತಕರೆನಿಸಿರುವ ಅವರು ಮೂಲಶಿಕ್ಷಣ ಪದ್ಧತಿಯನ್ನು ಕುರಿತು 'ಅದು ನನ್ನ ಶಿಕ್ಷಣಪದ್ಧತಿಗಿಂತಲೂ ಒಂದು ಹಂತ ಮುಂದೆ ಸಾಗಿದೆ 'ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಇಂಥ ಅನೇಕ ಪ್ರಗತಿಪರ ಅಂಶಗಳನ್ನೊಳಗೊಂಡ ಗಾಂಧೀಜಿಯವರ ಶಿಕ್ಷಣದೃಷ್ಟಿ ಆಕಸ್ಮಿಕವಾಗಿ ರೂಪಗೊಂಡದ್ದಲ್ಲ. ಅವರ ಜೀವನದರ್ಶನ ಬೆಳೆದು ಪಕ್ವಗೊಂಡಂತೆ ಅವರ ಶಿಕ್ಷಣತತ್ತ್ವವೂ ರೂಪುಗೊಂಡಿತು. ಅದನ್ನವರು ಪ್ರತ್ಯೇಕವಾಗಿ ರೂಪುಗೊಳಿಸಲಿಲ್ಲ. ಅವರ ಜೀವನ ದರ್ಶನದ ಕಾರ್ಯಸ್ವರೂಪವಾಗಿ ಅವರ ಶಿಕ್ಷಣ ಪದ್ಧತಿ ಮೈದಾಳಿತು. ಆದ್ದರಿಂದ ಆ ಶಿಕ್ಷಣಪದ್ಧತಿಯಲ್ಲಿ ಅವರ ಜೀವನದ ತತ್ತ್ವದೃಷ್ಟಿ ಪ್ರತಿಬಿಂಬಿಸಿರುವುದು ಸ್ವಾಭಾವಿಕ.

ಗಾಂಧೀಜಿಯ ತತ್ತ್ವದೃಷ್ಟಿಯನ್ನು ಯಾವೊಂದು ಸಾಂಪ್ರದಾಯಿಕ ಹೆಸರಿನಿಂದಲೂ ಕರೆಯುವಂತಿಲ್ಲ. ಏಕೆಂದರೆ, ಅದರಲ್ಲಿರುವ ಲಕ್ಷಣಗಳು ಯಾವ ಒಂದು ತತ್ತ್ವಪಂಥವನ್ನು ಪೂರ್ಣವಾಗಿ ಅನುಸರಿಸುವುದಿಲ್ಲ. ಅದನ್ನು ಗಾಂಧೀವಾದವೆನ್ನುವುದು ಸೂಕ್ತ. ಅವರ ಈ ತತ್ತ್ವದೃಷ್ಟಿಯನ್ನು ಪೋಷಿಸಿದ್ದು ರಸ್ಕಿನ್ನರ 'ಅಂಟು ದಿಸ್ ಲ್ಯಾಸ್ಟ್' ಎಂಬ ಕೃತಿ. ವ್ಯಕ್ತಿಯ ಒಳ್ಳಿತು ಎಲ್ಲರ ಒಳ್ಳಿತಿನಲ್ಲೂ ಅಡಗಿದೆ. ತಮ್ಮ ತಮ್ಮ ದುಡಿಮೆಯಿಂದ ತಮ್ಮ ತಮ್ಮ ಜೀವನೋಪಾಯವನ್ನು ಹುಡುಕಿಕೊಳ್ಳಬೇಕೆಂಬ ದೃಷ್ಟಿಯಲ್ಲಿ ಒಬ್ಬ ನ್ಯಾಯವಾದಿಯ ಕೆಲಸ ಒಬ್ಬ ಕ್ಷೌರಿಕನ ಕೆಲಸದಷ್ಟೇ ಅಮೂಲ್ಯವಾದುದು. ಉಳುವ ರೈತನ, ದುಡಿಯುವ ಕಾರ್ಮಿಕನ ಜೀವನ ಅಷ್ಟೇ ಯೋಗ್ಯ ಜೀವನ – ಎಂಬ ನಂಬಿಕೆಯನ್ನು ಆ ಗ್ರಂಥಪಠನ ಅವರಲ್ಲಿ ಮೂಡಿಸಿತು. ಹಾಗೆಯೇ ಗೀತೆಯ ಪಠನದಿಂದ ಆತ್ಮವತ್ ಸರ್ವಭೂತೇಷು ಎಂಬ ದೃಷ್ಟಿಯನ್ನು ಆಗಲೇ ಅವರು ಅಂತರ್ಗತ ಮಾಡಿಕೊಂಡಿದ್ದರು. ತಮ್ಮ ಈ ಭಾವನೆಗಳನ್ನವರು ಒಟ್ಟಾರೆ ಸರ್ವೋದಯ ಎಂದು ಕರೆದರು. ಆ ತತ್ತ್ವದೃಷ್ಟಿಯನ್ನು ಕಾರ್ಯರೂಪಕ್ಕೆ ಇಳಿಸಲು ಸಿದ್ಧರಾದರು. ಆ ಕಾರ್ಯ ಅವರಿಗೆ ಸತ್ಯಶೋಧನೆಯಾಯಿತು. ಅದಕ್ಕೆ ಅಹಿಂಸೆ ಅಥವಾ ಪ್ರೇಮ ಪಥವಾಯಿತು.

**ಗಾಂಧೀಜಿಯ ಪ್ರಯೋಗಗಳು :** ತತ್ತ್ವದೃಷ್ಟಿಯ ಕಾರ್ಯಸ್ವರೂಪವೇ ಶಿಕ್ಷಣ ಎಂದು ಆಗಲೇ ಸೂಚಿಸಿದೆಯಷ್ಟೆ. ತಮ್ಮ ಸರ್ವೋದಯ ತತ್ತ್ವವನ್ನು ಪ್ರಯೋಗಿಸಿ ನೋಡಲು ಗಾಂಧೀಜಿ ಹಲವು ಪ್ರಯೋಗಗಳನ್ನು ನಡೆಸಿದರು. ಆ ಒಂದೊಂದು ಪ್ರಯೋಗವೂ ಒಂದೊಂದು ಶಿಕ್ಷಣಯೋಜನೆಯೆನ್ನಬಹುದು. ಫೀನಿಕ್ಸ್ ಆಶ್ರಮ, ಟಾಲ್‌ಸ್ಟಾಯ್ ಆಶ್ರಮ, ಸತ್ಯಾಗ್ರಹಾಶ್ರಮ, ಸೇವಾ ಗ್ರಾಮ ಆಶ್ರಮ ಇವೇ ಮೊದಲಾದವು ಸತ್ಯ – ಅಹಿಂಸಾ ಶಿಕ್ಷಣದ ಕೇಂದ್ರಗಳೆನಿಸಿದವು. ಟಾಲ್‌ಸ್ಟಾಯ್ ಆಶ್ರಮದಲ್ಲಿ ಅವರೇ ಶಿಕ್ಷಕರಾಗಿದ್ದರು. ತಮ್ಮ ಮತ್ತು ಇತರ ಮಕ್ಕಳಿಗೆ ಜೀವನೋಪಾಯದ ಕಸಬೊಂದರ ಮೂಲಶಿಕ್ಷಣ ಕೊಡಲು ತಾವೇ ಚಮ್ಮಾರನ ಕೆಲಸವನ್ನು ಕಲಿತರು. ಇದು ಅವರು ದಕ್ಷಿಣ ಆಫ್ರಿಕದಲ್ಲಿದ್ದಾಗ ನಡೆಸಿದ ಪ್ರಯೋಗ. ಅನಂತರ ಅವರು ಮಾತೃಭೂಮಿಗೆ ಹಿಂದಿರುಗಿದ ಮೇಲೆ ಅಹಮದಾಬಾದಿನ ಬಳಿ ಆಶ್ರಮವನ್ನು ಮಾಡಿಕೊಂಡು ಅಲ್ಲಿ ನೂಲುವುದು, ನೇಯುವುದು, ಮತ್ತು ಅವಕ್ಕೆ ಸಂಬಂಧಿಸಿದ ಇತರ ಕಾರ್ಯಗಳನ್ನೂ ಜೀವನೋಪಾಯದ ಕಸಬನ್ನಾಗಿ ಆರಿಸಿಕೊಂಡು ಅದರ ಆಧಾರದ ಮೇಲೆ ಶಿಕ್ಷಣವೀಯುವ ಬಗ್ಗೆ ಸತತವಾಗಿ ಪ್ರಯತ್ನ ನಡೆಸಿದರು. ಈ ಎಲ್ಲ ಪ್ರಯೋಗಗಳಲ್ಲಿ ದೊರೆತ ಅನುಭವಗಳಿಂದ ಕಸಬನ್ನು ಕೇಂದ್ರವಾಗಿ ಮಾಡಿಕೊಂಡು ಶಿಕ್ಷಣವೀಯುವುದರ ಯಥಾರ್ಥತೆಯನ್ನು ಚೆನ್ನಾಗಿ ಮನದಟ್ಟು ಮಾಡಕೊಂಡರು.

**ರಾಷ್ಟ್ರೀಯ ಶಿಕ್ಷಣ ಮತ್ತು ಸರ್ವೋದಯ :** ಒಂದೂ ಕಾಲು ಶತಮಾನಕ್ಕೂ ಹೆಚ್ಚು ಕಾಲ ಪಾಶ್ಚಾತ್ಯ ಶಿಕ್ಷಣಪದ್ಧತಿ ಭಾರತದ ಆದ್ಯಂತವೂ ಅಸ್ತಿತ್ವದಲ್ಲಿದ್ದರೂ ಅದು ಇಲ್ಲಿನವರ ಅಗತ್ಯಗಳನ್ನು ಪೂರೈಸಿರಲಿಲ್ಲ; ಆಶೋತ್ತರಗಳನ್ನು ಈಡೇರಿಸಿರಲಿಲ್ಲ. ಉನ್ನತ ಶಿಕ್ಷಣದಲ್ಲಿ ಇಂಗ್ಲಿಷ್ ಬೋಧನಮಾಧ್ಯಮವಾದ್ದರ ಫಲವಾಗಿ ಜನಸಾಮಾನ್ಯಕ್ಕೂ ಶಿಕ್ಷಣಪಡೆದವರಿಗೂ ಅಂತರ ಏರ್ಪಟ್ಟು ಜ್ಞಾನದ ಸಾರ್ವತ್ರಿಕ ಪ್ರಸಾರಕ್ಕೆ ಅವಕಾಶವಿಲ್ಲ ವಾಗಿತ್ತು. ಅನ್ಯಭಾಷೆಯಾದ ಇಂಗ್ಲಿಷಿಗೆ ಕೊಟ್ಟಿದ್ದ ಅನುಚಿತ ಪ್ರಾಧಾನ್ಯದ ಫಲವಾಗಿ, ಅದು ವಿದ್ಯಾವಂತರ ಮೇಲೆ ಒಂದು ಹೊರೆಯಾಗಿ ಪರಿಣಮಿಸಿ ಅವರ ಮನಶ್ಶಕ್ತಿಯನ್ನು ಕುಂದಿಸಿ ತಮ್ಮ ನಾಡಿನಲ್ಲೆ ಅವರು ಅಪರಿಚಿತರಂತಾಗುವಂತೆ ಮಾಡಿತ್ತು. ವೃತ್ತಿಶಿಕ್ಷಣಕ್ಕೆ ಅಷ್ಟಾಗಿ ಅವಕಾಶವಿಲ್ಲದಿದ್ದ ಆ ಪದ್ಧತಿ ವಿದ್ಯಾವಂತರನ್ನು ಉನ್ನತಕಾರ್ಯಗಳಿಗೆ ಯೋಗ್ಯರಲ್ಲದವರನ್ನಾಗಿ ಮಾಡಿ ಅವರ ದೈಹಿಕ ಶಕ್ತಿಯನ್ನು ಕುಂದಿಸುತ್ತಿತ್ತು. ಪ್ರಾಥಮಿಕ ಶಿಕ್ಷಣದಿಂದ ಕಲಿತ ಅಷ್ಟಿಷ್ಟೂ ಮರೆತುಹೋಗಿ, ಅದರ ನಗರ ಅಥವಾ ಗ್ರಾಮಜೀವನದಲ್ಲಿ ಅನುಪಯುಕ್ತವೆನಿಸುತ್ತಿತ್ತು. ಆ ಮಟ್ಟಿಗೆ ಅದರ ಮೇಲೆ ಹೂಡಿದ ಹಣ ವ್ಯರ್ಥವ್ಯಯ ವಾಗುತ್ತಿತ್ತು. ಅಲ್ಲದೆ ಆ ಪದ್ಧತಿಯಿಂದ ತೆರಿಗೆ ತೆರುವವನಿಗಾಗಲಿ ಅವನ ಮಕ್ಕಳಿಗಾಗಲಿ ಅನುಕೂಲ ಆಗುತ್ತಿರಲಿಲ್ಲ. ಎಲ್ಲೊ ಕೆಲವರಿಗೆ ಸರ್ಕಾರದ ಉದ್ಯೋಗ ದೊರಕುತ್ತಿತ್ತೇ ಹೊರತು ಬಹುತೇಕ ಜನತೆ ನಿರುದ್ಯೋಗ, ಅಜ್ಞಾನ, ದಾರಿದ್ರ್ಯ ಇವುಗಳಲ್ಲಿ ತೊಳಲುವಂತೆ ಮಾಡಿತ್ತಲ್ಲದೆ ಅಸಮಾನತೆ, ಅನುಚಿತಸ್ಪರ್ಧೆ, ಅಸೂಯೆ, ಹಿಂಸೆ ಇವುಗಳಿಗೆ ಪ್ರೋತ್ಸಾಹವೀಯುವಂತೆ ಮಾಡಿತ್ತು. ಆದರೆ ಗಾಂಧೀಜಿಯವರ ಕಲ್ಪನೆಯ ಸರ್ವೋದಯ ಸಮಾಜರಚನೆಗೆ ಸಮಾನತೆ, ಸಹಕಾರ, ಪ್ರೇಮ, ಅಹಿಂಸೆ ಈ ಅಂಶಗಳು ಆಧಾರವಾಗಬೇಕಿತ್ತು. ಅದಕ್ಕೆ ಜನತೆಯಲ್ಲಿ ಜ್ಞಾನ, ಉದ್ಯೋಗ, ಪ್ರಸಾರ, ದಾರಿದ್ರ್ಯ ನಿವಾರಣೆ ಇವು ಅಗತ್ಯವಾಗಿ ಆಗಬೇಕಾಗಿತ್ತು. ಅದಕ್ಕೆ ಶಿಕ್ಷಣ ಸೂಕ್ತ ರೀತಿಯಲ್ಲಿ ಮಾರ್ಪಡಬೇಕಾಗಿತ್ತು. ಏಕೆಂದರೆ ಸಮಾಜ ಪರಿವರ್ತನೆಗೆ ಅದು ಉಪಕರಣವೆಂಬುದನ್ನು ಅವರು ಗ್ರಹಿಸಿದ್ದರು. ಅಂಥ ಶಿಕ್ಷಣಪದ್ಧತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಏಳು ವರ್ಷಗಳ ಕಾಲಾವಧಿಗಾದರೂ ಹೆಚ್ಚಿಸಿ, ಅದರಿಂದ ಮೆಟ್ರಿಕ್ಯುಲೇಷನ್ ಹಂತದಲ್ಲಿ ದೊರೆಯುವಷ್ಟು ಸಾಮಾನ್ಯ ಜ್ಞಾನವೂ (ಇಂಗ್ಲಿಷನ್ನುಳಿದು) ವೃತ್ತಿಯೊಂದರಲ್ಲಿ ಶಿಕ್ಷಣವೂ ದೊರಕುವಂತೆ ಅವಕಾಶಕಲ್ಪನೆಯಾಗಬೇಕೆಂದು ತೀರ್ಮಾನಿಸಿಕೊಂಡರು. ಈ ಬದಲಾವಣೆಗಳನ್ನು ಅಂದಿದ್ದ ಶಿಕ್ಷಣ ಪದ್ಧತಿಗೆ ತೇಪೆಹಾಕಿ ನೇರಮಾಡುವುದು ಅಸಾಧ್ಯವೆಂದುಕೊಂಡು ಪ್ರತ್ಯೇಕ ಶಿಕ್ಷಣಪದ್ಧತಿಯೊಂದರ ಅನುಷ್ಠಾನಕ್ಕೆ ಯತ್ನಿಸಿದರು. ರಾಷ್ಟ್ರದ ಅಂದಿನ ತೀವ್ರ ಸಮಸ್ಯೆಗಳನ್ನೂ ನಿವಾರಿಸಿ ತಮ್ಮ ಕನಸಿನ ಸರ್ವೋದಯ ಸಮಾಜವನ್ನು ರಚಿಸಬಲ್ಲ ಆ ಪದ್ಧತಿಯಲ್ಲಿ ಗ್ರಾಮೋದ್ಯೋಗಗಳಿಗೆ ಪ್ರಾಧಾನ್ಯವಿರ ಬೇಕೆಂದು ಭಾವಿಸಿದರು. ಏಕೆಂದರೆ, ಇಲ್ಲಿನ ಶೇ.80 ರಷ್ಟು ಜನತೆ ಗ್ರಾಮವಾಸಿ ಗಳಾಗಿದ್ದರು. ರಾಷ್ಟ್ರದ ಪ್ರಧಾನ ಸಮಸ್ಯೆಗಳನ್ನೂ ಪರಿಹರಿಸಿ ಸಮಾಜದಲ್ಲಿ ಪರಿವರ್ತನೆ ಮಾಡಬಲ್ಲ ಆ ಶಿಕ್ಷಣವನ್ನು ಅವರು 'ಗ್ರಾಮೀಣ ರಾಷ್ಟ್ರೀಯ ಶಿಕ್ಷಣ' ಎಂದು ಕರೆದರು. ಸಮಕಾಲೀನ ಶಿಕ್ಷಣವೇತ್ತರು ರಾಷ್ಟ್ರೀಯ ಶಿಕ್ಷಣ ಎಂಬುದಕ್ಕೆ ಬೇರೆ ಬೇರೆ ಅರ್ಥ ವ್ಯಾಪ್ತಿಯನ್ನು ಕಲ್ಪಿಸಿದ್ದರು. ಗಾಂಧಿಜಿಯವರ ಮೇಲಿನ ಅರ್ಥಕಲ್ಪನೆ ಅದೆಲ್ಲಕ್ಕಿಂತ ಭಿನ್ನವಾಗಿದೆ. ಅವರ ಮಾತಿನಲ್ಲೆ ಹೇಳುವುದಾದರೆ 'ಇದು ಗ್ರಾಮೀಣ. ಏಕೆಂದರೆ ಉನ್ನತ ಅಥವಾ ಇಂಗ್ಲಿಷ್ ಶಿಕ್ಷಣವನ್ನು ತ್ಯಜಿಸಿರುತ್ತದೆ; ರಾಷ್ಟ್ರೀಯ. ಏಕೆಂದರೆ ಸತ್ಯ, ಅಹಿಂಸೆ, ಗ್ರಾಮೋದ್ಯೋಗಗಳ ಮೂಲಕ (ಎಂದರೆ ಅದನ್ನು ಕಲಿಸುವ ಅಧ್ಯಾಪಕರು ಮಕ್ಕಳಿಗೆ ತಾವು ಆರಿಸಿಕೊಂಡ ಕಸಬಿನ ಮೂಲಕ) ಯಾವ ನಿರ್ಬಂಧ ಹಸ್ತಕ್ಷೇಪಗಳೂ ಇಲ್ಲದೆ ಅವರ ಸರ್ವಸಾಮರ್ಥ್ಯಗಳೂ ವಿಕಸಿಸುವಂತೆ ಮಾಡುವರು.' ಇದು ಯಾವ ದೃಷ್ಟಿಯಲ್ಲೂ ಪಾಶ್ಚಾತ್ಯ ವಿಧಾನದಿಂದ ಪ್ರಭಾವಿತವಾದುದಲ್ಲವೆಂಬುದು ಇದರಿಂದ ಸ್ಪಷ್ಟಪಡುತ್ತದೆ.

**ಕಸಬು ಕೇಂದ್ರಿತ ಶಿಕ್ಷಣ :** ವ್ಯಕ್ತಿಯ ಸರ್ವತೋಮುಖವಾದ ಬೆಳೆವಣಿಗೆಯಾಗಲು ಸಾಧ್ಯವಾದಮಟ್ಟಿಗೆ ಎಲ್ಲ ಶಿಕ್ಷಣವನ್ನೂ ಒಂದು ಲಾಭದಾಯಕ ಕಸಬಿನ ಮೂಲಕ ಒದಗಿಸಬಹುದೆಂದು ಗಾಂಧೀಜಿ ತಮ್ಮ ಪ್ರಯೋಗಗಳಿಂದ ಸ್ಪಷ್ಟವಾಗಿ ಅರಿತು ಕೊಂಡಿದ್ದರು. ಶಿಕ್ಷಣದ ಕೇಂದ್ರವನ್ನಾಗಿ ಮಾಡಿಕೊಳ್ಳಲು ಆರಿಸಿಕೊಳ್ಳುವ ಕಸಬು ವಿದ್ಯಾರ್ಥಿಯ ದೃಷ್ಟಿಯಲ್ಲಿ ಮೂರು ಉದ್ದೇಶಗಳನ್ನು ಸಾಧಿಸಬೇಕು : ಮೊದಲನೆಯ ದಾಗಿ, ತನ್ನ ಶಿಕ್ಷಣದ ವೆಚ್ಚವನ್ನು ತನ್ನ ದುಡಿಮೆಯ ಫಲವಾದ ಉತ್ಪನ್ನದಿಂದ ಗಳಿಸಿಕೊಳ್ಳುವಂತಾಗಬೇಕು; ಎರಡನೆಯದಾಗಿ, ತನ್ನ ವ್ಯಕ್ತಿತ್ವದ ಎಲ್ಲ ಮುಖಗಳನ್ನು ಬೆಳೆಸಲು ಅದು ನೆರವಾಗಬೇಕು; ಮೂರನೆಯದಾಗಿ, ಮುಂದೆ ಅದು ತನ್ನ ಜೀವನೋಪಾಯಕ್ಕಾಗಿ ಅನುಸರಿಸಬಹುದಾದ ಉದ್ಯೋಗವೂ ಆಗಬೇಕು. ಹತ್ತಿ, ಉಣ್ಣೆ, ರೇಷ್ಮೆ – ಇವುಗಳ ಬಳಕೆಗೆ ಸಂಬಂಧಿಸಿದಂತೆ ಸಂಗ್ರಹ, ಶುದ್ಧೀಕರಣ, ಬೀಜ ತೆಗೆಯುವುದು (ಹತ್ತಿಯ ವಿಷಯದಲ್ಲಿ ಮಾತ್ರ), ಎಕ್ಕುವುದು, ನೂಲುವುದು, ಬಣ್ಣಕಟ್ಟುವುದು, ಗಂಜಿಕಟ್ಟುವುದು, ಹಾಸುಮಾಡುವುದು, ಇಮ್ಮಡಿ ನುಲಿಕೆ, ಮಾದರಿ ರಚನೆ, ಮತ್ತು ನೇಯ್ಗೆ – ಇತ್ಯಾದಿಯಾದ ಎಲ್ಲ ಕೆಲಸಗಳೂ ಕಸೂತಿ, ಹೊಲಿಗೆ, ಕಾಗದ ತಯಾರಿಕೆ, ಪುಸ್ತಕಕ್ಕೆ ರಟ್ಟು ಕಟ್ಟುವುದು, ಮರಗೆಲಸ, ಆಟಿಕೆಗಳ ತಯಾರಿಕೆ, ಮನೆಕಟ್ಟುವುದು –ಇವೆಲ್ಲ ಸರಾಗವಾಗಿ ಕಲಿಯಬಹುದಾದ ಹಾಗೂ ಅಷ್ಟಾಗಿ ಬಂಡವಾಳ ಬೇಡದ ಕಸಬುಗಳು. ಪ್ರಾಥಮಿಕ ಕಲಿಕೆ ಬಾಲಕಬಾಲಕಿಯರಿಗೆ ಜೀವನೋಪಾಯಕ್ಕೆ ನೆರವಾಗಬಲ್ಲ ಶಿಕ್ಷಣ ಒದಗಿಸಬೇಕು. ಅವರು ಕಲಿತಿರುವ ಕಸಬಿಗೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಸರ್ಕಾರ ಆಶ್ವಾಸನೆ ನೀಡಬೇಕು. ಅಥವಾ ಅವರು ತಯಾರಿಸುವ ಉತ್ಪನ್ನಗಳನ್ನು ಸೂಕ್ತ ಬೆಲೆಗೆ ಕೊಂಡುಕೊಳ್ಳಬೇಕು. ಆಗ ಶಿಕ್ಷಣ ವ್ಯಕ್ತಿಗೂ ಸಮಾಜಕ್ಕೂ ಅನುಕೂಲವಾಗುವುದಲ್ಲದೆ ಆರ್ಥಿಕವಾಗಿ ಸ್ವಾವಲಂಬಿಯೂ ಆಗಿರಬಲ್ಲದು. ಇವು ಗಾಂಧೀಜಿಯವರ ಮನಸ್ಸಿನಲ್ಲಿ 20ನೆಯ ಶತಮಾನದ ಆದಿಯಿಂದಲೂ ಶಿಕ್ಷಣದ ಬಗ್ಗೆ ಪುಟಗೊಳ್ಳುತ್ತಿದ್ದ ಭಾವನೆಗಳು. 1902 ರಲ್ಲೆ ಟಾಲ್‌ಸ್ಟಾಯ್ ಫಾರಮ್ಮಿನಲ್ಲಿ ಅಂಥ ಶಿಕ್ಷಣ ಸ್ವಾವಲಂಬಿಯಾಗಬಲ್ಲದೆಂದು ದೃಢಪಡಿಸಿಕೊಂಡಿದ್ದರೂ ಆ ಬಗ್ಗೆ ನಿರ್ದಿಷ್ಟವಾಗಿ ಪ್ರಕಟಿಸಿದ್ದು 1921 ರಲ್ಲಿ. ಹರಿಜನ ಪತ್ರಿಕೆಯಲ್ಲಿ ಮೊಟ್ಟಮೊದಲನೆಯದಾಗಿ ತಮ್ಮ ಶಿಕ್ಷಣದ ಸ್ಥೂಲ ರೂಪರೇಷೆಗಳನ್ನು ವಿವರಿಸಿದರು. ಆದರೆ ಅದನ್ನು ಸಾರ್ವತ್ರಿಕವಾಗಿ ಆಚರಣೆಗೆ ತರಲು ಅಂದು ದೇಶದಲ್ಲಿ ಪರಕೀಯ ಆಡಳಿತ ಅಸ್ತಿತ್ವದಲ್ಲಿದ್ದುದರಿಂದ ಅವಕಾಶವಾಗಲಿಲ್ಲ. ಮೇಲಾಗಿ ಅವರು ಇಂಗ್ಲಿಷರ ಆಡಳಿತದ ವಿರುದ್ಧ ಚಳವಳಿ ಹೂಡಿ ಸ್ವಾತಂತ್ರ್ಯ ಸಂಗ್ರಾಮ ನಡೆಸುತ್ತಿದ್ದುದರಿಂದ ಸರ್ಕಾರ ಅವರ ಪದ್ಧತಿಗೆ ಪುರಸ್ಕಾರ ನೀಡುವುದಾದರೂ ಸಾಧ್ಯವೇ ? ಆದರೂ ಅವರು ವರ್ಧಾದಲ್ಲಿ ಅದನ್ನು ಪ್ರಾಯೋಗಿಕವಾಗಿ ಆಚರಣೆಗೆ ತಂದೇ ಇದ್ದರು. ತಮ್ಮ ನೆಚ್ಚಿನ ಆ ಶಿಕ್ಷಣಪದ್ಧತಿಯನ್ನು ದೇಶಾದ್ಯಂತ ಆಚರಣೆಗೆ ತರಲು ಸೂಕ್ತ ಸನ್ನಿವೇಶಗಳಿಗಾಗಿ ಕಾದಿದ್ದರು.

1937 ರಲ್ಲಿ ಪ್ರಾಂತೀಯ ಸ್ವಾತಂತ್ರ್ಯ ಆಚರಣೆಗೆ ಬಂತು. ಪ್ರಾಂತ್ಯಗಳಲ್ಲಿ ಜನನಾಯಕರು ಶಿಕ್ಷಣ ಸಚಿವರಾಗಿ ಜನತೆಯ ಆಶೋತ್ತರಗಳನ್ನು ಈಡೇರಿಸುವಂತೆ ಶಿಕ್ಷಣ ವ್ಯವಸ್ಥೆ ಮಾಡಲು ಸಿದ್ಧರಾದರು. ಅಂದಿಗಾಗಲೆ ಕಡ್ಡಾಯ ಶಿಕ್ಷಣವನ್ನು ದೇಶಾದ್ಯಂತ ಆಚರಣೆಗೆ ತರಬೇಕೆಂಬ ಕೂಗು ಎಲ್ಲೆಲ್ಲೂ ಆರಂಭವಾಗಿತ್ತು. ಹಣದ ಅಭಾವದ ಕಾರಣವನ್ನು ಮುಂದೊಡ್ಡಿ ಸರ್ಕಾರ ಅದನ್ನು ನಿರ್ಲಕ್ಷಿಸುತ್ತ ಬಂದಿತ್ತು. ಈಗ

ಜನನಾಯಕರು ಆಡಳಿತಕ್ಕೆ ಬಂದಿದ್ದುದರಿಂದ ಅವರು ಅದನ್ನು ಇನ್ನೂ ಮುಂದೂಡುವುದು ಅಸಾಧ್ಯವಾಯಿತು. ಆದರೆ ಅದಕ್ಕೆ ಬೇಕಾದ ಹಣಕ್ಕೆ ಮಾತ್ರ ಅಭಾವವಿತ್ತು. ಜೊತೆಗೆ ಕಾಂಗ್ರೆಸ್ ಸರ್ಕಾರಗಳು ಪಾನನಿರೋಧವನ್ನು ಆಚರಣೆಗೆ ತರಲು ತೀರ್ಮಾನಿಸಿದ್ದರಿಂದ ಅದರಿಂದ ಬರುತ್ತಿದ್ದ ಆದಾಯವೂ ನಿಂತುಹೋಗಿತ್ತು. ಆದ್ದರಿಂದ ಸರ್ಕಾರ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿತ್ತು. ಆ ಸಮಯದಲ್ಲಿ ಗಾಂಧೀಜಿ ಅಷ್ಟಾಗಿ ಹಣದ ವೆಚ್ಚವಿಲ್ಲದೆ ರಾಷ್ಟ್ರವ್ಯಾಪಕವಾಗಿ ಆಚರಣೆಗೆ ತರಬಹುದಾದ ತಮ್ಮ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಜನತೆಯ ಮುಂದಿಟ್ಟರು. ಅಂದಿಗಾಗಲೇ ಅವರ ಶಿಕ್ಷಣ ಪದ್ಧತಿಗೆ ತಕ್ಕಷ್ಟು ಪ್ರಚಾರ ದೊರೆತಿದ್ದು, ಬೇಕಾದ ಹಾಗೆ ಖಂಡನೆ ಮಂಡನೆಗಳು ಪ್ರಕಟವಾಗಿದ್ದುವು ಹಾಗೂ ಆ ಶಿಕ್ಷಣ ಪದ್ಧತಿಯ ಸ್ವಾವಲಂಬನೆಯ ಬಗ್ಗೆ ತೀವ್ರತರ ಟೀಕೆಗಳು ಬಂದಿದ್ದುವು. ಆದ್ದರಿಂದ ಅದನ್ನು ಆಚರಣೆಗೆ ತರುವ ಮುನ್ನ ತಜ್ಞರು ಅದನ್ನು ಪರಿಶೀಲಿಸಬೇಕೆಂದು ಅವರ ಅಭಿಪ್ರಾಯವಾಗಿತ್ತು.

1937 ರ ಅಕ್ಟೋಬರ್ 23 ರಂದು ವರ್ಧಾದಲ್ಲಿ ರಾಷ್ಟ್ರೀಯ ಶಿಕ್ಷಣ ಸಮ್ಮೇಳನ ನಡೆಯಿತು. ಗಾಂಧೀಜಿ ಹರಿಜನ ಪತ್ರಿಕೆಯ ಮೂಲಕ ಪ್ರಕಟಿಸಿದ್ದ ಶಿಕ್ಷಣ ಪದ್ಧತಿಯ ಬಗ್ಗೆ ಟೀಕೆಗಳು ಬರಹತ್ತಿದ್ದುವು. ಆ ಪದ್ಧತಿಯನ್ನು ಸಮ್ಮೇಳನ ಚೆನ್ನಾಗಿ ಪರಿಶೀಲಿಸಿತು. ಸಮ್ಮೇಳನದಲ್ಲಿ ಅಂದು ಕಾಂಗ್ರೆಸ್ ಅಧಿಕಾರದಲ್ಲಿದ್ದ ಏಳು ಪ್ರಾಂತ್ಯಗಳ ಶಿಕ್ಷಣ ಸಚಿವರೂ ರಾಷ್ಟ್ರೀಯ ಶಿಕ್ಷಣದಲ್ಲಿ ಆಸಕ್ತಿಯಿದ್ದ ಶಿಕ್ಷಣ ತಜ್ಞರೂ ಇತರರೂ ಇದ್ದರು. ಗಾಂಧೀಜಿಯ ಶಿಕ್ಷಣಯೋಜನೆಯ ಮೇಲೆ ತೀವ್ರರೀತಿಯಲ್ಲಿ ಚರ್ಚೆ ನಡೆಯಿತು. ಕಡೆಗೆ ಸಮ್ಮೇಳನ ಈ ಕೆಲವು ತೀರ್ಮಾನಗಳನ್ನು ಕೈಕೊಂಡಿತು : 1 ರಾಷ್ಟ್ರವ್ಯಾಪಕವಾಗಿ ಏಳು ವರ್ಷಗಳ ಉಚಿತ ಕಡ್ಡಾಯ ಶಿಕ್ಷಣವನ್ನು ದೊರಕಿಸಬೇಕು; 2 ಬೋಧನಮಾಧ್ಯಮ ಮಾತೃಭಾಷೆಯಾಗಿರಬೇಕು; 3 ಈ ಕಾಲಾವಧಿಯ ಶಿಕ್ಷಣ ಗಾಂಧೀಜಿ ಸಲಹೆ ಮಾಡಿರುವಂತೆ, ಒಂದು ಉತ್ಪನ್ನದಾಯಕ ಕೈಕಸಬನ್ನು ಕೇಂದ್ರಮಾಡಿಕೊಂಡಿರಬೇಕು. ಮಕ್ಕಳಲ್ಲಿ ಮೂಡಿಸಬೇಕಾದ ಮಿಕ್ಕೆಲ್ಲ ಸಾಮರ್ಥ್ಯಗಳೂ ಕೊಡಬೇಕಾದ ತರಪೇತೂ ಸಾಧ್ಯವಾದ ಮಟ್ಟಿಗೆ ಮಗುವಿನ ಸನ್ನಿವೇಶದಿಂದ ಆರಿಸಿಕೊಂಡ ಆ ಕೈಕಸಬಿನೊಡನೆ ಸಂಬಂಧಿಸಿರಬೇಕು; 4 ಈ ಶಿಕ್ಷಣ ಪದ್ಧತಿ ಕ್ರಮಕ್ರಮವಾಗಿ ಅಧ್ಯಾಪಕರ ಸಂಭಾವನೆಯ ಬಗ್ಗೆ ಸ್ವಯಂಪೂರ್ಣವಾಗಬೇಕು ಎಂದು ಸಮ್ಮೇಳನ ಆಶಿಸುವುದು. ಈ ತೀರ್ಮಾನಗಳನ್ನು ಆಧಾರ ಮಾಡಿಕೊಂಡು ಗಾಂಧೀಜಿ ಶಿಕ್ಷಣ ಯೋಜನೆಗೆ ಒಂದು ಶಾಸ್ತ್ರೀಯ ಚೌಕಟ್ಟನ್ನು ಕೊಡಬೇಕಾಗಿತ್ತು. ಅದಕ್ಕಾಗಿ ಸಮ್ಮೇಳನ ಜಾಕೀರ್ ಹುಸೇನ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿ ಎರಡು ತಿಂಗಳೊಳಗಾಗಿ ಈ ಕಾರ್ಯವನ್ನು ಪೂರೈಸಿ ವರ್ಧಾ ಶಿಕ್ಷಣ ಯೋಜನೆ ಎಂಬ ಹೆಸರಿನ ವರದಿಯನ್ನು ಸಲ್ಲಿಸಿತು. ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಇದೊಂದು ಪ್ರಧಾನ ದಾಖಲೆ. ಆನಂತರ 1938 ರಲ್ಲಿ ಹರಿಪುರದಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಅಧಿವೇಶನ ಅದಕ್ಕೆ ತನ್ನ ಒಪ್ಪಿಗೆ ನೀಡಿತು. ಕಾಂಗ್ರೆಸ್ ಅಧಿಕಾರದಲ್ಲಿದ್ದ ಏಳು ಪ್ರಾಂತ್ಯಗಳಲ್ಲೂ ಯೋಜನೆ ಮೂಲಶಿಕ್ಷಣ (ಬೇಸಿಕ್ ಎಜುಕೇಷನ್) ಎಂಬ ಹೆಸರಿನಲ್ಲಿ ಅನುಷ್ಠಾನಕ್ಕೆ ಬಂತು.

**ಮೂಲಶಿಕ್ಷಣದ ಶಾಸ್ತ್ರೀಯ ಸ್ವರೂಪ :** ಮೂಲಶಿಕ್ಷಣವನ್ನು ರೂಪಿಸಿದ ಗಾಂಧೀಜಿ ಮೂಲತಃ ಶಿಕ್ಷಣವೇತ್ತರಲ್ಲ. ಅವರು ಅದನ್ನು ಶಿಕ್ಷಣಶಾಸ್ತ್ರದ ಬೆಳಕಿನಲ್ಲಿ ರೂಪಿಸುವ ಯತ್ನವನ್ನೂ ಮಾಡಿದವರಲ್ಲ. ಆದರೂ ಅವರ ಯೋಜನೆಯಲ್ಲಿ ಶಿಕ್ಷಣಶಾಸ್ತ್ರ ಎತ್ತಿಹಿಡಿಯುವ ಹಲವು ಸಲ್ಲಕ್ಷಣಗಳನ್ನು ಗುರುತಿಸಬಹುದು. ಉತ್ಪನ್ನದಾಯಕ ಚಟುವಟಿಕೆಯೊಂದರ ಮೂಲಕ ಮಕ್ಕಳಿಗೆ ಶಿಕ್ಷಣವೀಯಲು ನಿಯೋಜಿಸಿರುವ ಅವರ ಯೋಜನೆ ಎಲ್ಲ ಆಧುನಿಕ ತತ್ತ್ವಗಳಿಗೂ ಒಪ್ಪುವಂತಿದೆ. ಮಕ್ಕಳ ಸಮಗ್ರವೂ ಸರ್ವತೋಮುಖವೂ ಆದ ವಿಕಾಸಕ್ಕೆ ಅದು ಪರಿಣಾಮಕಾರಿ ವಿಧಾನವೆಂಬುದನ್ನು ಎಲ್ಲ ಶಿಕ್ಷಣತತ್ತ್ವಗಳೂ ಒಪ್ಪುತ್ತವೆ. ಅರ್ಥವಾಗದ ಸೈದ್ಧಾಂತಿಕರೂಪದ ಜ್ಞಾನವನ್ನು ಕಲಿಯಲು ಮಕ್ಕಳ ಮನಸ್ಸು ಬೇಸರಗೊಳ್ಳುವುದರಿಂದ ಅದು ವಿಹಿತವೆನಿಸದ ವಿಧಾನವಾಗುತ್ತದೆ. ಮೂಲಶಿಕ್ಷಣದಲ್ಲಿ ಬೌದ್ಧಿಕ ಮತ್ತು ಅಭ್ಯಾಸಾತ್ಮಕ (ಕ್ರಿಯಾಪ್ರದ) ಅಂಶಗಳೆರಡೂ ಸೇರಿರುವುದರಿಂದ ಅವರ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆಗಳೆರಡೂ ಸಮನ್ವಯಗೊಂಡು ಅಭಿವೃದ್ಧಿಯಾಗುತ್ತವೆ; ಮಕ್ಕಳು ಬರಿಯ ಗಿಳಿ ಓದಿನ ಅಕ್ಷರ ವಿದ್ಯೆಯನ್ನು ಸಾಧಿಸದೆ ರಚನಾತ್ಮಕ ಉದ್ದೇಶಗಳಿಗಾಗಿ ಬುದ್ಧಿ ಮತ್ತು ಕೈಗಳನ್ನು ಬಳಸಿಕೊಂಡು ಶಿಕ್ಷಣ ಪಡೆಯುತ್ತಾರೆ; ಸುಮ್ಮನೆ ಕೇಳಿ ಅಥವಾ ಓದಿ ಕಲಿಯುವುದರ ಬದಲು ಮಾಡಿ ಕಲಿಯುವ ಅವಕಾಶವಿರುವುದರಿಂದ ಈ ಪದ್ಧತಿಯಿಂದ ಕಲಿತ ಶಿಕ್ಷಣ ದೃಢವಾಗಿ ನಿಲ್ಲುವುದರ ಜೊತೆಗೆ ಅವರ ಜೀವನದಲ್ಲಿ ಹೆಚ್ಚು ಪರಿಣಾಮಕಾರಿಯೂ ಆಗಬಲ್ಲದು. ಯಾವುದೇ ಜ್ಞಾನವನ್ನು ಅವರಿಗೆ ಕಲಿಸಬೇಕಾದರೂ ಕಸಬನ್ನು ಮಾಡಲು ಅನಿವಾರ್ಯವೆನಿಸಿದಾಗ ಆ ಕಾರ್ಯಕ್ಕೆ ಯತ್ನಿಸುವುದರಿಂದ ಕಲಿತದ್ದು ಅರ್ಥವತ್ತಾಗಿರುವುದಲ್ಲದೆ ಅದನ್ನು ಕಲಿಯಲು ಮನಸ್ಸಿನಲ್ಲಿ ಆಸಕ್ತಿ, ಸಿದ್ಧತೆ ಮತ್ತು ಉದ್ದೇಶಗಳು ರೂಪುಗೊಂಡಿರುತ್ತವೆ. ಇವೆಲ್ಲ ಮನಶ್ಶಾಸ್ತ್ರಕ್ಕೆ ಸಮ್ಮತವೆನಿಸಿರುವ ಅಂಶಗಳು.

ಶೈಕ್ಷಣಿಕ ಸಮಾಜಶಾಸ್ತ್ರದ ದೃಷ್ಟಿಯಲ್ಲೂ ಮೂಲಶಿಕ್ಷಣ ಹಲವು ಉತ್ತಮ ಗುಣಗಳಿಂದ ಕೂಡಿರುವುದನ್ನು ಕಾಣಬಹುದು. ಸರ್ವೋದಯ ತತ್ತ್ವವ್ಯಕ್ತಿಯ ಜೀವನದಲ್ಲಿ ಅಂಕುರಿಸಿ ಸಮಾಜ ಜೀವನದಲ್ಲಿ ಆವಿಷ್ಕಾರವಾಗಬೇಕೆಂಬುದು ಗಾಂಧೀಜಿಯ ಅಭಿಲಾಷೆಯಾಗಿತ್ತು. ಅಂಥ ಪರಿವರ್ತನೆ ಅಹಿಂಸೆ ಅಥವಾ ಪ್ರೇಮದಿಂದ ಉದ್ಭವಿಸಬೇಕು. ಅದು ಎಲ್ಲ ಮಾನವರ (ಸಮಾಜದ) ಪರಮ ಒಳಿತಿನಲ್ಲಿ ಅಡಗಿದೆ. ಸಮಾಜ ಈಶ್ವರನ ವ್ಯಕ್ತಸ್ವರೂಪ. ಇದು ಜೀವಂತ ಚೈತನ್ಯದಲ್ಲಿನ (ದೇವ) ಅವರ ನೈಜವಾದ ನಂಬಿಕೆ. ವ್ಯಕ್ತಿಯ ಸಾಧನೆ (ಶಿಕ್ಷಣ), ಸಂಪತ್ತು, ಕಾಣಿಕೆಯ ರೂಪದಲ್ಲಿ ಸಮಾಜಕ್ಕೆ ಸಲ್ಲಬೇಕು. ಸಮಾಜ ಸಂಗ್ರಹಿಸಿಕೊಂಡು ರಕ್ಷಿಸಿಕೊಂಡು ಬಂದಿರುವ ಮಾನವಜನಾಂಗದ ಸಂಸ್ಕೃತಿ ಸಂಪತ್ತನ್ನು ವ್ಯಕ್ತಿ ಬಳಸಿಕೊಂಡು ತನ್ನ ಹಿತವನ್ನು ಸಾಧಿಸಿಕೊಂಡು ಸಮಾಜ ಹಿತಕ್ಕೆ ತನ್ನ ಸೇವೆಯನ್ನು ಸಲ್ಲಿಸಲು ಶಕ್ತನಾಗಬೇಕು. ಈ ದೃಷ್ಟಿಯಲ್ಲಿ ಅವರ ಸರ್ವೋದಯ ಸಮಾಜದ ತತ್ತ್ವ ಸಾಮಾಜಿಕದೊಡನೆ ಆಧ್ಯಾತ್ಮಿಕವನ್ನು ಅಳವಡಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರಲು ಶಿಕ್ಷಣವನ್ನೊಂದು ಉಪಕರಣವನ್ನಾಗಿ ಮಾಡಿಕೊಂಡಿತೆನ್ನಬಹುದು. ಅಂಥ ಶಿಕ್ಷಣದಿಂದ ದೇಶದ ಮಕ್ಕಳೆಲ್ಲ ಕೈಗಾರಿಕೆಯಲ್ಲಿ ತೊಡಗುವುದರಿಂದ ಬುದ್ಧಿಜೀವನಕ್ಕೂ ಶ್ರಮಜೀವನಕ್ಕೂ ಹಿಂದಿನಿಂದಲೂ ಬೆಳೆದುಕೊಂಡು ಬಂದಿದ್ದ ವ್ಯತ್ಯಾಸ ಕಡಿಮೆಯಾಗುವುದರ ಜೊತೆಗೆ ಬೇರೆ ಬೇರೆ ಕಸಬುಗಳಿಗಿರುವ ಭಿನ್ನತೆಯನ್ನೂ ಅಂತರವನ್ನೂ ನಿವಾರಿಸಿದಂತಾಗುತ್ತದೆ. ಸಮಾಜಕ್ಕೆ ಎಲ್ಲ ಕಸಬುಗಳೂ ಅಗತ್ಯವೆಂಬ ಅಂಶ ವ್ಯಕ್ತಪಟ್ಟು ಎಲ್ಲ ವೃತ್ತಿಗಳಿಗೂ ಸಮಾನ ಗೌರವ ಲಭಿಸುತ್ತದೆ. ಮೂಲಶಿಕ್ಷಣ ಈ ಎಲ್ಲ ಸಾಮಾಜಿಕ ಮೌಲ್ಯಗಳನ್ನೂ ವೃದ್ಧಿಪಡಿಸಿ ಸಮಾಜದ ಪ್ರಗತಿಗೆ ರಕ್ತರಹಿತ ಕ್ರಾಂತಿಯ ಮೂಲಕ ನೆರವಾಗಬೇಕು.

ಆರ್ಥಿಕ ದೃಷ್ಟಿಯಿಂದ ಪರಿಗಣಿಸಿದರೂ ಮೂಲಶಿಕ್ಷಣದಲ್ಲಿ ಪ್ರಗತಿಪರ ಅಂಶಗಳು ಕಾಣುತ್ತವೆ. ಪ್ರತಿಯೊಬ್ಬನೂ ಶಿಕ್ಷಣ ಮುಗಿಸಿಕೊಂಡು ಜೀವನೋಪಾಯವನ್ನು ಸಾಧಿಸಿಕೊಳ್ಳಲು ಶಕ್ತಿ ಪಡೆದಿರುತ್ತಾನೆ. ಅಲ್ಲದೆ ಅವನು ತನ್ನ ವೃತ್ತಿಯಲ್ಲಿ ಕುರುಡುಕರ್ಮ ಮಾಡದೆ ಬುದ್ಧಿಯನ್ನೂ ಬಳಸುವುದರಿಂದ ವೃತ್ತಿಯಲ್ಲೂ ಪ್ರಗತಿ ಸಾಧನೆಯಾಗಿ ರಾಷ್ಟ್ರದ ಆರ್ಥಿಕ ಪ್ರಗತಿಗೂ ಅವಕಾಶವಾಗುತ್ತದೆ.

ಶುದ್ಧ ಶಿಕ್ಷಣಶಾಸ್ತ್ರದ ದೃಷ್ಟಿಯಿಂದ ನೋಡಿದರೂ ಜೀವನದಲ್ಲಿ ಅನುಸರಿಸುವ ಒಂದು ಕಸಬು ಶಾಲೆಯಲ್ಲಿ ಬೋಧನೆಯ ಕೇಂದ್ರವಿಷಯವಾಗಿರುವುದರಿಂದ ಜೀವನಕ್ಕೂ ಶಿಕ್ಷಣಕ್ಕೂ ನಿಕಟಸಂಬಂಧವಿರುವುದು ವ್ಯಕ್ತವಾಗಿ ಜೀವನವೇ ಬೇರೆ ಶಿಕ್ಷಣವೇ ಬೇರೆ ಎನ್ನುವ ಕೃತಕ ಅಹಿತದೃಷ್ಟಿ ಮಾಯವಾಗುತ್ತದೆ.

ಯಾವ ಶಿಕ್ಷಣಪದ್ಧತಿಯೇ ಆಗಲಿ ವ್ಯಕ್ತಿಗೆ ಸತ್ಪೌರನಾಗಿ ಬಾಳಲು ಸಿದ್ಧತೆ ನೀಡಬೇಕು. ತಾವು ವೃತ್ತಿಯೊಂದರಲ್ಲಿ ಸಿದ್ಧತೆ ಪಡೆದಿರುವುದರಿಂದ ವ್ಯಕ್ತಿ ತನ್ನ ಜೀವನೋಪಾಯದ ಜೊತೆಗೆ ಸಮಾಜಕ್ಕೆ ಅಗತ್ಯವೆನಿಸುವ ಸೇವಾಕಾರ್ಯವನ್ನೂ ನಿರ್ವಹಿಸಬಲ್ಲನು. ಸಹಕಾರದ ಸನ್ನಿವೇಶದಲ್ಲಿ ಕಲಿತ ಆ ವೃತ್ತಿಮನೋಭಾವ ಸಮಾಜ ಜೀವನಕ್ಕೂ ಹರಿದುಬಂದು ವ್ಯಕ್ತಿಯಲ್ಲಿ ಸೇವಾದೃಷ್ಟಿಯನ್ನು ಬೆಳೆಸುವುದಲ್ಲದೆ, ವೈಯಕ್ತಿಕ ಮೌಲ್ಯ, ಆತ್ಮಗೌರವ, ವೃತ್ತಿದಕ್ಷತೆ ಮುಂತಾದ ಸದ್ಗುಣಗಳನ್ನೂ ಮೂಡಿಸುತ್ತದೆ.

ಗಾಂಧೀಜಿ ಗ್ರಾಂಥಿಕ ಶಿಕ್ಷಣವನ್ನೇನೂ ವಿರೋಧಿಸಲಿಲ್ಲ. ಆದರೆ ಪುಸ್ತಕದ ಓದು ಕಲಿಸುವುದಕ್ಕಾಗಿಯೇ ಕೋಟಿಗಟ್ಟಲೆ ಹಣ ತಿನ್ನುವ ಪ್ರಾಥಮಿಕ ಶಿಕ್ಷಣ ಮಕ್ಕಳ ಮನಶ್ಶಕ್ತಿಯನ್ನು ಶೋಷಿಸದಿರಬೇಕೆಂದು ಅವರ ಆಶಯವಾಗಿತ್ತು. ತಕಲಿ ಮುಂತಾದ ಉಪಕರಣಗಳಿಂದ ಕೆಲಸ ಮಾಡುವುದು ಮಕ್ಕಳಿಗೊಂದು ಆಟದ ರೂಪದಲ್ಲಿದ್ದು ಅಂಥ ಶೋಷಣೆಯಿಂದ ಅವರನ್ನು ವಿಮುಕ್ತಿ ಮಾಡುವುದೆಂದು ಅವರು ಪ್ರತಿಪಾದಿಸುತ್ತಿದ್ದರು.

ಮೂಲಶಿಕ್ಷಣ ಕೇವಲ ಕಸಬೊಂದನ್ನು ಕಲಿಸುವ ಮಧ್ಯಯುಗಗಳ ಉಮೇದುವಾರಿ ತರಪೇತಿನಂತಿರಲಿಲ್ಲ; ಸಾಮಾನ್ಯ ಶಿಕ್ಷಣದ ಜೊತೆಗೆ ಕೈಗಾರಿಕೆಯೊಂದನ್ನು ಕಲಿಸುವ ಶಿಕ್ಷಣವೂ ಆಗಿರಲಿಲ್ಲ; ಅದು ನಿಜವಾಗಿ, ಯಾವುದಾದರೂ ಕೈಗಾರಿಕೆಯ ಮಾಧ್ಯಮದ ಮೂಲಕ ಇಡೀ ಶಿಕ್ಷಣವನ್ನು ದೊರಕಿಸಿ, ವೃತ್ತಿಶಿಕ್ಷಣದ ಮೂಲಕ ಮಕ್ಕಳ ವ್ಯಕ್ತಿತ್ವವನ್ನೇ ರೂಪಿಸುವ ಒಂದು ಯೋಜನೆ.

**ಉನ್ನತ ಶಿಕ್ಷಣದ ಬಗ್ಗೆ ಗಾಂಧೀಜಿಯ ದೃಷ್ಟಿ :** 20ನೆಯ ಶತಮಾನದ ಪೂರ್ವಾರ್ಧದಲ್ಲಿ ಭಾರತದಲ್ಲಿದ್ದ ವಿಶೇಷ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಿಂದಾಗಿ ಗಾಂಧೀಜಿ ಪ್ರಾಥಮಿಕ ಶಿಕ್ಷಣದ ಕಡೆಯೇ ಹೆಚ್ಚು ಗಮನ ಹರಿಸಿದ್ದರೂ ಶಿಕ್ಷಣದ ಇತರ ಹಂತಗಳ ಬಗ್ಗೆಯೂ ಚಿಂತನೆ ನಡೆಸಿದ್ದರು. ಪ್ರಾಥಮಿಕ ಪೂರ್ವದ ಮಕ್ಕಳ ಶಿಕ್ಷಣದ ಪ್ರಾಮುಖ್ಯವನ್ನೂ ಅಗತ್ಯವನ್ನೂ ಅವರು ಮನಗಂಡಿದ್ದರು. ರಾಷ್ಟ್ರದ ಮುನ್ನಡೆಗೆ ಉನ್ನತ ಶಿಕ್ಷಣದ ಅಗತ್ಯವನ್ನೂ ಅದರ ಪುನರ್ವ್ಯವಸ್ಥೆಯ ಅಗತ್ಯವನ್ನೂ ವ್ಯಕ್ತಪಡಿಸಿದ್ದಾರೆ. ಆದರೆ ಅಂದು ಪ್ರಾಥಮಿಕ ಶಿಕ್ಷಣ ಎಲ್ಲ ದೇಶಗಳಂತೆ ಭಾರತದಲ್ಲೂ ತೀರ ಅಗತ್ಯವೆನಿಸಿದ್ದುದರಿಂದ ಅವರು ತಮ್ಮ ಗಮನವನ್ನು ಮುಖ್ಯವಾಗಿ ಆ ಕಡೆ ವಿನಿಯೋಗಿಸಿದರು.

ಗಾಂಧೀಜಿಯ ದೃಷ್ಟಿಯಲ್ಲಿ ಮೂಲಶಿಕ್ಷಣ ದೃಷ್ಟಿಯನ್ನೇ ಉನ್ನತಶಿಕ್ಷಣಕ್ಕೂ ವಿಸ್ತರಿಸಬಹುದಾಗಿತ್ತು. ಹರಿಜನ ಪತ್ರಿಕೆಯಲ್ಲಿ ಆ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅದರ ರೂಪುರೇಖೆಯೂ ಮೂಲಶಿಕ್ಷಣಕ್ಕೆ ಆಧಾರವಾದ ಸ್ವಯಂ ಉದ್ಯೋಗ, ಸ್ವಾವಲಂಬನೆ, ಶ್ರಮಜೀವನ– ಇವುಗಳನ್ನೇ ಅವಲಂಬಿಸಿದ್ದು, ಪ್ರಾಥಮಿಕ ಶಿಕ್ಷಣದಂತೆ ಆ ಮೂಲಕ ಉನ್ನತ ಶಿಕ್ಷಣದಲ್ಲೂ ಕ್ರಾಂತಿಕಾರಕ ಬದಲಾವಣೆಗಳಾಗ ಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. 'ಅದು ರಾಷ್ಟ್ರೀಯ ಆವಶ್ಯಕತೆಗಳನ್ನು ಆಧಾರಮಾಡಿಕೊಂಡು ವ್ಯವಸ್ಥೆಗೊಳ್ಳಬೇಕು; ಯಂತ್ರ ಪರಿಣಿತರು, ತಾಂತ್ರಿಕ ತಜ್ಞರು, ವಿವಿಧ ವೃತ್ತಿನಿಪುಣರು – ಇತ್ಯಾದಿಯವರನ್ನು ಸಿದ್ಧಪಡಿಸಲು ವೃತ್ತಿಶಿಕ್ಷಣ ವ್ಯವಸ್ಥೆಯೂ ಇದ್ದೇ ಇರಬೇಕು' ಎಂದು ಅವರು ಭಾವಿಸಿದ್ದರು. ಆದರೆ ಔದ್ಯೋಗಿಕ ಶಿಕ್ಷಣ ಆಯಾ ಉದ್ಯೋಗಕ್ಕೆ ಹೊಂದಿಕೊಂಡಂತಿದ್ದು ಅಲ್ಲಿಗೆ ಅಗತ್ಯವಾಗುವ ಪದವೀಧರರ ಶಿಕ್ಷಣವನ್ನು ಆ ಉದ್ಯೋಗ ಕ್ಷೇತ್ರವೇ ನಿರ್ವಹಿಸಬೇಕೆಂದು ಅವರು ಪ್ರತಿಪಾದಿಸಿರುವರು. ಅದರ ಪ್ರಕಾರ ತಾತಾ ಔದ್ಯೋಗಿಕ ಸಂಸ್ಥೆಗಳಂಥವು ರಾಷ್ಟ್ರದ ಮೇಲ್ವಿಚಾರಣೆಯಲ್ಲಿ ಇಂಜಿನಿಯರಿಂಗ್ ಕಾಲೇಜೊಂದನ್ನು ನಡೆಸಬಹುದು. ಗಿರಣಿ ಕೆಲಸಗಾರರು ತಮ್ಮ ಉದ್ಯೋಗಗಳಿಗೆ ಬೇಕಾಗುವ ತಾಂತ್ರಿಕ ಪದವೀಧರರಿಗೆ ಶಿಕ್ಷಣವೀಯಲು ಕಾಲೇಜು ಗಳನ್ನು ನಡೆಸಬಹುದು; ವಾಣಿಜ್ಯಕ್ಷೇತ್ರ ವಾಣಿಜ್ಯಕಾಲೇಜುಗಳನ್ನೂ ನಡೆಸಬಹುದು; ವೈದ್ಯವೃತ್ತಿ ಧನಿಕರ ಆಸಕ್ತಿಯನ್ನು ಗಳಿಸಿರುವುದರಿಂದ ಖಾಸಗಿ ಅಂಗೀಕೃತ ಕಾಲೇಜುಗಳಲ್ಲಿ ಆ ಶಿಕ್ಷಣವನ್ನು ವ್ಯವಸ್ಥೆಗೊಳಿಸಬಹುದು. ಇವೆಲ್ಲ ಸರ್ಕಾರದ ಧನಸಹಾಯವಿಲ್ಲದಿದ್ದರೂ ಆರ್ಥಿಕವಾಗಿ ಸ್ವಾವಲಂಬಿಯಾಗಿ ಕೆಲಸಮಾಡಬಲ್ಲವು. ಎಷ್ಟೋ ಕಲಾಶಾಸ್ತ್ರ ಮತ್ತು ವಿಜ್ಞಾನಶಾಸ್ತ್ರದ ಖಾಸಗಿ ಕಾಲೇಜುಗಳೂ ಆ ರೀತಿಯಲ್ಲಿ ನಡೆಯಲು ಸಾಧ್ಯವೆಂಬುದು ಆಗಲೆ ವ್ಯಕ್ತವಾಗಿತ್ತು. ಹಾಗೆಯೇ ಕೃಷಿ ಕಾಲೇಜುಗಳೂ ಸ್ವಾವಲಂಬಿಯಾಗಿ ನಡೆಯಬೇಕೆಂದು ಅವರು ಭಾವಿಸಿದ್ದರು. ಕೃಷಿಕ್ಷೇತ್ರದಲ್ಲೇ ಅವರಿಗೆ ಶಿಕ್ಷಣವೀಯುವು ದಾದರೆ ಅದು ಸಾಧ್ಯವಾಗುವುದೆಂದೂ ಅಲ್ಲಿನ ವಿದ್ಯಾರ್ಥಿಗಳು ಪದವೀಧರರಾದ ಮೇಲೆ ವ್ಯವಸಾಯ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸುವರೆಂದೂ ಅವರು ಸೂಚಿಸಿರುವರು; ಹೀಗೆಯೇ ಇತರ ವೃತ್ತಿಶಿಕ್ಷಣಗಳೂ ಸ್ವಾವಲಂಬಿಯಾಗಿ ಕೆಲಸ ಮಾಡುವುದು ಸಾಧ್ಯವೆಂದು ತೋರಿಸಿರುವರು. ಈ ದೃಷ್ಟಿ ವೈಪರೀತ್ಯವನ್ನು ಮುಟ್ಟಿರುವಂತೆ ತೋರಿದರೂ ಸಾಧ್ಯವೆಂಬುದನ್ನು ಅವರು ಮನಗಂಡಿದ್ದರು. ಮೇಲಾಗಿ ಅವರ ಆಸಕ್ತಿ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಕಡೆಗೆ ಇದ್ದುದರಿಂದ ಉನ್ನತ ಶಿಕ್ಷಣವನ್ನೆಲ್ಲ ಖಾಸಗೀ ಸಂಸ್ಥೆಗಳೇ ನಡೆಸುವಂತಾದರೆ ಸರ್ಕಾರ ತನ್ನ ಪೂರ್ಣಗಮನವನ್ನು ಪ್ರಾಥಮಿಕ ಶಿಕ್ಷಣದ ಕಡೆಗೆ ಮೀಸಲಿಡಲು ಸಾಧ್ಯವಾಗುವುದೆಂದು ಅವರು ಆಲೋಚಿಸಿದರು.

**ಮೂಲ ಶಿಕ್ಷಣದ ಭವಿಷ್ಯ :** ಭಾರತ ಸರ್ಕಾರ ಮೂಲಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ರಾಷ್ಟ್ರೀಯ ಶಿಕ್ಷಣ ಪದ್ಧತಿಯೆಂದು ಅಂಗೀಕರಿಸಿ ಅದರ ಪ್ರಗತಿಗೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನೂ ಒದಗಿಸಿತು. ಅದರೊಡನೆ ಅಂಟಿಕೊಂಡಿದ್ದ 'ವಿದ್ಯಾರ್ಥಿ ದುಡಿಮೆಯಿಂದ ಅಧ್ಯಾಪಕರ ವೇತನವನ್ನು ದೊರಕಿಸಿಕೊಳ್ಳಬೇಕೆಂಬ' ಅಂಶವನ್ನು ಕೈಬಿಡಲಾಯಿತು. ಆದರೂ ಅದು ದೇಶಾದ್ಯಂತ ಆಚರಣೆಗೆ ಬರಲಿಲ್ಲ. ಜನತೆಗೆ ಇಂದು ಅದರಲ್ಲಿ ಆಸಕ್ತಿಯಿಲ್ಲವಾಗಿದೆ. ಅದು ಉತ್ತಮ ತತ್ತ್ವಗಳ ಬುನಾದಿಯ ಮೇಲೆ ರಚನೆಯಾಗಿರುವುದೆಂದು ದೇಶವಿದೇಶಗಳ ಪಂಡಿತರನೇಕರು ಒಪ್ಪಿದ್ದರೂ ಅದು ತನ್ನ ಜನ್ಮಭೂಮಿಯಲ್ಲೇ ಪ್ರಚಾರಕ್ಕೆ ಬರದಾದುದು ಆಶ್ಚರ್ಯದ ಸಂಗತಿ. ಆ ಪದ್ಧತಿಯ ಮೇಲೆ ಟೀಕೆಗಳೇನೋ ಹೇರಳವಾಗಿ ಬಂದುವು. ಅವುಗಳಲ್ಲಿ ವಾಸ್ತವಿಕವೆನ್ನಬಹುದಾದ ಕೆಲವನ್ನು ಇಲ್ಲಿ ಸೂಚಿಸಿದೆ.

1 ತೀರ ಚಿಕ್ಕ ವಯಸ್ಸಿನಲ್ಲಿ ಅವರ ಸ್ವಾಭಾವಿಕ ಆಸಕ್ತಿಗಳಿಗೆ ವಿರುದ್ಧವಾದ ವೃತ್ತಿಶಿಕ್ಷಣದ ವಾತಾವರಣವನ್ನು ಕಲ್ಪಿಸುತ್ತದಾಗಿ ಈ ಪದ್ಧತಿ ಮಕ್ಕಳಿಗೆ ಶಿಕ್ಷಣವೆಂದರೆ ಜಿಗುಪ್ಸೆ ಹುಟ್ಟಿಸುತ್ತದೆ. 2 ತಲೆಗೆಲ್ಲ ಒಂದೇ ಮಂತ್ರವೆಂದು ನೂಲುವುದನ್ನು ಎಲ್ಲರಿಗೂ ಕಲಿಸಹೋದರೆ ಯಾವ ಪುರುಷಾರ್ಥ ತಾನೆ ಸಾಧನೆಯಾದೀತು ? ಮುಂದಿನ ಜನಾಂಗವೆಲ್ಲ ಅದೇ ಕೈಗಾರಿಕೆಯನ್ನು ಅನುಸರಿಸಿದರೆ ಮುಂದೆ ಗತಿಯೇನು ? 3 ದಿನದ ಅರ್ಧಭಾಗದಲ್ಲಿ ತಮ್ಮ ಸ್ವಾಭಾವಿಕ ಆಸಕ್ತಿಗೆ ವಿರುದ್ಧವಾಗಿ ಇತರರು ಹೇರಿದ ಉದ್ಯೋಗದಲ್ಲಿ ತೊಡಗಿ ಆ ಸ್ವಾಭಾವಿಕ ಆಸಕ್ತಿಗಳ ಪ್ರಕಾಶನಕ್ಕೆ ಅಡಚಣೆಯಾಗಿ ಅವರ ವ್ಯಕ್ತಿತ್ವದಲ್ಲಿ ತೊಡಕುಗಳು ಮೂಡಿಕೊಳ್ಳುವುದಿಲ್ಲವೆ ? 4 ಕಸಬೇ ಪ್ರಧಾನವಾಗಿರುವ ಈ ಪದ್ಧತಿ ಮಗುವನ್ನೇ ಮರೆತಿರುವುದಲ್ಲದೆ ದೈಹಿಕ ಶಿಕ್ಷಣ, ನೈತಿಕ ಶಿಕ್ಷಣಗಳಿಗೆ ಅವಕಾಶ ಕಲ್ಪಿಸಿಲ್ಲ. 5 ಕಸಬಿಗೆ ಸಂಬಂಧಿಸಿದಂತೆ ವಿಷಯವನ್ನು ಬೋಧಿಸುವ ಯತ್ನದಲ್ಲಿ ಗೊಂದಲಕ್ಕೂ ಕೃತಕತೆಗೂ ಅವಕಾಶವಾಗಿ ಶಾಲೆಗೂ ಜೀವನಕ್ಕೂ ಅಂತರ ಹುಟ್ಟಿಕೊಳ್ಳುತ್ತದೆ. 6 ಪಠ್ಯಪುಸ್ತಕಗಳಿಗೆ ಪುರಸ್ಕಾರವೀಯದ ಈ ಶಿಕ್ಷಣ ಹೇಗೆ ತಾನೆ ಜನಪ್ರಿಯವಾದೀತು – ದೇವರಿಲ್ಲದ ಗುಡಿಯಂತೆ ? 7 ಮೇಲ್ಮಟ್ಟದ ಶಿಕ್ಷಣಕ್ಕೆ ಈ ಪದ್ಧತಿಯ ಅನ್ವಯ ಯೋಗ್ಯವಲ್ಲ.

ಈಚೆಗೆ ಈ ದಿಕ್ಕಿನಲ್ಲಿ ಮೂಲಶಿಕ್ಷಣವನ್ನು ಸುಧಾರಿಸುವ ಯತ್ನ ನಡೆದಿದೆ. ಆದರೂ ಮೂಲಶಿಕ್ಷಣಕ್ಕೆ ಸ್ವಾತಂತ್ರ್ಯದ ಆರಂಭದಲ್ಲಿ ಲಭಿಸಿದ್ದ ಜನಪ್ರಿಯತೆ ಈಗ ಇಲ್ಲವಾಗಿದೆ. ಅದನ್ನು ಆ ರೂಪದಲ್ಲಿ ದೇಶಾದ್ಯಂತ ಪ್ರಚಾರಕ್ಕೆ ತರುವ ಯತ್ನವೂ ಹಿಂಬದಿಗೆ ಬಿದ್ದಂತೆ ಕಾಣುತ್ತದೆ. ಹೊಸದಾಗಿ ಪ್ರಚಾರಕ್ಕೆ ಬಂದ ಎಲ್ಲ ಶಿಕ್ಷಣಪದ್ಧತಿಗಳಿಗೂ ಇದೇ ಪಾಡು ಒದಗಿದೆ. ಅವು ಮೊದಲು ಪರಮೋತ್ಕೃಷ್ಟವೆಂದು ಹೊಗಳಿಸಿಕೊಳ್ಳುತ್ತವೆ; ಅನಂತರ ಅವುಗಳ ಕುಂದುಕೊರತೆಗಳನ್ನು ಕಂಡು ಜನತೆ ಅವನ್ನು ಕಟುವಾಗಿ ಟೀಕಿಸುತ್ತದೆ. ಆಮೇಲೆ ಅದರಲ್ಲಿರುವ ಉತ್ತಮಾಂಶಗಳನ್ನು ಮಾತ್ರ ಇಂದಿನ ಪದ್ಧತಿಯಲ್ಲಿ ಅಳವಡಿಸಿಕೊಳ್ಳಲು ಯತ್ನಿಸುತ್ತದೆ. ಮೂಲಶಿಕ್ಷಣದ ಬಗ್ಗೆಯೂ ಈ ಮಾತು ಒಪ್ಪುತ್ತದೆ. ಈಗ ಅದು ತನ್ನ ಆ ಮೂರನೆಯ ಅಂತಸ್ತನ್ನು ಮುಟ್ಟಿದೆ. ಅದರಲ್ಲಿರುವ ಉತ್ತಮಾಂಶಗಳು ನಮ್ಮ ಪ್ರಾಥಮಿಕ ಶಿಕ್ಷಣಕ್ಷೇತ್ರವನ್ನು ಈಗಾಗಲೇ ಪರಿಣಾಮಗೊಳಿಸಿವೆ. ಕಸುಬು, ಕಲೆ, ಕೈಕೆಲಸ ಮುಂತಾದ ಕಾಯಕಾನುಭವಗಳನ್ನೊದಗಿಸುವ ಚಟುವಟಿಕೆಗಳು ಅಲ್ಲಿನ ಪಠ್ಯಕ್ರಮದಲ್ಲಿ ಹೊಸದಾಗಿ ಸೇರಿಕೊಂಡಿವೆ. ಜೀವನಕ್ಕೆ ಹೊಂದಿಸಿಕೊಂಡು ವಿಷಯಗಳನ್ನು ಸಮೀಕರಿಸಿಕೊಂಡು ಪಾಠ ಬೋಧಿಸುವ ನೂತನ ಬೋಧನಕ್ರಮ ಬಳಕೆಗೆ ಬರುತ್ತಿದೆ. ತಮ್ಮ ಶಾಲೆಯನ್ನು ತಾವೇ ಚೊಕ್ಕಟವಾಗಿಟ್ಟುಕೊಳ್ಳುವ ಸ್ವಾವಲಂಬನೆಯ ದೃಷ್ಟಿ ಆಚರಣೆಗೆ ಬರುತ್ತಿದೆ. ಕೈಕೆಲಸಗಳ ಮೂಲಕ ಮಕ್ಕಳ ಕ್ರಿಯಾತ್ಮಕ ಶಕ್ತಿಗೆ ಪೋಷಣೆ ದೊರೆಯುವುದರ ಜೊತೆಗೆ ಅವರ ಮನಸ್ಸಿನಲ್ಲಿ ಶ್ರಮಜೀವನದ ಬಗ್ಗೆ ಗೌರವ ಬೆಳೆಯಲು ಅವಕಾಶವಾಗಿದೆ. ಶಾಲೆಯೊಡನೆ ಸುತ್ತಣ ಸಮಾಜದ ಜೀವನವನ್ನು ಹೊಂದಿಸಿಕೊಂಡು ಕೆಲಸಮಾಡುತ್ತ ಶಾಲೆ, ಸಮಾಜದ ಕ್ಷೇಮಚಿಂತನೆಗೂ ಅಭಿವೃದ್ಧಿಸಾಧನೆಗೂ ಕೆಲಸ ಮಾಡಬೇಕಾದ ಸಂಸ್ಥೆಯಾಗಿ ರೂಪುಗೊಳ್ಳುತ್ತಿದೆ. ಇಷ್ಟೆಲ್ಲ ಮೂಲಶಿಕ್ಷಣ ಪ್ರಾಥಮಿಕ ಶಿಕ್ಷಣದ ಮೇಲೆ ಇತ್ತೀಚಿನ ದಿನಗಳಲ್ಲಿ ಬೀರಿರುವ ಪ್ರಭಾವವೆನ್ನಬಹುದು. ಆದರೂ ಅದು ತನ್ನ ಶುದ್ಧರೂಪದಲ್ಲಿ ದೇಶಾದ್ಯಂತ ಆಚರಣೆಗೆ ಬರಲೇಬೇಕೆಂದು ವಾದಿಸತಕ್ಕವರು ಇಂದಿಗೂ ಉಳಿದುಕೊಂಡೇ ಇರುವರು. (ಎನ್.ಎಸ್.ವಿ.)

**ಗಾಂಧೀ ದೃಷ್ಟಿಯಲ್ಲಿ ಸ್ವರಾಜ್ಯ:** ಭಾರತದ ಸ್ವಾತಂತ್ರ್ಯಕ್ಕಾಗಿ ಅಪ್ರತಿಮವಾಗಿ ಹೋರಾಟ ನಡೆಸಿದ ಗಾಂಧೀಜಿಯವರು ಕೇವಲ ರಾಜಕೀಯ ಸ್ವಾತಂತ್ರ್ಯದ ಗುರಿ ಇಟ್ಟುಕೊಂಡಿರಲಿಲ್ಲ. ಪೂರ್ಣ ಸ್ವರಾಜ್ಯದ ಸ್ಥಾಪನೆಗೆ ರಾಜಕೀಯ ಸ್ವಾತಂತ್ರ್ಯ ಮೊದಲ ಮೆಟ್ಟಲೆಂದು ಮಾತ್ರ ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ಸ್ವರಾಜ್ಯವೆಂದರೆ ಪರಿಪೂರ್ಣವಾದ ಪ್ರಜಾರಾಜ್ಯ. ಈ ವ್ಯವಸ್ಥೆಯಲ್ಲಿ ಸಾರ್ವಭೌಮಾಧಿಕಾರವಿರುವುದು ಪ್ರಜೆಗಳಲ್ಲೇ ಹೊರತು ಪ್ರಭುತ್ವದಲ್ಲಿ ಅಲ್ಲ. ಪ್ರಜೆಗಳ ಸಾರ್ವಭೌಮತ್ವಕ್ಕೆ ಬುನಾದಿ ನೈತಿಕ ಅಧಿಕಾರ; ದಂಡಿನ ಬಲವಲ್ಲ. ಸತ್ಯ, ಅಹಿಂಸೆ, ಸ್ವಾತಂತ್ರ್ಯ, ಸಮಾನತೆ – ಈ ಮೌಲ್ಯಗಳ ಸಾಕ್ಷಾತ್ಕಾರವೇ ಪ್ರಜೆಗಳ ಗುರಿ. ಈ ಮೌಲ್ಯಗಳು ಹೆಚ್ಚುಹೆಚ್ಚಾಗಿ ಅನುಷ್ಠಾನಕ್ಕೆ ಬಂದಂತೆ ವ್ಯಕ್ತಿಗಳ ವಿಕಾಸದ ಹಾಗೂ ಸಮಾಜದ ಮೇಲ್ಮೆಯ ಸಾಧನೆಯಾಗುತ್ತ ಹೋಗುತ್ತದೆ. ಅಂಥ ಪ್ರಜಾರಾಜ್ಯ ಶೋಷಣರಹಿತ ವರ್ಗರಹಿತ ರಾಜ್ಯವಾಗಿರುತ್ತದೆ. ಪೂರ್ಣ ಸ್ವರಾಜ್ಯ ಏರ್ಪಟ್ಟಾಗ ಯಾವುದೇ ರೀತಿಯ ಸರ್ಕಾರಿ ಅಂಕುಶವಿರುವುದಿಲ್ಲ. ಈ ವ್ಯವಸ್ಥೆಯಲ್ಲಿ ಜನತೆಗೆ ಪೂರ್ಣವಾಗಿ ಸಾಮಾಜಿಕ ನ್ಯಾಯ, ಆರ್ಥಿಕ ನೆಮ್ಮದಿ ಹಾಗೂ ವ್ಯಕ್ತಿಸ್ವಾತಂತ್ರ್ಯ ಇರುತ್ತವೆ. ಇಂಥ ಪ್ರಜಾರಾಜ್ಯವನ್ನು ಗಾಂಧಿಯವರು ರಾಮರಾಜ್ಯವೆಂದು ಕರೆದರು; ಪ್ರಬುದ್ಧ ಅರಾಜಕತೆ (ಎನ್‌ಲೈಟನ್ಡ್ ಆನಾರ್ಕಿ) ಎಂದರು.

ಸರ್ಕಾರವೇ ಇಲ್ಲದ ರಾಜ್ಯ ಆದರ್ಶವಾದರೂ ಸದ್ಯಕ್ಕೆ ಅದು ಎಟುಕದ ಆದರ್ಶ. ಆದ್ದರಿಂದ ಯಾವುದು ಅತ್ಯಂತ ಮಿತವಾದ ಪ್ರಭುತ್ವವೋ ಅದೇ ಉತ್ಕೃಷ್ಟ ಪ್ರಭುತ್ವ ಎಂಬ ಥಾರೋವಿನ ವಿಚಾರವನ್ನು ಗಾಂಧಿಯವರು ಒಪ್ಪಿಕೊಂಡರು.

ಸ್ವತಂತ್ರ್ಯ ಭಾರತ ಬ್ರಿಟನಿನ ಸಂಸದೀಯಪ್ರಭುತ್ವ ಪದ್ಧತಿಯನ್ನಾಗಲಿ ಸೋವಿಯೆತ್ ಪದ್ಧತಿಯನ್ನಾಗಲಿ ಫ್ಯಾಸಿಸ್ಟ್ ಪದ್ಧತಿಯನ್ನಾಗಲಿ ಅನುಕರಿಸಬಾರದು. ಅವುಗಳಲ್ಲಿ ಯಾವುದೂ ಭಾರತೀಯ ಜನಜೀವನ ಅಥವಾ ಸಂಸ್ಕೃತಿಗೆ ಹೊಂದಿಕೊಳ್ಳುವಂಥದಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೂಢವಾಗಿರುವ ಪ್ರಭುತ್ವಗಳೆಲ್ಲವೂ ಸಾಮ್ರಾಜ್ಯವಾದ, ಹಿಂಸೆ, ಶೋಷಣೆ ಇವುಗಳ ಮೇಲೆ ನಿಂತಿರುವಂಥವು. ಆದ್ದರಿಂದ ಅವು ಭಾರತಕ್ಕೆ ವರ್ಜ್ಯವೆಂಬುದು ಗಾಂಧಿಯವರ ಮತ.

ಭಾರತದಲ್ಲಿ ಕೇವಲ ಕೆಲವು ಜನತಾಪ್ರತಿನಿಧಿಗಳು ಅಧಿಕಾರಸೂತ್ರ ವಹಿಸಿಕೊಂಡರೆ ನಿಜವಾದ ಸ್ವರಾಜ್ಯವಾಗಲಾರದು. ಸರ್ಕಾರ ತಪ್ಪು ಮಾಡಿದಾಗ ಅದನ್ನು ತಡೆಗಟ್ಟುವ ಸಾಮರ್ಥ್ಯ ಪ್ರತಿಯೊಬ್ಬ ಪ್ರಜೆಗೂ ಬಂದಾಗಲೇ ನಿಜವಾದ ಸ್ವರಾಜ್ಯಪ್ರಾಪ್ತಿ ಎಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು. ರಾಜಕೀಯ ಅಧಿಕಾರದ ಕೇಂದ್ರೀಕರಣವಾದಷ್ಟೂ ಪ್ರಭುತ್ವ ಜನಸಾಮಾನ್ಯರ ಹಿಡಿತದಿಂದ ದೂರ ಸರಿಯುತ್ತದೆ. ಹಿಂಸೆಯನ್ನು ಆಧರಿಸಿದ ಸರ್ಕಾರ ದೊಡ್ಡ ಶೋಷಕಶಕ್ತಿಯಾಗುವುದಲ್ಲದೆ ವ್ಯಕ್ತಿಸ್ವಾತಂತ್ರ್ಯಕ್ಕೆ ಕಂಟಕವಾಗುತ್ತದೆ. ಅಂಥ ಕೇಂದ್ರೀಕೃತ ರಾಜಕೀಯ ವ್ಯವಸ್ಥೆ ಜನರ ಹೆಸರಿನಲ್ಲಿ ನಡೆದರೂ ಅದು ಹೆಸರಿಗೆ ಮಾತ್ರ ಪ್ರಜಾಪ್ರಭುತ್ವವಾಗಿರುತ್ತದೆ. ಪ್ರಜೆಗಳು ತಮ್ಮ ಆಗುಹೋಗುಗಳನ್ನು

ನಿರ್ಧರಿಸುವುದರಲ್ಲಿ ಸಕ್ರಿಯಾಪಾತ್ರವಹಿಸಲಾಗುವುದಿಲ್ಲ. ಬದಲಾಗಿ ಪ್ರತಿಯೊಂದು ಕೆಲಸಕ್ಕೂ ಸರ್ಕಾರವನ್ನೇ ಎದುರು ನೋಡುವ ಅಸಹಾಯಕ ಪರಿಸ್ಥಿತಿಯಲ್ಲಿರುತ್ತಾರೆ. ಇದು ತಪ್ಪಬೇಕಾದರೆ ರಾಜಕೀಯ ಅಧಿಕಾರದ ವಿಕೇಂದ್ರೀಕರಣವಾಗಬೇಕು. ಭಾರತದಲ್ಲಿ ರಾಜ್ಯಶಕ್ತಿಯ ವಿಕೇಂದ್ರೀಕರಣಕ್ಕೆ ಸಹಾಯಕವಾಗುವ ಗ್ರಾಮ ಘಟಕಗಳಿವೆ. ಗಾಂಧಿಯವರ ದೃಷ್ಟಿಯಲ್ಲಿ ಪ್ರತಿ ಗ್ರಾಮವೂ ಸ್ವಾಯತ್ತತೆಯ ಘಟಕವಾಗಬೇಕು. ಅವರು ದೇಶದ ಮುಂದಿಟ್ಟ ಗ್ರಾಮಸ್ವರಾಜ್ಯದ ಚಿತ್ರವಿದು.

ನನ್ನ ಕಲ್ಪನೆಯ ಗ್ರಾಮಸ್ವರಾಜ್ಯವೆಂದರೆ ಅದೊಂದು ಪರಿಪೂರ್ಣಗಣರಾಜ್ಯ. ತನ್ನ ಪ್ರಧಾನ ಅಗತ್ಯಗಳಲ್ಲಿ ಅದು ನೆರೆಹೊರೆಯವರಿಂದ ಸ್ವತಂತ್ರ. ಆದರೂ ಅಗತ್ಯವಾದಲ್ಲಿ, ಎಷ್ಟೋ ವಿಷಯಗಳಲ್ಲಿ ಗ್ರಾಮಗಳು ಪರಸ್ಪರಾವಲಂಬಿಯಾಗಿರುತ್ತವೆ. ಹೀಗೆ ತನ್ನ ಆಹಾರ ಬೆಳೆಯುವುದು, ಬಟ್ಟೆಗಾಗಿ ಹತ್ತಿ ಬೆಳೆಯುವುದು, ಪ್ರತಿ ಹಳ್ಳಿಯ ಮೊದಲ ಗಮನ. ದನಕರುಗಳಿಗಾಗಿ ಕಾವಲು, ಮಕ್ಕಳಿಗಾಗಿಯೂ ಪ್ರೌಢರಿಗಾಗಿಯೂ ಆಟಕ್ಕೂ ಮನೋರಂಜನೆಗೂ ಸ್ಥಳ ಇರಬೇಕು. ಇದಕ್ಕೆಲ್ಲ ಆಗಿ ಭೂಮಿ ಮಿಕ್ಕರೆ ಅದರಲ್ಲಿ ಗಾಂಜಾ, ತಂಬಾಕು, ಅಫೀಮುಗಳ ಹೊರತಾಗಿ ಉಪಯೋಗಕರ ಹಣದ ಬೆಳೆಗಳನ್ನು ಬೆಳೆಯಬಹುದು. ಹಳ್ಳಿಹಳ್ಳಿಯಲ್ಲೂ ನಾಟಕಮಂದಿರ, ಶಾಲೆ, ಸಭಾಭವನ ಇದ್ದಾವು; ಶುದ್ಧವಾದ ನೀರಿನ ಪೂರೈಕೆಯ ಕೇಂದ್ರ ಇದ್ದೀತು. ಮೂಲಶಿಕ್ಷಣದ ಅವಧಿಯ ಪೂರ್ಣ ಶಿಕ್ಷಣ ಕಡ್ಡಾಯವಿದ್ದೀತು. ಸಾಧ್ಯವಿದ್ದಷ್ಟು ಮಟ್ಟಿಗೂ ಪ್ರತಿಯೊಂದು ಕೆಲಸವನ್ನು ಸಹಕಾರತತ್ತ್ವದ ಆಧಾರದ ಮೇಲೆ ಕೈಗೊಳ್ಳಲಾದೀತು. ಘಟ್ಟಘಟ್ಟಗಳ ಅಸ್ಪೃಶ್ಯತೆಯುಳ್ಳ ಇಂದಿನಂಥ ಜಾತಿಗಳಿರುವುದಿಲ್ಲ. ಸತ್ಯಾಗ್ರಹ ಹಾಗೂ ಅಸಹಕಾರ ತಂತ್ರವುಳ್ಳ ಅಹಿಂಸೆಯೇ ಗ್ರಾಮಸಮಾಜದ ಆಧಾರಶಕ್ತಿ. ಹಳ್ಳಿಯಲ್ಲಿ ಇಡಲಾದ ಒಂದು ಖಾತೆಯಿಂದ ಸರದಿ ಪ್ರಕಾರ ಆರಿಸಲಾಗುವ, ಎಲ್ಲರಿಗೂ ಅನಿವಾರ್ಯವಾದ, ಗ್ರಾಮರಕ್ಷಕ ಪಡೆ ಇದ್ದೀತು. ಹಳ್ಳಿಯಲ್ಲಿ ಯೋಗ್ಯಕನಿಷ್ಠ ಅರ್ಹತೆಗಳುಳ್ಳ ಎಲ್ಲ ಪ್ರೌಢ ಸ್ತ್ರೀಪುರುಷರೂ ವರ್ಷಕ್ಕೊಮ್ಮೆ ಚುನಾಯಿಸುವ ಐವರ ಪಂಚಾಯಿತಿ ಹಳ್ಳಿಯ ಆಡಳಿತವನ್ನು ನಡೆಸಿಕೊಂಡು ಹೋಗುವುದು. ಆಡಳಿತಕ್ಕೆ ಬೇಕಾದ ಅಧಿಕಾರ, ವ್ಯಾಪ್ತಿ ಎರಡೂ ಈ ಮಂಡಳಿಗೆ ಇರುವುವು. ಪ್ರಚಲಿತ ಅರ್ಥದ ಶಿಕ್ಷೆಯ ಪದ್ಧತಿ ಇರುವುದಿಲ್ಲವಾದ್ದರಿಂದ ಪಂಚಾಯಿತಿಯೇ ಶಾಸಕಾಂಗ ನ್ಯಾಯಾಂಗ ಕಾರ್ಯಾಂಗಗಳಾಗಿ ತನ್ನ ಒಂದು ವರ್ಷದ ಅಧಿಕಾರಾವಧಿಯಲ್ಲಿ ಕೆಲಸ ಮಾಡೀತು. ಇಲ್ಲಿ ವ್ಯಕ್ತಿಸ್ವಾತಂತ್ರ್ಯದ ಆಧಾರದ ಮೇಲೆ ಪರಿಪೂರ್ಣ ಜನತಂತ್ರವಿದೆ. (ಆಧಾರ : ಹರಿಜನ, ಜುಲೈ 26, 1942)

ಗ್ರಾಮ ಗಣರಾಜ್ಯಗಳ ಮಹಾ ಒಕ್ಕೂಟವೇ ಭಾರತರಾಷ್ಟ್ರ. ಅಸಂಖ್ಯ ಹಳ್ಳಿಗಳುಳ್ಳ ಈ ರಚನೆಯಲ್ಲಿ ಸದಾ ವ್ಯಾಪಕವೃತ್ತಗಳಿರುತ್ತವೆ; ಆರೋಹಣ ವೃತ್ತಗಳಿರುವುದಿಲ್ಲ. ಬದುಕು ಪಿರಮಿಡಿನಂತಿರುವುದಿಲ್ಲ. ಅದು ಸಾಗರ ಸಮವೃತ್ತದಂತೆ. ಅದರ ಕೇಂದ್ರಬಿಂದು ವ್ಯಕ್ತಿ. ಆತ ತನ್ನ ಹಳ್ಳಿಗಾಗಿ ಅಳಿಯಲೂ ಸಿದ್ಧ. ಗ್ರಾಮಗಳ ಸಮೂಹಕ್ಕಾಗಿ ನಾಶವಾಗಲು ಹಳ್ಳಿ ಸಿದ್ಧ. ಕೊನೆಗೆ ಇಡೀ ಜೀವನ ಒಂದು ಪೂರ್ಣತೆಯಾಗುತ್ತದೆ. ಅದರಲ್ಲಿರುವ ವ್ಯಕ್ತಿಗಳು ಎಂದೂ ಅಹಂಕಾರದಿಂದ ಆಕ್ರಮಣಕಾರಿಗಳಾಗುವುದಿಲ್ಲ. ಅವರು ಸದಾ ವಿನಿಮ್ರರು. ಸಾಗರ ಸಮವೃತ್ತದ ಗಾಂಭೀರ್ಯದಲ್ಲಿ ಪಾಲುಗೊಂಡವರು.

ಆದ್ದರಿಂದ ಹೊರಗಿನ ವೃತ್ತ ಒಳಗಿನ ವೃತ್ತವನ್ನು ತುಳಿಯಲು ತನ್ನ ಅಧಿಕಾರವನ್ನು ಉಪಯೋಗಿಸುವುದಿಲ್ಲ. ಅದರ ಬದಲಾಗಿ ತಾನೂ ಅದಕ್ಕೆ ಶಕ್ತಿ ನೀಡುತ್ತದೆ. ಅದರಿಂದ ತಾನೂ ಶಕ್ತಿ ಪಡೆಯುತ್ತದೆ. ಇದೆಲ್ಲ ಅಸಾಧ್ಯವಾದ ಆದರ್ಶ ಎಂದು ನೀವು ನನ್ನನ್ನು ಮೂದಲಿಸಬಹುದು. ಮನುಷ್ಯಮಾತ್ರರು ಗುರುತಿಸಲಾದ ಯೂಕ್ಲಿಡನ ಬಿಂದುವಿಗೇ ಅಳಿಯದ ಬೆಲೆ ಇರುವುದಾದರೆ ಮಾನವಕುಲ ಉಳಿಯುವಂಥ ನನ್ನ ಚಿತ್ರಕ್ಕೂ ತನ್ನದೇ ಆದ ಮೌಲ್ಯವುಂಟು. ಚಿತ್ರವನ್ನು ಪರಿಪೂರ್ಣವಾಗಿ ಎಂದೂ ಸಾಧಿಸಲಾಗ ದಿದ್ದರೂ ಭಾರತ ಈ ನೈಜ ಚಿತ್ರಕ್ಕಾಗಿ ಬದುಕಲಿ, ನಮಗೆ ಬೇಕಾದುದರ ಯೋಗ್ಯ ಚಿತ್ರವಿಲ್ಲದೆ ನಾವು ಅದರತ್ತ ಧಾವಿಸುವುದು ಸಾಧ್ಯವಿಲ್ಲ. ಭಾರತದ ಪ್ರತಿಯೊಂದು ಹಳ್ಳಿಯಲ್ಲೂ ಎಂದಾದರೊಂದು ದಿನ ಪ್ರಜಾರಾಜ್ಯವಾಗಬೇಕಾಗಿದ್ದರೆ ನನ್ನ ಈ ಚಿತ್ರವೇ ಸರಿ ಎನ್ನುತ್ತೇನೆ. ಇದರಲ್ಲಿ ಕೊನೆಯದೂ ಮೊದಲಿನದೂ ಪರಸ್ಪರ ಸಮಾನ; ಅರ್ಥಾತ್ ಪ್ರಥಮ ಅಂತಿಮ ಯಾವುದೂ ಇದರಲ್ಲಿಲ್ಲ. (ಆಧಾರ: ಹರಿಜನ ಜುಲೈ 22,1946).

ಪ್ರಜಾಪ್ರಭುತ್ವದ ಯಶಸ್ಸು ವಿಕೇಂದ್ರೀಕರಣವನ್ನು ಅವಲಂಬಿಸಿದೆ ಎಂಬುದು ಗಾಂಧಿಯವರ ಸ್ಪಷ್ಟ ಅಭಿಮತ, ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಮಾತ್ರ ಅಹಿಂಸೆಯ ಆಚರಣೆ ಸಾಧ್ಯ. ಅಹಿಂಸೆ ಆಧಾರವಾಗಿರದ ಪ್ರಜಾತಂತ್ರ ನಿಜವಾದ ಪ್ರಜಾಪ್ರಭುತ್ವ ವಾಗುವುದೇ ಇಲ್ಲ.

ರಾಜಕೀಯ ಅಧಿಕಾರದ ಜೊತೆಯಲ್ಲಿ ಆರ್ಥಿಕಶಕ್ತಿಯ ವಿಕೇಂದ್ರೀಕರಣವೂ ಆಗಬೇಕು. ವಿಕೇಂದ್ರೀಕೃತ ಅರ್ಥವ್ಯವಸ್ಥೆ ಎಂದರೆ ಮನುಷ್ಯನ ಶ್ರಮಶಕ್ತಿ ಆಧಾರವಾಗಿರುವ ಸಣ್ಣ ಉದ್ಯಮಗಳ ವ್ಯವಸ್ಥೆ. ಜನತೆಗೆ ಉಪಯುಕ್ತವಾದ ಎಲ್ಲ ಅಗತ್ಯ ಬಳಕೆಯ ವಸ್ತುಗಳ ಉತ್ಪಾದನೆ ಕುಟೀರಗಳಲ್ಲಿ ಅಥವಾ ಸಣ್ಣ ಸಣ್ಣ ಘಟಕಗಳಲ್ಲಿ ಆಗುತ್ತದೆ. ಭಾರತದಂಥ ಜನಬಾಹುಳ್ಯವಿರುವ ದೇಶದಲ್ಲಿ ಕೋಟಿ ಕೋಟಿ ಕೈಗಳೂ ಲಕ್ಷೋಪಲಕ್ಷ ಕುಟೀರಗಳಲ್ಲಿ ಉತ್ಪಾದಿಸಿದ ವಸ್ತುಗಳ ಒಟ್ಟು ಗಾತ್ರ ಅಗಾಧವಾದ ಜನರ ಆವಶ್ಯಕತೆಗಳನ್ನು ಪೂರೈಸುತ್ತದೆ. ಶ್ರಮಶಕ್ತಿಗೆ ಪೂರಕವಾಗಿ ಸಣ್ಣ ಯಂತ್ರಗಳಿಗೆ ಅವಕಾಶವಿರುತ್ತದೆ. ಇಂಥ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳಿಂದ ಶೋಷಣೆ ಅಥವಾ ಲಾಭಬಡುಕತನ ಇರುವುದಿಲ್ಲ. ಉತ್ಪಾದನೆ ವಿತರಣೆಗಳು ಒಟ್ಟಿಗೆ ಆಗಿ ಪರಮಾವಧಿ ಉದ್ಯೋಗ ಪ್ರಾಪ್ತಿ ಹಾಗೂ ನ್ಯಾಯೋಚಿತ ವಿತರಣೆ ಆಗುತ್ತದೆ.

ಅನಿವಾರ್ಯವಾಗಿ ಹಲವು ಬೃಹತ್ ಕೈಗಾರಿಕೆಗಳು ಇರಬೇಕಾದ ಸಂದರ್ಭದಲ್ಲಿ ಅದರ ಮಾಲೀಕತ್ವದಲ್ಲಿ ಕಾರ್ಮಿಕರ ಸಹಭಾಗಿತ್ವ ಇರಬೇಕು. ಮಾಲೀಕರು ಉದ್ಯಮದ ಧರ್ಮದರ್ಶಿಗಳಾಗಿ ವರ್ತಿಸಿ ಕಾರ್ಮಿಕವರ್ಗಕ್ಕೆ ಸಮಪಾಲು ನೀಡಬೇಕು. ಮಾಲೀಕ ವರ್ಗ ಹಾಗೇ ನಡೆದುಕೊಳ್ಳದಿದ್ದ ಪಕ್ಷದಲ್ಲಿ ಅಂಥ ಭಾರೀ ಉದ್ಯಮಗಳು ಸರ್ಕಾರದ ಒಡೆತನಕ್ಕೆ ಒಳಪಡುತ್ತವೆ. ಸರ್ಕಾರದ ಅಧೀನದಲ್ಲಿದ್ದರೂ ಅದರ ಆಡಳಿತ ನೌಕರಶಾಹಿಯ ಮುಷ್ಟಿಯಲ್ಲಿರದೆ ಕಾರ್ಮಿಕರ ಪ್ರಾತಿನಿಧ್ಯವುಳ್ಳ ದಕ್ಷ ಆಡಳಿತ ಮಂಡಲಿಯಲ್ಲಿರತಕ್ಕದ್ದು.

ಗಾಂಧಿಯವರ ಕಲ್ಪನೆಯ ಸಮಾಜ ಜಾತಿರಹಿತ ಹಗೂ ವರ್ಗರಹಿತ ಸಮಾಜ. ಎಲ್ಲ ಜನರ ಸರ್ವಾಂಗೀಣ ವಿಕಾಸಕ್ಕೆ ಇದರಲ್ಲಿ ಆದ್ಯ ಗಮನ. ಸ್ತ್ರೀಪುರುಷರು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಸಹಭಾಗಿಗಳು.

ಸ್ವರಾಜ್ಯದ ರಾಜಕಾರಣ ಸೇವಾಪರವಾದ ರಾಜಕಾರಣ. ನೀತಿಬಾಹಿರವಾದ ರಾಜಕಾರಣ ಪಾಶವೀ ರಾಜಕೀಯವಾದ್ದರಿಂದ ಅದು ಸಮಾಜಘಾತಕ. ಸಾಧನ, ಗುರಿ ಇವೆರಡೂ ಪವಿತ್ರವಾಗಿದ್ದಲ್ಲಿ ರಾಜಕಾರಣ ಪರಿಶುದ್ಧವಾಗಿರುತ್ತದೆ. ಜನತೆಯಿಂದ ಚುನಾಯಿತರಾದ ಪ್ರತಿನಿಧಿಗಳು ಪ್ರಾಮಾಣಿಕವಾಗಿ ಸೇವಾತತ್ಪರರಾಗಿದ್ದರೆ ಅವರು ನಡೆಸುವ ಸರ್ಕಾರ ಸೇವಾಸಾಧನವಾಗುತ್ತದೆ. ವಿವಿಧ ಘಟ್ಟಗಳಲ್ಲಿ ಜನರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವ್ಯಷ್ಟಿ ಹಾಗೂ ಸಮಷ್ಟಿ ಹಿತಕ್ಕಾಗಿ ಸಕ್ರಿಯವಾಗಿ ಕೆಲಸ ಮಾಡುವುದರಿಂದ ಸಮಾಜದ ಅಭ್ಯುದಯ ಉಂಟಾಗುತ್ತದೆ. ಅಂಥ ಸಮಾಜ ಸರ್ವರ ಯೋಗಕ್ಷೇಮ ಸಾಧಿಸುವ ಸರ್ವೋದಯ ಸಮಾಜವಾಗುತ್ತದೆ. ಅದು ಸ್ವರಾಜ್ಯವು ಸುರಾಜ್ಯವೂ ಆಗಿರುತ್ತದೆ.

ಗಾಂಧಿಯವರ ಸ್ವರಾಜ್ಯದ ಕಲ್ಪನೆ ಕೇವಲ ಭಾರತಕ್ಕೆ ಸೀಮಿತವಾಗಿರದೆ ಇಡೀ ಮಾನವಜನಾಂಗಕ್ಕೆ ಅನ್ವಯಿಸುತ್ತದೆ. ದೊಡ್ಡವು, ಚಿಕ್ಕವು ಎಂಬ ಭೇದವಿಲ್ಲದೆ ಎಲ್ಲ ರಾಜ್ಯಗಳೂ ಸರಿಸಮಾನವಾದವು. ಎಲ್ಲ ದೇಶಗಳಲ್ಲೂ ರಾಜ್ಯವ್ಯವಸ್ಥೆ ಸತ್ಯ, ಅಹಿಂಸೆ, ವಿಕೇಂದ್ರೀಕರಣ ಇವುಗಳ ಆಧಾರದ ಮೇಲೆ ರಚಿತವಾದರೆ ವಿಶ್ವಶಾಂತಿ ಶಾಶ್ವತ ವಾಗಿರುತ್ತದೆ. ಮಾನವ ಸ್ವಾತಂತ್ರ್ಯದ ದಿಗಂತ ವಿಸ್ತಾರವಾಗುತ್ತದೆ. (ಬಿ.ಆರ್.ಪಿ.)

ಗಾಂಧೀ ದೃಷ್ಟಿಯಲ್ಲಿ ಸತ್ಯಾಗ್ರಹ: ಮಹಾತ್ಮ ಗಾಂಧಿಯವರು ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ವಿಮೋಚನೆಗೊಳಿಸಿದ ರಾಷ್ಟ್ರನಾಯಕರು. 19ನೆಯ


ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹಿ ಗಾಂಧಿ

ಶತಮಾನದ ಯುರೋಪಿನ ಕೈಗಾರಿಕಾ ಕ್ರಾಂತಿ ಹಾಗೂ ಸಾಮ್ರಾಜ್ಯಶಾಹಿ ರಾಜಕೀಯ ವಿಸ್ತರಣಗಳ ಪರಿಣಾಮವಾಗಿ ಏಷ್ಯ ಆಫ್ರಿಕ ಖಂಡಗಳಲ್ಲಿಯ ಬಹು ಭಾಗ ದಾಸ್ಯಕ್ಕೆ ಒಳಗಾಗಿತ್ತು. ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯ ವರ್ತಕರ ವಕೀಲರಾಗಿ ಅಲ್ಲಿಗೆ ಹೋಗಿದ್ದ ಗಾಂಧೀಯವರು ಅಲ್ಲಿಯ ಬ್ರಿಟಿಷ್ ಸಾಮ್ರಾಜ್ಯ ಶಾಹಿ ವರ್ಣೀಯರನ್ನು ಅತ್ಯಂತ ಹೀನದಾಸ್ಯಕ್ಕೆ ಗುರಿಮಾಡಿ ಅವರ ನಾಗರಿಕ ಹಕ್ಕುಗಳನ್ನೆಲ್ಲ ದಮನ ಮಾಡಿದ್ದನ್ನು ಕಂಡು ಮೊದಲ ಬಾರಿಗೆ ಪ್ರತಿಭಟಿಸಿ ನಿಲ್ಲುವ ಸಾಹಸ ಮಾಡಿದರು. ಅಸಂಖ್ಯಾತ ಬಡ ಕೂಲಿಗಾರರ ಸಮೂಹವನ್ನು ಸಂಘಟಿಸಿ, ಅಲ್ಲಿ ನೆಲೆಸಿದ್ದ ಇತರ ಬುದ್ಧಿ ಜೀವಿಗಳ ನೆರವನ್ನೂ ಪಡೆದ ನಿಶ್ಶಸ್ತ್ರ ಸಾಮೂಹಿಕ ಪ್ರತಿಭಟನಾ ಸಮರವೊಂದನ್ನು ಪ್ರಾರಂಭಿಸಿದರು. ಮಾನವನ ನೈತಿಕಶಕ್ತಿಗಳನ್ನು ಜಾಗೃತಗೊಳಿಸಿ ಆತ್ಮಗೌರವದ ನಿಷ್ಠೆಯನ್ನು ಉಜ್ವಲಗೊಳಿಸಿ ಸಾಮಾನ್ಯ ಜನತೆ ಒಂದು ಪ್ರಬಲ ಸಶಸ್ತ್ರ ಸಾಮ್ರಾಜ್ಯ ಸರ್ಕಾರದ ಅನ್ಯಾಯ

ದುರಾಡಳಿತಗಳನ್ನು ಪ್ರತಿಭಟಿಸಿ ನಿಲ್ಲುವಂತೆ ಪ್ರೇರೇಪಿಸಿ ದರು. ಅವಮಾನಕರ ಕಾನೂನುಗಳನ್ನು ಸವಿನಯವಾಗಿ ಉಲ್ಲಂಘಿಸಿ ದಬ್ಬಾಳಿಕೆಯ ಶಿಕ್ಷೆಯನ್ನನುಭವಿಸುತ್ತ ಸತತವಾಗಿ ನ್ಯಾಯಕ್ಕಾಗಿ ಹೋರಾಡುವ ಕ್ರಮವನ್ನು ರೂಪಿಸಿದರು. ಮೊದಲು ಸದಾಗ್ರಹ ಎಂದೂ ಅನಂತರ ಸತ್ಯಾಗ್ರಹ ಎಂದೂ ಅದಕ್ಕೆ ಹೆಸರಿಟ್ಟರು. ರಸ್ಕಿನ್, ಟಾಲ್‌ಸ್ಟಾಯ್, ಥಾರೋ, ಮತ್ತು ರಾಯಿಚಂದಭಾಯಿ ಅವರ ಬರೆಹಗಳಿಂದಲೂ ಗೀತಾ, ಉಪನಿಷತ್, ಕುರಾನ್, ಬೈಬಲ್‌ಗಳ ಮೂಲ ತತ್ತ್ವಗಳ ಅಧ್ಯಯನ ಅನುಷ್ಠಾನಗಳಿಂದಲೂ ಪ್ರೇರಣೆ ಪಡೆದು ಸತ್ಯಾಗ್ರಹ ಚಳವಳಿಯನ್ನು 1906ರಲ್ಲಿ ಪ್ರಾರಂಭಿಸಿದರು. 1917ರಲ್ಲಿ ಭಾರತಕ್ಕೆ ಬಂದು ಸಾಬರಮತಿಯ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿ ಭಾರತದ ಸ್ವಾತಂತ್ರ್ಯ ಸಮರದ ನಾಯಕತ್ವ ವಹಿಸಿಕೊಂಡರು. ಅವರ ಇಡೀ ಜೀವನವೇ ಅಲ್ಲಿಂದಾಚೆಗೆ ಸತ್ಯಾಗ್ರಹ ಪಥವನ್ನು ಹಿಡಿದು ನಡೆದರು. ಜೀವನದ ಯಾವ ಕ್ಷೇತ್ರದಿಂದಲೂ ವಿಮುಖವಾಗದೆ, ಆದರ್ಶದ ಒರೆಗಲ್ಲಿಗೆ ಸಕಲ ಕರ್ಮಗಳನ್ನೂ ನಿಷ್ಠುರವಾಗಿ ಉಜ್ಜಿನೋಡಿ, ಸತ್ಯದ ಅರಿವಾದೊಡನೆ ನಿರ್ಭಯವಾಗಿ ಅದನ್ನನುಸರಿಸಿ ಮುನ್ನಡೆಯಲು ವ್ಯಕ್ತಿಗಾಗಲಿ, ಸಮಾಜಕ್ಕಾಗಲಿ, ರಾಷ್ಟ್ರಕ್ಕಾಗಲಿ ಅಹಿಂಸಾಮಾರ್ಗವೊಂದೇ ಸಾಧನ; ಅದೇ ಸತ್ಯಾಗ್ರಹ. ಇದು ಗಾಂಧಿಯವರು ಕಂಡುಕೊಂಡ ಸಿದ್ಧಾಂತ.

ಜೀವನದ ಸಮಸ್ಯೆಗಳನ್ನು ಸಮಗ್ರವಾಗಿ ಕಂಡು ಅವುಗಳನ್ನೆದುರಿಸಿ ಪರಿಹಾರ ಪಡೆದುಕೊಳ್ಳಲು ಅಹಿಂಸಾತ್ಮಕ ಹೋರಾಟವನ್ನು ಆತ್ಮಶಕ್ತಿಯ ಬಲದಿಂದ ನಡೆಸುವುದು ಸತ್ಯಾಗ್ರಹ. ಶಸ್ತ್ರಬಲದ ಅಥವಾ ಭಯೋತ್ಪಾದನೆಯ ಮೂಲಕ ಕಡ್ಡಾಯವಾಗಿ ಪರಿವರ್ತನೆ ಸಾಧಿಸುವ ಕ್ರಮದಿಂದ ಮಾನವೀಯ ಸಂಬಂಧಗಳು ಕಡಿಯುತ್ತವೆ. ಅದರಿಂದ ಉದ್ದೇಶಿತ ಫಲ ದೊರಕುವುದಿಲ್ಲ. ಆದ್ದರಿಂದ ವಿಕಾಸಶೀಲ ಕ್ರಾಂತಿಗೆ ಸತ್ಯಾಗ್ರಹವೇ ಆಧಾರಶಕ್ತಿ ಎನ್ನುವುದು ಗಾಂಧೀವಾದ. ಅವರ ಮಾತಿನಲ್ಲಿ 'ಕೌಟಂಬಿಕ ಪ್ರೇಮತತ್ತ್ವವನ್ನು ರಾಜಕೀಯಕ್ಕೆ ವಿಸ್ತರಣೆ ಮಾಡುವುದೇ ಸತ್ಯಾಗ್ರಹ. ಕುಟುಂಬದಲ್ಲಿ ತೊಂದರೆಗೀಡಾದ



5 ಏಪ್ರಿಲ್ 1939ರಂದು ದಂಡಿಯಲ್ಲಿ

ವ್ಯಕ್ತಿ ಇತರರ ವಿಷಯದಲ್ಲಿ ಪ್ರೇಮಭಾವ ಕಳೆದುಕೊಳ್ಳುವುದಿಲ್ಲ. ತನ್ನ ತತ್ತ್ವಗಳಿಗಾಗಿ ಹಿಂಸೆಯನ್ನು ಸಹಿಸಿಕೊಳ್ಳುತ್ತಾನೆ. ಭಿನ್ನಾಭಿಪ್ರಾಯದವರ ಬಗ್ಗೆ ಕ್ರೋಧವನ್ನಾಗಲಿ ಸೇಡಿನ ಮನೋಭಾವವನ್ನಾಗಲಿ ತಳೆದಿರುವುದಿಲ್ಲ. ಕ್ರೋಧದ ದಮನ, ಆತ್ಮಕ್ಲೇಶಾನುಭವ ಇವನ್ನು ಅಂಗೀಕರಿಸಿ ತಾಳ್ಮೆಯಿಂದ ಇತರರ ತಪ್ಪನ್ನು ತಿದ್ದುವ ಪ್ರಯತ್ನ ಮಾಡುತ್ತಾನೆ. ಉತ್ಕಟ ಪರಿಸ್ಥಿತಿಗಳಲ್ಲಿ ಕುಟುಂಬದ ಇತರರೊಂದಿಗೆ ಜಾಗ್ರತೆ ಒಮ್ಮತಕ್ಕೆ ಬಂದು ಕುಟುಂಬದ ಶಾಂತಿಯುತ ಕ್ಷೇಮಕ್ಕೆ ನೆರವಾಗುತ್ತಾನೆ. ಈ ಪ್ರೇಮತತ್ತ್ವ ಜಗತ್ತಿನ ಬಹುತೇಕ ನಾಗರಿಕ ರಾಷ್ಟ್ರಗಳ ಕುಟುಂಬಗಳಲ್ಲಿ ಅಗೋಚರವಾಗಿಯೂ ಸ್ಥಿರವಾಗಿಯೂ ಪ್ರಭಾವ ಬೀರುತ್ತಲೇ ಇದೆ. ಈ ತತ್ತ್ವವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳೆಲ್ಲದರಲ್ಲೂ ಒಪ್ಪಿದ ಹೊರತು ಜನಾಂಗಗಳ ಒಕ್ಕೂಟವಾಗಲಿ ಮನುಜಕುಲದ ಸರ್ವತೋಮುಖ ಏಳಿಗೆಯಾಗಲಿ ಅಸಾಧ್ಯ', ಸತ್ಯಾಗ್ರಹದ ಮೂಲಶಕ್ತಿ ಸತ್ಯನಿಷ್ಠೆ. ಸತ್ಯಕ್ಕಾಗಿ ಹೋರಾಡುವಾಗ ಹಿಂಸಾಚಾರ ಎಂದಿಗೂ ಸಮಂಜಸವಾದ ಅಸ್ತ್ರವಾಗಲಾರದು. ಅಹಿಂಸೆಯ ಪಥ ಅನಿವಾರ್ಯ. ವೈಯಕ್ತಿಕ ಅಹಿಂಸೆ ಮಾನವಧರ್ಮದ ಅವಿಭಾಜ್ಯ ಅಂಗ ಎಂದು ಎಲ್ಲ ಧರ್ಮಗಳು ನಂಬಿವೆ. ಅಂತೆಯೇ ಸಾಮೂಹಿಕ ಪ್ರತಿಭಟನೆ ಸತ್ಯವಿಷ್ಠವೂ ಅಹಿಂಸಾತ್ಮಕವೂ ಆದಾಗ ಮಾತ್ರ ಸಾಮಾಜಿಕ ನ್ಯಾಯ ಸುಪ್ರತಿಷ್ಠಿತವಾಗುತ್ತದೆ. ಇದರ ಪ್ರಪ್ರಥಮ ಪ್ರಯೋಗ ಗಾಂಧಿಯವರ ಸತ್ಯಾಗ್ರಹ ಚಳವಳಿಗಳು. 1906ರಲ್ಲಿ ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲಿನಲ್ಲಿ ಏಷ್ಯನರ ಮೇಲೆ ಬಿಳಿಯರ



ದಂಡಂ ಕಾರಾಗೃಹದ ರಾಜಕೀಯ ಕೈದಿಗಳ ಸಂದರ್ಶನ

ದಬ್ಬಾಳಿಕೆಯನ್ನು ಪ್ರತಿಭಟಿಸಿ ಅಲ್ಲಿಯ ಕಾರ್ಮಿಕರು ಆತ್ಮಗೌರವದಿಂದ ಬಾಳಲು ಗಾಂಧಿಯವರು ಹೂಡಿದ ಮೊದಲ ಸತ್ಯಾಗ್ರಹ ಹಂತಹಂತವಾಗಿ ಬೆಳೆದು ಭಾರತದ ಸ್ವಾತಂತ್ರ್ಯ ಸಮರದ ಹದಿನಾಲ್ಕು ವಿವಿಧ ಪ್ರಯೋಗಗಳಲ್ಲಿ ಒಂದು ವ್ಯಾವಹಾರಿಕ ಸಿದ್ಧಾಂತವಾಯಿತು. ಸತ್ಯಾಗ್ರಹ ಎಂದರೆ ನಿಷ್ಕ್ರಿಯತೆ ಅಲ್ಲ. ಅನ್ಯಾಯಗಳನ್ನು ಸಹಿಸಿಕೊಂಡು ಉಪೇಕ್ಷೆಯಿಂದಿರುವುದಲ್ಲ. ಅದನ್ನು ಪ್ರತಿಭಟಿಸಿ ನಿಂತು ಪ್ರೇಮ ಶಕ್ತಿಯಿಂದ ಸರಿಪಡಿಸುವ ನೈತಿಕ ಸಮರವೇ ಸತ್ಯಾಗ್ರಹ. ಸವಿನಯ ಶಾಸನಭಂಗ, ಅಹಿಂಸಾತ್ಮಕ ಅಸಹಕಾರ, ಶಸ್ತ್ರಾವಲಂಬನೆಯ ನಿರಾಕರಣೆ, ತತ್ತ್ವಪಾಲನೆಯಲ್ಲಿ ನಿಸ್ಸೀಮಬಲಿದಾನದ ಸಿದ್ಧತೆ ವೈರಿಯ ಬಗ್ಗೆ ನಿಸ್ಸಂಕೋಚ ಪ್ರೀತಿ ಮತ್ತು ವ್ಯಕ್ತಿದ್ವೇಷದ ಸಂಪೂರ್ಣದಮನ ಇವು ಸತ್ಯಾಗ್ರಹದ ಕ್ರಮಬದ್ಧ ಪ್ರಭಾವಯುತ ಅಸ್ತ್ರಗಳೆಂದು ಗಾಂಧೀಜಿಯ ಸತ್ಯಾನ್ವೇಷಣೆಯ ಪ್ರಯೋಗಗಳು ಸಿದ್ಧಮಾಡಿ ಕೊಟ್ಟಿವೆ. ಸಾತ್ವಿಕ ಪ್ರತಿಭಟನೆಯಿಂದ ಮಾನವನ ದೌರ್ಜನ್ಯ ಪ್ರವೃತ್ತಿ ಕ್ರಮೇಣ ಅಳಿಸಿಹೋಗಿ ಮಾನವ ಮಾನವನಾಗುತ್ತಾನೆ ಎಂಬ ನಂಬಿಕೆ ಸತ್ಯಾಗ್ರಹಶಾಸ್ತ್ರದ ಅಡಿಗಲ್ಲು. ಮಾನವಚರಿತ್ರೆಯಲ್ಲಿ ವಿಕಾಸಶೀಲ ಪರಿವರ್ತನೆಗಳೆಲ್ಲವೂ ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಸತ್ಯಾಗ್ರಹಗಳ ಪರಿಣಾಮವಾಗಿಯೇ ಆಗಿವೆ. ಎನ್ನುವುದು ಗಾಂಧೀದೃಷ್ಟಿ. ಸತ್ಯಾನ್ವೇಷಣೆ ಮಾನವನ ಸಹಜಧರ್ಮ. ಅದು ಎಷ್ಟರಮಟ್ಟಿಗೆ ಅಹಿಂಸಾತ್ಮಕವಾಗಿ ಸಾಗುತ್ತದೆಯೋ ಅಷ್ಟರಮಟ್ಟಿಗೆ ಮಾತ್ರ ನಿಜವಾದ ವಿಕಾಸ ಸಾಗುತ್ತದೆ ಎನ್ನುವುದು ಗಾಂಧಿಯವರ ಅಭಿಪ್ರಾಯ. ಗುರಿಯಷ್ಟೇ ಸಾಧನವೂ ಶುದ್ಧವಾಗಬೇಕೆನ್ನುವುದೇ ಸತ್ಯಾಗ್ರಹಜೀವನದ ಮೂಲತತ್ತ್ವ.

ಗಾಂಧಿಯವರ ದೃಷ್ಟಿಯಲ್ಲಿ ಸತ್ಯಾಗ್ರಹ ಕೇವಲ ರಾಜಕೀಯ ಕ್ಷೇತ್ರದ ಪ್ರತಿಭಟನೆಯ ಮಾರ್ಗ ಮಾತ್ರವಲ್ಲ. ಅದು ಒಂದು ಸಮಗ್ರ ಜೀವನವಿಧಾನದ ಸೂತ್ರವೂ ಹೌದು. ಹಿಂಸೆ ಕೇವಲ ಭೌತಿಕ ಸ್ವರೂಪದ್ದಷ್ಟೇ ಆಗಿರುವುದಿಲ್ಲ. ಅತ್ಯಂತ ಸೂಕ್ಷ್ಮ ರೂಪದ ಪರೋಕ್ಷ ಶೋಷಣೆಯ ವ್ಯವಸ್ಥೆಗಳೆಲ್ಲವೂ ವ್ಯಾಪಕ ಹಿಂಸೆಗೆ ಕಾರಣವಾಗುತ್ತವೆ. ಆದ್ದರಿಂದ ಎಲ್ಲ ರೀತಿಯ ಹಿಂಸಾಮಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ನೈತಿಕ ದೃಷ್ಟಿಯಿಂದ ನಿರಾಕರಿಸಿ ಎಷ್ಟೇ ವೈಯಕ್ತಿಕ ಸಂಕಟಗಳಿಗೊಳಗಾಗಬೇಕಾದರೂ ಅವುಗಳೊಂದಿಗೆ ಅಸಹಕರಿಸಿ ನಿರ್ಭಯವಾಗಿ ವರ್ತಿಸುವುದೇ ಸತ್ಯಾಗ್ರಹ. ಈ ನಿರ್ಭಯತೆ ಬಹಳಮಟ್ಟಿಗೆ ಸ್ವಾವಲಂಬನೆಯ ಜೀವನದಿಂದ ಬರುತ್ತದೆ. ರಾಷ್ಟ್ರಗಳಾಗಲಿ ಜನಸಮೂಹಗಳಾಗಲಿ ಜೀವನದ ಅತ್ಯಾವಶ್ಯಕ ವಸ್ತುಗಳ ಪೂರೈಕೆಗೆ ಪರಾವಲಂಬಿಗಳಾದರೆ ಶೋಷಣೆಗೆ ಗುರಿಯಾಗುವುದು ಅನಿವಾರ್ಯವಾಗುತ್ತದೆ. ಕ್ರಿಯಾತ್ಮಕವಾದ, ಆತ್ಮಗೌರವದಿಂದ ಕೂಡಿದ ಸ್ವತಂತ್ರವಿಚಾರ ಶಕ್ತಿಯುಳ್ಳ ಸರಳಜೀವನ ಸತ್ಯಾಗ್ರಹಿಯದವರಿಗೆ ಸಹಾಯವಾಗಬೇಕು ಎನ್ನುತ್ತಾರೆ ಗಾಂಧೀಜಿ. ಅಂಥ ಬಾಳಿನ ನಿಯಮಗಳನ್ನು ತಾವು ಅನುಷ್ಠಾನ ಮಾಡಿ, ಸಾಮೂಹಿಕ ದಳಗಳೂ ಯಶಸ್ವಿಯಾಗಿ

ಆಚರಿಸುವಂತೆ ಮಾಡಿದ ವಿಶಿಷ್ಟ ಮಾರ್ಗದರ್ಶನ ಗಾಂಧಿಯವರದು. ಈ ನಿಯಮಗಳನ್ನು ಅವರು ಏಕಾದಶವ್ರತಗಳೆಂದು ಕರೆದರು. ಧಾರ್ಮಿಕ ಪರಂಪರೆಗಳಿಗೆ ಸುಪರಿಚಿತವಾದ ಸತ್ಯ. ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಅಸ್ವಾದಗಳ ಜೊತೆಗೆ ಸಾಮಾಜಿಕ ಮೌಲ್ಯಗಳುಳ್ಳ ಶರೀರಶ್ರಮ, ಸರ್ವಧರ್ಮ ಸಮಭಾವ, ಸ್ಪರ್ಶಭಾವನೆ, ಸ್ವದೇಶೀ ಮತ್ತು ನಿರ್ಭಯತೆಗಳನ್ನು ಅವರು ಸೇರಿಸಿದರು. ಸತ್ಯಾಗ್ರಹಶಾಸ್ತ್ರದಲ್ಲಿ ಈ ವ್ರತ ನಿಯಮಗಳು ಅತ್ಯಂತ ಮುಖ್ಯವಾದ ಅಂಗ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಚಲಿತವಿರುವ ಯುದ್ಧವಿರೋಧೀ ಚಳವಳಿ, ಸಾತ್ತ್ವಿಕ ಪ್ರತಿಭಟನೆ ಶಾಸನೋಲ್ಲಂಘನೆ ಕರನಿರಾಕರಣೆ, ಮುಂತಾದ ನಿಶ್ಶಸ್ತ್ರ ಪ್ರತಿಭಟನಾಕ್ರಮಕ್ಕೂ ಸತ್ಯಾಗ್ರಹಕ್ಕೂ ಒಂದು ಮೂಲಭೂತ ವ್ಯತ್ಯಾಸವುಂಟು. ಅವನ್ನು ನಡೆಸುವವರು ಆಯುಧ ದೊರಕದ್ದರಿಂದ ತಾವು ದುರ್ಬಲರೆಂದು ತಿಳಿದು ಆ ಚಳವಳಿಗಳಲ್ಲಿ ಹಿಂಸೆಯನ್ನು ವರ್ಜಿಸುತ್ತಾರೆ. ಅವಕಾಶ ಒದಗಿದಾಗ ಹಿಂಸೆಯನ್ನು ಉಪಯೋಗಿಸಲು ಅವರು ಹಿಂದೆಗೆಯುವುದಿಲ್ಲ. ಅಲ್ಲದೆ ರಾಷ್ಟ್ರ ರಕ್ಷಣೆಗಾಗಿ ಶಸ್ತ್ರಾಸ್ತ್ರ ಸಂಗ್ರಹಣೆ ಅತ್ಯಗತ್ಯ ಎಂದು ನಂಬಿ ಅದನ್ನು ಬೆಂಬಲಿಸುತ್ತಾರೆ. ಗಾಂಧಿಯವರು ರೂಪಿಸಿಕೊಟ್ಟ ಸತ್ಯಾಗ್ರಹಕ್ರಮದಲ್ಲಿ ಹಿಂಸೆಗೆ ಯಾವ ಸಂದರ್ಭದಲ್ಲೂ ಅವಕಾಶವೇ ಇರಲಾಗದು. ಸತ್ಯಾಗ್ರಹದಲ್ಲಿ ಸತ್ಯ ಮತ್ತು ಅಹಿಂಸೆ ಅನ್ಯೋನ್ಯಾವಲಂಬಿ ತತ್ತ್ವಗಳು. ಒಂದಕ್ಕೆ ಇನ್ನೊಂದು ಆಶ್ರಯ. ಅತ್ಯಂತ ಪ್ರಬಲ ರಾಷ್ಟ್ರವೂ ಶಸ್ತ್ರ ನಿರಾಕರಣೆಯನ್ನು ಅಂಗೀಕರಿಸುವುದು ಸತ್ಯಾಗ್ರಹಮಾರ್ಗ. ಸತ್ಯವನ್ನು ಹಿಂಸಾವೃತ್ತಿಯಿಂದ ಪಡೆಯುವುದು ಅಸಾಧ್ಯ. ಅಹಿಂಸೆ ಒಂದು ಸಶಕ್ತ ಆತ್ಮಶಕ್ತಿಯ ಪ್ರಕಟಿತರೂಪ; ಅದಕ್ಕೆ ಶಸ್ತ್ರದ ಅವಲಂಬನೆ ಯಾವ ಸಂದರ್ಭದಲ್ಲೂ ಅನಾವಶ್ಯಕ; ಈ ಶಕ್ತಿ ಸಮರದಿಂದ ಸಮರಕ್ಕೆ ವೃದ್ಧಿಯಾಗುತ್ತ, ವೈರವನ್ನು ಸಂಪೂರ್ಣವಾಗಿ ತೊಡೆದುಹಾಕುತ್ತದೆ. ಸತ್ಯಾಗ್ರಹದ ಶುದ್ಧಸ್ವರೂಪದಲ್ಲಿ ಈ ನಿಷ್ಠೆ ಅಡಗಿದೆ.

ಸತ್ಯಾಗ್ರಹ ಕ್ರಮದಲ್ಲಿ ವೈರಿಯನ್ನು ಸಾಂಪ್ರದಾಯಿಕ ದೃಷ್ಟಿಯಿಂದ ಹತ್ಯಾಯೋಗ್ಯ ಪಾಪಿ ಎಂದು ಪರಿಗಣಿಸಲಾಗುವುದಿಲ್ಲ. ಅವನಲ್ಲಿ ತಾತ್ಕಾಲಿಕವಾಗಿ ಸುಪ್ತವಾಗಿರುವ ವಿವೇಕಪೂರ್ಣ ಸಾತ್ತ್ವಿಕತೆಯನ್ನು ಎಚ್ಚರಗೊಳಿಸಿ ಅವನು ತನ್ನ ತಪ್ಪನ್ನು ತಾನೇ ಅರಿಯುವಂತೆ ಮಾಡುವ ಪ್ರಕ್ರಿಯೆ ಸತ್ಯಾಗ್ರಹ. ಗಾಂಧಿಯವರ ಮಾತಿನಲ್ಲಿ, ದುರುಳ ಎತ್ತುವ ಕತ್ತಿಯ ಎದುರು ಇನ್ನೂ ಹೆಚ್ಚು ಹರಿತವಾದ ಆಯುಧವನ್ನು ಹಿಡಿಯದೆಯೇ ಅವನ ಕತ್ತಿಯ ಅಲಗನ್ನು ಮೊಂಡಾಗಿಸುವ ಪ್ರಯತ್ನ ನನ್ನದು. ಅವನು ನಿರೀಕ್ಷಿಸುವ ದೈಹಿಕ ಪ್ರತಿಭಟನೆಯನ್ನು ಕಾಣದೆ ಹೋದಾಗ ಅವನು ಹತಾಶನಾಗುತ್ತಾನೆ. ನನ್ನ ಸಾತ್ತ್ವಿಕ ಪ್ರತಿಭಟನೆ ಅವನ ಹಿಡಿತಕ್ಕೆ ಸಿಗದು. ಅವನನ್ನು ದಿಗ್ಭ್ರಾಂತನನ್ನಾಗಿ ಮಾಡಿಬಿಡುತ್ತದೆ. ಕೊನೆಗೆ ಅವನು ಅಂಥ ಸಾತ್ತ್ವಿಕ ಪ್ರತಿಭಟನೆಯನ್ನು ಗೌರವದಿಂದ ಕಾಣುತ್ತಾನೆ. ಹೀಗೆ ಮಾನ್ಯತೆ ನೀಡುವುದು ಅವನಿಗೆ ಅಪಮಾನ ಎನಿಸುವುದಿಲ್ಲ. ತನ್ನ ಘನತೆ ಹೆಚ್ಚಾಯಿತೆಂದೇ ಅವನು ಭಾವಿಸುತ್ತಾನೆ. ತನ್ನ ವೈರಿ ಶರಣಾಗತನಾಗಿ ತಾನು ಅವನ ಮೇಲೆ ಅಧಿಕಾರ ಹೆಚ್ಚಿಸಿಕೊಳ್ಳಬೇಕೆಂಬ ಹಂಬಲ ಸತ್ಯಾಗ್ರಹಿಗೆ ಸಲ್ಲದು. ಸತ್ಯಾಗ್ರಹ ಸಮರದ ಅಂತ್ಯದಲ್ಲಿ ಗೆದ್ದವರೂ ಪುನೀತರಾಗುತ್ತಾರೆ, ಸೋತವರೂ ಪುನೀತರಾಗುತ್ತಾರೆ. ಯಾವ ಬಲತ್ಕಾರಕ್ಕೂ ಮಣಿಯದೆ ಭಿನ್ನಾಭಿಪ್ರಾಯಗಳು ಸಮರಸವಾಗಿ ಕೊನೆಗೊಂಡು ಪರಸ್ಪರ ಸಹಕಾರಿಗಳಾಗಿಯೆ ಉಳಿಯುವುದು ಸತ್ಯಾಗ್ರಹದ ಗೆಲುವು. ಭಾರತದ ಸ್ವಾತಂತ್ರ್ಯ ಸಂಗ್ರಾಮ ಕೊನೆಗೊಂಡಾಗ ಭಾರತ, ಬ್ರಿಟನ್ ಎರಡು ರಾಷ್ಟ್ರಗಳೂ ಧನ್ಯತೆಯ ಅನುಭವವನ್ನು ಪಡೆದುದ್ದು, ಒಂದು ಪ್ರಖ್ಯಾತ ನಿದರ್ಶನ. ಚಕ್ರಾಧಿಪತ್ಯದ ಪ್ರತಿನಿಧಿಯೇ ತಮ್ಮ ಬಾವುಟವನ್ನು ಇಳಿಸಿ ಸ್ವತಂತ್ರ್ಯ ಭಾರತದ ಪ್ರಜಾನುರಾಗಿ ಗವರ್ನರ್–ಜನರಲ್ ಎನಿಸಿಕೊಂಡರು. ಇದು ಸತ್ಯಾಗ್ರಹದ ಒಂದು ಪರಿಣಾಮ.

ಗಾಂಧಿಯವರು ನಿರ್ದೇಶಿಸಿದ ಸತ್ಯಾಗ್ರಹಗಳಲ್ಲಿ ಅವರು ಸ್ವತಃ ಒಂದು ಸ್ವಯಂಸೇವಕ ಶಿಕ್ಷಣಕ್ರಮವನ್ನು ಅನುಸರಿಸುತ್ತಿದ್ದರು. ಸಾಮೂಹಿಕ ಸತ್ಯಾಗ್ರಹ ಇನ್ನೂ ಹೊಸ ಪ್ರಯೋಗ, ಅದಕ್ಕೆ ಜನತೆಯ ಅತ್ಯಂತ ದಕ್ಷವಾದ ಶಿಸ್ತಿನ ಶಿಕ್ಷಣ ಅತ್ಯಗತ್ಯ ಎಂದರು. ಸತ್ಯಾಗ್ರಹವೆಂದರೆ ವೇದನೆಯನ್ನು ಸದಾ ಸಹಿಸುವ ನಿರಂತರ ಸಿದ್ಧತೆ. ಈ ಸಹನೆ ನಿಷ್ಕಲಂಕವಾದಷ್ಟೂ ಅದರ ಪರಿಣಾಮ ಸತ್ತ್ವಶಾಲಿಯಾಗುತ್ತದೆ. ಸತ್ಯಾಗ್ರಹದಲ್ಲಿ ಅಸಹಾಯಕತೆ ಎಂದಿಗೂ ಇರಬಾರದು ಎನ್ನುತ್ತಿದ್ದರು. ತಮ್ಮ ಸೂಚನೆಗಳ ಹಿನ್ನೆಲೆಯಲ್ಲಿ ಯಾವ ಗುಣಗಳು ಪ್ರತಿ ಸತ್ಯಾಗ್ರಹಿಯಲ್ಲೂ ಇರಬೇಕೋ ಅವನ್ನು ಅವರು ಹೀಗೆ ಸಂಗ್ರಹಿಸಿಕೊಟ್ಟಿದ್ದಾರೆ: 1 ಸತ್ಯಸ್ವರೂಪನಾದ ದೇವರಲ್ಲಿ ಅಚಲನಂಬಿಕೆ. 2 ಸತ್ಯ ಅಹಿಂಸೆಗಳಲ್ಲೂ ಕಷ್ಟಸಹಿಷ್ಣುತೆಯಿಂದ ಇತರರಲ್ಲಿ ಎಚ್ಚರಗೊಳ್ಳುವ ಮಾನವೀಯ ಒಳ್ಳೆಯತನದಲ್ಲೂ ವಿಶ್ವಾಸ. 3 ಪರಿಶುದ್ಧ ಜೀವನ, ತ್ಯಾಗಬಲಿದಾನಗಳಿಗೆ ಸಿದ್ಧತೆ. 4 ಸ್ವದೇಶೀ ಮತ್ತು ಶರೀರಶ್ರಮ ವ್ರತಗಳ ಸ್ವೀಕಾರ. 5 ಮದ್ಯ ಮತ್ತು ಇತರ ಮಾದಕವಸ್ತುಗಳ ಸಂಪೂರ್ಣ ನಿಷೇಧ. 6 ಕಾಲಕಾಲಕ್ಕೆ ಅನುಸರಿಸಬೇಕಾದ ಶಿಸ್ತುಗಳ ಮನಃಪೂರ್ವಕ ಪಾಲನೆ. 7 ಶಿಕ್ಷೆಯನ್ನು ಸಂತೋಷದಿಂದ ಅನುಭವಿಸುವಾಗ ನಿಯಮಗಳನ್ನು ಪಾಲಿಸುತ್ತ ವಿನಯ ಪೂರ್ವಕವಾಗಿ ಆತ್ಮಗೌರವದಿಂದ ನಡೆದುಕೊಳ್ಳುವುದು.

ಸತ್ಯಾಗ್ರಹದ ಸಮಗ್ರರೂಪದ ಪರಿಣಾಮ ಮಾನವನ ಆಧ್ಯಾತ್ಮಿಕ ವಿಕಾಸ. ವಸ್ತುನಿಷ್ಠ ಬಾಹ್ಯ ಪ್ರಪಂಚದ ಸಂಪತ್ಸಮೃದ್ಧಿಯ ಅವಿರತ ಕಾರ್ಯದಲ್ಲಿ ತೊಡಗಿರುವಾಗಲೂ ಆತ್ಮವಿಕಾಸ ನಿರಂತರವಾಗಿ ಹರಿದುಬರುವ ಸಾಧನ ಸತ್ಯಾಗ್ರಹ ಜೀವನಮಾರ್ಗ. ವಿಜ್ಞಾನ + ಹಿಂಸೆ = ಸರ್ವನಾಶ; ವಿಜ್ಞಾನ + ಅಹಿಂಸೆ = ಸರ್ವೋದಯ, ಎಂದು ವಿನೋಬಾ ಭಾವೆಯವರು ಕೊಟ್ಟಿರುವ ಸೂತ್ರ ಗಾಂಧಿ ಪ್ರಣೀತ ಸತ್ಯಾಗ್ರಹ ಮಾರ್ಗದ ವ್ಯಾಖ್ಯೆಯೂ ಹೌದು. ವಿಜ್ಞಾನ ಮತ್ತು ಆತ್ಮಜ್ಞಾನಗಳ ಸಮತೋಲನ ವಿಕಾಸವಾಗುತ್ತ ಹೋದಂತೆ ಮಾನವಸಮಾಜದ ಸ್ವರೂಪವೇ ಬದಲಾಗಿ ಮಾನವೀಯ ಮೌಲ್ಯಗಳು ಸುಪ್ರತಿಷ್ಠವಾಗುತ್ತವೆ. ಸತ್ಯಾಗ್ರಹಶಾಸ್ತ್ರ ಈ ದಿಸೆಯಲ್ಲಿ ಸಂಶೋಧಿತವಾದ ಅತ್ಯಂತ ಪ್ರಭಾವಯುತ ಸಿದ್ಧಾಂತವೆಂದು ಪರಿಗಣಿತವಾಗಿದೆ. **(ಕೆ.ಎಸ್.ಎನ್.ಎಸ್.)**

**ಗಾಂಧಿ ಮತ್ತು ಅಹಿಂಸೆ** : ಗಾಂಧೀಜಿಯವರ ಜೀವನದರ್ಶನದಲ್ಲಿ ಸತ್ಯಕ್ಕೆ ಪ್ರಥಮ ಸ್ಥಾನವಾದರೆ ಅಹಿಂಸೆಗೆ ದ್ವಿತೀಯ ಸ್ಥಾನ. ಸತ್ಯಶೋಧನೆಯಲ್ಲಿ ತೊಡಗಿದ ಇವರು ಅನುಸರಿಸಿದ ಏಕೈಕ ಮಾರ್ಗವೇ ಅಹಿಂಸೆ. ಅಹಿಂಸೆ ಸಾಧನ, ಸತ್ಯವೇ ಅದರ ಸಿದ್ಧಿ. ಸತ್ಯದ ಅಥವಾ ದೇವರ ಸಾಕ್ಷಾತ್ಕಾರಕ್ಕೆ ಅಹಿಂಸೆಯಲ್ಲದೆ ಅನ್ಯ ಮಾರ್ಗವೇ ಇಲ್ಲ ಎಂಬುದನ್ನು ಮನಗಂಡ ಇವರು ಅಹಿಂಸೆಯ ಆಚರಣೆಗೆ ತಮ್ಮ ಬಾಳಿನ ಸರ್ವಸ್ವವನ್ನೂ ಪಣವಾಗಿಟ್ಟರು. ಇವರ ಅಂತರಂಗ ಬಹಿರಂಗ ಜೀವನವನ್ನೆಲ್ಲಾ ಇದು ವ್ಯಾಪಿಸಿತು. ತ್ರಿಕರಣಪೂರ್ವಕ ಅಹಿಂಸೆಯ ಆಚರಣೆಯಲ್ಲಿ ತೊಡಗಿದ ಇವರು ಅಹಿಂಸೆಯನ್ನು ಕುರಿತು ಹೇಳಿರುವ ಮಾತುಗಳು ಋಷಿ ವಾಣಿಯಂತೆ ಪ್ರಮಾಣವಾಕ್ಯಗಳಾಗಿವೆ.

**ಅಹಿಂಸೆಯ ಅರ್ಥ** : ಗಾಂಧೀಜಿಯವರೇನು ಅಹಿಂಸಾತತ್ತ್ವದ ಜನಕರಲ್ಲ. ಏಕೆಂದರೆ ಭಾರತೀಯ ದರ್ಶನದಲ್ಲಿ ಅದರಲ್ಲಿಯೂ ಜೈನ ಮತ್ತು ಬೌದ್ಧದರ್ಶನದಲ್ಲಿ, ಅಹಿಂಸಾತತ್ತ್ವ ಮತ್ತು ಅದರ ಆಚರಣೆ ಅತ್ಯಂತ ಸಮರ್ಥರೀತಿಯಲ್ಲಿ ನಿರೂಪಿತವಾಗಿದೆ. ಆದರೂ ಗ್ರಂಥಸ್ಥವಾದ ಈ ತತ್ತ್ವ ಗಾಂಧಿಜಿಯವರ ಬದುಕಿನಲ್ಲಿ ಜೀವಂತಗೊಂಡು ನಮ್ಮ ಸಮಕಾಲೀನ ಯುಗದಲ್ಲಿ ಒಂದು ಪವಾಡವನ್ನೇ ಎಸಗಿದೆ. ಸ್ಥೂಲವಾಗಿ ನೋಡಿದಾಗ ಅಹಿಂಸೆ ಎಂದರೆ ಕೊಲ್ಲದಿರುವುದು ಅಥವಾ ಹಿಂಸಿಸದಿರುವುದು ಎಂದಾದರೂ ಇದರ ಸೂಕ್ಷ್ಮ ಹಾಗೂ ವಿಸ್ತೃತವಾದ ಅರ್ಥವನ್ನು ಗ್ರಹಿಸಲು ಗಾಂಧೀಜಿಯವರ ಬದುಕು ಮತ್ತು ಬೋಧನೆಗಳೆರಡನ್ನೂ ಅವಲೋಕಿಸಬೇಕಾಗುತ್ತದೆ. ಸತ್ಯನಿಷ್ಠನಾದ ವಿಜ್ಞಾನಿಯಂತೆ ಅಹಿಂಸೆಯ ಪ್ರಯೋಗದಲ್ಲಿ ತೊಡಗಿದ ಗಾಂಧೀಜಿಯವರು ಇದು ಕೇವಲ ಒಂದು ಧಾರ್ಮಿಕ ನಿಯಮ ಮಾತ್ರವಲ್ಲ; ಇದು ಆರ್ಥಿಕ, ಸಾಮಾಜಿಕ, ರಾಜಕೀಯವೇ ಮುಂತಾದ ಎಲ್ಲ ರಂಗಗಳಲ್ಲಿಯೂ ಪ್ರತಿಧ್ವನಿತವಾಗುವಂಥ ವಿಶ್ವವ್ಯಾಪಿತತ್ತ್ವ, ಚರಾಚರಾತ್ಮಕವಾದ ಜಗತ್ತೆಲ್ಲವೂ ಈ ತತ್ತ್ವಕ್ಕೆ ತಲೆಬಾಗಿ ನಡೆಯುತ್ತದೆ–ಎಂಬುದನ್ನು ಕಂಡುಕೊಂಡರು. ಅಹಿಂಸೆಯ ವಿಶ್ವರೂಪದರ್ಶನ ಇವರಿಗಾದಂತೆಲ್ಲ. ಈ ಮಹತ್ತತ್ತ್ವದ ಪೂರ್ಣ ವ್ಯಾಖ್ಯಾನ ಮಾನವನಿಂದ ಸಾಧ್ಯವಾಗದು, ತಮ್ಮಿಂದಂತೂ ಸಾಧ್ಯವಾಗಿಲ್ಲ ಎಂಬುದನ್ನು ಬಹುದುಃಖದಿಂದ ಹೇಳಿಕೊಂಡರು. ಆದರೂ ಅಹಿಂಸೆಯ ಸಾಧನೆ ತಮಗೆ ಅಳವಟ್ಟಷ್ಟರಿಂದಲೇ. ಅದಕ್ಕಿರುವ ಅಗಾಧ ಶಕ್ತಿಯ ಅರಿವು ತಮಗಾಯಿತೆಂಬ ತೃಪ್ತಿಯೂ ಇವರಲ್ಲಿ ಕಾಣತ್ತದೆ. ವಿನಾಶಕಾರಿ ಅಸ್ತ್ರಗಳಿಂದೊದಗುವ ಯಾವ ಶಕ್ತಿಯೂ ಈ ಅಹಿಂಸೆಯ ಶಕ್ತಿಗೆ ಸರಿಸಮನಾಗಲಾರದೆಂದು ಇವರು ಹೇಳಿದರು. ಅಹಿಂಸೆಯಿಂದ ಸಾಧಿಸಲಾರದುದು ಜಗತ್ತಿನಲ್ಲಿ ಯಾವುದೂ ಇಲ್ಲ ಎಂಬುದೇ ಇವರ ಅನುಭವ. ಆದರೆ ಅಹಿಂಸೆಯ ಸಾಧಕನಲ್ಲಿ ಅಮಿತವಾದ ಸಾಮರ್ಥ್ಯವಿರಬೇಕೆಂಬುದನ್ನು ಹೇಳಲು ಇವರು ಮರೆತಿಲ್ಲ.

**ಅಹಿಂಸೆಯ ಸಹಕಾರಿ ಧರ್ಮಗಳು:** ಗಾಂಧೀಜಿ ಕಂಡಂತೆ, ಅಹಿಂಸೆಯ ಆಚರಣೆಯಲ್ಲಿ ಪ್ರೇಮ, ತ್ಯಾಗ, ಸಹನೆ ಮತ್ತು ಧೈರ್ಯ ಎಂಬ ಮೂಲಧಾತುಗಳು ಅಡಗಿವೆ. ಜೀವಜಂತುಗಳಲ್ಲಿ ನಮಗಿರುವ ಪ್ರೇಮದ ಮೂರ್ತಸ್ವರೂಪವೇ ಅಹಿಂಸೆ. ಪ್ರೀತಿ ಇರುವಲ್ಲಿ ಹಿಂಸೆಗೆ ಸ್ಥಾನವಿಲ್ಲ. ನಮಗೆ ಪ್ರಿಯವಾದುದನ್ನು ನಾವು ಎಂದೂ ನಾಶಪಡಿಸುವುದಿಲ್ಲ. ಪ್ರೀತಿಯ ಅಭಾವವಿದ್ದಲ್ಲಿ ಮಾತ್ರವೇ ಹಿಂಸೆ ಸಾಧ್ಯ. ದ್ವೇಷಕ್ಕೆ ದ್ವೇಷ ಪರಿಹಾರವಲ್ಲ. ಕ್ರೌರ್ಯಕ್ಕೆ ಏಕೈಕ ಪರಿಹಾರವೆಂದರೆ ಪ್ರೇಮ. ಈ ಅಂಶವನ್ನು ಗಾಂಧೀಜಿಯವರ ಮಾತಿನಲ್ಲಿಯೇ ಹೇಳುವುದಾದರೆ 'ಶಸ್ತ್ರಸನ್ಯಾಸ ಮಾಡಿರುವ ನನ್ನಲ್ಲಿ ನನ್ನನ್ನು ದ್ವೇಷಿಸುವವರಿಗೆ ಕೊಡಲು ಪ್ರೇಮ ತುಂಬಿದ ಬಟ್ಟಲಲ್ಲದೆ ಬೇರೇನೂ ಇಲ್ಲ'. ಈ ಮಾತು ಅಹಿಂಸೆಗೆ ಇವರು ಕೊಟ್ಟ ಒಂದು ವ್ಯಾಖ್ಯಾನ. ಪುನರ್‌ಜನ್ಮದಲ್ಲಿ ನಂಬಿಕೆ ಇದ್ದ ಇವರು ಈ ಜನ್ಮದಲ್ಲಲ್ಲದಿದ್ದರೆ ಅನೇಕ ಜನ್ಮಗಳ ಅನಂತರವಾದರೂ ವಿಶ್ವದ ಜೀವಜಂತುಗಳನ್ನೆಲ್ಲ ತಮ್ಮ ಪ್ರೇಮಬಾಹುಗಳಿಂದ ಅಪ್ಪಲು ಬಯಸುತ್ತಾರೆ.

ಅಹಿಂಸೆಯ ಸಾಧನೆ ತಕ್ಕ ಮಟ್ಟಿಗಾದರೂ ಫಲಪ್ರದವಾಗಬೇಕಾದರೆ ತ್ಯಾಗ ಅತ್ಯಂತ ಆವಶ್ಯಕವೆಂಬುದನ್ನು ಗಾಂಧೀಜಿ ಮನಗಂಡಿದ್ದರು. ಸ್ವಾರ್ಥವೆಂಬುದು ಒಂದು ರೀತಿಯ ಹಿಂಸೆ. ಶರೀರ ಸುಖ, ಕೀರ್ತಿ, ಲಾಭ, ಇಲ್ಲವೆ ಅಹಂಕಾರದ ಆಡಂಬರ, ಇವುಗಳಿಗಾಗಿಯೇ ಒಬ್ಬರು ಮತ್ತೊಬ್ಬರನ್ನು ಹಿಂಸಿಸುವುದು. ವ್ಯಕ್ತಿಗಳಷ್ಟೇ ಏಕೆ,

ರಾಷ್ಟ್ರಗಳೂ ಇದರಿಂದ ಮುಕ್ತವಲ್ಲ. ಕಾಮ, ಕ್ರೋಧ, ಮದ, ಮತ್ಸರಗಳಿಗೆ ಒಳಗಾಗಿರುವ ಮಾನವನಿಗೆ ಶುದ್ಧ ಅಹಿಂಸೆಯ ಆಚರಣೆ ಕೇವಲ ಮರೀಚಿಕೆಯೇ ಸರಿ. ಯಾವ ರೀತಿಯಿಂದಲೇ ಆಗಲಿ ತನ್ನ ಹಿತಕ್ಕಾಗಿ ಅನ್ಯರನ್ನು ಬಳಸುವುದು ಸ್ವಾರ್ಥ. ಇದೊಂದು ಮೃಗಧರ್ಮ. ಅನ್ಯರ ಒಳಿತಿಗಾಗಿ ತಾನು ಶ್ರಮಿಸುವುದೇ ತ್ಯಾಗ. ಆದ್ದರಿಂದ ಅಹಿಂಸೆ ಅಥವಾ ವಿಶ್ವಪ್ರೇಮಕ್ಕೆ ಯಾವ ತ್ಯಾಗವೂ ಹೆಚ್ಚೆನಿಸಲಾರದು.

ಅಹಿಂಸೆಯ ಆಚರಣೆಗೆ ಬೇಕಾದ ಮತ್ತೊಂದು ಸಹಕಾರಿ ಧರ್ಮವೆಂದರೆ ಸಹನೆ. ತನ್ನನ್ನು ದ್ವೇಷಿಸುವವನನ್ನು ತಾನು ಪ್ರೀತಿಸಬೇಕೆಂದರೆ ಆಗ ಅವನಲ್ಲಿ ಬೆಟ್ಟದಷ್ಟು ಸಹನೆ ಬೇಕು. ಕೋಪ ಮತ್ತು ಮಾತ್ಸರ್ಯ ಅಹಿಂಸೆಯ ಪರಮ ವೈರಿಗಳು. ನಿರಹಂಕಾರಿಯಾದವನಿಗೆ ಮಾತ್ರ ಈ ಸಹನೆ ಸಾಧ್ಯ. ಗಾಂಧೀಜಿ ಉದಾಹರಿಸಿದಂತೆ, ತಾಯಿಯ ಪ್ರೇಮ ಸಹನೆಯ ಪ್ರತೀಕ.

ಇನ್ನು ಅಹಿಂಸೆಯ ಆಚರಣೆ ಹೇಡಿಯಾದವನಿಗೆ ಎಂದೂ ಸಾಧ್ಯವಿಲ್ಲ. ಗೀತೆಯಲ್ಲಿ ಹೇಳಿರುವ ಅಭಯತ್ವ ಕೈಗೂಡದವನು ಹಿಂಸೆಗೆ ಅಹಿಂಸೆಯನ್ನು ಹಿಂದಿರುಗಿಸಲು ಎಂದೂ ಶಕ್ತನಾಗುವುದಿಲ್ಲ. ಹಿಂಸಾವಾದಿಗಳಿಂದ ತನಗಾಗುವ ಎಲ್ಲ ರೀತಿಯ ಅಘಾತಗಳನ್ನೂ ಸಹಿಸಿಕೊಂಡು ಹಿಂಸಾವಾದಿಗಳ ಹೃದಯ ಪರಿವರ್ತನೆಯಾಗುವಂತೆ ಮಾಡುವುದೇ ಅಹಿಂಸೆಯ ಉದ್ದೇಶ. ಸತ್ಯಕ್ಕೆ ಹೊರತಾಗಿ ಮತ್ತಾವುದಕ್ಕೂ ಅಂಜೆನೆಂಬ ಎದೆಗಾರಿಕೆ ಇರುವವನಿಗೆ ಮಾತ್ರ ಈ ಸಾಹಸ ಸಾಧ್ಯ. ಸತ್ಯಕ್ಕಾಗಿ ಅಹಿಂಸಾಚರಣೆಯಲ್ಲಿ ತೊಡಗಿರುವವನು ಸಾಕ್ರಟೀಸ್‌ನಂತೆ, ಏಸುವಿನಂತೆ, ಸತ್ಯಕ್ಕಾಗಿ ಸಾವನ್ನೂ ಸ್ವಾಗತಿಸುತ್ತಾರೆ. ವಿಶ್ವದಲ್ಲಿಯೇ ಅಜೇಯವೆನಿಸಿದ ಬ್ರಿಟಿಷ ಸಾಮ್ರಾಜ್ಯದೆದುರು ಗಾಂಧೀಜಿಯವರ ಹೋರಾಟದ ಜೀವನ ಹಾಗೂ ಅಜ್ಞಾನಿಯೊಬ್ಬನ ಗುಂಡಿಗೆ ಬಲಿಯಾದ ಇವರ ಧೀರಮರಣ ಇವು ಇವರ ಅಭಯತ್ವದ ಜೀವಂತಸಾಕ್ಷಿ. ಅಹಿಂಸಾಚರಣೆಗೆ ಬೇಕಾದ ಅಭಯತ್ವಕ್ಕೆ ಈ ಮಹನೀಯರ ಇಡೀ ಜೀವನವೇ ನಿದರ್ಶನ.

**ಅಹಿಂಸೆಯ ದಾರ್ಶನಿಕ ಸ್ವರೂಪ:** ಅಹಿಂಸೆ ಎಂಬುದು ಒಂದು ಆತ್ಮಶಕ್ತಿ. ಅತ್ಯಂತ ಕ್ರೂರಿಯ ಹೃದಯದಲ್ಲಿಯೂ ಭಗವಂತನ ಅಂಶ ಇದೆ ಎಂಬುದೇ ಇದರ ಬುನಾದಿ. ಇದು ಯಾವಾಗಲೂ ಯಾರಿಗೂ ಕೆಟ್ಟದ್ದನ್ನು ಮಾಡುವಂಥದಲ್ಲ. ಇದನ್ನು ಅರಿತು ಆಚರಿಸುವವರೂ ಉಂಟು. ಅರಿಯದೇ ಆಚರಿಸುವ ಮುಗ್ಧ ಚೇತನಗಳೂ ಉಂಟು. ಇದನ್ನು ಎಷ್ಟೇ ಅಪೂರ್ಣವಾಗಿ ಆಚರಿಸಿದರೂ ಅದರಿಂದ ಸಾಕಷ್ಟು ಉತ್ತಮ ಫಲ ದೊರೆತೇ ದೊರೆಯುತ್ತದೆ. ಇದರ ಆಚರಣೆಗೆ ಪಂಡಿತನ ಪಾಂಡಿತ್ಯವೇ ಬೇಕೆಂದಿಲ್ಲ. ಸತ್ಯದಲ್ಲಿ ನಿಷ್ಠೆಯೊಂದಿದ್ದರೆ ಮಿಕ್ಕೆಲ್ಲ ಮಾರ್ಗದರ್ಶನವೂ ತಾನೇ ತಾನಾಗಿ ದೊರೆಯುತ್ತದೆ. ಇದನ್ನು ಆಚರಿಸುವವನು ಮಾತ್ರವಲ್ಲದೆ ಅವನ ಪರಿಸರವೂ ಇದರಿಂದ ಪ್ರಭಾವಿತವಾಗುತ್ತದೆ. ಜೀವ ಜಂತುಗಳಲ್ಲೆಲ್ಲ ಸುಪ್ತವಾಗಿರುವ ದಿವ್ಯಶಕ್ತಿಯನ್ನು ಸಚೇತನ ಗೊಳಿಸುವ ಶಕ್ತಿ ಅಹಿಂಸೆಗಿದೆ. ಶುದ್ಧ ಅಹಿಂಸಾವ್ರತಿಗೆ ವಿಷ ತುಂಬಿದ ಹಾವಿನೊಂದಿಗೂ ಸಖ್ಯಸಾಧ್ಯವಾಗಬೇಕು. ಆದರೆ ತಾವು ಆ ಆದರ್ಶ ಸ್ಥಿತಿಯಿಂದ ಬಹು ಹಿಂದೆ ಬಿದ್ದಿರುವುದಾಗಿ ಗಾಂಧೀಜಿ ಒಮ್ಮೆ ಮನನೊಂದು ಹೇಳಿದ್ದಾರೆ. ಅಹಿಂಸೆಯ ಆಚರಣೆಯಿಂದ ಶತ್ರು ಮಿತ್ರನಾಗುತ್ತಾನೆ. ದ್ವೇಷಿಸುವವ ಪ್ರೀತಿಸಲು ಕಲಿಯುತ್ತಾನೆ. ನಿಂದಕನಲ್ಲಿ ಪಶ್ಚಾತ್ತಾಪ ಮೂಡುತ್ತದೆ. ಜೀವಂತ ನಿದರ್ಶನವಿಲ್ಲದಿದ್ದಾಗ ಈ ಮಾತು ಕೇವಲ ಕಲ್ಪನೆಯಂತೆ ಕಾಣಬಹುದು. ಅಹಿಂಸೆಯನ್ನು ನಂಬಿ ತುಸು ದೂರ ಆ ಮಾರ್ಗದಲ್ಲಿ ನಡೆದ ಭಾರತರಾಷ್ಟ್ರಕ್ಕೆ ಸ್ವಾತಂತ್ರ್ಯ ಕೊಟ್ಟಾಗಲೂ ಅನಂತರವೂ ಬ್ರಿಟಿಷ್ ಸಾಮ್ರಾಜ್ಯ ಹಾಗೂ ಅಲ್ಲಿನ ವಿಚಾರವಂತ ಜನರಲ್ಲಿ ಕಂಡ ಪ್ರೇಮ ಮತ್ತು ಮೈತ್ರಿಗಳು ವಿಶ್ವದ ಇತಿಹಾಸದಲ್ಲಿಯೇ ಕಂಡರಿಯದ ಒಂದು ವಿನೂತನ ಅನುಭವ.

ಪೂರ್ಣ ಅಹಿಂಸೆ ಸಾಧ್ಯವೇ? ನೂರಕ್ಕೆ ನೂರರಷ್ಟು ಅಹಿಂಸೆಯ ಆಚರಣೆ ಮಾನವ ಮಾನವನಾಗಿರುವವರೆಗೂ ಸಾಧ್ಯವಾಗದೆಂಬುದೇ ಗಾಂಧೀಜೀಯವರ ಮತ. ಮಾನವ ತನ್ನ ಶರೀರ ಪೋಷಣೆಗಾಗಿ ಅನ್ನಪಾನೀಯಗಳನ್ನು ತೆಗೆದುಕೊಳ್ಳುವಾಗ ಅನೇಕ ಸಸ್ಯ ಹಾಗೂ ಸೂಕ್ಷ್ಮ ಕ್ರಿಮಿಗಳ ನಾಶ ಅವನಿಗರಿವಿಲ್ಲದೇ ನಡೆಯುತ್ತದೆ. ಆಹಾರಧಾನ್ಯಗಳನ್ನು ಬೆಳೆಯುವಾಗ ಮತ್ತು ದವಸಧಾನ್ಯಗಳನ್ನು ರಕ್ಷಿಸುವಾಗ ಅನೇಕ ಕ್ರಿಮಿಕೀಟಗಳ ನಾಶ ಅನಿವಾರ್ಯ. ಹುಚ್ಚಿದ್ದ ವ್ಯಕ್ತಿಯೊಬ್ಬ ತನ್ನೆದುರಿಗೆ ಕಂಡವರನ್ನೆಲ್ಲಾ ಕೊಲ್ಲುತ್ತ ಹೋಗುವಾಗ ಅವನನ್ನು ಗುಂಡಿಕ್ಕಿ ಕೊಲ್ಲುವುದು ಯುಕ್ತವಾಗಿಯೇ ಕಾಣುತ್ತದೆ. ಹಾಗೆಯೇ ವೈದ್ಯಕೊಟ್ಟ ಯಾವ ಔಷಧಿಗೂ ಮಣಿಯದ ನಿರಂತರ ವೇದನೆಯಿಂದ ಯಾತನೆಗೊಳ್ಳುತ್ತಿದ್ದ ತಮ್ಮ ಆಶ್ರಮದ ಕರು ಒಂದನ್ನು, ಕರುವಿನ ಮೇಲಿನ ಕರುಣೆಯಿಂದಲೇ ಕೊಲ್ಲಲು ಗಾಂಧೀಜಿಯವರೇ ಅನುಮತಿ ಕೊಟ್ಟದ್ದುಂಟು. ಪೋಲೀಸಿನವರಿಂದ ತಮ್ಮ ಹೆಂಡತಿ ಮಕ್ಕಳ ಮಾನಭಂಗವಾದದ್ದನ್ನು ಅಹಿಂಸಾಚರಣೆಯ ಹೆಸರಿನಲ್ಲಿ ಮೂಕ ಪ್ರೇಕ್ಷಕರಂತೆ ನೋಡಿ ಬಂದ ಬೆಟ್ಟೆಯ ಎಂಬ ಗ್ರಾಮದ ಜನರ ನಡತೆಯನ್ನು 'ಇದು ಕೇವಲ ಅಹಿಂಸೆಯ ದುರುಪಯೋಗ' ಎಂದು ಗಾಂಧೀಜಿಯವರೇ ಖಂಡಿಸಿದರು. ಅಹಿಂಸೆ ಸಾಧ್ಯವಾಗದಿದ್ದಾಗ ಹಿಂಸೆಯಿಂದಲಾದರೂ ಅವರ ಮಾನರಕ್ಷಣೆ ಮಾಡಬೇಕಾಗಿದ್ದಿತೆಂಬುದೇ ಗಾಂಧೀಜಿಯವರ ಅಭಿಮತ.

ಅಹಿಂಸೆಯ ಹೆಸರಿನಲ್ಲಿ ಮಾನವ ಹೇಡಿಯಾಗಬೇಕೆಂದು ಗಾಂಧೀಜಿ ಎಂದೂ ಬಯಸಲಿಲ್ಲ. ಹಿಂಸೆಯನ್ನು ಆತ್ಮಬಲದಿಂದ ಎದುರಿಸಲು ಕಲಿಯಬೇಕೆಂಬುದೇ ಅಹಿಂಸೆಯ ಮೂಲ ಸಂದೇಶ. ಹೇಡಿತನ ಮತ್ತು ಹಿಂಸೆ ಈ ಎರಡರ ನಡುವೆ ಯಾವುದಾದರೂ ಒಂದನ್ನು ಆರಿಸಬೇಕಾದಲ್ಲಿ ನಾನು ಹಿಂಸೆಯ ಮಾರ್ಗವನ್ನೆ ತುಳಿದೇನು ಎಂದು ಗಾಂಧೀಜಿ ಹೇಳಿದ್ದರು. ಅಂದಮೇಲೆ ಅಹಿಂಸೆ ಸಾಧ್ಯವಾಗದಾಗ ಹಿಂಸೆಯೇ ಮೇಲು, ಹೇಡಿತನವಂತೂ ಎಂದಿಗೂ ಕೂಡದು. ಗುಣಮಟ್ಟದಿಂದ ನಿರ್ಣಯಿಸಬಹುದಾದರೆ ಅಹಿಂಸೆಯೇ ಪರಮಧರ್ಮ, ಅದಕ್ಕೆ ಕೀಳಾದದ್ದು ಹಿಂಸೆ, ಹೇಡಿತನವಂತೂ ಅದಕ್ಕಿಂತ ಕೀಳಾದದ್ದು. ಅಂದಮೇಲೆ ಅಹಿಂಸೆಯನ್ನು ಗುರುತಿಸುವಾಗ ಕೇವಲ ಒಂದು ಕಾರ್ಯದ ಸ್ಥೂಲ ರೂಪವನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಸಾಲದು. ಅದರಲ್ಲಡಗಿರುವ ಉದ್ದೇಶ ಅದರಿಂದಾಗುವ ಫಲ ಮತ್ತು ಅದು ಅನುಸರಿಸುವ ಮಾರ್ಗ ಇವುಗಳ ಸಮಗ್ರ ಚಿತ್ರ ನಮ್ಮ ಕಲ್ಪನೆಗೆ ಬರಬೇಕು.

ಪೂರ್ಣ ಅಹಿಂಸೆಯ ಆಚರಣೆ ಒಂದು ಮಹದಾದರ್ಶ ಎನ್ನುವುದಂತೂ ನಿಜ. ಮಾನವನ ಬದುಕು ಸಾಧ್ಯವಾಗಬೇಕಾದರೆ ಸ್ವಲ್ಪಮಟ್ಟಿನ ಹಿಂಸೆ ಅನಿವಾರ್ಯವೆಂದೇ ಕಾಣುತ್ತದೆ. ಇದನ್ನು ವ್ಯಾವಹಾರಿಕವಾಗಿ ಗುರುತಿಸಿದ ಗಾಂಧೀಜಿ, ಹಿಂಸೆಯ ವಲಯವನ್ನು ಆದಷ್ಟು ಕಡಿಮೆ ಮಾಡುವುದು ಮಾನವನ ಪ್ರಗತಿಯ ಚಿಹ್ನೆ ಎಂದರು. ಈ ರೀತಿಯ ಅತ್ಯಲ್ಪ ಹಿಂಸೆ ತನ್ನ ಬದುಕಿಗೆ ಅನಿವಾರ್ಯ ಹಾಗೂ ಇದು ತನ್ನ ದೌರ್ಬಲ್ಯವೇ ಸರಿ ಎಂದರಿತು ಮಾನವ ಹೆಚ್ಚು ನಮ್ರತೆಯಿಂದ ಜಗತ್ತಿನಲ್ಲಿ ವ್ಯವಹರಿಸುವಂತಾಗಬೇಕು ಎಂದು ಗಾಂಧೀಜಿ ಹೇಳಿದರು.

ತಮ್ಮ ಬಾಳಪರ್ಯಂತ ಗೌರವಿಸಿ ಆಚರಿಸುತ್ತಿದ್ದ ಅಸ್ತೇಯ, ಅಸಂಗ್ರಹ, ಬ್ರಹ್ಮಚರ್ಯ, ಶರೀರಶ್ರಮ, ಸರ್ವಧರ್ಮಸಮಾನತ್ವ, ಸ್ವದೇಶಿ ಮುಂತಾದ ಏಕಾದಶ ವ್ರತಗಳೂ ಮೂಲತಃ ಸತ್ಯ ಮತ್ತು ಅಹಿಂಸೆಯ ಪೂರಕ ತತ್ತ್ವಗಳೇ ಎಂದು ಗಾಂಧೀಜಿ ಗ್ರಹಿಸಿದ್ದರು. ನಮ್ಮ ಅವಶ್ಯಕತೆಗಿಂತಲೂ ಹೆಚ್ಚಾಗಿ ಸಂಗ್ರಹಿಸಿಡುವುದು ಅನ್ಯರ ಅವಶ್ಯಕತೆಗಳನ್ನು ಮರೆತು ನಾವು ಅವರಿಗೆಸಗಿದ ಹಿಂಸೆ ಇಲ್ಲವೇ ಅಪಚಾರ, ತಮ್ಮ ಬಳಕೆಗೆ ಬೇಕಾಗುವುದಕ್ಕಿಂತಲೂ ಮಿಗಿಲಾಗಿ ಸಂಗ್ರಹಿಸಿಡುವ ಪೀಠೋಪಕರಣ, ಉಡುಪು ವಸ್ತ್ರಗಳಿಂದಲೂ ತಾವು ಅಹಿಂಸಾಚರಣೆಯ ಉಲ್ಲಂಘನೆ ಮಾಡುತ್ತೇವೆಂದೂ ಗಾಂಧೀಜಿ ಯೋಚಿಸಿದರು. ಈ ಭಾವನೆಯ ಫಲವಾಗಿಯೇ ತಮ್ಮ ವಸ್ತ್ರ ಉಡುಪುಗಳಲ್ಲಿವರು ನಿರಾಡಂಬರವನ್ನು ಕ್ರಮಕ್ರಮವಾಗಿ ಸಾಧಿಸಿದರು.

ಅಹಿಂಸೆಯ ತತ್ತ್ವದಲ್ಲಿ ಅಂತರ್ಗತವಾಗಿರುವ ಸೂಕ್ಷ್ಮ ಅಂಶಗಳು ಇನ್ನೂ ಅಗಾಧವಾಗಿದ್ದು ಅವುಗಳ ವೈಜ್ಞಾನಿಕ ಸಂಶೋಧನೆ ಮಾನವವಂಶ ಇರುವವರೆಗೂ ನಡೆದುಕೊಂಡು ಹೋಗುತ್ತದೆಂಬುದಕ್ಕೆ ಗಾಂಧೀಜಿ ಮತ. ಅಹಿಂಸೆಯತ್ತ ಕ್ರಮಗತಿಯಲ್ಲಿ ಬೆಳೆಯುತ್ತಿರುವುದೇ ಮಾನವನ ಇತಿಹಾಸ. ಮೃಗಗಳ ಬೇಟೆಯಿಂದ ಜೀವಿಸುತ್ತಿದ್ದ ಆದಿಮಾನವ ಅಹಿಂಸೆಯ ಜಾಡನ್ನು ತುಳಿದಂತೆಲ್ಲ ಕೃಷಿಯಿಂದ ಬದುಕಲು ಕಲಿತ. ಸೂಕ್ಷ್ಮಸಂವೇದಿಯಾದ ಮಾನವನಿಗೆ ಹಿಂಸೆ ಏಕೋ ಮುಜುಗರವೆನಿಸಿತೆಂಬುದು ಮಾನವನ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಮಗೆ ಕಂಡುಬರುತ್ತದೆ.

**ಅಹಿಂಸೆ ಹಾಗೂ ಸತ್ಯಾಗ್ರಹ:** ಅಸತ್ಯದೊಡನೆ ಮಾಡುವ ಅಸಹಕಾರವನ್ನು ಅಥವಾ ಸತ್ಯಕ್ಕಾಗಿ ಎಸಗುವ ಆಗ್ರಹವನ್ನು ಗಾಂಧೀಜಿ ಸತ್ಯಾಗ್ರಹ ಎಂದು ಕರೆದರು. ಈ ಅಸಹಕಾರ ಯಾವ ಕಾರಣದಿಂದಲೂ ಅಹಿಂಸೆಗೆ ವಿರುದ್ಧವಾಗುವಂತಿಲ್ಲ. ಅದು ಹಿಂಸಾತ್ಮಕವಾದರೆ ಆಗ ಅದು ದುರಾಗ್ರಹವೆನಿಸುತ್ತದೆ. ಆದ್ದರಿಂದಲೇ ಸತ್ಯಾಗ್ರಹಿ ಪೂರ್ಣ ಅಹಿಂಸವಾದಿಯಾಗಬೇಕೆಂಬ ನಿಯಮ. ತಾನು ಮಾಡುವ ಅಸಹಕಾರದಿಂದ ಎದುರಾಳಿಗೆ ಯಾವ ರೀತಿಯಿಂದಲೂ ಕೆಡುಕಾಗಬಾರದು. ಸತ್ಯಾಗ್ರಹಿ ಸದಾ ಎದುರಾಳಿಯ ಒಳಿತನ್ನೇ ಗಮನದಲ್ಲಿಟ್ಟಿರಬೇಕು. ಅಸತ್ಯಕ್ಕಂಟಿದ ಅವನ ಮನಸ್ಸನ್ನು ಪರಿವರ್ತಿಸಿ ಅವನ ಆತ್ಮೋನ್ನತಿಗೆ ಸಹಾಯ ಮಾಡುವುದೇ ಈ ಸತ್ಯಾಗ್ರಹದ ಮೂಲ ಉದ್ದೇಶ. ಎದುರಾಳಿಯಿಂದ ಸತ್ಯಾಗ್ರಹಿಗೆ ಎಷ್ಟೇ ನೋವಾದರೂ ಅದನ್ನು ಸಹಿಸುವ ಹೊಣೆಗಾರಿಕೆ ಇವನದು. ಸತ್ಯಾಗ್ರಹಿಯಲ್ಲಿ ಯಾವ ರಹಸ್ಯ, ಗುಟ್ಟು ಇಲ್ಲವೇ, ಕುತಂತ್ರವೂ ಇರಬಾರದು. ಸತ್ಯಾಗ್ರಹಿ ತಾನು ಮಾಡುವ ಕಾರ್ಯವಿಧಾನಗಳನ್ನೆಲ್ಲ ಪೂರ್ವಭಾವಿಯಾಗಿ ಎದುರಾಳಿಗೆ ತಿಳಿಸಿ ಅವನು ಅದಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲ ಮಾಡಿಕೊಳ್ಳಲು ನೆರವಾಗಬೇಕು. ಆ ಕಾರಣದಿಂದಲೇ ಗಾಂಧೀಜಿಯವರು ತಾವೆಸಗಿದ ಎಲ್ಲ ಸತ್ಯಾಗ್ರಹಗಳಿಗೂ ಮುನ್ನ ಅದರ ಕ್ರಮ ಮತ್ತು ಉದ್ದೇಶಗಳನ್ನು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿ ಅವರಿಗೆ ಯಾವ ರೀತಿಯ ಇಕ್ಕಟ್ಟೂ ಆಗದಂತೆ ನೋಡಿಕೊಳ್ಳುತ್ತಿದ್ದರು. ಇಷ್ಟೆಲ್ಲ ಏಕೆಂದರೆ ಸತ್ಯಾಗ್ರಹದಲ್ಲಿ ಹಿಂಸೆ ವರ್ಜ್ಯ.

ಗಾಂಧೀಜಿಯವರ ಅಭಿಪ್ರಾಯ ಅಹಿಂಸಾಚರಣೆಯ ಹೊಣೆಗಾರಿಕೆ ಮಿಕ್ಕೆಲ್ಲ ರಾಷ್ಟ್ರಗಳಿಗಿಂತಲೂ ಭಾರತಕ್ಕೆ ಹೆಚ್ಚು – ಎಂದು. ಅನೇಕ ಶತಮಾನಗಳ ದಾರ್ಶನಿಕ ಪರಂಪರೆಯನ್ನು ಹೊಂದಿರುವ ಭಾರತ ಅಹಿಂಸಾಚರಣೆಯಲ್ಲಿ ಮಿಕ್ಕ ರಾಷ್ಟ್ರಗಳಿಗಿಂತಲೂ ಮುಂದೆ ಹೋಗಿ ವಿಶ್ವಕ್ಕೆ ಅಹಿಂಸೆಯ ಸಂದೇಶ ನೀಡುವಂತಾಗಬೇಕು. – ಗಾಂಧೀಜಿಯವರ ಈ ನಂಬಿಕೆಗೆ ಪುಷ್ಟಿ ದೊರೆಯುವಂಥ ಕೆಲವು ನಿದರ್ಶನಗಳು ಇತ್ತೀಚಿನ ಕಾಲದಲ್ಲಿ ನಡೆಯುತ್ತಿರುವುದು ಒಂದು ಆಶಾದಾಯಕ ಚಿಹ್ನೆ. ಅಮೆರಿಕದ ನೀಗ್ರೋ ಜನ ವರ್ಣ ವೈಷಮ್ಯಕ್ಕೆ ಸಿಲುಕಿ ತೊಳಲಾಡುತ್ತಿದ್ದಾಗ ಗಾಂಧೀಜಿಯವರ ಅಹಿಂಸಾತತ್ತ್ವದಿಂದ ಪ್ರೇರಿತನಾದ ಮಾರ್ಟಿನ್ ಲೋಥರ್ ಕಿಂಗ್ ದ್ವೇಷರಹಿತ ಹೋರಾಟದಿಂದ ಬಿಳಿ ಜನರ ಮನಸ್ಸನ್ನೂ ಮಾರ್ಪಡಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾದ ನಿದರ್ಶನ ಇನ್ನೂ ಅಚ್ಚ ಹಸುರಾಗಿದೆ. 20ನೆಯ ಶತಮಾನದಲ್ಲಿ ಬಹು ವಿಚಾರಪರ ದಾರ್ಶನಿಕನೆನಿಸಿದ ಬರ್ಟ್ರೆಂಡ್ ರಸಲ್ ಯುದ್ಧ ದಾಹದಿಂದ ಉನ್ಮತ್ತರಾಗಿ, ವಿನಾಶಕಾರಕವಾದ ಅಣ್ವಸ್ತ್ರಗಳನ್ನು ಸೃಷ್ಟಿಸಿ, ಸರ್ವನಾಶಕ್ಕೆ ಉದ್ಯುಕ್ತರಾಗಿದ್ದ ಶಕ್ತ ರಾಷ್ಟ್ರಗಳ ಮನ ಒಲಿಸಲು ಬಳಸಿದ ಅಸ್ತ್ರದ ಸ್ವರೂಪವಾದರೂ ಏನು? ಶಾಂತಿಪ್ರಿಯರಾದ ಜನರೆನ್ನೆಲ್ಲ ತಮ್ಮ ಹಿಂದೆ ಸಾಲ್ಗೂಡಿಸಿ ಲಂಡನ್ ನಗರದ ಬೀದಿಗಳಲ್ಲಿ ಕಿಲೋಮೀಟರ್ ಗಟ್ಟಳೆ, ಮಳೆ ಚಳಿಯನ್ನು ಲೆಕ್ಕಿಸದೆ, ಪಾದಯಾತ್ರೆ ನಡೆಸಿ ವಿಶ್ವದ ಜನತೆಯ ಅಭಿಪ್ರಾಯವನ್ನೆಲ್ಲ ಶಾಂತಿಯ ಸಂದೇಶದತ್ತ ವಾಲುವಂತೆ ಮಾಡಿದ ರಸಲ್ಲನ ಈ ಮಾರ್ಗ ಗಾಂಧೀಜಿಯವರ ದಂಡಿಯಾತ್ರೆಯ ಪುನಃ ಸ್ಮರಣೆಯಂತಿದೆ.

ಹಾಗೆ ನೋಡುವುದಾದರೆ ಮಾನವ ಅನಾದಿಕಾಲದಿಂದ ಹಿಂಸಾಮಾರ್ಗವನ್ನು ತುಳಿದು ಅದರಲ್ಲಿ ನೂರಾರು ಪ್ರಯೋಗಗಳನ್ನು ಮಾಡಿ ಅದರಿಂದ ಈಗ ಬೇಸತ್ತಿದ್ದಾನೆ. ಅದು ಈಗ ಗತಕಾಲದ ಪಳೆಯುಳಿಕೆಯಂತಿದೆ. ಆದ್ದರಿಂದಲೇ ಈಗ ಅವನು ಅಹಿಂಸೆಯ ಅರುಣೋದಯದತ್ತ ಆಶಾವಾದಿಯಾಗಿ ಕಣ್ತೆರೆಯುತ್ತಿದ್ದಾನೆ. (ಎ.ಎಲ್.ಎಸ್.)

**ಗಾಂಧೀಯವರ ಅನಾಸಕ್ತಿಯೋಗ:** ಗಾಂಧೀಯವರ ಜೀವನದರ್ಶನವನ್ನು ಒಂದು ಮಾತಿನಲ್ಲಿ ಹೇಳಬೇಕೆಂದರೆ ಅದನ್ನು ಅನಾಸಕ್ತಿಯೋಗ ಎಂದೇ ಕರೆಯಬಹುದಾದರೂ ಈ ಮಾತನ್ನು ಅವರು ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಬಳಸಿದ್ದಾರೆ. ಭಗವದ್ಗೀತೆಯಲ್ಲಿ ತಾವು ಕಂಡ ತಾತ್ತ್ವಿಕ ಸ್ವರೂಪವೇನೆಂಬುದನ್ನು ವಿವರಿಸುವಾಗ ಅನಾಸಕ್ತಿಯೋಗ ಎಂಬ ಮಾತನ್ನು ಅವರು ವಿಶಿಷ್ಟವಾಗಿ ಬಳಸಿದ್ದಾರೆ. ತಮ್ಮ ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ತಮ್ಮ ನಡೆ ನುಡಿಯ ಕೈಪಿಡಿಯಂತಿದ್ದು ತಮಗೆ ಮಾರ್ಗದರ್ಶನವಿತ್ತ ಭಗವದ್ಗೀತೆಯ ವಿಚಾರದಲ್ಲಿ ಗಾಂಧೀಯವರಿಗೆ ಅಪಾರ ಗೌರವ, ಅದರ ವಿಚಾರದಲ್ಲಿ ತಮಗಿದ್ದ ಭಕ್ತಿಗೌರವಗಳನ್ನು ವಿವರಿಸಲು ಅತ್ಯಂತ ಗಂಭೀರವಾದ ಹಾಗೂ ಮನಮುಟ್ಟುವಂಥ ರೂಪಕಗಳನ್ನವರು ಬಳಸುತ್ತಾರೆ. ತಮ್ಮ ಭೌತಶರೀರಕ್ಕೆ ಜನ್ಮವಿತ್ತು ಸಲಹಿದ ತಾಯಿ ಹೇಗೋ ಹಾಗೆಯೇ ತಮ್ಮ ಆಂತರಿಕ ವ್ಯಕ್ತಿತ್ವಕ್ಕೆ ಪೋಷಣೆಯಿತ್ತು, ಅವರ ಧಾರ್ಮಿಕ ಶ್ರದ್ಧೆಗೆ ನೀರೆರೆದು ಬೆಳೆಸಿದ ಭಗವದ್ಗೀತೆ ಅವರಿಗೆ ಜೀವಂತ ಮಾತೆ. ಆ ಕಾರಣದಿಂದ ಅವರು ಗೀತೆಯನ್ನು ಗೀತಾಮಾತೆ ಎಂದು ಸಂಭೋಧಿಸಿದರು. ಪ್ರಯೋಗಾತ್ಮಕವಾಗಿ ಬಾಳಿದ ತಮ್ಮ ದೈನಂದಿನ ಬದುಕಿನಲ್ಲಿ ತಮಗೊದಗಿದ ಧಾರ್ಮಿಕ ಸಮಸ್ಯೆಗಳಿಗೆಲ್ಲಾ ಗೀತೆಯಲ್ಲಿ ತಪ್ಪದೇ ಪರಿಹಾರ ದೊರೆತದ್ದರಿಂದ ಅದು ಅವರ ಭಾಗದ ಕಾಮಧೇನು. ಅಷ್ಟೇ ಏಕೆ, ಅದು ಅವರ ಧಾರ್ಮಿಕ ಸಮಸ್ಯೆಗಳ ಅರ್ಥಕೋಶ. ಆತ್ಮದರ್ಶನಕ್ಕೆ ಭಗವದ್ಗೀತೆಯಲ್ಲಿ ಅದ್ವಿತೀಯ ಮಾರ್ಗ ಒಂದಿದೆ ಎಂಬುದನ್ನು ಅವರು ಚೆನ್ನಾಗಿ ಗ್ರಹಿಸಿದ್ದರೆಂಬುದಕ್ಕೆ ಈ ಮಾತುಗಳೇ ಸಾಕ್ಷಿ.

ವೈಜ್ಞಾನಿಕ ಯುಗದ ಶಿಶುವಾದ ಯುವಕ ಗಾಂಧಿ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಥಿಯಾಸಫಿಸ್ಟ್ ಸೋದರರಿಬ್ಬರಿಂದಾಗಿ ಮೊಟ್ಟಮೊದಲಿಗೆ ಭಗವದ್ಗೀತೆಯನ್ನು ಓದಿ ಅದರಿಂದ ಸ್ವಲ್ಪಮಟ್ಟಿಗೆ ಪ್ರಭಾವಿತರಾದರು. ದಿನಕಳೆದಂತೆಲ್ಲ ಅವರಿಗೆ ಗೀತೆಯ ಆಕರ್ಷಣೆ ಹೆಚ್ಚುತ್ತ ಬಂದು ಕೊನೆಗೆ ತತ್ತ್ವಜ್ಞಾನಕ್ಕೆ ಅದೇ ಸರ್ವೋತ್ತಮ ಗ್ರಂಥ ಎಂದೆನ್ನುವಂತಾಯಿತು. ಈ ರೀತಿಯ ವಿಶಿಷ್ಟವಾದ ಅನುಭವಕ್ಕೆ ಅವರಿಗೆ ಸ್ವಭಾವಜನ್ಯವಾಗಿ ಬಂದಿದ್ದ ಧಾರ್ಮಿಕ ತೃಷೆಯೇ ಬಹುಮಟ್ಟಿಗೆ ಕಾರಣವೆನ್ನಬಹುದು. ಗೀತೆಯ ಸಾರಸರ್ವಸ್ವವನ್ನೂ ತಿಳಿಯಬೇಕೆಂಬ ದಾಹ ಹೆಚ್ಚುತ್ತ ಬಂದಂತೆ, ಅದರ ವಿಚಾರದಲ್ಲಿ ಸಂಪ್ರದಾಯಬದ್ಧವಾದ ಭಾಷ್ಯಗಳೇ ಅಲ್ಲದೆ ಟಿಳಕರಂಥ ಪ್ರಾಜ್ಞರ ಪಾಂಡಿತ್ಯಪೂರ್ಣ ವ್ಯಾಖ್ಯೆಗಳನ್ನು ಓದು ನೋಡಿದರು. ಭಗವದ್ಗೀತೆಯನ್ನು ಪಂಡಿತರ ಭಾಷ್ಯಗಳೊಂದಿಗೆ ಓದಿದಾಗ ಗಾಂಧಿಗೆ ಅಷ್ಟೊಂದು ತೃಪ್ತಿ ದೊರೆತಂತೆ ಕಾಣಲಿಲ್ಲ. ಆದ್ದರಿಂದ ಪಾಂಡಿತ್ಯದ ಭಾರವನ್ನು ತೊರೆದು ಕೇವಲ ಉಪಾಸಕನಾಗಿ ಅತ್ಯಂತ ನಮ್ರತೆಯಿಂದ ಗೀತೆಯನ್ನು ಮೊರೆಹೊಕ್ಕಾಗ ಅದರಷ್ಟು ಸುಲಭಸಾಧ್ಯವಾದ ಧಾರ್ಮಿಕ ಗ್ರಂಥ ಮತ್ತೊಂದಿಲ್ಲ ಎಂಬುದು ಅವರಿಗೆ ಅರಿವಾಯಿತು.

ಸ್ಥೂಲವಾಗಿ ನೋಡಿದರೆ, ಯುದ್ಧದಿಂದ ವಿಮುಖನಾದ ಕ್ಷತ್ರಿಯ ಶ್ರೇಷ್ಠನಾದ ಅರ್ಜುನನನ್ನು ಯುದ್ಧೋನ್ಮುಖವಾಗಿ ಮಾಡಲು ಭಗವಾನ್ ಶ್ರೀಕೃಷ್ಣ ಕೊಟ್ಟ ಸಂದೇಶವೇ ಭಗವದ್ಗೀತೆ. ಕರ್ತವ್ಯ ವಿಮೂಢನಾಗಿದ್ದ ವೀರನಲ್ಲಿ ಕರ್ತವ್ಯದ ಸ್ಮರಣೆಯನ್ನು ಮೂಡಿಸಿ ಅವನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಲು, ಭಗವಂತ ಒಟ್ಟು ಸೃಷ್ಟಿಯ ರಹಸ್ಯ ಮತ್ತು ಉದ್ದೇಶ, ಅದರಲ್ಲಿ ಪ್ರಜ್ಞಾಶೀಲನಾದ ಮಾನವನ ಪಾತ್ರ, ಧರ್ಮಾಧರ್ಮಗಳ ನೈಜಸ್ವರೂಪವೇ ಮುಂತಾದ ಉಪನಿಷತ್ತಿನ ಸಾರಸರ್ವಸ್ವವಾದ ದಾರ್ಶನಿಕ ತತ್ತ್ವಗಳನ್ನೆಲ್ಲ ಪ್ರಾಸಂಗಿಕವಾಗಿ ವಿವರಿಸುತ್ತಾನೆ. ಗೀತಾಚಾರ್ಯನ ಈ ವಿವರಣೆಯಲ್ಲಿ ಭಕ್ತಿ, ಕರ್ಮ, ಜ್ಞಾನ ಹಾಗೂ ಅಭ್ಯಾಸಯೋಗಗಳು ಹಾಸುಹೊಕ್ಕಾಗಿ ಬೆಳೆದು ಬರುತ್ತವೆ.

ಅರ್ಜುನನಲ್ಲಿ ಕರ್ತವ್ಯಸ್ಮರಣೆಯನ್ನುಂಟುಮಾಡುವುದೇ ಗೀತೆಯ ಪರಮ ಧ್ಯೇಯವಾದ್ದರಿಂದ ಇದು ಕರ್ಮಯೋಗದ ಒಂದು ವ್ಯಾಖ್ಯಾನ ಎಂದು ಟಿಳಕ ಮುಂತಾದವರು ಮಾಡಿದ ಸಿದ್ಧಾಂತವನ್ನು ಗಾಂಧಿ ಗೌರವದಿಂದಲೇ ಓದಿ ತಿಳಿದುಕೊಂಡರು. ಆದರೆ ತಾವು ತಮ್ಮ ಜೀವನಪರ್ಯಂತ ಸಾಧಿಸುತ್ತ ಬಂದ ಅಹಿಂಸೆಯ ಸಂದೇಶವನ್ನು ಭಗವದ್ಗೀತೆಯಲ್ಲಿ ಕಂಡದ್ದು ಅವರ ಒಂದು ವೈಶಿಷ್ಟ್ಯ. ತಮ್ಮ ಈ ಅನುಭವವನ್ನು ವಿವರಿಸಲು ಅಲ್ಲೊಂದು ಇಲ್ಲೊಂದು ಗೀತಾ ಶ್ಲೋಕಗಳನ್ನು ಅವರು ಉದಾಹರಿಸುತ್ತಿದ್ದುದುಂಟು. ಇದನ್ನು ಕಂಡ ಇವರ ಮಿತ್ರರು, ಅದರಲ್ಲಿಯೂ ಮುಖ್ಯವಾಗಿ ಅವರ ಆತ್ಮಕಥನವನ್ನು ಬರೆಯಲು ಪ್ರೇರೇಪಿಸಿದ ಸ್ವಾಮಿ ಆನಂದರು ಗಾಂಧೀಜಿ ತಾವು ಕಂಡ ರೀತಿಯಲ್ಲಿ ಇಡೀ ಭಗವದ್ಗೀತೆಯನ್ನು ಏಕೆ ವಿವರಿಸಬಾರದು ಎಂಬ ಸೂಚನೆಯನ್ನು ಕೊಟ್ಟರು. ಅದರ ಫಲವಾಗಿ ಗಾಂಧೀಜಿ ಭಗವದ್ಗೀತೆಗೆ ಅತ್ಯಂತ ಸುಲಭವಾದ ರೀತಿಯಲ್ಲಿ, ಗುಜರಾತಿಭಾಷೆಯಲ್ಲಿ ಅರ್ಥವಿವರಣೆ ಬರೆದರು. ಗೀತೆಗೆ ಈ ರೀತಿ ವಿವರಣೆ ಬರೆಯಲು ತಮಗೆ ಪಾಂಡಿತ್ಯದ ಅರ್ಹತೆ ಏನೂ ಇಲ್ಲವೆಂಬುದನ್ನು ಚೆನ್ನಾಗಿ ಮನಗಂಡಿದ್ದ ಅವರು, ಗೀತೆಯ ಮಾರ್ಗದರ್ಶನದಲ್ಲಿ ತಾವು ಬದುಕಿದ ನಲವತ್ತುವರ್ಷಗಳ ಪ್ರಯೋಗಾತ್ಮಕ ಜೀವನದ ಅನುಭವದ ಹಿನ್ನೆಲೆಯಲ್ಲಿ ಈ ಪ್ರಯತ್ನ ಮಾಡಿದ್ದೇನೆಂದು ಸ್ಪಷ್ಟಪಡಿಸಿದ್ದಾರೆ.


ಮಹಾಭಾರತವನ್ನು ಶ್ರದ್ಧೆಯಿಂದ ಓದಿ, ಮಹಾಭಾರತದ ಕರ್ತೃ ಭೌತಿಕ ಯುದ್ಧದ ನಿರರ್ಥಕತೆಯನ್ನು ಸಿದ್ಧಾಂತಪಡಿಸುವಲ್ಲಿ ಪೂರ್ಣ ಯಶಸ್ವಿಯಾಗಿದ್ದಾನೆಂಬುದನ್ನು ಗಾಂಧೀಜಿ ಮನಗಂಡರು. ಮಹಾಭಾರತದ ಕೊನೆಯಲ್ಲಿ ವ್ಯಾಸರು ಗೆದ್ದವರನ್ನು ಅಳಿಸಿ ಅದಕ್ಕಾಗಿ ಅವರು ಪಶ್ಚಾತ್ತಾಪ ಪಡುವಂತೆ ಮಾಡಿದ್ದಾರೆ. ಸೋತು ಸತ್ತವರಿಗಿಂತಲೂ ಗೆದ್ದು ಉಳಿದವರೇನು ಹೆಚ್ಚು ಸುಖಪಟ್ಟಂತೆ ಕಾಣುವುದಿಲ್ಲ. ಅಂದ ಮೇಲೆ ಮಹಾಭಾರತಕ್ಕೆ ಮಕುಟಪ್ರಾಯವಾದ ಭಗವದ್ಗೀತೆಯಲ್ಲಿ, ದಾರ್ಶನಿಕ ಕವಿ ವ್ಯಾಸರು, ಅರ್ಜುನನನ್ನು ಇಂಥ ನಿರರ್ಥಕವಾದ ಭೌತಿಕ ಯುದ್ಧಕ್ಕೆ ಧರ್ಮದ ಹೆಸರಿನಲ್ಲಿ ಪ್ರಚೋದಿಸಿದರೆಂಬುದು ಮೂಲ ಗ್ರಂಥದ ಧ್ವನಿ ನಿರೂಪಣೆಗೆ ಸರಿ ಹೊಂದುವಂತೆ ಗಾಂಧೀಜಿಗೆ ಕಾಣಲಿಲ್ಲ. ಆದ್ದರಿಂದ ಗೀತೆಯ ಮೊದಲ ಅಧ್ಯಾಯದಲ್ಲಿ ಬರುವ ಕುರುಕ್ಷೇತ್ರದ ರಣರಂಗ ಕವಿಯ ಒಂದು ಉಪಮೆ ಮಾತ್ರವಾಗಿ ಗಾಂಧೀಜಿಗೆ ಕಂಡಿತು. ಅಷ್ಟೇ ಅಲ್ಲ ರಣರಂಗದಲ್ಲಿ ಕಾದಲು ನಿಂತ ಇಕ್ಕೆಲದ ಸೇನೆಗಳೂ ಸಾಂಕೇತಿಕವೆಂದೇ ಅವರು ಗ್ರಹಿಸಿದರು. ಗೀತೆಯಲ್ಲಿ ಎಲ್ಲೆಲ್ಲಿ ಸಂಹಾರದ ಪ್ರಸ್ತಾಪ ಬರುತ್ತದೋ ಅಲ್ಲೆಲ್ಲ ಬೇರೆ ಅರ್ಥವಿರಬೇಕೆಂಬ ಮನವರಿಕೆ ಅವರಿಗಾಯಿತು. ಪ್ರತಿ ಮಾನವನ ಹೃದಯದಲ್ಲಿಯೂ ಸದಾ ಒಳ್ಳಿತು ಕೆಟ್ಟದು, ಯುಕ್ತ ಅಯುಕ್ತ, ಧರ್ಮ ಅಧರ್ಮಗಳ ನಡುವೆ ಹೋರಾಟ ನಡೆಯುತ್ತಲೇ ಇರುತ್ತದೆ. ಈ ಹೋರಾಟದಲ್ಲಿ ಕೊನೆಗಂತೂ ಧರ್ಮಕ್ಕೆ ಜಯ ಖಂಡಿತ. ಈ ಸಂದೇಶವನ್ನು ಸಾರುವುದೇ ಗೀತೆಯ ಉದ್ದೇಶ. ಇದಕ್ಕಾಗಿ ಕುರುಕ್ಷೇತ್ರದಂಥ ಒಂದು ರೂಪಕವನ್ನು ಬಳಸಿಕೊಂಡು ಬಹು ಮಾರ್ಮಿಕವಾಗಿ ಈ ಉದ್ದೇಶವನ್ನು ವ್ಯಾಸರು ಸಾಧಿಸಿದ್ದಾರೆಂಬುದು ಗಾಂಧೀಜಿ ಮತ.

ಈ ಹಿನ್ನೆಲೆಯಲ್ಲಿ ನೋಡಿದಾಗ ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ ಕರ್ತವ್ಯ ಪ್ರಜ್ಞೆಯ ಸ್ವರೂಪವೇ ಬೇರೆಯಾಗಿ ಕಾಣುತ್ತದೆ. ಈ ಬೋಧನೆಯಲ್ಲಿ ಗಾಂಧೀಜಿಯವರಿಗೆ ಅಹಿಂಸೆಯೇ ಮೂರ್ತಿವೆತ್ತಂತಿದೆ. ಇದನ್ನು ತಿಳಿಯಬೇಕಾದರೆ ಶಸ್ತ್ರ ಸಂನ್ಯಾಸ ಮಾಡಿನಿಂತ ಅರ್ಜುನನ ಮಾನಸಿಕ ಸ್ಥಿತಿಯನ್ನು ಸ್ವಲ್ಪ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹುಟ್ಟುವೀರನಾದ ಅರ್ಜುನ ಯುದ್ಧಕ್ಕೆ ಹೊಸಬನಲ್ಲ; ಮಾನವರ ಮೇಲೆ ಏಕೆ, ಪರಮೇಶ್ವರನೊಂದಿಗೆ ಕಾದಿ ಪಾಶುಪತಾಸ್ತ್ರವನ್ನು ಪಡೆದ ಕಡುಗಲಿ. ಅಂದರೆ ಹಿಂಸೆಗೆ ಹೆದರುವ ಸ್ವಭಾವ ಇವನದಲ್ಲ. ಅಹಿಂಸೆ ಇವನ ಜಾಯಮಾನದಲ್ಲಿ ಈವರೆಗೂ ಕಂಡುಬಂದಿಲ್ಲ. ಕುರುಕ್ಷೇತ್ರದ ರಣರಂಗದಲ್ಲಿ ತನ್ನೆದುರಿಗೆ ಹೋರಾಡಲು ನಿಂತ ಕೌರವಸೇನೆಯಲ್ಲಿ ತನ್ನ ಗುರುಹಿರಿಯರಾದ ದ್ರೋಣ. ಭೀಷ್ಮ ಮುಂತಾದವರನ್ನು ಕಂಡು ಇವನು ಶಸ್ತ್ರಸಂನ್ಯಾಸದ ಮಾತನ್ನಾಡುತ್ತಾನೆ. ಇವನು ಕೇವಲ ತನ್ನ ಬಂಧು ಬಾಂಧವರನ್ನು ಕೊಲ್ಲಲು ಹಿಂದೆಗೆಯುತ್ತಾನೆಯೆ ಹೊರತು ಹಿಂಸೆಗೆ ಮನ ಒಗ್ಗದೆ ಯುದ್ಧದಿಂದ ವಿಮುಖನಾಗುತ್ತಿಲ್ಲ. ಆದ್ದರಿಂದ ಅರ್ಜುನನಲ್ಲಿ ಕಾಣುವ ವಿಷಾದ ಅಹಿಂಸೆಯಿಂದ ಅಥವಾ ವಿರಾಗದಿಂದ ಮೂಡಿಬಂದ ವಿಷಾದವಲ್ಲ. ಅದು ಒಂದು ರೀತಿಯ ವ್ಯಾಮೋಹದಿಂದ ಮೂಡಿಬಂದಿದೆ. ಇಂಥ ಹೃದಯದೌರ್ಬಲ್ಯದವನಿಗೆ ಅಹಿಂಸೆ ಸಾಧ್ಯವಿಲ್ಲ. ಅರ್ಜುನನಲ್ಲಿ ಕಂಡ ಈ ಕ್ಷಿಪ್ರವೈರಾಗ್ಯ ಗಂಟೆಗೆ ಅರವತ್ತು ಕಿಲೋಮೀಟರ್ ವೇಗದಲ್ಲಿ ಓಡುವ ರೈಲಿನಲ್ಲಿ ಕುಳಿತವನು ಪ್ರವಾಸಕ್ಕೆ ಬೇಸತ್ತು

ಓಡುವ ಗಾಡಿಯಿಂದ ದುಮುಕುವವನ ಸ್ಥಿತಿಯಂತೆ – ಎಂದು ಗಾಂಧೀಜಿ ವಿವರಿಸುತ್ತಾರೆ. ಈ ಕಾರಣದಿಂದ ನಿಜವಾದ ಅಹಿಂಸೆ ಅಥವಾ ವೈರಾಗ್ಯ ಸಾಧ್ಯವಾಗದ ಅರ್ಜುನನಿಗೆ ನಿಜವಾದ ನಿಷ್ಕಾಮ ಕರ್ಮದ ಸ್ವಭಾವವೇನೆಂಬುದನ್ನು ಶ್ರೀಕೃಷ್ಣ ಬೋಧಿಸಿರುವುದು, ಗಾಂಧೀಜಿಗೆ ಅತಿಸೂಕ್ತವಾಗಿ ಕಂಡಿತು.

ನಿಷ್ಕಾಮ ಕರ್ಮಕ್ಕೆ ಗಾಂಧೀಜಿ ಕೊಡುವ ವ್ಯಾಖ್ಯಾನ ಬಹು ವಿಶಿಷ್ಟವಾದದ್ದು, ಗೀತೆಯಲ್ಲಿ ಬೋಧಿಸುವ ನಿಷ್ಕಾಮಕರ್ಮ ನಿಜವಾಗಿಯೂ ಕಾರ್ಯಸಾಧ್ಯವೇ ಎಂದು, ಬಾಳಪರ್ಯಂತ ಮಾನವಸೇವೆಗೆ ತಮ್ಮನ್ನು ಮುಡಿಪಿಟ್ಟಂಥ ಅನೇಕ ಮಾನವತಾವಾದಿಗಳು ಅನುಮಾನಪಟ್ಟಿದ್ದಾರೆ. ಫಲಾಪೇಕ್ಷೆ ಇಲ್ಲದೆ ಕಾರ್ಯ ಮಾಡಬೇಕೆಂಬ ಗೀತಾಸಂದೇಶ ಅವ್ಯವಹಾರಿಕವೆಂದು ಅನೇಕರಿಗೆ ಕಂಡಿದ್ದರೂ ಗಾಂಧೀಜಿಗೆ ಅದರಲ್ಲಿ ಕ್ಲಿಷ್ಟತೆಯೂ ಕಾಣಬರಲಿಲ್ಲ. ಏಕೆಂದರೆ ನಿಷ್ಕಾಮಕರ್ಮಕ್ಕೆ ಆಧಾರವಾದ ಧರ್ಮದ ವಿಚಾರದಲ್ಲಿ ಗಾಂಧೀಜಿಗೆ ನಿಚ್ಚಳವಾದ ಅರಿವಿತ್ತು. ಅವರ ಅನಾಸಕ್ತಿಯೋಗವನ್ನು ನಾವು ಗುರುತಿಸಬೇಕಾದದ್ದು ಇಲ್ಲಿಯೇ.

ಯಾವ ಕಾರ್ಯವನ್ನು ಮಾಡುವಾಗ ಅದರ ಫಲಾಪೇಕ್ಷೆ ನಮ್ಮನ್ನು ಸಹಜವಾಗಿ ಬಾಧಿಸುವುದಿಲ್ಲವೋ ಅದೇ ನಿಷ್ಕಾಮಕರ್ಮ. ಅಂದ ಮೇಲೆ ಫಲಾಸಕ್ತಿ ಅಥವಾ ಅನಾಸಕ್ತಿಯ ಬೇರು ಕಾರ್ಯದ ಸ್ವರೂಪದಲ್ಲಿಯೇ ಇರುತ್ತದೆ. ಆದ್ದರಿಂದ ಅನಾಸಕ್ತಿಯನ್ನು ಪ್ರೇರಿಸುವ ಕಾರ್ಯಗಳನ್ನು ಆರಿಸಿಕೊಂಡು ಫಲಾಸಕ್ತಿ ಪ್ರೇರಕವಾದ ಕಾರ್ಯಗಳನ್ನು ವರ್ಜಿಸುವುದಷ್ಟೇ ಮಾನವನ ಹೊಣೆಗಾರಿಕೆ. ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ಸ್ವಾರ್ಥ – ಸ್ವಭಾವತಃ ನಮ್ಮಲ್ಲಿ ಅಪೂರ್ಣ ಫಲದ ಬಗ್ಗೆ ಆಸಕ್ತಿಯನ್ನು ಕೆರಳಿಸುತ್ತದೆ. ಇಂಥ ಕಾರ್ಯಗಳನ್ನು ಮಾಡಿದಮೇಲೆ ಅವನ್ನು ಮರೆಯುವಂತಿಲ್ಲ. ಮಾಡುವ ಮುನ್ನವೇ ಅವುಗಳ ಫಲದ ವಿಚಾರದಲ್ಲಿ ಇಲ್ಲದ ಆಶೆ ಆಕಾಂಕ್ಷೆಗಳು ನಮ್ಮಲ್ಲಿ ಮೂಡಿರುತ್ತವೆ. ಮಾಡಿ ಆದಮೇಲೆ ಅದರಿಂದ ಬರುವ ಫಲದಿಂದಾಗಿ ಸುಖದುಃಖದ ರೂಪದಲ್ಲಿ ನಾವು ಸಮ್ಮೋಹಿತರಾಗುತ್ತೇವೆ. ಈ ಕ್ರಿಯೆ ಕೊನೆ ಮೊದಲಿಲ್ಲದೆ ನಡೆದು ಕೊನೆಗೊಮ್ಮೆ ನಮ್ಮನ್ನು ವಿನಾಶದಲ್ಲಿಗೆ ಕೊಂಡೊಯ್ಯುತ್ತದೆ. ಇದೇ ಸಕಾಮಕರ್ಮದ ಸ್ವಭಾವ. ನಿಷ್ಕಾಮಕರ್ಮಗಳಾದರೋ ನಾವು ಕಣ್ಣಿನ



ಕುಷ್ಠರೋಗಾಣುಗಳ ವೀಕ್ಷಣೆಯಲ್ಲಿ ಮಗ್ನರಾದ ಗಾಂಧೀಜಿ

ರೆಪ್ಪೆಮಿಡಿಯುವ ರೀತಿಯಲ್ಲಿದ್ದು ಕೇವಲ ಸಹಜ ಕರ್ಮಗಳಾಗಿರುತ್ತವೆ. ಈ ರೀತಿಯ ಸಹಜಕರ್ಮಗಳನ್ನು ಮಾಡುವಾಗ ಯಾವ ಫಲಾಪೇಕ್ಷೆಯೂ ಇಲ್ಲದಿರುವುದರಿಂದ, ಅವುಗಳ ಆಚರಣೆ ಅನಾಸಕ್ತಿಯೋಗವೆನಿಸುತ್ತದೆ.

ಆಸಕ್ತಿಯಿಂದ ಮಾಡುವ ಕರ್ಮಗಳು ಲಾಭ ನಷ್ಟ, ಸುಖದುಃಖ, ಜಯಾಪಜಯಗಳ ರೂಪದಲ್ಲಿ ನಮ್ಮನ್ನು ಅಂಥ ಕೆಲಸಗಳಲ್ಲಿ ಮತ್ತಷ್ಟು ಆಸಕ್ತರಾಗುವಂತೆ ಮಾಡುತ್ತವೆ. ಒಂದು ಕಾರ್ಯ ಮತ್ತೊಂದು ಕಾರ್ಯಕ್ಕೆ ಬೀಜರೂಪದಲ್ಲಿದ್ದು ನಾವು ಅದಕ್ಕೆ ದಾಸರಾಗುವಂತೆ ಮಾಡುತ್ತವೆ. ಈ ರೀತಿ ಫಲಾಸಕ್ತರಾಗಿ ಕಾರ್ಯ ಮಾಡುವವರು ದಿನದಿನಕ್ಕೂ ತಮ್ಮ ಮಾನಸಿಕ ಸ್ತಿಮಿತತೆಯನ್ನು ಕಳೆದುಕೊಳ್ಳುತ್ತಾರೆ. ತಮ್ಮ ಬಯಕೆಯ ವಿಚಾರದಲ್ಲಿ ಮೋಹ, ಅದು ಕೈಗೂಡದಿದ್ದರೆ ಕೋಪ, ಅನಂತರ ಸ್ಮೃತಿವಿಭ್ರಮೆ, ಹಾಗೆಯೇ ವ್ಯಕ್ತಿಯ ಸರ್ವನಾಶ. ಅಂದ ಮೇಲೆ ಆಸಕ್ತಿಯಲ್ಲಿಯೇ ವಿನಾಶದ ಬೀಜವೂ ಇದೆ. ಆದ್ದರಿಂದ ಗಾಂಧೀಜಿಯವರು ಅನಾಸಕ್ತಿಯಿಂದ ಮಾತ್ರ ಸ್ಥಿತಪ್ರಜ್ಞತೆ ಸಾಧ್ಯ ಎಂಬುದನ್ನ ಚೆನ್ನಾಗಿ ಮನಗಂಡರು. ಅಷ್ಟೇ ಅಲ್ಲದೆ ಅನಾಸಕ್ತಿಯೋಗ ಕೈಗೂಡದ ಹೊರತು ಭಗವಂತನಲ್ಲಿ ಪೂರ್ಣ ಭಕ್ತಿ ಸಾಧ್ಯವಾಗದೆಂಬುದು ಅವರ ಮತ. ಅನಾಸಕ್ತಯೋಗಿಯೇ ನಿಜವಾದ ಭಕ್ತ ಹಾಗೂ ಜ್ಞಾನಿಯೆನಿಸುತ್ತಾನೆ.

ಗಾಂಧೀಜಿಯವರ ಅನಾಸಕ್ತಿಯೋಗ ನಿಷ್ಕ್ರಿಯೆಯನ್ನು ಬೋಧಿಸುತ್ತದೆಂದು ತಿಳಿದುಕೊಳ್ಳಬಾರದು. ಫಲದ ವಿಚಾರದಲ್ಲಿ ಇಲ್ಲದ ಆಸಕ್ತಿಯನ್ನು ಕೆರಳಿಸಿದಂಥ ಕಾರ್ಯಗಳನ್ನು ಮಾಡುವಾಗ ಸಹಜವಾಗಿ ಆಸಕ್ತಿಯಿಲ್ಲ ಕಾರ್ಯ ಮಾಡುವುದರಲ್ಲಿಯೇ ವಿನಿಯೋಗವಾಗುತ್ತದೆ. ಮೋಹ ಮಾತ್ಸರ್ಯಗಳ ಹೊರೆ ಮನಸ್ಸಿನ ಮೇಲಿಲ್ಲವೆಂದಾಗ ಮನಸ್ಸು ಸದಾ ಪ್ರಫುಲ್ಲವಾಗಿದ್ದು ಶಾಂತವಾಗಿರುತ್ತದೆ. ಅನಾಸಕ್ತಿಯಿಂದ ಮಾಡಿದ ಕೆಲಸಗಳು ಗುಣದಲ್ಲಿ ಕಡಿಮೆ ಇರುವುದಿಲ್ಲ. ಇಲ್ಲವೆ ಅವುಗಳಿಂದ ಬರಬೇಕಾದ ಫಲವೂ ಕಡಿಮೆಯಾಗುವುದಿಲ್ಲ – ಎಂಬುದೇ ಭಗವಂತನ ಆಶ್ವಾಸನೆ. ಅದರ ಫಲ ಕಡಿಮೆಯಾಗುವ ಬದಲು ನೂರ್ಮಡಿ ಹೆಚ್ಚುತ್ತದೆ, ಏಕೆಂದರೆ ನಿರಹಂಕಾರದಿಂದ ಮಾಡಿದ ಕೆಲಸದಲ್ಲಿ ಭಗವಂತನ ಕೃಪೆಗೆ ಪೂರ್ಣ ಅವಕಾಶವಿರುತ್ತದೆ. ಆಕಾರಣದಿಂಲೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣ, ನಿಷ್ಕಾಮ ಕರ್ಮಕ್ಕೆ ಯಥೇಚ್ಛವಾಗಿ ಫಲಕೊಡುವ ಹೊಣೆಯನ್ನು ತಾನೇ ವಹಿಸಿಕೊಂಡಿದ್ದಾನೆ. ಭಕ್ತನಾದ ಅನಾಸಕ್ತಿಯೋಗಿಗೆ ಈ ಅಭಯ ಒಂದು ವರವಿದ್ದಂತೆ.

ಗಾಂಧೀಜಿಯವರಿಗೆ ಅನಾಸಕ್ತಿಯೆಂಬುದು ಭಕ್ತಿ, ಜ್ಞಾನ, ಧ್ಯಾನ, ಯೋಗಗಳಿಗೆ ಹೊರತಾದ ಆತ್ಮಸಾಕ್ಷಾತ್ಕಾರದ ಬೇರೊಂದು ಮಾರ್ಗ ಎಂದು ಕಾಣಲಿಲ್ಲ. ಅವರ ಅನಾಸಕ್ತಿಯೋಗದಲ್ಲಿ ಭಕ್ತಿ, ಧ್ಯಾನ, ಮತ್ತು ಜ್ಞಾನಗಳು ಸಮಪ್ರಮಾಣದಲ್ಲಿ ಸಮನ್ವಯಗೊಳ್ಳುತ್ತವೆ. ಈ ಎಲ್ಲ ಯೋಗಗಳ ಸಾಮರಸ್ಯವಾದಾಗ ಮಾತ್ರ ಅನಾಸಕ್ತಿಯೋಗ ಸಿದ್ಧಿಸುತ್ತದೆಂಬ ದಿವ್ಯತತ್ತ್ವವನ್ನು ಗೀತಾ ಸಂದೇಶದಲ್ಲಿ ಕಂಡುಕೊಂಡು ಅದನ್ನು ತಮ್ಮ ಜೀವನಪರ್ಯಂತ ಬಾಳಲು ಗಾಂಧೀಜಿ ತಪಿಸಿದರು. (ಎ.ಎಲ್.ಎಸ್.)

**ಗಾಂಧೀ ಆಶ್ರಮಗಳು:** ಮಹಾತ್ಮ ಗಾಂಧೀಯವರು ತಮ್ಮ ಧ್ಯೇಯ ಸಾಧನೆಗಾಗಿ ಅಗತ್ಯ ಕಂಡಾಗಲೆಲ್ಲ ಕೆಲವು ಆಶ್ರಮಗಳನ್ನು ಸ್ಥಾಪಿಸಿ, ಅಲ್ಲಿ ತಮ್ಮ ಸಹಚರರೊಂದಿಗೆ ಇದ್ದು ನಿಯಮಬದ್ಧವಾದ ಸಾತ್ತ್ವಿಕ ಜೀವನವನ್ನು ನಡೆಸುತ್ತ ಇಹಪರಗಳೆರಡರ ಸಾಧನೆಗೆ ತೊಡಗಿದ್ದು ಅವರ ಸಮಾಜೋದ್ಧಾರ ಕಾರ್ಯದ ಒಂದು ಮುಖ್ಯ ವಿಷಯ. ಕ್ರಮೇಣ ತಾವು ಕೈಗೊಂಡ ಸಾರ್ವಜನಿಕ ಕಾರ್ಯಗಳಿಗೂ ಸತ್ಯಾಗ್ರಹ ಆಂದೋಲನಗಳಿಗೂ ಈ ಆಶ್ರಮಗಳೇ ಶಿಕ್ಷಣ ಕ್ಷೇತ್ರಗಳಾಗಿಯೂ ಪರಿಣಮಿಸಿದವು. ಅವರಿಗೆ ಪ್ರತ್ಯೇಕವಾದ ಸ್ವಂತ ಮನೆ ಎಂಬುದು ಎಲ್ಲಿಯೂ ಇರಲಿಲ್ಲ. ಅವರ 36 ನೆಯ ವಯಸ್ಸಿನಿಂದ ಅಂತ್ಯಕಾಲದ ವರೆಗೂ ಈ ಆಶ್ರಮಗಳೇ ಅವರ ವಸತಿಗಳಾಗಿದ್ದುವು.

**ಫೀನಿಕ್ಸ್ ವಸತಿ:** ಹೀಗೆ ಅವರು ಸ್ಥಾಪಿಸಿದ. ಆಶ್ರಮಗಳಲ್ಲಿ ಮೊದಲನೆಯದು ದಕ್ಷಿಣ ಆಫ್ರಿಕದ ನಟಾಲಿನಲ್ಲಿ 1904ರಲ್ಲಿ ಅವರು ಏರ್ಪಾಡು ಮಾಡಿದ ಫೀನಿಕ್ಸ್ ವಸತಿ.

ಆ ವರ್ಷ ಜೋಹ್ಯಾನಿಸ್‌ಬರ್ಗಿನಿಂದ ಡರ್ಬನಿಗೆ ಕೈಗೊಂಡ 24 ಗಂಟೆಯ ರೈಲು ಪ್ರಯಾಣದಲ್ಲಿ ಹೊತ್ತು ಕಳೆಯಲು ಅವರ ಮಿತ್ರರಾದ ಪೋಲಕ್ ಅವರು ಕೊಟ್ಟ ಅಂಟು ದಿಸ್ ಲ್ಯಾಸ್ಟ್ ಎಂಬ ರಸ್ಕಿನ್ನನ ಪುಸ್ತಕ ಅವರ ಮೇಲೆ ಉಂಟುಮಾಡಿದ ಅದ್ಭುತ ಪ್ರಭಾವವೇ ಈ ಫೀನಿಕ್ಸ್ ವಸತಿ ನಿರ್ಮಾಣಕ್ಕೆ ಮುಖ್ಯ ಕಾರಣವಾಯಿತು. ಈ ಮೊದಲೇ ಅವರು ಅಂತರ್ಮುಖಿಗಳಾಗಿ ಜೀವನದ ಧ್ಯೇಯಗಳ ಬಗೆಗೆ ವಿಚಾರ ನಡೆಸಿ ಆದಷ್ಟು ಸರಳವೂ ನಿಯಮಿತವೂ ಆದ ಜೀವನವನ್ನು ನಡೆಸುತ್ತಿದ್ದರಾಗಿ ಅವರ ಚಿತ್ತ ಹದಗೊಂಡಿತ್ತು. ರಸ್ಕಿನ್ನನ ಪುಸ್ತಕದಲ್ಲಿ ಪ್ರತಿಪಾದಿಸಿರುವ ತತ್ತ್ವಗಳು ಅವರ ಮನಸ್ಸನ್ನು ಸೂರೆಗೊಂಡವು. ಎಲ್ಲ ಕಸುಬುಗಳೂ ಸಮಾನವಾದ ಆದರವನ್ನು ಪಡೆಯಬೇಕು ಮತ್ತು ಶ್ರಮಜೀವನ ಅಥವಾ ಕಾಯಕ ಎಲ್ಲಕ್ಕಿಂತಲೂ ಯೋಗ್ಯವಾದ ಜೀವನ ವಿಧಾನ – ಈ ತತ್ತ್ವಗಳನ್ನು ಅನುಷ್ಠಾನಕ್ಕೆ ತರಲು ಅವರು ಈಗ ಸ್ಥಿರ ಸಂಕಲ್ಪವನ್ನು ಕೈಗೊಂಡರು.

ಈ ಫೀನಿಕ್ಸ್ ವಸತಿಯನ್ನು ವಿಳಂಬವಿಲ್ಲದೆ ಆರಂಭಿಸಲು ಮತ್ತೊಂದು ಕಾರಣವೂ ಇತ್ತು. ಕೆಲವು ತಿಂಗಳುಗಳ ಹಿಂದೆ, ಭಾರತೀಯ ಸೇವೆಗಾಗಿ ಇಂಡಿಯನ್ ಒಪಿನಿಯನ್ ಎಂಬ ವಾರಪತ್ರಿಕೆಯನ್ನು ಡರ್ಬನ್ನಿನಲ್ಲಿ ಅವರು ಸ್ಥಾಪಿಸಿದ್ದರು. ಅಲ್ಬರ್ಟ್ ವೆಸ್ಟ್

ಎಂಬ ಆಂಗ್ಲೇಯ ಮಿತ್ರ ಅದನ್ನು ಸಂಬಂಧಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಪತ್ರಿಕೆಯ ಕೆಲಸ ಬಹಳ ನಷ್ಟದಲ್ಲಿ ನಡೆಯುತ್ತಿತ್ತು. ಈ ಪತ್ರಿಕೆಯನ್ನು ಫೀನಿಕ್ಸ್ ವಸತಿಗೆ ಬದಲಾಯಿಸಿ ಇದರ ವ್ಯಯವನ್ನು ಅಲ್ಲಿನ ನಿವಾಸಿಗಳ ನೆರವಿನಿಂದ ಕಡಿಮೆ ಮಾಡಬಹುದೆಂಬುದು ಗಾಂಧೀಜಿಯವರ ತೀರ್ಮಾನವಾಗಿತ್ತು. ಅದು ಹಾಗೆಯೇ ಆಯಿತು.

ಈ ವಸತಿ ಫೀನಿಕ್ಸ್ ರೈಲ್ವೆ ನಿಲ್ದಾಣದಿಂದ 4 ಕಿಮೀ (ಇದೇ ಅದರ ಹೆಸರಿಗೆ ಕಾರಣ) ಮತ್ತು ಡರ್ಬನಿನಿಂದ 21 ಕಿಮೀ ದೂರದಲ್ಲಿತ್ತು.

ಇಲ್ಲಿ ವಾಸಕ್ಕೆ ಬಂದವರಲ್ಲಿ ಆಲ್ಬರ್ಟ್ ವೆಸ್ಟ್, ಪೋಲಕ್, ಗಾಂಧಿಯವರ ಚಿಕ್ಕಪ್ಪನ ಮಗ ಛಗನಲಾಲ್ ಗಾಂಧಿ ಮತ್ತು ಆತನ ಕುಟುಂಬ, ಹಾಗೂ ಗಾಂಧಿಯವರಿಗೆ ಬಲಗೈಯಂತಿದ್ದ ಅವರ ಸೋದರಳಿಯ ಮದನ್‌ಲಾಲ್ ಗಾಂಧೀ ಉಲ್ಲೇಖನೀಯರು. ಹೆಂಗಸರೂ ಮಕ್ಕಳೂ ಇದ್ದರು. ಎಲ್ಲರೂ ಶಕ್ತ್ಯನುಸಾರ ಶ್ರಮಜೀವನ ನಡೆಸಬೇಕು. ಪ್ರತಿಯೊಬ್ಬರಿಗೂ ತಿಂಗಳಿಗೆ 3 ಪೌಂಡು ಸಮಾನವಾದ ವೇತನ. ವ್ಯವಸಾಯ ಮಾಡಲು ಪ್ರತಿಯೊಬ್ಬರಿಗೂ 1.5 ಹೆಕ್ಟೇರು ಹಂಚಲಾಗಿತ್ತು. ಒಟ್ಟು ಇಲ್ಲಿ ಇದ್ದ 40 ಹೆಕ್ಟೇರುಗಳನ್ನು 1000 ಪೌಂಡುಗಳಿಗೆ ಕೊಳ್ಳಲಾಗಿತ್ತು. ಸತ್ಯಾಗ್ರಹ ಆಂದೋಲನ ನಡೆದಾಗ ಸೆರೆಮನೆಗೆ ಹೋಗಿ ಬಂದವರು ಬೇರೆ ಮನೆಗಳಿಲ್ಲದಿದ್ದರೆ ಇಲ್ಲಿಗೆ ಬಂದು ತಂಗುತ್ತಿದ್ದರು. ಬೇರೆ ಬೇರೆ ಮತಧರ್ಮಗಳಿಗೆ ಸೇರಿದವರು ಇಲ್ಲಿ ಸಾಮೂಹಿಕ ಜೀವನವನ್ನು ನಡೆಸುತ್ತಿದ್ದರು. ಅಲ್ಲಿದ್ದ ಮಕ್ಕಳಿಗೆ ಗಾಂಧಿಯವರೇ ಮುಖ್ಯ ಶಿಕ್ಷಕರು. ಅಚ್ಚಾದ ಇಂಡಿಯನ್ ಒಪಿನಿಯನ್ ಪತ್ರಿಕೆಗಳನ್ನು ಚಂದಾದಾರರಿಗೆ ರವಾನಿಸುವ ಕಾರ್ಯದಲ್ಲಿ ಮಕ್ಕಳು ಬಹಳ ಉತ್ಸಾಹದಿಂದ ನೆರವಾಗುತ್ತಿದ್ದರು.

ಗಾಂಧೀಯವರಿಗೆ ಮಾತ್ರ ತಮ್ಮ ವಕೀಲಿ ವೃತ್ತಿಯ ಕಾರಣದಿಂದಾಗಿ ಯಾವಾಗಲೂ ಈ ವಸತಿಯಲ್ಲಿರಲು ಸಾಧ್ಯವಾಗುತ್ತಿರಲಿಲ್ಲ.

**ಟಾಲ್‌ಸ್ಟಾಯ್ ಆಶ್ರಮ:** ಮಹಾತ್ಮ ಗಾಂಧಿಯವರು ಸ್ಥಾಪಿಸಿದ ಎರಡನೆಯ ಆಶ್ರಮ ಟ್ರಾನ್ಸ್‌ವಾಲ್ ಪ್ರಾಂತ್ಯದಲ್ಲಿ ಲಾಲಿ ಎಂಬ ರೈಲ್ವೆ ನಿಲ್ದಾಣದಿಂದ 1.5 ಕಿಮೀ, ಜೊಹ್ಯಾನಿಸ್‌ಬರ್ಗ್ ಪಟ್ಟಣದಿಂದ ಸು. 32 ಕಿಮೀ ದೂರದಲ್ಲಿದ್ದ ಟಾಲ್‌ಸ್ಟಾಯ್ ಆಶ್ರಮ. ಟಾಲ್‌ಸ್ಟಾಯ್ ಅವರ ಬರೆಹಗಳನ್ನು ಓದಿ ಗಾಂಧಿ ಪ್ರಭಾವಿತರಾಗಿದ್ದರು. ತಮ್ಮ ಆಂದೋಲನದ ಬಗೆಗೆ ಅವರೊಂದಿಗೆ ಪತ್ರವ್ಯವಹಾರ ನಡೆಸಿದ್ದರು. ಅವರ ಆಶೀರ್ವಾದವನ್ನೂ ಪಡೆದಿದ್ದರು. ಟ್ರಾನ್ಸ್‌ವಾಲಿನಲ್ಲಿ ಭಾರತೀಯರ ಮೇಲೆ ವಿಧಿಸಿದ್ದ ಮೂರು ಪೌಂಡ್ ತಲೆಕಂದಾಯದ ವಿರುದ್ಧ ಗಾಂಧಿಯವರು ಹೂಡಿದ ಸತ್ಯಾಗ್ರಹ ಚಳವಳಿಯ ಕಾಲದಲ್ಲಿ ಸ್ಥಾಪಿಸಿದ ಆಶ್ರಮವಿದು (30 ಮೇ 1910). ಸೆರೆಮನೆ ಸೇರಿದ ಕುಟುಂಬದವರ ವಸತಿಗೆಂದು ಮುಖ್ಯವಾಗಿ ಇದು ಸ್ಥಾಪಿತವಾಯಿತು. ಇದಕ್ಕೆ 440 ಹೆಕ್ಟೇರು ಜಮೀನು ಮತ್ತು ತೋಟವಿದ್ದು ಅದರಲ್ಲಿ ಸುಮಾರು 1000 ಹಣ್ಣಿನ ಗಿಡಗಳಿದ್ದವು. ಇದರ ಮಾಲೀಕ ಗಾಂಧಿಯವರ ಮಿತ್ರನೂ ಅನುಯಾಯಿಯೂ ಆದ ಕ್ಯಾಲೆನ್ ಬ್ಯಾಕ್ ಎಂಬ ಜರ್ಮನ್ ಗ್ರಹಸ್ಥ (ಬಾಡಿಗೆ ಇಲ್ಲದೆ ಈ ಕ್ಷೇತ್ರವನ್ನು ಭಾರತೀಯರಿಗಾಗಿ ಆತ ಬಿಟ್ಟು ಕೊಟ್ಟ.) ಗೃಹಶಿಲ್ಪ ಮತ್ತು ಅದಕ್ಕೆ ಸಂಬಂಧಿಸಿದ ಕಸಬುಗಳಲ್ಲಿ ಪರಿಣತನಾದ ಆತ ಪಾದರಕ್ಷೆಗಳನ್ನು ಹೊಲಿಯುವದನ್ನು ತಾನು ಕಲಿತು ಗಾಂಧಿಯವರಿಗೂ ಕಲಿಸಿದ. ಈ ಆಶ್ರಮದಲ್ಲಿ ಆರಂಭದಲ್ಲಿಯೇ ಸುಮಾರು 70 ಜನರಿದ್ದರು. ಸದಸ್ಯತ್ವಕ್ಕೆ ವಯಸ್ಸಿನ, ಮತಧರ್ಮದ ಯಾವ ಮಿತಿಯೂ ಇರಲಿಲ್ಲ. ವಾಸಕ್ಕಾಗಿ ಕಟ್ಟಡಗಳು ಅಲ್ಲಿನ ನಿವಾಸಿಗಳ ಶ್ರಮದಾನದಿಂದಲೇ ಬಹುಮಟ್ಟಿಗೆ ಸಿದ್ಧವಾದಂಥವು. ಇದರ ಮೇಲ್ವಿಚಾರಣೆಯೆಲ್ಲ ಕ್ಯಾಲೆನ್ ಬ್ಯಾಕನದೇ. ಒಂದೇ ಅಡಿಗೆಯ ಮನೆ ಇತ್ತು. ಅದರ ನಿರ್ವಹಣೆ ಅಲ್ಲಿದ್ದ ಮಹಿಳೆಯರದಾಗಿತ್ತು. ಸಸ್ಯಾಹಾರ ಸೇವನೆಯೇ ಅಲ್ಲಿನ ಪದ್ಧತಿ. ಧೂಮ ಮತ್ತು ಸುರಾಪಾನಗಳು ನಿಷೇಧಿಸಲ್ಪಟ್ಟಿದ್ದವು. ಸಾಮೂಹಿಕ ಪ್ರಾರ್ಥನೆ ಮತ್ತು ಭೋಜನ ರೂಢಿಯಲ್ಲಿದ್ದುವು. ನೈರ್ಮಲ್ಯ ರಕ್ಷಣೆಗೆ ಒಳ್ಳೆಯ ಏರ್ಪಾಡಿತ್ತು. ಜಲಮಲಗಳ ವಿಸರ್ಜನೆಗಾಗಿ ಮಾಡಿದ ಗುಂಡಿಗಳು ಕಾಲಾನಂತರ ಉತ್ತಮ ಗೊಬ್ಬರವನ್ನೊದಗಿಸುತ್ತಿದ್ದವು. ಖಾಸಗಿ ಕೆಲಸಕ್ಕಾಗಿ ಜೊಹ್ಯಾನಿಸ್‌ಬರ್ಗಿಗೆ ಹೋಗುವವರು 32 ಕಿಮೀ ದೂರವನ್ನು ಕಾಲುನಡಿಗೆಯಲ್ಲೇ ನಿರ್ವಹಿಸುತ್ತಿದ್ದರು.

**ಸತ್ಯಾಗ್ರಹಾಶ್ರಮ, ಸಾಬರಮತಿ:** 1915 ರ ಜನವರಿಯಲ್ಲಿ ಗಾಂಧಿಯವರು ಭಾರತಕ್ಕೆ ಹಿಂತಿರುಗಿದ ಮೇಲೆ ಇಲ್ಲಿಯೂ ಆಶ್ರಮ ವಾಸವನ್ನು ಕೈಗೊಳ್ಳಬೇಕೆಂದು ಅವರಿಗೆ ತೋರಿತು. ಅಂತೆಯೇ ಮೇ ತಿಂಗಳಲ್ಲಿ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದರು. ಅವರೊಂದಿಗೆ ಹಿಂತಿರುಗಿದ ಅವರ ಬಂಧುವರ್ಗದವರು ಮತ್ತು ಅನುಯಾಯಿಗಳು ಸುಮಾರು 25 ಮಂದಿ ಆಶ್ರಮವಾಸಿಗಳಾದರು. ಆಶ್ರಮ ಆರಂಭವಾದದ್ದು ಅಹಮದಾಬಾದಿಗೆ ಸೇರಿದ ಕೊಚರಾಬ್ ಹಳ್ಳಿಯಲ್ಲಿ. ಒಂದು ಬಾಡಿಗೆ ಬಂಗಲೆಯಲ್ಲಿ. ಸ್ವಲ್ಪ ಕಾಲವಾದ ಮೇಲೆ ಸಾಬರಮತಿ ನದೀತೀರಕ್ಕೆ ಆಚೆ ಸುಮಾರು 60 ಹೆಕ್ಟೇರು ನಿವೇಶನಕ್ಕೆ ಆಶ್ರಮವನ್ನು ಬದಲಾಯಿಸಲಾಯಿತು. ಹಳ್ಳಿಯ ಮಾದರಿಯ ಮನೆಗಳೂ ಕಟ್ಟಡಗಳೂ ಸಿದ್ಧವಾದವು. ಕೃಷಿ, ತೋಟಗಾರಿಕೆ ಮತ್ತು ಪಶುಪಾಲನೆಗೆ ಅವಕಾಶ ಮಾಡಲಾಯಿತು. ಆಶ್ರಮವಾಸಿಗಳು ಕೆಲವು ನಿಯಮಗಳನ್ನು ಪಾಲಿಸಿ ಸಾಮೂಹಿಕವಾದ ಧಾರ್ಮಿಕ ಜೀವನವನ್ನು ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. ಸತ್ಯ, ಅಹಿಂಸೆ, ಬ್ರಹ್ಮಚರ್ಯೆ, ನಾಲಗೆಯ ರುಚಿಯ ಮೇಲೆ ಹತೋಟಿ, ಅಸ್ತೇಯ, ಅಸಂಗ್ರಹ ಇವು ಮೂಲಭೂತವಾದ ನಿಯಮಗಳು. ಇವೇ ಅಲ್ಲದೆ ಸ್ವದೇಶಿ, ನಿರ್ಭಯತ್ವ, ಕಾಯಕ, ಅಸ್ಪೃಶ್ಯತಾ ನಿವಾರಣೆ – ಇವನ್ನೂ ವ್ಯಾವಹಾರಿಕ ಜೀವನದಲ್ಲಿ ಪಾಲಿಸಬೇಕು. ನಿತ್ಯ ಪ್ರಾರ್ಥನೆಯೊಂದಿಗೆ ಈ ಏಕಾದಶವ್ರತಗಳ ಹೆಸರನ್ನೊಳಗೊಂಡ ಒಂದು ಶ್ಲೋಕವನ್ನು ಹೇಳುವುದು ರೂಢಿಯಾಗಿತ್ತು.



ಸೇವಾಗ್ರಾಮದ ಆಶ್ರಮ

ಆಶ್ರಮದ ನಿತ್ಯಜೀವನದಲ್ಲಿ ಬೆಳಗ್ಗೆ 4 1/2 ಗಂಟೆಗೆ ಮತ್ತು ಸಂಜೆ 5 ಗಂಟೆಗೆ ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ಎಲ್ಲರೂ ಭಾಗವಹಿಸಬೇಕು. ಈ ಪ್ರಾರ್ಥನೆಯಲ್ಲಿ ಕೆಲವು ಉಪನಿಷತ್ತಿನ ಮಂತ್ರಗಳು. ಸ್ತೋತ್ರಗಳು. ಭಗವದ್ಗೀತೆಯ ಶ್ಲೋಕಗಳು. ತುಲಸೀದಾಸ ರಾಮಾಯಣ, ಇವೇ ಅಲ್ಲದೆ ಅನ್ಯ ಧರ್ಮಾವಲಂಬಿಗಳಿದ್ದಾಗ ಅವರ ಧರ್ಮಗಳಿಂದ ಆಯ್ದ ಭಾಗಗಳೂ ಸಾಮೂಹಿಕ ಭಜನೆ, ರಾಮನಾಮ– ಇವು ರೂಢಿಯಲ್ಲಿದ್ದವು. ಮಸಾಲೆ ಪದಾರ್ಥಗಳನ್ನು ದೂರಮಾಡಿ ಭೋಜನಕ್ಕೆ ಕೇವಲ ಸಾತ್ತ್ವಿಕ ಆಹಾರ ಬಳಸಲಾಗುತ್ತಿತ್ತು. ಸಂಜೆಯ ಭೋಜನ ಸೂರ್ಯಾಸ್ತಮದೊಳಗಾಗಿ ಮುಗಿಯಬೇಕು ಮತ್ತು ರಾತ್ರಿ 9 ಗಂಟೆಗೆ ಎಲ್ಲರೂ ವಿಶ್ರಮಿಸಬೇಕು– ಎಂಬುದು ಒಂದು ಮುಖ್ಯ ಕಟ್ಟಳೆ. ಎಲ್ಲ ಆಶ್ರಮವಾಸಿಗಳೂ ಸಫಾಯಿ– ಝಾಡಮಾಲಿಯ ಮತ್ತು ಭಂಗಿಯ– ಕೆಲಸಗಳನ್ನು ಮಾಡಲು ಮೊದಲು ಶಿಕ್ಷಣ ಪಡೆಯುತ್ತಿದ್ದರು. ಎಲ್ಲರೂ ಒಂದಲ್ಲ ಒಂದು ಕಾಯಕವನ್ನು ಕೈಗೊಳ್ಳಬೇಕಾಗಿತ್ತು (ಅವುಗಳಲ್ಲಿ ರಾಟೆಯಿಂದ ನೂಲುವುದು ಅನಿವಾರ್ಯ) ಕೃಷಿ, ತೋಟಗಾರಿಕೆ, ಬಡಗಿ ಕೆಲಸ, ನೇಯ್ಗೆ, ಗೋಪಾಲನೆ ಇತ್ಯಾದಿ ಆಶ್ರಮ ವಾಸಿಗಳಲ್ಲಿ ಉಚ್ಚ ನೀಚವೆಂಬ ಭಾವನೆಯನ್ನು ತೊಡೆದು ಹಾಕಲಾಗಿತ್ತು.

ಸತ್ಯಾಗ್ರಹ ಆಶ್ರಮದ ಆರಂಭದ ದಿನಗಳಲ್ಲಿಯೇ ಹರಿಜನ ಕುಟುಂಬ ಒಂದನ್ನು ಆಶ್ರಮಕ್ಕೆ ಸೇರಿಸಿ ಕೊಂಡದ್ದರಿಂದ ದಾನಿಗಳು ತಮ್ಮ ಸಹಾಯವನ್ನು ನಿಲ್ಲಿಸಿದರು. ಆಶ್ರಮ ಉಳಿಯುವುದೇ ಒಂದು ಸಮಸ್ಯೆಯಾಯಿತು. ಅಹಮದಾಬಾದಿನ ಪ್ರಸಿದ್ಧ ಗಿರಣಿ ಮಾಲೀಕರಾದ ಅಂಬಾಲಾಲ್ ಸಾರಾಭಾಯಿ ಅವರು ಅಪ್ರಾರ್ಥಿತವಾಗಿ ಆಶ್ರಮಕ್ಕೆ ಮಾಡಿದ 1300 ರೂಪಾಯಿಗಳ ಉದಾರ ದಾನದಿಂದ ಆಶ್ರಮದ ಕೆಲಸ ಕಾರ್ಯಗಳು ಮುಂದೆ ಸಾಗಿದವು.

1930 ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಆಶ್ರಮದ ಚಟುವಟಿಕೆಗಳೂ ಅಲ್ಲಿದ್ದವರ ಸಂಖ್ಯೆಯೂ ಹಿಂದೆ ಎಂದೂ ಇಲ್ಲದ ಪ್ರಮಾಣದಲ್ಲಿದ್ದವು. ತರಪೇತನ್ನು ಪಡೆದ 87 ಮಂದಿ ಸತ್ಯಾಗ್ರಹಿಗಳೊಡನೆ ಭಜನೆಯೊಂದಿಗೆ ಗಾಂಧಿಯವರು ಸುಮಾರು 386 ಕಿಮೀ ದಕ್ಷಿಣದಲ್ಲಿ ಸಮುದ್ರತೀರದಲ್ಲಿರುವ ದಂಡಿ ಎಂಬ ಗ್ರಾಮಕ್ಕೆ ಕಾಲು ನಡಿಗೆಯಿಂದ ಹೋಗಲು ಆಶ್ರಮದಿಂದ ಹೊರಬಿದ್ದರು. ಸ್ವರಾಜ್ಯಪ್ರಾಪ್ತಿಯಾಗದೆ ಆಶ್ರಮಕ್ಕೆ ಹಿಂತಿರುಗುವುದಿಲ್ಲವೆಂದು ಪ್ರತಿಜ್ಞೆ ತೊಟ್ಟರು. ಹೀಗವರು ದೂರವಾದ್ದರಿಂದ ಸಾಬರಮತಿ ಆಶ್ರಮದ ವರ್ಚಸ್ಸು ಕಳೆಗುಂದಿತು.

**ಸೇವಾಗ್ರಾಮ:** ವರ್ಧಾ ನಗರಕ್ಕೆ ಸುಮಾರು ಎಂಟು ಕಿಮೀ ದೂರದಲ್ಲಿ ಶೇಗಾಂವ್ ಎಂಬ ಹಳ್ಳಿಯ ಬಳಿಯಲ್ಲಿ ಗಾಂಧಿಯವರ ಪ್ರಿಯ ಶಿಷ್ಯರಾದ ಸೇಠ್ ಜಮನಾಲಾಲ್ ಬಜಾಜ್ ಅವರ ಜಮೀನಿನಲ್ಲಿ ಹಾಕಿದ ಒಂದು ಗುಡಿಸಲಿನಲ್ಲಿ 1936ರಲ್ಲಿ ಗಾಂಧಿಯವರು ನೆಲೆಸಿದರು. ಅನಂತರ ಇದನ್ನು ಸೇವಾಗ್ರಾಮವೆಂದು ಕರೆಯಲಾಯಿತು. ಸಕ್ರಿಯ ರಾಜಕೀಯದಿಂದ ಈ ವೇಳೆಗೆ ಗಾಂಧಿಯವರು ನಿವೃತ್ತರಾಗಿ ಹರಿಜನೋದ್ಧಾರ, ಗ್ರಾಮೋದ್ಯೋಗ, ನೂತನ ಶಿಕ್ಷಣ, ಗೋಸೇವಾ ಮುಂತಾದ ಕಾರ್ಯಗಳಲ್ಲಿ ಮಗ್ನರಾಗಿದ್ದರು.

ಅನಂತರ ಇತರ ಕಾರ್ಯಕರ್ತರೂ ಅಲ್ಲಿಗೆ ತರಬೇತಿಗೆ ಬಂದ ವಿದ್ಯಾರ್ಥಿಗಳೂ ಸಾಬರಮತಿ ಆಶ್ರಮದಂತೆ ಅಲ್ಲದಿದ್ದರೂ ಸರಳವೂ ನಿಯಮಿತವೂ ಸಾಮೂಹಿಕವೂ ಆದ ಜೀವನವನ್ನು ಇಲ್ಲಿ ನಡೆಸಿದರು.

ಸೇವಾಗ್ರಾಮದಲ್ಲಿ ಗಾಂಧಿಯವರು ವಾಸವಾಗಿದ್ದ ಗುಡಿಸಲು ಈಗ ಅವರ ಸ್ಮಾರಕವಾಗಿ ಕಾಪಾಡಲ್ಪಟ್ಟಿದ್ದು ಒಂದು ಯಾತ್ರಾಸ್ಥಳವಾಗಿ ಪರಿಣಮಿಸಿದೆ.

ಹೀಗೆ ಗಾಂಧಿಯವರು ಸ್ಥಾಪಿಸಿದ ಆಶ್ರಮಗಳು ಆತ್ಮೋನ್ನತಿಗೂ ಸಮಾಜ ಸೇವೆಗೂ ಕೇಂದ್ರಗಳಾದುವು. ಆಶ್ರಮವಾಸಿಗಳಿಗೆ ಈ ಹೊಸ ಬಗೆಯ ತಪೋ ಜೀವನವನ್ನು ನೇಮಿಸಿ ಮಹಾತ್ಮಾಗಾಂಧಿಯವರು ವ್ಯಕ್ತಿ ಜೀವನವನ್ನು ಚೊಕ್ಕಟ ಮಾಡುವುದು ಹೇಗೆಂಬುದನ್ನು ಕಲಿಸಿದರು.

ಗಾಂಧಿಯವರ ಸ್ಫೂರ್ತಿಯಿಂದ ಅವರು ಸ್ಥಾಪಿಸಿದ ಆಶ್ರಮಗಳ ಮಾದರಿಯಲ್ಲಿಯೇ ಅನೇಕ ಆಶ್ರಮಗಳು ಸ್ಥಾಪಿತವಾದುವು. ಇವು ನಿಷ್ಠಾವಂತ ಸಮಾಜ ಸೇವಕರನ್ನು ಸಿದ್ಧಮಾಡಿವೆ ಮತ್ತು ಮಾಡುತ್ತಲಿವೆ. (ಎಸ್.ಆರ್.ಕೆ.)

**ಗಾಂಫ್ರಿನ :** ಅಮರ್ಯಾಂತೇಸೀ ಕುಟುಂಬಕ್ಕೆ ಸೇರಿದ ಒಂದು ಅಲಂಕಾರ ಸಸ್ಯ. ಅನೇಕ ಪ್ರಭೇಧಗಳನ್ನು ಒಳಗೊಂಡಿದೆ. ಇವುಗಳಲ್ಲೆಲ್ಲ ಉದ್ಯಾನಗಾರಿಕೆ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು ಗ್ಲೋಬೋಸ ಎಂಬುದು. ಇದಕ್ಕೆ ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಗ್ಲೋಬ್ ಅಮರ್ಯಾಂತ್ ಮತ್ತು ಬ್ಯಾಚಲರ್ಸ್ ಬಟನ್ ಎಂಬ ಹೆಸರುಗಳಿವೆ. ನೆಲದ ಮೇಲೆಯೆ ಹಬ್ಬಿ ಇಲ್ಲವೆ ನೇರವಾಗಿ 30–45 ಸೆ.ಮೀ ಎತ್ತರಕ್ಕೆ ಬೆಳೆಯುವ ಏಕವಾರ್ಷಿಕ ಮೂಲಿಕೆ ಸಸ್ಯ ಇದು. ಎಲೆಗಳು ಉದ್ದುದ್ದವಾಗಿ ಇಲ್ಲವೆ ಅಂಡಾಕಾರವಾಗಿವೆ. ಒಂದು 2.5 ಸೆಂಮೀ ವ್ಯಾಸದ ವರ್ಣರಂಜಿತವಾದ ಹೂಗೊಂಚಲುಗಳಿಂದಾಗಿ ಈ ಗಿಡ ಬಲು ಪ್ರಸಿದ್ಧವಾಗಿದೆ. ಗೊಂಚಲುಗಳು ಗುಂಡಗೆ ಕೋಟಿನ ಗುಂಡಿಯಂತೆ ಕಾಣುವುದರಿಂದ ಇದಕ್ಕೆ ಬ್ಯಾಚಲರ್ಸ್ ಬಟನ್ ಎಂಬ ಹೆಸರು ಬಂದಿರಬೇಕು. ಹೂಗಳಿಗೆ ಬಣ್ಣವಿಲ್ಲದಿದ್ದರೂ ಅವನ್ನು ಆವರಿಸುವ ಬ್ರ್ಯಾಕ್ಟ್‌ಗಳಿಗೆ ನೇರಳೆ, ಊದಾ, ಕಡುಗೆಂಪು, ಬಿಳಿ, ಮುಂತಾದ ಬಣ್ಣಗಳಿರುವುದರಿಂದ ಬಲು ಆಕರ್ಷಕವಾಗಿ ಕಾಣುತ್ತವೆ.

ಈ ಸಸ್ಯವನ್ನು ಮಡಿಗಳಲ್ಲಾಗಲಿ, ಕುಂಡಗಳಲ್ಲಾಗಲಿ ಬೆಳೆಸಬಹುದು. ಬೇಕೆಂದ ಸ್ಥಳಗಳಲ್ಲಿ ಬೀಜಗಳನ್ನು ಬಿತ್ತಿ ಬೆಳೆಸಬಹುದು ಇಲ್ಲವೆ ಮೊದಲು ಒಟ್ಲುಪಾತಿಯಲ್ಲಿ ಬೀಜಗಳನ್ನು ಬಿತ್ತಿಸಸಿಗಳನ್ನು ಬೆಳೆಸಿಕೊಂಡು ಅನಂತರ ಅಪೇಕ್ಷಿತ ಸ್ಥಳಗಳಿಗೆ ವರ್ಗಾಯಿಸಬಹುದು. ಮಡಿಗಳಲ್ಲಿ ಬೆಳೆಸುವಾಗ ಸಸಿಯಿಂದ ಸಸಿಗೆ 30–40 ಸೆ.ಮೀ ಅಂತರವಿರುವಂತೆ ನೋಡಿಕೊಳ್ಳಬೇಕು. ಇದರಿಂದ ಗಿಡಗಳು ಅಗಲವಾಗಿ ಹರಡಿಕೊಂಡು ಬೆಳೆಯಲು ಅನುಕೂಲ. ಬಿತ್ತಿದ 3 ತಿಂಗಳ ಅನಂತರ ಗಿಡ ಹೂ ಬಿಡಲು ಪ್ರಾರಂಭಿಸುತ್ತದೆ. ಹೂಗಳು ಅರಳಿದ ಮೇಲೆ $1^1/_2$–2 ತಿಂಗಳವರೆಗೂ ಬಾಡದೆ ಗಿಡದಲ್ಲೇ ಉಳಿಯುವುದರಿಂದ ಗಾಂಫ್ರಿನ ಗಿಡ ಬಲು ಜನಪ್ರಿಯವಾಗಿದೆ. (ಕೆ.)


**ಗಾವಂಕಾರ, ಎಸ್.ಡಿ. :** 1925–96. ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಶಿಕ್ಷಣ ತಜ್ಞ, ರಾಜಕಾರಣಿ. ಸಖಾರಾಮ ದತ್ತಾತ್ರೇಯ ಗಾಂವಕರ ಇವರ ಪೂರ್ತಿ ಹೆಸರು. ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಹನಕೋನದಲ್ಲಿ 1925 ಸೆಪ್ಟಂಬರ್ 2ರಂದು ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಕಾರವಾರದಲ್ಲಿ ಪಡೆದರು. ಅನಂತರ ಧಾರವಾಡದ ಕರ್ನಾಟಕ ಕಾಲೇಜು, ಬೆಳಗಾಂವಿಯ ಆರ್.ಎಲ್.ಕಾನೂನು ಕಾಲೇಜಿನಲ್ಲಿ ಶಿಕ್ಷಣಪಡೆದರು. ಕಾರವಾರದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ (1952) ಅಪಾರ ಯಶಸ್ಸು ಗಳಿಸಿ ಜನಪ್ರಿಯರಾದರು.

ಕಾರವಾರ ನಗರಸಭೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 26ನೆಯ ವಯಸ್ಸಿನಲ್ಲೇ ಇವರು ತಾವೊಬ್ಬ ದಕ್ಷ ಆಡಳಿತಗಾರರೆಂಬುದನ್ನು ತೋರಿಸಿದರು. ರಾಜಕೀಯ, ಸಾರ್ವಜನಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೆಲಸಗಳಲ್ಲಿ ಉತ್ಸಾಹದಿಂದ ದುಡಿಯುವುದು ಇವರ ಜಾಯ ಮಾನವಾಗಿತ್ತು. ಕೆಲಕಾಲ ಇವರು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಮಿತಿಯ ಕಮಿಶನರ್ ಆಗಿ ದುಡಿದರು (1960–72). ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ, ಬೋಟ ಬಿಲ್ಡಿಂಗ್ ಯಾರ್ಡ್ ಸಮಿತಿಯ ಸದಸ್ಯ, ಜಿಲ್ಲಾ ಸಹಕಾರಿ ಬ್ಯಾಂಕಿನ ನಿರ್ದೇಶಕ,ಕೊಂಕಣ ಮರಾಠಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಕೆನರಾ ಬ್ಯಾಂಕ್ ನಿರ್ದೇಶಕ, ಜನತಾ ಕೋ ಆಪರೇಟೀವ್ ಸ್ಟೋರ್ಸ್ ಸಂಸ್ಥಾಪಕ, ಬಾಡದ ಶಿವಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ–ಹೀಗೆ ಬಹುಮುಖವಾಗಿ ಸೇವೆ ಸಲ್ಲಿಸಿದರು. ಮಹಾರಾಷ್ಟ್ರದ ಕೊಲಾಬಾದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಇವರನ್ನು ನೇಮಿಸಲಾಯಿತು (1961). ಕೆಲವು ತಿಂಗಳುಗಳಲ್ಲಿಯೆ ರಾಜಕೀಯ, ರಂಗಪ್ರವೇಶಿಸಿ ರಾಜೀನಾಮೆ ನೀಡಿದರು.

ಇವರು ಕಾಂಗ್ರೆಸ್ ಪಕ್ಷದಿಂದ ಕರ್ನಾಟಕ ವಿಧಾನಸಭೆಗೆ ಪ್ರಥಮ ಬಾರಿಗೆ ಆಯ್ಕೆಯಾದರು(1957). ವಿಧಾನಸಭೆಯಲ್ಲಿ ಕಾರವಾರ ಕ್ಷೇತ್ರವನ್ನು ಪ್ರತಿನಿಧಿಸಿದ್ದರು (1962–74). ವಿಧಾನ ಪರಿಷತ್ತಿನ ಉಪಸಭಾಪತಿಗಳಾಗಿದ್ದ (1966–68)ಇವರು, ಅನಂತರ ವಿಧಾನ ಪರಿಷತ್ತಿನ ಸಭಾಪತಿಗಳಾಗಿಯೂ ಸೇವೆ ಸಲ್ಲಿಸಿದರು (1972–74).ಸಭಾಪತಿ ಹುದ್ದೆಯನ್ನು ಅತ್ಯಂತ ಸಮರ್ಥ ವಾಗಿ ನಿರ್ವಹಿಸಿದರು. ಮೂರನೆಯ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಂಡು (1996) ನಿಧನ ಹೊಂದುವವರೆಗೂ ಕಾರ್ಯನಿರ್ವಹಿಸಿದರು.

ಆಫ್ರಿಕದ ಮಲಾವಿಯಲ್ಲಿ ನಡೆದ ಜಾಗತಿಕ ಸಂಸದೀಯ ಸಮ್ಮೇಳನದಲ್ಲಿ ನಿಯೋಗದ ಸದಸ್ಯರಾಗಿ ಭಾಗವಹಿಸಿದರು (1972). ರೋಟರಿ ಸಂಸ್ಥೆಯ ಸದಸ್ಯರಾಗಿ ಯುರೋಪ್, ಅಮೆರಿಕ ಮೊದಲಾದ ರಾಷ್ಟ್ರಗಳಲ್ಲಿ ಪ್ರವಾಸ ಕೈಗೊಂಡರು. ಇವರು ಶ್ರೇಷ್ಠ ಸಂಸದೀಯ ಪಟುವೆಂದು ಹೆಸರು ಗಳಿಸಿದ್ದರು. ತಮ್ಮ ಸ್ವಂತ ಪ್ರತಿಭೆಯಿಂದ ಉನ್ನತ ಸ್ಥಾನ ಗಳಿಸಿದ ಇವರು 1996 ಮೇ 21ರಂದು ನಿಧನಹೊಂದಿದರು. ಕುಸುಮಾ ಇವರ ಧರ್ಮಪತ್ನಿ. ಇವರಿಗೆ ಎರಡು ಗಂಡು ಎರಡು ಹೆಣ್ಣು ಮಕ್ಕಳು. (ಆರ್.ಜಿ.ಆರ್.)

**ಗಾಂವಕಾರ, ಸ. ಪ. :** 1887–1972. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕನ್ನಡಿಗ. ಶಿಕ್ಷಣ ತಜ್ಞ, ದಕ್ಷ ಆಡಳಿತಗಾರ. ಸಮಾಜ ಸುಧಾರಕ ಮತ್ತು ಕವಿ. ಸಣ್ಣಪ್ಪ ಪರಮೇಶ್ವರಪ್ಪ ಗಾಂವಕಾರರು ಉತ್ತರಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನ ತೊರ್ಕೆ ಗ್ರಾಮದಲ್ಲಿ 1887 ಜನವರಿ 11 ರಂದು ಜನಿಸಿದರು. ಪರಮೇಶ್ವರ ಗಾಂವಕಾರರ ಏಳು ಗಂಡುಮಕ್ಕಳ ಪೈಕಿ ಇವರು ನಾಲ್ಕನೆಯವರು. ಪ್ರಾಥಮಿಕ ಶಿಕ್ಷಣದ ಅನಂತರ



ಉಪಾಧ್ಯಾಯ ವೃತ್ತಿಗೆ ತರಬೇತು ಪಡೆದರು. ಅನಂತರ ತದಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾದರು. ಈ ವೃತ್ತಿಯಲ್ಲಿ ನಿರತರಾಗಿದ್ದಾಗಲೆ ಅವರು ಖಾಸಗಿಯಾಗಿ ವ್ಯಾಸಂಗ ಮಾಡಿ ಧಾರವಾಡದಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದರು. ಧಾರವಾಡ, ಸಾಂಗ್ಲಿಗಳಲ್ಲಿ ಶಿಕ್ಷಣ ಮುಂದುವರಿಸಿ ನಲ್ವತ್ತನೆಯ ವರ್ಷಕ್ಕೆ ಬಿ.ಎ. ಪದವೀಧರರಾದರು. ಅನಂತರ ಅವರಿಗೆ ಹುಬ್ಬಳ್ಳಿಯ ಸ್ಕೂಲ್ ಬೋರ್ಡಿನ ಆಡಳಿತ ಅಧಿಕಾರಿಯ ಹುದ್ದೆ ದೊರಕಿತು. 12 ವರ್ಷ ಈ ಹುದ್ದೆ ನಿರ್ವಹಿಸಿ ನಿವೃತ್ತರಾದರು. ಅನಂತರ ಗಾಂಧಿಯವರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆವಾಸವನ್ನನು ಭವಿಸಬೇಕಾಯಿತು. ಬಂಧನದಿಂದ ಹೊರಬಂದ ಅನಂತರ ಮುಂಬಯಿ ಪ್ರಾಂತ್ಯದಲ್ಲಿ ಖೇರ್ ಮುಖ್ಯಮಂತ್ರಿತ್ವದಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಸರ್ಕಾರದಲ್ಲಿ ಇವರು ಉಪಮಂತ್ರಿಗಳಾದರು. ಸ್ವಾತಂತ್ರ್ಯಾನಂತರವೂ ರಾಜಕೀಯದಲ್ಲಿ ಆರು ವರ್ಷ ದುಡಿದರು. ಅನಂತರ ಇವರ ಮನಸ್ಸು ಅಸ್ಪೃಶ್ಯತಾ ನಿವಾರಣೆ, ದೀನದಲಿತೋದ್ಧಾರ, ಮಹಿಳಾ ಶಿಕ್ಷಣಗಳ ಕಡೆಗೆ ಹರಿಯಿತು. ಜಿಲ್ಲೆಯ ಹಿಂದುಳಿದ ಜನಾಂಗವಾದ ಹಾಲಕ್ಕಿ ಒಕ್ಕಲಿಗರ ಏಳ್ಗೆಗಾಗಿ ಬಹಳ ದುಡಿದರು. ವಾಚನಾಲಯ, ವಿದ್ಯಾರ್ಥಿ ವಸತಿ ಸೌಕರ್ಯ, ರೈತರ ಸಂಘಟನೆ, ಪ್ರೌಢಶಾಲಾ ಸ್ಥಾಪನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಅವರು ಸೇವೆ ಸಲ್ಲಿಸಿದರು. ಅಂಕೋಲೆಯಲ್ಲಿ ಕಾಲೇಜು ಸ್ಥಾಪನೆಯಾಗಲು ಇವರೂ ಕಾರಣರು. ಗಾಂಧಿ ತತ್ತ್ವ ಮತ್ತು ಜೀವನವಿಧಾನಗಳ ಶಿಕ್ಷಣ ಪ್ರಚಾರಗಳಿಗಾಗಿ ಇವರು ಗಾಂಧಿ ನಿವಾಸವನ್ನು ಸ್ಥಾಪಿಸಿದರು. ಗಾಂವಕಾರರಿಗೆ ಅರವಿಂದರ ತತ್ತ್ವದಲ್ಲೂ ವಿಶೇಷವಾದ ಆಸಕ್ತಿ ಇತ್ತು. ಮತಾಂತರ ಹೊಂದಿದ ಹಿಂದೂಗಳನ್ನು ಪುನಃ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಬೇಕೆಂಬ ಆರ್ಯಸಮಾಜದ ವಿಚಾರದಲ್ಲಿ ಇವರಿಗೆ ಶ್ರದ್ಧೆ ಇತ್ತು. ಕೆಲಕಾಲ ಆರ್ಯಸಮಾಜದ ಕಾರ್ಯಕರ್ತರಾಗಿ ಆ ಕೆಲಸ ಮಾಡಿದ್ದೂ ಉಂಟು.

ಇವರು ಕವಿಗಳೂ ಹೌದು. ಇವರ ಮೊದಲನೆಯ ಕವನಸಂಕಲನ ಮುಗಿಲು. ರವೀಂದ್ರನಾಥ ಠಾಕೂರರ ಗೀತಾಂಜಲಿಯನ್ನು ಸರಳ ಶೈಲಿಯಲ್ಲಿ ಕನ್ನಡಕ್ಕೆ ಭಾಷಾಂತರಿಸಿ ದ್ದಾರೆ. ಪ್ರಕೃತಿ–ಪ್ರೀತಿ, ಪ್ರೇರಣೆ–ಶೋಧನೆ ಇವು ಇವರ ಇನ್ನೆರಡು ಕವನ ಸಂಕಲನಗಳು. (ಎನ್.ಆರ್.ಜಿ.)


**ಗಾಗಮೇಲ ಕದನ :** ಮ್ಯಾಸಿಡೋನಿಯದ ಅಲೆಕ್ಸಾಂಡರ್ ಮಹಾಶಯನಿಗೂ ಪರ್ಷಿಯದ 3ನೆಯ ಡೇರಿಯಸನಿಗೂ ಪ್ರ.ಶ.ಪೂ. 331 ರಲ್ಲಿ ನಡೆದ ನಿರ್ಣಾಯಕ ಕದನ. ಇದರಲ್ಲಿ ಡೇರಿಯಸ್ ಸೋತುಹೋದ. ಅಲೆಕ್ಸಾಂಡರನ ಯುದ್ಧತಂತ್ರದಿಂದಾಗಿ ಈ ಕದನ ಪ್ರಸಿದ್ಧವಾಗಿದೆ. ಮುನ್ನಡೆದು ಬರುತ್ತಿದ್ದ ಅಲೆಕ್ಸಾಂಡರನನ್ನು ಎದುರಿಸಿ

ಯುದ್ಧ ಮಾಡುವ ಉದ್ದೇಶದಿಂದ ಪ್ರಾಚೀನ ನಿನೇವದ ಹತ್ತಿರ, (ಈಗಿನ ಇರಾಕ್) ಗಾಗಮೇಲ ಬಯಲಿನಲ್ಲಿ ಡೇರಿಯಸ್, ತನ್ನ ದೊಡ್ಡ ಸೈನ್ಯದೊಡನೆ ಬಿಡಾರ ಹೂಡಿದ್ದ. ಡೇರಿಯಸ್ ಮಧ್ಯಸ್ಥಳವನ್ನಾಕ್ರಮಿಸಿಕೊಂಡು, ಪರ್ಷಿಯನ್ನರಿಂದ ಸುತ್ತಿವರಿಯಲ್ಪಟ್ಟಿದ್ದ. ಡೇರಿಯಸನ ಸೈನ್ಯ ಅಲೆಕ್ಸಾಂಡರನ ಸೈನ್ಯಕ್ಕಿಂತ ಬಹಳ ಹೆಚ್ಚಾಗಿತ್ತು.

ಅಲೆಕ್ಸಾಂಡರ್ ತನ್ನ ಸೈನ್ಯಕ್ಕೆ 4 ದಿನಗಳ ಬಿಡುವು ಕೊಟ್ಟು, ರಾತ್ರಿಯ ವೇಳೆ ಮುಂದುವರಿದು, ಬಯಲು ಪ್ರದೇಶಕ್ಕೆ ಎದುರಾಗಿ ಒಂದು ಗುಡ್ಡದ ಮೇಲೆ ನಿಂತ. ಒಂದುದಿನ ಅಲ್ಲಿಯೇ ಇದ್ದು ನಿಧಾನವಾಗಿ ಯುದ್ಧದ ಸ್ಥಳವನ್ನು ಪರಿಶೀಲಿಸಿದ. ರಾತ್ರಿಯ ವೇಳೆ ಯುದ್ಧ ಆರಂಭಿಸಬೇಕೆಂದು ಅಲೆಕ್ಸಾಂಡರನಿಗೆ ಸಲಹೆ ಮಾಡಿದಾಗ, ನಾನು ವಿಜಯವನ್ನು ಕದಿಯುವುದಿಲ್ಲ ಎಂದು ಆತ ಹೇಳಿದ. ರಾತ್ರಿಯ ವೇಳೆ ಅನುಕೂಲ ಸಾಧಿಸುವ ಬದಲು, ಹಗಲು ಹೊತ್ತು ಮೈದಾನದಲ್ಲಿ ಪರ್ಷಿಯನ್ನರ ಮೇಲೆ ವಿಜಯ ಪಡೆಯುವುದರಿಂದ ಇಡೀ ಏಷ್ಯದಲ್ಲಿ ತನ್ನ ಕೀರ್ತಿ ಸ್ಥಾಪನೆಗೆ ಅನುಕೂಲವಾಗುವುದೆಂದು ಆತ ಅರಿತಿದ್ದ.

ಡೇರಿಯಸನ ಸೈನ್ಯ ದೊಡ್ಡದಾಗಿದ್ದದ್ದರಿಂದ, ಅಲೆಕ್ಸಾಂಡರನ ಸೈನ್ಯ ಸುತ್ತುವರಿಯಲ್ಪಡುವ ಅಪಾಯವಿತ್ತು. ಅಲೆಕ್ಸಾಂಡರ್ ತನ್ನ ಪಡೆಯ ಹಿಂಬದಿಯಲ್ಲಿ ಅಶ್ವಾರೋಹಿಗಳ ಎರಡನೆಯ ಸಾಲೊಂದನ್ನು ನಿರ್ಮಿಸಿದ. ಡೇರಿಯಸ್ ಆಕ್ರಮಣ ಆರಂಭಿಸಿದೊಡನೆಯೇ ಅಲೆಕ್ಸಾಂಡರ್ ಬಲಗಡೆಯಿಂದ ಆಕ್ರಮಣವನ್ನಾರಂಭಿಸಿದ. ಸಾಮಂತರೆಲ್ಲ ಭಯಪಟ್ಟರು. ಡೇರಿಯಸನೇ ಮೊದಲು ರಣರಂಗದಿಂದ ಪಲಾಯನ ಮಾಡಿದ. ವಿಜಯ ಅಲೆಕ್ಸಾಂಡರನದಾಯಿತು. ಈ ವಿಜಯದಿಂದ ಅಲೆಕ್ಸಾಂಡರ್ ದಕ್ಷಿಣ ಏಷ್ಯದ ಮೇಲೆ ಹಿಡಿತ ಸಾಧಿಸಿದನು. (ವಿ.ಕೆ.)

**ಗಾಗಲ್, ನಿಕಲೈ ವಸೀಲ್ಯವಿಚ್ :** 1809–52. ಹೆಸರಾಂತ ರಷ್ಯನ್ ಸಾಹಿತಿ. 1809ರಲ್ಲಿ ಉಕ್ರೇನಿನಲ್ಲಿ ಜನಿಸಿದ. ನಿರುದ್ಯೋಗಿಯಾಗಿ ಸೇಂಟ್ ಪೀಟರ್ಸ್ ಬರ್ಗಿಗೆ ಬಂದು 1826ರಲ್ಲಿ ಅಲ್ಲಿ ಸಣ್ಣಪುಟ್ಟ ಸರ್ಕಾರಿ ಕೆಲಸದಲ್ಲಿದ್ದು ಅನಂತರ ಅನೇಕ ವರ್ಷಗಳ ಕಾಲ ನಟನಾಗಿ, ಕವಿಯಾಗಿ ತೊಳಲಾಡಿದ. ಕೊನೆಯಲ್ಲಿ ಸಣ್ಣಕತೆಗಾರನೆಂದು ಅಪಾರ ಖ್ಯಾತಿ ಪಡೆದ. ಈವ್ನಿಂಗ್ ಆನ್ ಎ ಫಾರಮ್ ನಿಯರ್ ದಿಕಂಕ (ವಚೇದನ ಕುತೋರ್ ಬ್ಲಿಜ್ ದಿಕಂಕ) (ದಿಕಂಕ ಬಳಿಯ ಕೃಷಿಕ್ಷೇತ್ರಗಳಲ್ಲಿನ ಸಂಜೆಗಳು) ಎನ್ನುವ ಇವನ ಮೊದಲ ಕಥಾಸಂಕಲನ ಈತನಿಗೆ ಹೆಸರು ತಂದ ಗ್ರಂಥ. ಈ ಕಥೆಗಳಲ್ಲಿ ಉಕ್ರೇನ್ ಪ್ರಾಂತ್ಯದ ಸಾಮಾನ್ಯ ಜನರ ನಡೆನುಡಿ ಹಾಗೂ ಜಾನಪದವನ್ನು ಕುರಿತ ವಾಸ್ತವ ಚಿತ್ರಗಳಿವೆ. ಗಾಗಲ್ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕನಾಗಿ ಕೆಲವು ಕಾಲ ಕೆಲಸಮಾಡಿ, ವೃತ್ತಿಯಲ್ಲಿ ಏನೊಂದು ಯಶಸ್ಸನ್ನೂ ಗಳಿಸಲಾರದೆ 1834ರಲ್ಲಿ ಕೆಲಸಕ್ಕೆ ಶರಣು ಹೊಡೆದು, ಸಾಹಿತಿಯಾಗಿಯೇ ಬದುಕಬೇಕೆಂಬ ನಿರ್ಧಾರಕ್ಕೆ ಬಂದ. ಡೈರಿ ಆಫ್ ಎ ಮ್ಯಾಡ್ ಮ್ಯಾನ್ (1835) ಇವನು 1836ರಿಂದ 1846ರವರೆಗೆ ಇಟಲಿಯಲ್ಲಿ ವಾಸಿಸುತ್ತಿದ್ದ. ಇವನು 1842ರಲ್ಲಿ ದಿ ಓವರ್ ಕೋಟ್ ಎಂಬ ಹಾಸ್ಯ ಭರಿತವಾದ ಕಾದಂಬರಿ ರಚಿಸಿದ. ಈತ ಬರೆದ ಅತಿಮುಖ್ಯ ಕೃತಿಗಳೆಂದರೆ ರೆವಿಝೋರ್ (ದಿ ಗವರ್ನಮೆಂಟ್ ಇನ್ಸ್‌ಪೆಕ್ಟರ್ 1836) ಎನ್ನುವ ವಿಡಂಬನಾತ್ಮಕ ನಾಟಕ ಮತ್ತು ಡೆಡ್ ಸೋಲ್ಸ್ 1842 (ಸತ್ತ ಆತ್ಮಗಳು) ಎಂಬ ಅಪೂರ್ಣ ಕಾದಂಬರಿ. ಇನ್‌ಸ್ಪೆಕ್ಟರ್ ನಾಟಕದಲ್ಲಿ ಮೂರ್ಖರಾದ, ಲಂಚಕೋರರಾದ, ಸಣ್ಣ ಪುಟ್ಟ ಸರ್ಕಾರಿ ಅಧಿಕಾರಿಗಳ ಅಧಿಕ ಪ್ರಸಂಗತನ, ಪೆದ್ದು ಪೆದ್ದಾದ ನಡೆವಳಿಕೆ – ಇವನ್ನು ಅತ್ಯಂತ ಹಾಸ್ಯಭರಿತ ಶೈಲಿಯಲ್ಲಿ ಗೇಲಿಮಾಡಿದ್ದಾನೆ. ಸತ್ತ ಆತ್ಮಗಳು ಎಂಬ ಕಾದಂಬರಿಯಲ್ಲಿ ರಷ್ಯದ ಜೀತಗಾರಿಕೆ ಪದ್ಧತಿಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ಇಡೀ ರಷ್ಯನ್ ಸಮಾಜವನ್ನು ಬಡಿದೆಬ್ಬಿಸಿದ ಈ ಕಾದಂಬರಿಯನ್ನು ಮುಂದುವರಿಸಿ ರಷ್ಯನ್ ಸಮಾಜವನ್ನೇ ಸಮಗ್ರವಾಗಿ ಚಿತ್ರಿಸುವ ಮಹಾಕಾದಂಬರಿಯನ್ನು ರಚಿಸ ಬೇಕೆಂದು ಗಾಗಲ್ ನಿಶ್ಚಯಿಸಿದ್ದ. ಆದರೆ ಅತಿಯಾಗಿ ನೀತಿಬೋಧೆ ಮಾಡುವ ಶೈಲಿಯಿಂದಾಗಿ



ಕಾದಂಬರಿಯ ರಚನೆ ತೀರಾ ನಿಧಾನವಾಯಿತು. ಇವನು ರೋಮ್ ನಲ್ಲಿ ಇದ್ದಾಗ ಮತಭ್ರಾಂತನಾದ ಪಾದ್ರಿಯ ಪ್ರಭಾವಕ್ಕೆ ಒಳಗಾಗಿ 1845 ರಲ್ಲಿ ಇದ್ದಕ್ಕಿದ್ದಂತೆ ಧಾರ್ಮಿಕ ವಿಷಯಗಳತ್ತ ಮನಸ್ಸು ಹರಿಯಿತಾಗಿ ಗಾಗಲ್ ಚಿತ್ತಕ್ಷೋಭೆಗೆ ಒಳಗಾದ. ಅಗ ತಾನು ಅಲ್ಲಿಯವರೆಗೆ ಬರೆದಿಟ್ಟಿದ್ದ ಸತ್ತ ಆತ್ಮಗಳು ಕಾದಂಬರಿಯ ಮುಂದಿನ ಭಾಗದ ಹಸ್ತಪ್ರತಿಯನ್ನು ಸುಟ್ಟುಹಾಕಿದ. ಇವನು 1852ರ ಫೆಬ್ರವರಿ 24ರಂದು ನಿಧನವಾದ. ಸೊಚಿನೆನಿಯಾ ಎನ್ನುವ ಗದ್ಯನಿರೂಪಣೆ ಮತ್ತು ಜ್ಹೆನಿಟ್‌ಬ (ವಿವಾಹ) ಎಂಬ ವಿನೋದ ಪ್ರಹಸನ ಇವನ ಇತರ ಕೃತಿಗಳು. ಪುಷ್ಕಿನ್, ಲೆರ್‌ಮೊಂಟಾವ್ ಮೊದಲಾದವರ ರೊಮ್ಯಾಂಟಿಕ್ ಯುಗದಿಂದ ಹಿಡಿದು – ತುರ್ಗೆನೈಫ್, ಟಾಲ್‌ಸ್ಟಾಯ್, ದಾಸ್ತೋವ್‌ಸ್ಕಿ ಮುಂತಾದ ವಾಸ್ತವತಾವಾದಿಗಳವರೆಗಿನ ಕಾಲಾವಧಿಯಲ್ಲಿ ಬಂದ ಗಾಗಲ್ ಅತ್ಯಂತ ಪ್ರಮುಖ ಸಾಹಿತಿ. ಇವನ ವಿಕಟ ವಾಸ್ತವಿಕ ದೃಷ್ಟಿ, ವಿಡಂಬನಯುತವಾದ ವರ್ಣರಂಜಿತ ಗದ್ಯಶೈಲಿ ಇವು ದಾಸ್ತೋವ್‌ಸ್ಕಿ, ಬೆಲಿ ಮುಂತಾದವರ ಮೇಲೆ ಗಾಢಪ್ರಭಾವ ಬೀರಿದುವು. ಗಾಗಲ್ ರಷ್ಯನ್ ಸಮಾಜದ ಹಳೆಯ ಹುರುಳಿಲ್ಲದ ಕಂದಾಚಾರ ಪದ್ಧತಿಗಳು ನಡೆವಳಿಕೆಗಳು, ನೀತಿ ನಿಯಮಗಳನ್ನು ಯಥಾವತ್ತಾಗಿ ಎತ್ತಿ ತೋರಿಸಿದ್ದಾನೆ. ಬದುಕಿನ ವ್ಯಗ್ರ ಸಮಸ್ಯೆಗಳನ್ನು ಸಾಹಿತಿ ಯಥಾರ್ಥವಾಗಿ ಚಿತ್ರಿಸಬೇಕೆಂದು ಹೊಸ ಪಂಥವನ್ನೇ (ರಿಯಲಿಸಂ) ಪ್ರಾರಂಭಿಸಿದವನು ಈತ. ತನ್ನ ಚಿತ್ತಚಾಂಚಲ್ಯ, ವಿಚಾರದ ಅಸಾಂಗತ್ಯ, ಮುಂತಾದ ದೋಷಗಳಿಂದಾಗಿ ಈತ ನಿಷ್ಠೆಯಿಲ್ಲದವನು, ಪ್ರಗತಿವಿರೋಧಿ ಎಂಬ ಆಕ್ಷೇಪಣೆಗಳಿಗೆ ಪಾತ್ರನಾಗಿದ್ದಾನೆ.

(ಎಚ್.ಕೆ.ಆರ್)

**ಗಾಗಾಭಟ್ಟ :** ಮೀಮಾಂಸಕ. ಭಾಟ್ಟಚಿಂತಾಮಣಿಯ ಕರ್ತೃ. ನಿಜನಾಮಧೇಯ ವಿಶ್ವೇಶ್ವರ, ತಂದೆ ದಿನಕರಭಟ್ಟ, ಪಿತಾಮಹ ರಾಮಕೃಷ್ಣ ಭಟ್ಟ, ಭಟ್ಟ ನಾರಾಯಣ ಈತನ ಮೂಲಪುರುಷನೆಂದೂ ಈತ ಸಂನ್ಯಾಸಾಶ್ರಮ ಸ್ವೀಕರಿಸಿದ್ದರೂ ಛತ್ರಪತಿ ಶಿವಾಜಿಯ ಪ್ರಾರ್ಥನೆ ಮೇರೆಗೆ ಅದನ್ನು ತ್ಯಜಿಸಿದನೆಂದೂ ಈತನ ಗ್ರಂಥದಿಂದ ತಿಳಿದುಬರುತ್ತದೆ. ಈತನ ಭಾಟ್ಟಚಿಂತಾಮಣಿ ಗ್ರಂಥ ಪೂರ್ವಮೀಮಾಂಸಾ ಸೂತ್ರದ ವ್ಯಾಖ್ಯಾನ ರೂಪವಾಗಿದ್ದು ಕೇವಲ ತರ್ಕಪಾದ ಮಾತ್ರ ಉಪಲಬ್ಧವಿದೆ. ವಿಚಾರಸರಣಿಯಲ್ಲಿ ಈತ ಕುಮಾರಿಲಭಟ್ಟನನ್ನು ಅನುಕರಿಸಿದ್ದಾನೆಂಬುದು ಗ್ರಂಥ ವಿಷಯದಿಂದ ಸ್ಪಷ್ಟವಾಗುತ್ತದೆ. ಜೈಮಿನೀಯ ಸೂತ್ರಗಳಿಗೆ ಕುಸುಮಾಂಜಲಿ ಎಂಬ ವೃತ್ತಿಗ್ರಂಥವನ್ನೂ ಶಿವಾಜಿಯನ್ನು ಕುರಿತಂತೆ ಶಿವಾರ್ಕೋದಯವೆಂಬ ಗ್ರಂಥವನ್ನೂ ಈತ ಬರೆದಿದ್ದಾನೆಂದು ಈತನ ಮಾತಿನಿಂದಲೇ ತಿಳಿದುಬರುತ್ತದೆ. (ಎನ್.ಎಸ್.ಆರ್.ಬಿ.)

**ಗಾಗಿ, ಯೂಜಿನ್ ಹೆನ್ರಿ ಪಾಲ್ :** 1848–1903. ಫ್ರಾನ್ಸಿನ ಪ್ರತಿಭಾವಂತ ವರ್ಣಚಿತ್ರಕಾರ. ಕಲೆಗಾಗಿ ಸರ್ವವನ್ನೂ ತ್ಯಾಗಮಾಡಿ, ನವ್ಯಕಲಾ ಶೈಲಿಯ ನಿರ್ಮಾಪಕರಲ್ಲಿ ಅಗ್ರಗಣ್ಯನೆಂದು ಹೆಸರಾದವ. ಪತ್ರಿಕೋದ್ಯಮಿಯೊಬ್ಬನ ಮಗನಾಗಿ ಪ್ಯಾರಿಸಿನಲ್ಲಿ ಹುಟ್ಟಿದ. ಹದಿನೇಳು ವರ್ಷದ ಬಾಲಕನಾಗಿರುವಾಗಲೇ ಸಮುದ್ರಜೀವನದಲ್ಲಿ ದುಮುಕಿ ಆರು ವರ್ಷಗಳ ಕಾಲ ವ್ಯಾಪಾರಿ ಹಡಗುಗಳೊಂದಿಗೆ ಯೋಧರೊಟ್ಟಿಗೂ ಪ್ರಪಂಚ ಪರ್ಯಟನ ಮಾಡಿದ. 1871 ರಲ್ಲಿ ಪ್ಯಾರಿಸಿಗೆ ಹಿಂದಿರುಗಿ ಒಂದು ದಲಾಲಿ ವ್ಯಾಪಾರಿಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡ 1873ರಲ್ಲಿ ಡೇನಿಷ್ ಮಹಿಳೆ ಮೆಟ್ಟೆಸೋಫಿ ಗ್ಯಾಡ್ ಎಂಬಾಕೆಯನ್ನು ಮದುವೆಯಾದ.



ಗಾಗಿ–ಸ್ವಚಿತ್ರಣ

ಗಾಗಿಯ ಚಿತ್ರಕಲಾ ಪ್ರವೃತ್ತಿ ಪ್ರಚೋದಿತವಾದದ್ದು ಆತನ ಪಾಲಕನಾಗಿದ್ದ ಗಸ್ತಾಫ್ ಅರೋಸ ನಿಂದಾಗಿ, ಅರೋಸನಲ್ಲಿದ್ದ ಕಾರೋ, ಡೆಲಕ್ವಾ, ಮಿಲೆಟ್ ಮೊದಲಾದ ಹೆಸರಾಂತ ಕಲಾವಿದರ, ಕೃತಿರತ್ನಗಳನ್ನು ಗಾಗಿ ನೋಡಿ ಮಾರುಹೋಗಿ ಹವ್ಯಾಸಕ್ಕಾಗಿ ತಾನೂ ಚಿತ್ರಕಲೆಗೆ ಕೈಹಾಕಿದ. ವಿರಾಮವೇಳೆಯಲ್ಲೆಲ್ಲ ಚಿತ್ರಗಳನ್ನು ಬಿಡಿಸುತ್ತ, ಹೊಸ ಹೊಸ ಶೈಲಿಗಳನ್ನು ಶೋಧಿಸತೊಡಗಿದ. ಪರಿಣಾಮವಾಗಿ ಈತನ ಕಲಾಪ್ರೌಢಿಮೆ ಹೆಚ್ಚಿತು. ಆ ಸಮಯದಲ್ಲಿ ನವ್ಯಕಲಾಶೈಲಿಗಳಲ್ಲಿ ಜನಪ್ರಿಯವಾಗಿದ್ದ ಪರಿಣಾಮ ವಿಧಾನದಲ್ಲಿ (ಇಂಪ್ರೆಶನಿಸಂ) ಆಸಕ್ತನಾದ. 1875–76 ರಲ್ಲಿ ಪ್ರಸಿದ್ಧ

ಚಿತ್ರಕಾರನಾದ ಪಿಸಾರೊನೊಟ್ಟಿಗೆ ಸೇರಿಕೊಂಡು ಕಲಾ ತಂತ್ರದಲ್ಲಿ, ಕಲಾಶೈಲಿಯಲ್ಲಿ ವಿಶೇಷ ಪರಿಣತಿಯನ್ನು ಪಡೆದ. ಅಲ್ಲದೆ ಮತ್ತೊಬ್ಬ ಹೆಸರಾಂತ ಕಲಾವಿದನಾದ ಸೇಜ್ಯಾನನೊಡನೆ ಕೆಲಸಮಾಡಿ ತನ್ನ ಶೈಲಿಯಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದ.

ಕ್ರಮೇಣ ಗಾಗಿ ಕಲಾಪ್ರಪಂಚದಲ್ಲಿ ಎಷ್ಟೊಂದು ಆಸಕ್ತನಾದನೆಂದರೆ 1883 ರಲ್ಲಿ ತನ್ನ ಉಳಿದೆಲ್ಲ ಉದ್ಯೋಗಗಳನ್ನು ಅದಕ್ಕಾಗಿ ತ್ಯಜಿಸಿದ. ಈ ಒಂದು ಸಾಹಸೀ ನಿರ್ಧಾರ ಆತನ ಜೀವನಗತಿಯನ್ನೇ ಬದಲಾಯಿಸಿತು. ನಾಲ್ಕು ಮಕ್ಕಳ ತಂದೆಯಾದ ಗಾಗಿಗೆ ಸಂಸಾರವನ್ನು ತೂಗಿಸಿಕೊಂಡು ಹೋಗುವುದೇ ದುಸ್ತರವಾಯಿತು. ಸಾಲದ್ದಕ್ಕೆ ಈತನ ಕಲಾಕೃತಿಗಳನ್ನು ಕೊಂಡುಕೊಳ್ಳುವವರೂ ಕಾಣಲಿಲ್ಲ. ಈ ಆರ್ಥಿಕ ಅವ್ಯವಸ್ಥೆಯಿಂದಾಗಿ ಸಂಸಾರದಲ್ಲಿ ವಿರಸವುಂಟಾಯಿತು. ಮಾವನ ಕಡೆಯಿಂದ ಯಾವ ಸಹಾನುಭೂತಿಯೂ ದೊರೆಯಲ್ಲಿಲ್ಲ. ಮಕ್ಕಳೊಂದಿಗೆ ಹೆಂಡತಿ ತವರುಮನೆಗೆ ಹೊರಟುಹೋದಳು. 1885ರಲ್ಲಿ ಗಾಗಿ ಒಬ್ಬ ಅನಾಥ ನಿರಾಶಾವಾದಿ ಕಲಾವಿದನಾಗಿ ಅಂಡಲೆಯಬೇಕಾಯಿತು; ದಟ್ಟದಾರಿದ್ರ್ಯದಲ್ಲಿ ತೊಳಲಾಡಬೇಕಾಯಿತು. ಕೊನೆಗೆ ಸಮಾಜದಿಂದಲೂ ಈತ ಒಹಿಷ್ಕೃತನಾದ. ಇನ್ನು ಯಾವುದೇ ರೀತಿಯಲ್ಲಿ ತನ್ನ ಸ್ಥಿತಿಯನ್ನು ಸುಧಾರಿಸಲಸಾಧ್ಯವೆಂಬ ದುಃಸ್ಥಿತಿಗಿಳಿದಾಗ ಯುರೋಪ್ ಮತ್ತು ಅದರ ನಾಗರಿಕತೆಗಳ ಬಗೆಗಾಗಿ ತನಗಿದ್ದ ಎಲ್ಲ ಅಭಿಮಾನವನ್ನೂ ಕಳೆದುಕೊಂಡ.

ಈ ಎಲ್ಲ ಅನುಭವಗಳ ಮೂಸೆಯಲ್ಲಿ ಬೆಂದ ಗಾಗಿ ತನ್ನ ತೀವ್ರವಾದ ಸಂವೇದನೆಗಳನ್ನು ಬಣ್ಣಗಳಲ್ಲಿ ವ್ಯಕ್ತಪಡಿಸುವ ಸಾಧ್ಯತೆಗಳನ್ನು ಕಲಿತ. ಈ ದಿಶೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ. 1887 ರಲ್ಲಿ ಮಾರ್ಟಿನೀಕ್ ಎಂಬ ಪ್ರಕೃತಿ ಸೌಂದರ್ಯದ ಬೀಡಿಗೆ ಹೋಗಿ ಸಂಚರಿಸಿ ಪ್ರಕೃತಿಯಲ್ಲಿನ ಮನೋಹರವಾದ ವರ್ಣ ಸಂಯೋಜನೆಯನ್ನೂ ರಸೋಪಜ್ಞತೆ ಯನ್ನೂ ಕಂಡುಕೊಂಡ. ಅಲ್ಲಿಯ ಮೂಲ ಜನಾಂಗದವರೊಡನೆ ಕಲೆತು ಅವರ ಸಹಜಸುಂದರ ನೈಜಜೀವನದ ಸೊಬಗನ್ನು ಬಹಳವಾಗಿ ಮೆಚ್ಚಿಕೊಂಡ. ಇವೆಲ್ಲವುಗಳ ಪ್ರಭಾವ ಗಾಗಿಯ ಕಲಾಶೈಲಿಯ ಮೇಲೆ ಆಗದೆ ಇರಲಿಲ್ಲ. ಗಾಗಿಯ ಮನಸ್ಸು ಸಮಕಾಲೀನ ಕಲಾಶೈಲಿಯಿಂದ ಪ್ರಾಚೀನ ಜಾನಪದ ಶೈಲಿಯತ್ತ ತಿರುಗಿತು. ಪ್ರಾಕೃತಿಕ ಸೌಂದರ್ಯ ವನ್ನು ತನಗೆ ತಕ್ಕಂತೆ ಉಪಯೋಗಿಸಿ ಕೊಂಡ ಗಾಗಿ ಚೇತೋಹಾರಿ ಯಾದ ಅನೇಕ ಕಲಾರತ್ನಗಳನ್ನು ಸೃಷ್ಟಿಸಿದ. ಈ ಸಂದರ್ಭದಲ್ಲಿ ಬನಾರ್ಡ್ ಎಂಬ ಜಾನಪದ ಕಲಾವಿದನ ಮಾರ್ಗದರ್ಶನವೂ ಈತನಿಗೆ ಸಿಕ್ಕಿತು. ಅಲ್ಲದೆ 1888 ರಲ್ಲಿ ಪ್ರಸಿದ್ಧ ಕಲಾವಿದ ವ್ಯಾನ್ ಗೋನ ಪರಿಚಯವೂ ಆಯಿತು. ಕ್ರಮೇಣ ಗಾಗಿ ತನ್ನದೇ ಆದ ಒಂದು ಸಂಶ್ಲೇಷಣಾಶೈಲಿಯನ್ನು ಬೆಳೆಸಿಕೊಂಡ. ಇದರಲ್ಲಿ ಕೃತ್ರಿಮ ನಾಗರಿಕತೆಯ ಪ್ರಭಾವಕ್ಕಿಂತಲೂ ಸಹಜ ಸುಂದರ ಪ್ರಕೃತಿಯ ಪರಿಣಾಮ ಎದ್ದುಕಾಣುತ್ತದೆ. ಜಪಾನಿನ ವರ್ಣಚಿತ್ರಗಳಲ್ಲಿ ಕಂಡುಬರುವಂತೆ, ಸರಳ ವರ್ಣಗಳನ್ನು ಉಪಯೋಗಿಸಿ ಚಪ್ಪಟೆ ಚಿತ್ರಗಳನ್ನು ಗಾಗಿ ರಚಿಸಿದ. ಇವುಗಳಲ್ಲಿ ಕಂಡುಬರುವ ವರ್ಣ ಸಂಯೋಜನೆ, ರೇಖಾವಿನ್ಯಾಸ, ಲಾಲಿತ್ಯ ಮತ್ತು ಅವುಗಳ ಒಟ್ಟು ಪರಿಣಾಮ ಬಹು ಮನೋಹರವಾಗಿದೆ.

ಈ ಶೈಲಿ ಜನಸಾಮಾನ್ಯರಿಗೂ ಅರ್ಥವಾಗುವಂತಿದ್ದು, ಅದರಲ್ಲಿ ಒಂದು ಭಾವ ಕಲಾತ್ಮಕವಾಗಿ, ವರ್ಣರಂಜಿತವಾಗಿ ವ್ಯಕ್ತವಾಗಿರುವುದನ್ನು ನೋಡಬಹುದು. ಒಟ್ಟಿನಲ್ಲಿ ಗಾಗಿಯ ಚಿತ್ರರಾಶಿಗಳಲ್ಲಿ ಆತ್ಮವಿನಾಶಕ ಬೂರ್ಜ್ವಾನಾಗರಿಕತೆಯ ವಿರುದ್ಧವಾಗಿ ವ್ಯಕ್ತಪಡಿಸಿದ ಒಂದು ತೀವ್ರ ಪ್ರತಿಕ್ರಿಯೆಯನ್ನು ನೋಡಬಹುದಾಗಿದೆ.

ಗಾಗಿಯ ಕಲಾಶೈಲಿಯ ಪ್ರಭಾವವನ್ನು ಪಿಕಾಸೊ ಮೊದಲಾದ ಕಲಾವಿದರ ಕೃತಿಗಳಲ್ಲಿ ಕಾಣಬಹುದು. ಇದು ಮುಂದೆ ಘನಾಕೃತಿವಿಧಾನ (ಕ್ಯೂಬಿಸಂ) ಎಂಬ ಕಲಾಶೈಲಿಯ ಬೆಳೆವಣಿಗೆಗೆ ಪುಷ್ಟಿನೀಡಿತು. ಅಲ್ಲದೆ ಗಾಗಿ ಮುಂದೆ ಆಫ್ರಿಕದ ನಿಗ್ರೋಕಲೆಯ ಸೌಂದರ್ಯ ಸಮೀಕ್ಷೆಗೆ ಪ್ರೇರಣೆ ನೀಡಿದ. ತನ್ನ ಕಲಾಸಾಧನೆಯ ಗುಣವಿಶೇಷದಿಂದಾಗಿ ಮತ್ತು ನವ್ಯಕಲೆಯ ಮೇಲೆ ಬೀರಿದ ಅದ್ಭುತ ಪ್ರಭಾವದಿಂದಾಗಿ ನವ್ಯಕಲಾ ಪ್ರಪಂಚದಲ್ಲಿ ಗಾಗಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದ್ದಾನೆ.

ಗಾಗಿ ಬರೆದಿರುವ ನೋವ-ನೋವ ಎಂಬ ಪುಸ್ತಕ ಆತನ ಸೌಂದರ್ಯ ಮೀಮಾಂಸಾತತ್ತ್ವವನ್ನು ವಿವರಿಸುತ್ತದೆ.

ಈತನ ಜೀವನದ ಪ್ರಧಾನ ಘಟನೆಗಳನ್ನು ಆಧರಿಸಿ ಸಾಮ್‌ರ್‌ಸೆಟ್ ಮಾಮ್ ಎಂಬ ಪ್ರಸಿದ್ಧ ಸಾಹಿತಿ ದಿ ಮೂನ್ ಅಂಡ್ ಸಿಕ್ಸ್ ಪೆನ್ಸ್ ಎಂಬ ಕಾದಂಬರಿಯನ್ನು ರಚಿಸಿದ್ದಾನೆ (1929). (ಎಚ್.ಆರ್.ಆರ್.ಬಿ)

**ಗಾಜ಼ :** ದಕ್ಷಿಣ ಪ್ಯಾಲಸ್ತೀನಿನ ಒಂದು ನಗರ. ಮೆಡಿಟರೇನಿಯನ್ ಕರಾವಳಿಯಿಂದ ಸು. 5 ಕಿ.ಮೀ ಮತ್ತು ಟೆಲ್-ಅವಿವ್‌ನ ನೈರುತ್ಯಕ್ಕೆ 64 ಕಿಮೀ ದೂರದಲ್ಲಿದೆ. ಪ್ರ.ಶ.ಪೂ. 62ರ ಹೊತ್ತಿಗೆ ಪಾಂಪೇಯ ಆಡಳಿತಕ್ಕೆ ಈ ನಗರ ಒಳಗಾದಾಗ ಇದಕ್ಕೆ ಗಾಜ಼ ಮಿನೋವ ಎಂಬ ಹೆಸರನ್ನು ಕೊಡಲಾಗಿತ್ತು. ಪ್ರ.ಶ. 331ರಲ್ಲಿ ಚಕ್ರವರ್ತಿ ಕಾನ್‌ಸ್ಟೆಂಟೈನ್ ತನ್ನ ಸೋದರಿಯ ಗೌರವಾರ್ಥವಾಗಿ ಈ ನಗರಕ್ಕೆ ಕಾನ್‌ಸ್ಟ್ಯಾಂಟಿಯ ಎಂದು ಮರುನಾಮಕರಣಮಾಡಿದ. ಇಷ್ಟಾದರೂ ಇಂದಿಗೂ ಇದಕ್ಕೆ ಗಾಜ಼ ಎಂಬ ಹೆಸರೇ ವಿಶೇಷವಾಗಿ ಬಳಕೆಯಲ್ಲಿದೆ. ಇದು ಭೌಗೋಳಿಕ ಹಾಗೂ ಆಯಕಟ್ಟಿನ ದೃಷ್ಟಿಯಿಂದ ಅತ್ಯಂತ ಮಹತ್ವದ ಸ್ಥಾನ ಗಳಿಸಿರುವುದರಿಂದ ಪ್ರಾಚೀನ ಕಾಲದಿಂದಲೂ ಈ ನಗರಕ್ಕೆ ಐತಿಹಾಸಿಕ ಪ್ರಾಮುಖ್ಯವಿದೆ. ಇಲ್ಲಿಯ ದಗೋನ್ ದೇವಾಲಯವನ್ನು ಸ್ಯಾಂಸನ್ ನಿರ್ನಾಮಗೊಳಿಸಿದನೆಂದು ಬೈಬಲಿನಲ್ಲಿ ಉಲ್ಲೇಖವಿದೆ. ಗಾಜ಼ದ ಹೆಸರು ಮೊಟ್ಟಮೊದಲಿಗೆ ಕಾಣುವುದು ಈಜಿಪ್ಟಿನ ಚಕ್ರವರ್ತಿ ಮೂರನೆಯ ಥೂಟ್‌ಮೋಸೆಯ ಸ್ಮಾರಕದಲ್ಲಿ. ಈತ ಪ್ರ.ಶ.ಪೂ. 1480ರಲ್ಲಿ ಸಿರಿಯದ ಮೇಲೆ ಆಕ್ರಮಣ ನಡೆಸಲು ಗಾಜ಼ವನ್ನು ಸೈನಿಕನೆಲೆಯಾಗಿ ಬಳಸಿದುದಾಗಿ ತಿಳಿದುಬಂದಿದೆ. ಕ್ಯಾನಾನ್ ಪ್ರಾಂತ್ಯ ಗಾಜ಼ದಿಂದ ಸಿಡೋನ್‌ವರೆಗೆ ವಿಸ್ತರಿಸಿತ್ತೆಂದು ಹೇಳಲಾಗಿರುವುದರಿಂದ ಗಾಜ಼ ಅದರ ದಕ್ಷಿಣ ಗಡಿಯಾಗಿದ್ದಿರಬೇಕು. ಗಾಜ಼ದ ಸಮೀಪದಲ್ಲಿದ್ದ ನಗರಗಳನ್ನು ಜೋಷುವ ವಶಪಡಿಸಿಕೊಂಡನಾದರೂ ಗಾಜ಼ ಇಸ್ರೇಲಿನ ಗಡಿಯಿಂದ ಹೊರಗೇ ಉಳಿದಿತ್ತು. ಪ್ರ.ಶ.ಪೂ. ಸು. 1200ರ ವೇಳೆಗೆ ಫಿಲಿಸ್ಟೀನರು



ಗಾಜಾದ ಬೃಹತ್ ಮಸೀದಿ

ಪ್ಯಾಲೆಸ್ಟೀನ್ ಕರಾವಳಿಯನ್ನು ಪ್ರವೇಶಿಸಿದರು. ಆಗ ಇದು ಅವರ ಪಂಚ ಮಹಾ ನಗರಗಳಲ್ಲಿ ಒಂದಾಗಿ ಪರಿಣಮಿಸಿತು. ಯಹೂದ್ಯರಿಗೆ ಸತತವಾಗಿ ಕಿರುಕುಳ ನೀಡಿದ ನಗರವೂ ಇದಾಯಿತು. ಗುಲಾಮರ ವ್ಯಾಪಾರಕೇಂದ್ರವಾಗಿತ್ತೆಂಬ ಕಾರಣಕ್ಕಾಗಿ ಅಮೋಸ್ ಈ ನಗರವನ್ನು ಗೌರವಿಸಲಿಲ್ಲ. ಪ್ರ.ಶ.ಪೂ. 734ರಲ್ಲಿ ಮೂರನೆಯ ತಿಗ್ಲಾಥ್ ಪಿಲೇಸರ್ ಈ ನಗರದ ಮೇಲೆ ಆಕ್ರಮಣ ಮಾಡಿದ್ದ. ಆಗ ನಗರದ ರಾಜನಾಗಿದ್ದ ಹನೂನ್ ಈಜಿಪ್ಟಿಗೆ ಓಡಿಹೋದನಾದರೂ ಅಸ್ಸಿರಿಯನ್ನರ ಅಧಿಪತ್ಯವನ್ನು ಒಪ್ಪಿಕೊಂಡು ಗಾಜ಼ಕ್ಕೆ ಹಿಂದಿರುಗಿದ. ಆದರೆ ಪ್ರ.ಶ.ಪೂ. 720ರಲ್ಲಿ ಈಜಿಪ್ಷಿಯನರ ನೆರವನ್ನು ಪಡೆದು, ಎರಡನೆಯ ಸಾರ್ಗೋನನ ಆಡಳಿತಾವಧಿಯಲ್ಲಿ ಅಸ್ಸಿರಿಯಕ್ಕೆ ವಿರುದ್ಧವಾಗಿ ದಂಗೆಯೆದ್ದ. ಆಗ ನಡೆದ ಯುದ್ಧದಲ್ಲಿ ಹನೂನನನ್ನು ಸೋಲಿಸಿ ಸೆರೆಹಿಡಿದು ಅಸ್ಸಿರಿಯಕ್ಕೆ ಕೊಂಡೊಯ್ಯಲಾಯಿತು. ಪ್ರ.ಶ.ಪೂ. 332ರಲ್ಲಿ ಎರಡು ತಿಂಗಳುಗಳ ಹೋರಾಟದ ಕೊನೆಯಲ್ಲಿ ಅಲೆಗ್ಸಾಂಡರ್ ಇದನ್ನು ಪರ್ಷಿಯನ್ನರಿಂದ ಗೆದ್ದುಕೊಂಡ. ಪ್ರ.ಶ.ಪೂ. 3ನೆಯ ಶತಮಾನದಿಂದ 1ನೆಯ ಶತಮಾನದ ವರೆಗಿನ ಅವಧಿಯಲ್ಲಿ ಈಜಿಪ್ಟ್, ಸಿರಿಯ ಮತ್ತು ಯಹೂದ್ಯ ಸೈನ್ಯಗಳು ಈ ನಗರದ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸುವ ಸಲುವಾಗಿ ಪರಸ್ಪರ ಹೋರಾಡುತ್ತಿದ್ದುವು. ಪ್ರ.ಶ.ಪೂ. 62ರಲ್ಲಿ ಪಾಂಪೇ ಈ ನಗರವನ್ನು ಗೆದ್ದುಕೊಂಡಾಗ ಇದು ವ್ಯಾಪಾರಕೇಂದ್ರವಾಗಿ ಅಭಿವೃದ್ಧಿ ಹೊಂದಿತು. ಈ ದಿಕ್ಕಿನಲ್ಲಿ ರೋಮನ್ನರು ನಡೆಸಿದ ಪ್ರಯತ್ನಗಳು ಉಲ್ಲೇಖಾರ್ಹವಾಗಿವೆ. ಪ್ರ.ಶ.ಪೂ. 30ರಲ್ಲಿ ಆಗಸ್ಟಸ್ ಚಕ್ರವರ್ತಿ ಈ ನಗರವನ್ನು ಹೆರಡ್‌ಗೆ ಬಳುವಳಿಯಾಗಿ ಕೊಟ್ಟ. ಪ್ರ.ಶ.ಪೂ. 4ರಲ್ಲಿ ಹೆರಡ್ ಕಾಲವಾದಾಗ ಇದನ್ನು ಮತ್ತೆ ಸಿರಿಯದ ಚಕ್ರಾಧಿಪತ್ಯಕ್ಕೇ ಸೇರಿಸಿಕೊಳ್ಳಲಾಯಿತು.

ಕ್ರೈಸ್ತರ ನಂಬಿಕೆಯ ಪ್ರಕಾರ ಫಿಲೋಮೆನ್ ಗಾಜ಼ಕ್ಕೆ ಬಂದ ಮೊಟ್ಟಮೊದಲ ಧರ್ಮಾಧಿಕಾರಿ. ಪ್ರ.ಶ. 331ರಲ್ಲಿ ಗಾಜ಼ದ ರೇವುಪಟ್ಟಣವಾಗಿದ್ದ ಮುಯಿ-ಔಮಸ್ (ಇಂದಿನ ಅಲ್-ಮೀನ) ಉಪನಗರ ಸಂಪೂರ್ಣವಾಗಿ ಕ್ರೈಸ್ತಧರ್ಮಕ್ಕೆ ಧರ್ಮಾಂತರ ಹೊಂದಿತು. ಈ ಚರಿತ್ರಾರ್ಹ ಘಟನೆಯ ಸ್ಮರಣಾರ್ಥ ಹಾಗೂ ತನ್ನ ಸೋದರಿಯ ಗೌರವಾರ್ಥ ಚಕ್ರವರ್ತಿ ಕಾನ್‌ಸ್ಟೆಂಟೈನ್ ಈ ನಗರಕ್ಕೆ ಕ್ಯಾನ್‌ಸ್ಟ್ಯಾಂಟಿಯ ಎಂದು ನಾಮಕರಣ ಮಾಡಿದ. ಪ್ರ.ಶ. 5ನೆಯ ಶತಮಾನದ ಆರಂಭದಲ್ಲಿ ಕ್ರೈಸ್ತಧರ್ಮ ಇಲ್ಲಿ ವಿಜೃಂಭಿಸತೊಡಗಿತ್ತು. ಪ್ರ.ಶ. 500ರ ಸುಮಾರಿಗೆ ಇಲ್ಲಿ ಒಂದು ರ್ಹೆಟೊರಿಕ್ ಶಾಲೆಯೂ ಆರಂಭಗೊಂಡಿತ್ತು.

634ರಲ್ಲಿ ಅರಬ್ಬರು ಗಾಜ಼ವನ್ನು ವಶಪಡಿಸಿಕೊಂಡರು. ಆದರೆ, ಅವರು ಇಲ್ಲಿಗೆ ಅಪರಿಚಿತರೇನೂ ಆಗಿರಲಿಲ್ಲ. ಎರಡನೆಯ ಖಲೀಫನಾದ ಉಮರ ಇಲ್ಲಿ ರಾಜ್ಯವಾಳಿ ಪ್ರಸಿದ್ಧಿ ಗಳಿಸಿದ್ದ. ಪ್ರವಾದಿ ಮಹಮ್ಮದನ ಮುತ್ತಜ್ಜ ಹಾಷಿಮನ ಸಮಾಧಿ ಗಾಜ಼ದಲ್ಲೇ ಇತ್ತೆಂದು ಇಸ್ಲಾಂ ಸಂಪ್ರದಾಯ ಹೇಳುತ್ತದೆ. ಇಸ್ಲಾಂ ಕಾನೂನಿಗೆ ವ್ಯವಸ್ಥಿತ ರೂಪವನ್ನಿತ್ತ ಕೀರ್ತಿಗೆ ಪಾತ್ರನಾಗಿರುವ ಅಲ್-ಶಫಿ ಹುಟ್ಟಿದ್ದೂ ಇಲ್ಲೇ (767). ಮುಂದೆ 12ನೆಯ ಶತಮಾನದಲ್ಲಿ ಧರ್ಮಯೋಧರು ಇದನ್ನು ವಶಪಡಿಸಿಕೊಂಡಾಗ ಇದು ಬಹು ಮಟ್ಟಿಗೆ ಪಾಳು ನೆಲವಾಗಿತ್ತು. ಅವರು ಈ ನಗರವನ್ನು ಸಾಕಷ್ಟು ಅಭಿವೃದ್ಧಿಪಡಿಸಿದ ರಾದರೂ ಇದಕ್ಕೆ ಮತ್ತೆ ಹಿಂದಿನ ಮಹತ್ತ್ವ ದೊರೆಯಲಿಲ್ಲ.

1187ರಲ್ಲಿ ಸಲಾದೀನ್ ಇದನ್ನು ಮತ್ತೆ ವಶಪಡಿಸಿಕೊಂಡಾಗ ಈ ನಗರ ಮತ್ತೆ ಮುಸ್ಲಿಮರ ಕೈವಶವಾದಂತಾಯಿತು. 1577ರಲ್ಲಿ ತುರ್ಕರು, 1799ರಲ್ಲಿ ನೆಪೋಲಿಯನ್ ಬೋನಾಪಾರ್ಟೆ ಈ ನಗರದ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಿದ್ದರು. 1831ರಲ್ಲಿ ಇದು ಈಜಿಪ್ಟಿನ ಗವರ್ನರ್ ಮೊಹಮ್ಮದಾಲಿಯ ಕೈವಶವಾಯಿತು. ಆದರೆ 1840ರಲ್ಲಿ ಇದು ಮತ್ತೆ ತುರ್ಕರ ಆಡಳಿತಕ್ಕೆ ಒಳಗಾಯಿತು. 1917ರಲ್ಲಿ ಇದು ಬ್ರಿಟಿಷ್ ಮತ್ತು ತುರ್ಕಿ ಸೇನೆಗಳ ನಡುವಣ ಕದನದ ಕ್ಷೇತ್ರವಾಗಿ ಪರಿಣಮಿಸಿತು. ಪ್ಯಾಲೆಸ್ಟೀನಿನ ಬ್ರಿಟಿಷ್ ನಿಯೋಗಿ ಆಡಳಿತದಲ್ಲಿ ಗಾಜ಼ ನಗರ ಇದೇ ಹೆಸರಿನ ಪ್ರಾಂತ್ಯದ ಆಡಳಿತ ಕೇಂದ್ರವಾಗಿ ಪರಿಣಮಿಸಿತು. 1947ರ ನವೆಂಬರ್ 20ರಂದು ವಿಶ್ವಸಂಸ್ಥೆಯ ಮಹಾಸಭೆ ಪ್ಯಾಲಿಸ್ಟೀನ್ ವಿಭಜನೆಯ ನಿರ್ಣಯವನ್ನು ಅಂಗೀಕರಿಸಿದ್ದರಿಂದ ಗಾಜ಼ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳು ಪ್ಯಾಲೆಸ್ಟೀನ್ ಅರಬ್ ಪ್ರದೇಶದ ಭಾಗಗಳಾಗಿ ಪರಿಣಮಿಸಿದುವು. 1948ರಲ್ಲಿ ಬ್ರಿಟಿಷ್ ಒಪ್ಪಂದದ ಅವಧಿ ಕೊನೆಗೊಂಡ ದಿವಸವೇ ಇದು ಇಸ್ರೇಲ್-ಈಜಿಪ್ಟ್ ನಡುವಣ ಕದನದ ಕೇಂದ್ರವೂ ಪ್ಯಾಲೆಸ್ಟೀನ್ ಅರಬ್ ನಿರಾಶ್ರಿತರ ನೆಲೆಯೂ ಆಗಿ ಪರಿಣಮಿಸಿತು. 1949ರ ಕದನ ವಿರಾಮ ಒಪ್ಪಂದ ಗಾಜ಼ದ ಕೆಲವು ಭಾಗಗಳ ಮೇಲೆ ಈಜಿಪ್ಟಿನ ಸೈನ್ಯಾಧಿಕಾರವನ್ನು ಮಾನ್ಯಮಾಡಿತು. 1956ರಲ್ಲಿ ಇಸ್ರೇಲ್ ಗಾಜ಼ದ ಒಂದು ಭಾಗವನ್ನು ವಶಪಡಿಸಿಕೊಂಡಿತ್ತಾದರೂ ಮತ್ತೆ ಅದನ್ನು ಈಜಿಪ್ಟಿಗೆ ಹಿಂದಿರುಗಿಸಲಾಯಿತು. 1967ರಲ್ಲಿ ಇಸ್ರೇಲ್-ಈಜಿಪ್ಟ್‌ಗಳ ನಡುವೆ ನಡೆದ ಆರು ದಿನಗಳ ಯುದ್ಧದಲ್ಲಿ ಇದನ್ನು ಇಸ್ರೇಲ್ ಮತ್ತೆ ಆಕ್ರಮಿಸಿಕೊಂಡಿತು.

ಈ ನಗರದ ಬಳಿ ಟೆಲ್-ಎಲ್-ಅಜ್ಜುಲ್‌ನಲ್ಲಿ ಫ್ಲಿಂಡರ್ಸ್ ಪೆಟ್ರಿಯೇ ಉತ್ಖನನಗಳನ್ನು ನಡೆಸಿದ್ದಾನೆ. ಈತನ ಅಭಿಪ್ರಾಯದ ಪ್ರಕಾರ ನವಶಿಲಾಯಗದಿಂದ ಕಂಚಿನ ಯುಗದ ವರೆಗೆ ಇಲ್ಲಿ ಜನರು ವಾಸವಾಗಿದ್ದರು. ಇದೇ ಪ್ರಾಚೀನ ಗಾಜ಼ದ ನಿವೇಶನವಾಗಿತ್ತು. ಈ ಭೂಭಾಗ ವಡಿಗುಹ್‌ಜೇಡ್ ನದೀಮುಖಜಭೂಮಿಯ ಬಳಿ ಇದ್ದು, ಇದರ ಅಳವೆ ಮಲೇರಿಯ ಪೀಡಿತವಾಗಿದ್ದುದರಿಂದ ಶಾಶ್ವತ ನೆಲೆಸಿಕೆ ಅಸಾಧ್ಯವಾಗಿದ್ದಿರಬೇಕೆಂದು ಹೇಳಲಾಗಿದೆ. ಈ ಕಾರಣದಿಂದಾಗಿ ಈ ನಿವೇಶನ ವರ್ಜ್ಯವಾಗಿರಬೇಕು.



ಗಾಜ಼ ನಗರ

ಗಾಜ಼ದ ಪ್ರಮುಖ ಸ್ಮಾರಕಗಳೆಂದರೆ ಸಂತ ಪೋರ್‌ಫಿರಿಯ ಚರ್ಚ್, ಜಮೀ-ಅಲ್-ಕಬೀರ್ ಬೃಹತ್ ಮಸೀದಿ, ಜಮೀ-ಅಲ್-ಸಯೀದ್ ಹಾಷಿಮ್ ಸಮಾಧಿ ಮತ್ತು ಅಬು-ಅಲ್-ಅಜಮ್ ಸಮಾಧಿ. ಇಲ್ಲಿ ಕ್ರೈಸ್ತಧರ್ಮ ಪ್ರಚಾರ ಸಂಸ್ಥೆಯೊಂದಿದೆ. ಅದು ಕೆಲವು ಶಾಲೆಗಳನ್ನೂ ಆಸ್ಪತ್ರೆಗಳನ್ನೂ ನಡೆಸುತ್ತಿದೆ.

ಈಚೆಗೆ ಈ ಸುತ್ತಿನಲ್ಲಿ ಬಾರ್ಲಿ ವ್ಯವಸಾಯವನ್ನು ಕೈಗೊಂಡಿದ್ದರಿಂದ ಇದು ಆಂಶಿಕವಾಗಿಯಾದರೂ ಮತ್ತೆ ಸಮೃದ್ಧಿಯತ್ತ ಹೆಜ್ಜೆ ಹಾಕಿದಂತಾಗಿದೆ. ಎತ್ತರವಾದ ಪ್ರದೇಶದಲ್ಲಿ ನೆಲೆಗೊಂಡಿರುವುದರಿಂದಲೂ ಅನೇಕ ಗುಮ್ಮಟ ಹಾಗೂ ಮಿನಾರುಗಳಿರುವು ದರಿಂದಲೂ ಆಲಿವ್ ಮತ್ತು ಖರ್ಜೂರದ ಗಿಡಗಳು ಅಲ್ಲಲ್ಲಿ ಬೆಳೆದು ನಿಂತಿರುವದ ರಿಂದಲೂ ಈ ನಗರ ತುಂಬಾ ರಮಣೀಯವಾಗಿದೆ.

ಗಾಜ಼ ಭೂಪಟ್ಟಿ: ಪ್ಯಾಲೆಸ್ಟೀನಿನ ನೈಋತ್ಯಕ್ಕೆ, ಈಜಿಪ್ಟಿನ ಗಡಿಯಿಂದ ಈಶಾನ್ಯ ದಿಕ್ಕಿನತ್ತ ಹರಡಿಕೊಂಡಿರುವ, ಸುಮಾರು 9 ಕೀ.ಮೀ. ಅಗಲ, 40ಕಿ.ಮೀ. ಉದ್ದವಿರುವ ಭೂಭಾಗ, ಭೌಗೋಳಿಕವಾಗಿ ಇದು ನೆಗೆಬ್ ಪ್ರಾಂತ್ಯದ ಒಂದು ಭಾಗ, 1948ಕ್ಕೆ ಮೊದಲು ಇದು ಬ್ರಿಟಿಷ್ ನಿಯೋಗಿ ಆಡಳಿತಕ್ಕೆ ಒಳಪಟ್ಟಿದ್ದ ಪ್ಯಾಲೆಸ್ಟೀನಿನ ಒಂದು ಭಾಗವಾಗಿತ್ತು. ಆದರೆ, ಒಪ್ಪಂದದ ಅವಧಿ ಕೊನೆಗೊಂಡ ದಿವಸವೇ- ಅಂದರೆ, ಮೇ 15, 1948ರಂದೇ ಅರಬ್-ಇಸ್ರೇಲ್ ಯುದ್ಧ ಪ್ರಾರಂಭವಾಯಿತು. ಈಜಿಪ್ಟಿನ ಸೈನ್ಯ ಗಾಜ಼ವನ್ನು ಪ್ರವೇಶಿತು. ಗಾಜ಼ ಆಗ ಈಜಿಪ್ಟಿನ ಸೈನಿಕ ಕಾರ್ಯಾಚರಣೆ ಕೇಂದ್ರವೂ ಆಗಿ ಪರಿಣಮಿಸಿತು. ಕದನದ ಪರಿಣಾಮವಾಗಿ ಅರಬ್ಬರ ವಶದಲ್ಲಿದ್ದ ಈ ಪ್ರದೇಶದ ವಿಸ್ತೀರ್ಣ ಮೇಲೆ ಹೇಳಿದ ಅಳತೆಗೆ ಸೀಮಿತ ಗೊಂಡಿತು. ಇದಕ್ಕೆ ಗಾಜ಼ ಭೂಪಟ್ಟಿ ಎಂದು ಹೆಸರಾಯಿತು. ಅಧಿಕೃತವಾಗಿ ಇದರ ಮೇರೆಗಳು ನಿರ್ಧರಿಸಲ್ಪಟ್ಟು ಇದು ಅಸ್ತಿತ್ವಕ್ಕೆ ಬಂದದ್ದು 1949ರ ಫೆಬ್ರುವರಿ 24ರಂದು. 1949-1954ರಲ್ಲಿ ಒಟ್ಟಾರೆ ಶಾಂತಿ ಸ್ಥಿತಿಯಿತ್ತಾದರೂ ಆಗಿಂದಾಗ್ಗೆ ಸಣ್ಣಮಟ್ಟ ಗಡಿ ಘರ್ಷಣೆಗಳು ನಡೆಯುತ್ತಲೇ ಇದ್ದುವು. 1955ರ ಫೆಬ್ರುವರಿಯಲ್ಲಿ ಇಸ್ರೇಲ್ ಈ ಭೂಪಟ್ಟಿಯ ಮೇಲೆ ತೀವ್ರಧಾಳಿ ನಡೆಸಿತು. ಈಜಿಪ್ಟ್ ಪ್ರತಿ ಧಾಳಿ ನಡೆಸಿತು. 1956ರ ನವೆಂಬರಿನಲ್ಲಿ ಇಸ್ರೇಲಿನ ಸೈನ್ಯ ಇದನ್ನು ಆಕ್ರಮಿಸಿ ಕೊಂಡಿತು. ಈ ಮಧ್ಯೆ ಈ ಅವಧಿಯಲ್ಲಿ ಸೂಯೆಜ಼್ ಕಾಲುವೆಯ ರಾಷ್ಟ್ರೀಕರಣ ನಡೆದದ್ದರಿಂದ ಈ ಭೂಪಟ್ಟಿಯಲ್ಲಿ ಸ್ವಲ್ಪಕಾಲ ಶಾಂತಿ ಏರ್ಪಟ್ಟಿತು. ವಿಶ್ವಸಂಸ್ಥೆ ಅಂಗೀಕರಿಸಿದ ನಿರ್ಣಯಗಳಿಂದಾಗಿ 1957ರ ಮಾರ್ಚ್ ತಿಂಗಳಲ್ಲಿ ಇಸ್ರೇಲಿ ಪಡೆಗಳು ಈ ಪ್ರದೇಶವನ್ನು ತೆರವು ಮಾಡಿದುವು. ಈಜಿಪ್ಟ್ ಮತ್ತೆ ನಾಗರಿಕ ಆಡಳಿತ ವ್ಯವಸ್ಥೆಯ ಹೊಣೆಯ ವಹಿಸಿಕೊಂಡಿತು. ಘರ್ಷಣೆಗಳನ್ನು ನಿವಾರಿಸುವ ಸಲುವಾಗಿ ವಿಶ್ವಸಂಸ್ಥೆಯ ಪಡೆಗಳನ್ನು ಇರಿಸಲಾಯಿತು. 1967ರಲ್ಲಿ ಆರು ದಿನಗಳ ಯುದ್ಧದಲ್ಲಿ ಇದನ್ನು ಇಸ್ರೇಲ್ ಮತ್ತೆ ವಶಪಡಿಸಿಕೊಂಡಿತು. (ಪಿ.ಜಿ.ಡಿ.)

**ಆರ್ಥಿಕ ಪರಿಸ್ಥಿತಿ:** ಸಣ್ಣ ಕೈಗಾರಿಕೆಗಳು, ವ್ಯವಸಾಯ ಹಾಗೂ ಕೆಲಸಗಾರರಿಂದ ಕೂಡಿದೆ. ಪ್ರಮುಖವಾಗಿ ಸ್ಟ್ರಾಬೆರಿ, ಸಿಟ್ರಸ್, ಖರ್ಜೂರ, ಆಲಿವ್ ಹಾಗೂ ಹಣ್ಣುಗಳು. ವಿವಿಧ ತರಕಾರಿಗಳನನು ಬೆಳೆಯುತ್ತಾರೆ.

ಸಣ್ಣ ಕೈಗಾರಿಕೆಗಳು: ಪ್ಲಾಸ್ಟಿಕ್, ಬಟ್ಟೆ, ಉಪಕರಣಗಳು, ಮಡಕೆಗಳು, ತಾಮ್ರ, ಹಾಗೂ ಕಾರ್‌ಪೆಟ್ ಕೈಗಾರಿಕೆಗಳಿವೆ.

ಸಂಸ್ಕೃತಿ: ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ರಶಾದ-ಶಾನ ಸಾಂಸ್ಕೃತಿಕ ಕೇಂದ್ರ ಪ್ರಮುಖವಾಗಿದೆ. ಮಕ್ಕಳಿಗಾಗಿ ಮಕ್ಕಳ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಿದ್ದು.. ಎಲ್ಲ ಬಗೆಯ ಕಲೆಗಳನ್ನು ಕಲಿಸಲಾಗುತ್ತದೆ. ಗಾಜ಼ಾ ಪ್ರಾಚೀನ ವಸ್ತು ಸಂಗ್ರಹಾಲಯ ಹಾಗೂ ಕ್ರೀಡಾವಾಲರ ಪಾರ್ಕ್‌ಗಳನ್ನು ನೋಡಬಹುದು.

ಶಿಕ್ಷಣ: ಜನಸಂಖ್ಯೆಯ 90 ಭಾಗ ಶಿಕ್ಷಿತರು. ಇದನ್ನು ನಾಲ್ಕು ವಿಶ್ವವಿದ್ಯಾಲಯಗಳಿವೆ. 1. ಆತ-ಅಭರ ವಿಶ್ವವಿದ್ಯಾನಿಲಯ, 2. ಅಲ್ ಕ್ವುಕ್ಸ್ ಮುಕ್ತ ವಿಶ್ವವಿದ್ಯಾನಿಲಯ 3. ಆಲ್ ಆಕ್ಸ್ ವಿಶ್ವವಿದ್ಯಾನಿಲಯ 4. ಇಸ್ಲಾಮಿಕ ವಿಶ್ವವಿದ್ಯಾನಿಲಯ ಗಾಜ಼

ಧರ್ಮ: ಮುಖ್ಯವಾಗಿ ಸುನ್ನಿ ಇಸ್ಲಾಂ ಅನುಕರಿಸುವವರು ಇದ್ದಾರೆ. ಗಾಜ಼ಾದಲ್ಲಿ ಶಿಷ್ಯ ಇನ್ನೊಂದು ಅಧಿಕವಾಗಿತಂತೆ. ನಗರ ಜನಸಂಖ್ಯೆ: 2009ಕ್ಕೆ 449,221. (ಪಿ.ಜಿ.ಡಿ)

**ಗಾಜ಼ಿ ಆಂಟೆಪ್ :** ದಕ್ಷಿಣ ಮಧ್ಯ ತುರ್ಕಿಯ ಒಂದು ಪ್ರಾಂತ್ಯ ಹಾಗೂ ಆ ಪ್ರಾಂತ್ಯದ ಆಡಳಿತ ಕೇಂದ್ರ. ಮೊದಲು ಇದಕ್ಕೆ ಐಂಟಾಬ್ ಎಂಬ ಹೆಸರಿತ್ತು. 1920-21ರ ಅವಧಿಯಲ್ಲಿ ಫ್ರೆಂಚರ ಆಕ್ರಮಣವನ್ನು ಪ್ರತಿಭಟಿಸಿ ನಿಂತ ಗೌರವದ ಕುರುಹಾಗಿ ಕೆಮಾಲ್ ಆಟಾಟರ್ಕ್ ಈ ನಗರಕ್ಕೆ ಗಾಜ಼ಿ ಆಂಟೆಪ್ ಎಂದು ಹೊಸದಾಗಿ ನಾಮಕರಣ ಮಾಡಿದ. ಗಾಜ಼ಿ ಎಂದರೆ ಇಸ್ಲಾಮಿಗಾಗಿ ಹೋರಾಟಗಾರ ಎಂದು ಅರ್ಥ. ಈ ನಗರ ಟಾರಸ್ ಪರ್ವತದ ಇಳಿಜಾರಿನಲ್ಲಿ ಸುಣ್ಣಕಲ್ಲಿನ ಬೆಟ್ಟದ ಮೇಲೆ ನೆಲೆಗೊಂಡಿದೆ. ಮೊದಲು ಇಲ್ಲಿ ಆರ್ಮೇನಿಯನರೇ ಬಹುಸಂಖ್ಯಾತರಾಗಿದ್ದರೂ ಈಗ ತುರ್ಕೊಮನ್ ಮತ್ತು ಕುರ್ದಿ ಜನಾಂಗಗಳವರೂ ವಿಶೇಷವಾಗಿದ್ದಾರೆ.

ಇತಿಹಾಸಪೂರ್ವ ಕಾಲದಿಂದಲೂ ಈ ನಗರ ಜನಭರಿತವಾಗಿದ್ದುದಾಗಿ ತಿಳಿದು ಬಂದಿದೆ. ಹಿಟ್ಟೈಟರ ಕಾಲದಲ್ಲಿ ಈ ನಗರಕ್ಕೆ ಯಾವ ಹೆಸರಿತ್ತೆಂಬುದು ಖಚಿತವಾಗಿ ತಿಳಿದಿಲ್ಲವಾದರೂ ಇದು ತುಂಬ ಮಹತ್ವದ ನಗರವಾಗಿದ್ದಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಕಾರಣ ಇದರ ಭೌಗೋಳಿಕ ನೆಲೆ. ಮಧ್ಯಯುಗದಲ್ಲೂ ಇದು ಪ್ರಮುಖ ಸೈನಿಕನೆಲೆಯಾಗಿತ್ತು. 1183ರಲ್ಲಿ ತುರ್ಕಿಯಸಲಾದೀನ್ ಈ ನಗರವನ್ನು ಆಕ್ರಮಿಸಿಕೊಂಡಿದ್ದ. 1516ರಲ್ಲಿ ಇದು ಆಟೊಮನ್ ಚಕ್ರಾಧಿಪತ್ಯದ ಒಂದು ಭಾಗವಾಗಿತ್ತು. 19ನೆಯ ಶತಮಾನದ ಆದಿಭಾಗದಲ್ಲಿ ಇಬ್ರಾಹಿಂ ಪಾಷ ಇದನ್ನು ತನ್ನ ಸೈನಿಕನೆಲೆಯಾಗಿಸಿ ಕೊಂಡು, ಆಟೊಮನ್ ದಳಗಳ ಮೇಲೆ ವಿಜಯ ಸಾಧಿಸಿದ. 1920-21ರ ನಡುವೆ ಇದು ಹತ್ತು ತಿಂಗಳುಗಳ ಕಾಲ ಫ್ರೆಂಚರ ಆಕ್ರಮಣವನ್ನು ಯಶಸ್ವಿಯಾಗಿ ತಡೆದಿತ್ತು. ಈ ಕಾರಣದಿಂದಾಗಿಯೇ ಇದಕ್ಕೆ ಗಾಜ಼ಿ ಆಂಟೆಪ್ ಎಂದು ಮರು ನಾಮಕರಣವಾದ್ದು. ಕೊನೆಗೆ ಇದು ಫ್ರೆಂಚರ ಕೈವಶವಾಯಿತು. ಆದರೆ, 1922ರಲ್ಲಿ ಮತ್ತೆ ಇದನ್ನು ತುರ್ಕಿಗೆ ಒಪ್ಪಿಸಿಕೊಡಲಾಯಿತು. ಜ್ಯೂಪಿಟರ್ ದೊಲಿಚೆನಸ್ಸನ ಪ್ರಸಿದ್ಧ ದೇವಾಲಯವಿದ್ದ ದುಲುಕ್

(ದೊಲಿಚೆ ಎಂಬುದು ಪ್ರಾಚೀನ ಹೆಸರು) ನಗರದ ನಿವೇಶನ ಈ ನಗರದ ವಾಯವ್ಯಕ್ಕೆ ಕೆಲವೇ ಕಿ.ಮೀಗಳ ದೂರದಲ್ಲಿದೆ. ಅಲ್ಲಿಗೂ ಈ ನಗರಕ್ಕೂ ರೈಲುಸಂಪರ್ಕವುಂಟು. ದುಲುಕ್‌ನಲ್ಲಿ ಗಮನಾರ್ಹವಾದ ಅನೇಕ ಪ್ರಾಚೀನ ಸಮಾಧಿಗಳು ದೊರೆತಿವೆ. ಇದರಿಂದಾಗಿ ಗಾಜಿ ಆಂಟೆಪ್‌ನ ಮಹತ್ತ್ವ ಹೆಚ್ಚಿದೆ.

ತುರ್ಕಿ ರಾಷ್ಟ್ರೀಯ ರೈಲ್ವೆ ಜಾಲ ಈ ನಗರಕ್ಕೂ ಇತರ ನಗರಗಳಿಗೂ ಸಂಪರ್ಕ ಕಲ್ಪಿಸಿದೆ. ಸರ್ವಋತು ಭೂಮಾರ್ಗಗಳೂ ಉಂಟು. ಈ ನಗರದ ಸುತ್ತ ದ್ರಾಕ್ಷಿಯ ತೋಟಗಳು, ಪಿಸ್ತಾಶಿಯೋ ಮತ್ತು ಆಲಿವ್ ತೋಪುಗಳು ಉಂಟು. ಇದು ಈ ಪ್ರಾಂತ್ಯದ ಪ್ರಮುಖ ವ್ಯಾಪಾರ ಕೇಂದ್ರ. ಇಲ್ಲಿ ವೈದ್ಯಕೀಯ ಶಾಲೆಯನ್ನೊಳಗೊಂಡಿರುವ ಅಮೆರಿಕನ್ ಮಿಷನ್ ಕಾಲೇಜು ಮತ್ತು ಬಾಲಕಿಯರ ಶಾಲೆ ಇವೆ. ಒಂದು ಹವಾ ವೀಕ್ಷಣಾಲಯವೂ ಉಂಟು. ಉತ್ತಮ ದರ್ಜೆಯ ಹತ್ತಿ ಬಟ್ಟೆಗಳು, ಮೇಕೆಯ ಕೂದಲಿನ ಗುಡಾರದ ಬಟ್ಟೆಗಳು, ಮೇಕೆ ಚರ್ಮದ ವಸ್ತುಗಳು, ಹೊಗೆ ಸೊಪ್ಪು, ಸಾಬೂನು, ಕಚ್ಚಾ ಹತ್ತಿ ಮತ್ತು ಹತ್ತಿ ನೂಲು, ಬಣ್ಣಗಳು, ದ್ರಾಕ್ಷಾ ಪಾಕ– ಇವು ಇಲ್ಲಿಯ ಮುಖ್ಯ ವ್ಯಾಪಾರ ಸರಕುಗಳು.

ಗಾಜಿ ಆಂಟೆಪ್ ಪ್ರಾಂತ್ಯದ ವಿಸ್ತೀರ್ಣ 7642 ಚ.ಕಿ.ಮೀ. ಜನಸಂಖ್ಯೆ 1,127,686, (1997). ಯುಫ್ರೆಟೀಸ್ ಇದರ ಪೂರ್ವಕ್ಕಿದೆ. ಈ ಪ್ರಾಂತ್ಯದ ಮೇಲ್ನಾಡಿನಲ್ಲಿ ಕುರಿಗಳನ್ನೂ ಮೇಕೆಗಳನ್ನೂ ಸಾಕುತ್ತಾರೆ. ಹತ್ತಿ, ತಂಬಾಕು, ದ್ವಿದಳ ಧಾನ್ಯ ಇಲ್ಲಿಯ ಮುಖ್ಯ ಬೆಳೆಗಳು. ಮೇಕೆ ಚರ್ಮದ ರಗ್ಗುಗಳಿಗೂ ಹಲವು ಬಗೆಯ ಮದ್ಯಗಳಿಗೂ ಬಕ್ಲಾವಾ, ಪೆಕ್ಮೇಜ್ ಮೊದಲಾದ ಖಾದ್ಯವಸ್ತುಗಳಿಗೂ ಈ ಪ್ರಾಂತ್ಯ ಹೆಸರಾಗಿದೆ. ಈ ಪ್ರಾಂತ್ಯ ತುರ್ಕಿಯ ಅಶ್ವದಳಕ್ಕೆ ಕುದುರೆಗಳನ್ನು ಒದಗಿಸುತ್ತದೆ. (ಪಿ.ಜಿ.ಡಿ.)

**ಗಾಜಿನ ಕೆಲಸ :** ಪ್ರಕೃತಿಯಲ್ಲಿ ಹಲವಾರು ನೈಸರ್ಗಿಕ ವಿದ್ಯಮಾನಗಳ ಪರಿಮಾಣವಾಗಿ ಗಾಜಿನ ತುಣುಕುಗಳು ದೊರೆಯಬಹುದಾದರೂ ಸಾರಭೂತವಾಗಿ ಗಾಜು ಮನುಷ್ಯಕ್ರಿಯೆಯಿಂದ ಉತ್ಪನ್ನವಾಗುವ ಒಂದು ವಸ್ತು. ಇದರ ಬಳಕೆ ಸುಮಾರು ನಾಲ್ಕು ಸಾವಿರ ವರ್ಷಗಳಿಂದಲೂ ಇರುವುದಾಗಿ ದಾಖಲೆ ಉಂಟು. ಆದಿವಾಸಿಗಳು ಪ್ರಕೃತಿಯಲ್ಲಿ ದೊರೆತ ಜ್ವಾಲಾಮುಖಿಜ ಗಾಜಿನ ಚೂರುಗಳನ್ನು ತಮ್ಮ ಆಯುಧಗಳ ಅಲಗಿಗೆ ಸಿಕ್ಕಿಸುತ್ತಿದ್ದುದು ಅಪರೂಪವಾಗಿರಲಿಲ್ಲ. ನೀಲಿ ಬಣ್ಣದ ಗಾಜಿನ ತುಂಡೊಂದು ಪ್ರ.ಶ.ಪೂ.2200ರಲ್ಲಿ ಎರಿಡು ಎಂಬಲ್ಲಿಯೂ ಹಸಿರು ಗಾಜಿನಿಂದ ತಯಾರಾದ ಮಣಿಗಳು ಪ್ರ.ಶ.ಪೂ. 2500ರಲ್ಲಿ ಈಜಿಪ್ಟಿನಲ್ಲಿಯೂ ಹಸಿರು ಗಾಜಿನ ಕಡ್ಡಿಯೊಂದು ಪ್ರ.ಶ.ಪೂ.2600ರಲ್ಲಿ ಬ್ಯಾಬಿಲೋನಿಯದ ಈಶನುನ್ನದಲ್ಲಿಯೂ ದೊರೆತುದಕ್ಕೆ ಆಧಾರಗಳಿವೆ. ಸಿರಿಯದ ಮೆಡಿಟರೇನಿಯನ್ ಸಮುದ್ರ ತೀರದಲ್ಲಿ ಬೇಲೂಸ್ ಎಂಬ ನದಿ ನಿಕ್ಷೇಪಿಸಿದ ಮರಳಿನ ರಾಶಿಯಲ್ಲಿ ಸಂಭವಿಸಿದ ಒಂದು ಆಕಸ್ಮಿಕ ಘಟನೆಯಿಂದ ಗಾಜು ತಯಾರು ಮಾಡುವ ರೀತಿಯನ್ನು ಫೀನೀಶಿಯನ್ನರು ಪತ್ತೆ ಹಚ್ಚಿದರು. ಈ ಜನ ಈಜಿಪ್ಟಿನಿಂದ ವಾಷಿಂಗ್ ಸೋಡ ಕೊಂಡುಕೊಳ್ಳುತ್ತಿದ್ದರು. ಒಂದು ಸಲ ಬೇಲೂಸ್ ನದಿ ತೀರದಲ್ಲಿ ವಾಷಿಂಗ್ ಸೋಡವನ್ನು ಹೊತ್ತುಕೊಂಡು ಒಂದು ಹಡಗು ಬಂತು. ನಾವಿಕರು ಮರಳದಂಡೆಯ ಮೇಲೆ ಅಡುಗೆ ಮಾಡಲು ಯೋಚಿಸಿದರು. ಒಲೆ ಹೂಡಲು ಕಲ್ಲು ದೊರೆಯದಿದ್ದಾಗ ವಾಷಿಂಗ್ ಸೋಡದ ಹೆಂಟೆಗಳನ್ನೇ ಕಲ್ಲುಗಳಂತೆ ಬಳಸಿದರು. ಒಲೆ ಉರಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಪಾರದರ್ಶಕ ದ್ರವದ ಪ್ರವಾಹ ಹರಿಯುವುದು ಅವರಿಗೆ ಕಾಣಿಸಿತು. ಸೋಡ ಮತ್ತು ಮರಳಿಗೆ ಬೆಂಕಿಯ ಕಾವು ಬಡಿದಾಗ ಈ ರೀತಿಯ ದ್ರವ ಉಂಟಾಗುತ್ತಿತ್ತು. ಈ ಪ್ರವಾಹವೇ ದ್ರವರೂಪದ ಗಾಜು ಎಂದು ಅವರು ತಿಳಿದರು. ಹೀಗೆ ಅಕಸ್ಮಾತ್ತಾಗಿ ಪ್ರಾಪ್ತವಾದ ಗಾಜಿನ ತಯಾರಿಕೆಯ ಈ ವಿಧಾನವನ್ನು ಫೀನೀಶಿಯನ್ನರು ಅಭಿವೃದ್ಧಿಪಡಿಸಿ ಗಾಜಿನ ಸಾಮಾನುಗಳನ್ನು ತಯಾರಿಸಲು ಪ್ರಾರಂಭಿಸಿದರು. ಗಾಜಿನ ಸಂಶೋಧನೆಯ ಬಗ್ಗೆ ಪ್ರಚಲಿತವಿರುವ ಇನ್ನೊಂದು ದಂತಕತೆ ಹೀಗಿದೆ. ಇಸ್ರೇಲಿನ ಹುಡುಗರು ಒಮ್ಮೆ ಒಂದು ಕಾಡಿಗೆ ಬೆಂಕಿ ಹಚ್ಚಿದರು. ಬೆಂಕಿಯ ಕಾವಿಗೆ ಕಾಡಿನಲ್ಲಿದ್ದ ಮರಳು ಮತ್ತು ಪೆಟ್ಲುಪ್ಪು ಕರಗಿ ಬೆಟ್ಟಗಳಿಂದ ಇವುಗಳ ದ್ರವ ಪ್ರವಾಹ ಹರಿಯಿತು. ಇದೇ ಗಾಜಿನ ಪ್ರಥಮಾವಿಷ್ಕಾರ. ಒಟ್ಟಿನಲ್ಲಿ ಫೀನೀಶಿಯನ್ನರೂ ಇಸ್ರೇಲಿಗಳೂ ಗಾಜನ್ನು ಪತ್ತೆ ಮಾಡಿದರು ಎನ್ನಬಹುದು. ಅದರೆ ಇವರಿಗಿಂತ ಮೊದಲೇ ಪುರಾತನ ಈಜಿಪ್ಷಿಯನ್ನರು ಗಾಜಿನ ತಯಾರಿಕೆಯನ್ನು ಅರಿತಿದ್ದರು ಎಂಬುದಕ್ಕೆ ಅಲ್ಲಿ ದೊರೆತ ಗಾಜಿನ ಸಾಮಾನುಗಳು ಆಧಾರವಾಗಿವೆ. ಪುರಾತನ ಈಜಿಪ್ಟಿನಲ್ಲಿ ಗಂಡಸರು ಹೆಂಗಸರು ಗಾಜಿನ ಮಣಿಗಳ ಸರಗಳನ್ನು ಬಳಸುತ್ತಿದ್ದರು.

ಕ್ರಿಸ್ತನ ಕಾಲಕ್ಕಿಂತ ಮುಂಚೆ ಕೊಳವಿಯನ್ನು ಊದಿ ಗಾಜಿನ ಭರಣಿಗಳನ್ನು ತಯಾರಿಸುತ್ತಿದ್ದರು. ಗಾಜಿನ ಪಾತ್ರೆಗಳನ್ನು ತಯಾರಿಸಲು ಪುರಾತನ ಈಜಿಪ್ಷಿಯನ್ನರು ಮೊದಲು ಒಂದು ಲೋಹದ ಕಡ್ಡಿಗೆ ಸಿಲಿಕದ ಅಂಟು ಹಿಟ್ಟನ್ನು ಪಾತ್ರೆಯ ಆಕಾರ ಮಾಡಿ ಮೆತ್ತುತ್ತಿದ್ದರು. ಇದು ಒಣಗಿದ ಬಳಿಕ ಕಡ್ಡಿಯನ್ನು ಕರಗಿದ ಗಾಜಿನಲ್ಲಿ ಅದ್ದುತ್ತಿದ್ದರು. ಸಿಲಿಕದ ಹಿಟ್ಟಿನ ಮೇಲೆ ಕುಳಿತ ಗಾಜಿನ ದ್ರವ ಒಣಗಿದ ತರುವಾಯ ಒಳಗಿದ್ದ ಸಿಲಿಕದ ಹಿಟ್ಟನ್ನು ಅಗೆದು ತೆಗೆದು ಹಾಕುತ್ತಿದ್ದರು. ಅಮೆನ್ ಹೊಟೆಪ್–2 ಈಜಿಪ್ಟ್‌ದೇಶವನ್ನು ಆಳುತ್ತಿದ್ದ ಸಮಯದಲ್ಲಿ ಮೊದಲು ಗಾಜಿನ ಪಾತ್ರೆಗಳ ತಯಾರಿಕೆ ಆರಂಭವಾಯಿತು ಎನ್ನಬಹುದು. ಪ್ರ.ಶ.ಪೂ.8ನೆಯ ಶತಮಾನದಿಂದ 6ನೆಯ ಶತಮಾನದ ವರೆಗಿನ ಕಾಲದಲ್ಲಿ ತಯಾರಾಗಿದ್ದ ಗಾಜಿನ ವಸ್ತುಗಳು ಮೆಸೊಪೊಟೇಮಿಯ ದಲ್ಲಿ ಸಿಕ್ಕಿವೆ. ಪ್ರ.ಶ.ಪೂ. 6ನೆಯ ಶತಮಾನದಿಂದ ಗ್ರೀಕರು ನೆಲೆಸಿದ್ದ ಈಜಿಯನ್ ಗ್ರೀಸ್, ಇಟಲಿ ಮತ್ತು ಸಿಸಿಲಿಯಲ್ಲಿ ಹೆಚ್ಚು ಗಾಜು ದೊರೆತಿವೆ. ಈಜಿಪ್ಟಿನ ಭೂಮಿಯಲ್ಲಿ ಹಿಂದೆ ಸಿಕ್ಕಿದ ಪರಿಮಾಣಕ್ಕಿಂತ ಹೆಚ್ಚು ಗಾಜು ಈ ಸ್ಥಳದಲ್ಲಿ ಸಿಕ್ಕಿದೆ. ಈ ಗಾಜಿನ ಪಾತ್ರೆಗಳಲ್ಲಿದ್ದ ಕಲೆ, ಅವುಗಳ ಬಣ್ಣ ಮತ್ತು ರಚನೆ ಈಜಿಪ್ಷಿಯನ್ನರ ಕಲೆಗಿಂತ ಭಿನ್ನವಾಗಿದ್ದವು. ಕಾನ್‌ಸ್ಟಾಂಟಿನೋಪಲಿನ ಅವನತಿಯ ಸಮಯದಲ್ಲಿ ವೆನಿಸ್ ಮುಂತಾದ ಕಡೆಗಳಲ್ಲಿ ಗಾಜಿನ ಕೈಗಾರಿಕೆ ಹರಡಿ ಸುಮಾರು 8000 ಜನರಿಗೆ ಉದ್ಯೋಗ ದೊರೆತಿತ್ತು. 1870ರಲ್ಲಿ ಬೊಹೀಮಿಯದಲ್ಲಿ 30,000ಜನ ಗಾಜಿನ ಕೆಲಸ ಮಾಡುತ್ತಿದ್ದರು. ಭಾರತದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಗಾಜಿನ ವಸ್ತುಗಳೆಂದರೆ ತಕ್ಷಶಿಲೆಯ ದಿಬ್ಬಗಳಲ್ಲಿ ದೊರೆತವು. ಇವು ಪ್ರ.ಶ.ಪೂ.5ನೆಯ ಶತಮಾನದವೆಂದು ಗುರುತಿಸಲಾಗಿದೆ. ಆದರೆ ಭಾರತದಲ್ಲಿ ಅದಕ್ಕೂ ಮೊದಲೇ ಗಾಜಿನ ಉಪಯೋಗವಿತ್ತು ಎನ್ನುವುದಕ್ಕೆ ವಿಪುಲ ಉಲ್ಲೇಖಗಳು ಶತಪಥ ಬ್ರಾಹ್ಮಣದಲ್ಲಿ ಇವೆ.

ಬಹಳ ಪುರಾತನ ಕಾಲದಿಂದಲೂ ವಿವಿಧ ರೀತಿಯ ಪಾತ್ರೆಗಳನ್ನು ತಯಾರಿಸಲು ಗಾಜನ್ನು ಬಳಸುತ್ತಿದ್ದರು. ಬಣ್ಣದ ಗಾಜಿನ ಕಡ್ಡಿಗಳ ತಯಾರಿಕೆಯಲ್ಲೂ ವಿವಿಧ ಹೂಗಳನ್ನು ಪಾತ್ರೆಗಳಲ್ಲಿ ಚಿತ್ರಿಸುವ ಕಲೆಯಲ್ಲೂ ಈಜಿಪ್ಟಿನ ಅಲೆಗ್ಸಾಂಡ್ರಿಯ ಅಗ್ರಸ್ಥಾನ ಪಡೆದಿತ್ತು. ಕರಗಿದ ಗಾಜನ್ನು ಅಚ್ಚುಗಳಲ್ಲಿ ಹಾಕಿ ಗಾಜಿನ ಭರಣಿಗಳನ್ನು ತಯಾರಿಸುತ್ತಿದ್ದರು. ಯಂತ್ರಗಳಿಂದ ಈ ಆಕರ್ಷಕ ಭರಣಿಗಳಿಗೆ ಹೊಳಪನ್ನು ಸಹ ಕೊಡುತ್ತಿದ್ದರು. ಊದುವುದರ ಮೂಲಕವೂ ಅಚ್ಚುಹಾಕಿಯೂ ಗಾಜಿನ ಸಾಮಾನುಗಳನ್ನು ತಯಾರಿಸುತ್ತಿದ್ದರು. ಸಿರಿಯ ದೇಶದ ಗಾಜಿನ ಕೆಲಸದವರು ಮೊದಲು ಗಾಜನ್ನು ಊದುವುದರ ಮೂಲಕ ಪಾತ್ರೆಗಳನ್ನು ತಯಾರಿಸುತ್ತಿದ್ದರು. ಇವರು ಇಟಲಿಗೆ ಹೋಗಿ ನೆಲೆಸಿದುದರಿಂದ ಆ ದೇಶ ಗಾಜಿನ ಉತ್ಪತ್ತಿಯಲ್ಲಿ ಹೆಸರು ಪಡೆಯಿತು. ಗಾಜಿನ ಲೋಟಗಳ ಮೇಲೆ ಸುಂದರ ಆಕೃತಿಗಳನ್ನು ಚಿತ್ರಿಸುವುದು ಮತ್ತು ಕೆತ್ತನೆಯ ಕೆಲಸ ಮಾಡುವುದು ಇಟಲಿಯಲ್ಲಿ ಅಭಿವೃದ್ಧಿ ಹೊಂದಿದವು. ಕ್ರಮೇಣ ಈ ಗಾಜಿನ ಕೈಗಾರಿಕೆ ಇಟಲಿಯಿಂದ ರೈನ್ ಪ್ರದೇಶಕ್ಕೆ ಹರಡಿತು. ಸರ್ಪದ ಆಕಾರದ ಗಾಜಿನ ಬಳ್ಳಿಗಳಿಂದ ಅಲಂಕೃತವಾಗಿದ್ದ ಗಾಜುಗಳಿಗೆ ಮತ್ತು ಅದರಲ್ಲಿದ್ದ ಅದ್ಭುತ ಕೆತ್ತನೆಯ ಕೆಲಸ ಇವು ಈ ದೇಶದ ಹೆಸರನ್ನು ಎತ್ತಿ ಹಿಡಿದಿದ್ದುವು. 3 ಮತ್ತು 4ನೆಯ ಶತಮಾನಗಳಲ್ಲಿ ಗಾಜಿನ ಮೇಲೆ ಈ ರೀತಿಯ ಕಲಾಕೌಶಲಗಳು ಕಂಗೊಳಿಸುತ್ತಿದ್ದುವು. ಈಜಿಪ್ಟಿನ ಅಮೆನ್ ಹೊಟೆಪ್–4 ಆಳುತ್ತಿದ್ದ ಕಾಲದಲ್ಲಿ ಟೆಲ್–ಎಲ್–ಅಮಾರ್ನ ಎಂಬ ಸ್ಥಳದಲ್ಲಿ ಅಗೆದಾಗ ಗಾಜಿನ ಕಾರ್ಖಾನೆಯೊಂದರ ಅವಶೇಷ ಕಂಡುಬಂತು. ಗಾಜಿನ ಕೊಳವೆ ಮತ್ತು ಚೂರುಗಳನ್ನು ಈ ಸ್ಥಳದಲ್ಲಿ ಕಂಡರು.



ಕಾರ್ಯಾಗಾರದಲ್ಲಿ ಅಚ್ಚುಗಳನ್ನು ಕುಶಲಿ ಕೆತ್ತುತ್ತಿರುವುದು

ರೋಮನ್ನರ ಕಾಲದ ತರುವಾಯ ಈಜಿಪ್ಟಿನಲ್ಲಿ ಗಾಜನ್ನು ತಯಾರಿಸುವ ಕಲೆ ನವೀನ ಹಾದಿಯನ್ನು ಹಿಡಿಯಿತು. ಚಿಮಟದಿಂದ ಗಾಜುಗಳ ಮೇಲೆ ಮುದ್ರೆ ಒತ್ತುತ್ತಿದ್ದರು. ಕರಗಿದ ಗಾಜನ್ನು ಸಾಚೆಯಲ್ಲಿ(ಮೋಲ್ಡ್) ಹಾಕಿ ನಾಣ್ಯದಂಥ ಒತ್ತುಗಳನ್ನು

ತಯಾರಿಸುತ್ತಿದ್ದರು. ಹೊಳಪುಳ್ಳ ಮತ್ತು ಮಿರುಗುವ ಬಣ್ಣಗಳಿಂದ ಗಾಜುಗಳಿಗೆ ಬಣ್ಣ ಬಳಿಯುವ ಕಲೆಯನ್ನು ಮೊದಲು ಕಂಡುಹಿಡಿದವರು ಈಜಿಪ್ಷಿನವರು. ಉದಾಹರಣೆಗೆ ಬೆಳ್ಳಿಯ ಬಣ್ಣವನ್ನು ಗಾಜಿಗೆ ಹಚ್ಚಿ ಅನಂತರ ಆಮ್ಲಜನಕವಿಲ್ಲದ ಆವರಣದಲ್ಲಿ ಕಾಯಿಸುವುದು. ಆಗ ಈ ಬಣ್ಣ ತಿಳಿ ಹಳದಿಯ ಅಥವಾ ಬೂದು ಬಣ್ಣದ ಪೊರೆಯನ್ನು ಗಾಜಿನಲ್ಲಿ ಉಂಟುಮಾಡುತ್ತದೆ. ಗಾಜಿನ ಬೋಗುಣಿ ಮತ್ತು ಸೀಸೆಗಳ ಮೇಲೆ ಈ ಕಲೆಯನ್ನು ಪ್ರದರ್ಶಿಸುತ್ತಿದ್ದರು.

ಭಾರತದಲ್ಲಿ ಗಾಜಿನ ಕೆಲಸ : ಬರೋಡದಲ್ಲಿ ಸ್ಥಾಪಿತವಾದ (1944) ಅಲೆಂಬಿಕ್ ಗಾಜಿನ ಕಾರ್ಖಾನೆಯೇ ಆಧುನಿಕ ಭಾರತದಲ್ಲಿ ಸ್ಥಾಪಿತವಾದ ಮೊದಲ ಕಾರ್ಖಾನೆ. ಮುಂದೆ 1948ರಲ್ಲಿ ಈ ಕಾರ್ಖಾನೆ ಸ್ವಯಂಚಾಲಕ ಯಂತ್ರಗಳನ್ನು ಬಳಸಲು ತೊಡಗಿತು. ಈಗ(1972) ಭಾರತದಲ್ಲಿ ಮೂವತ್ತೊಂಬತ್ತು ಗಾಜಿನ ಕಾರ್ಖಾನೆಗಳಿವೆ. 1964–65ರಲ್ಲಿ ಭಾರತದಿಂದ ಸುಮಾರು 27 ಲಕ್ಷ ರೂಪಾಯಿಗಳ ಗಾಜಿನ ಪಾತ್ರೆಗಳನ್ನು ಹೊರಗಿನ ದೇಶಗಳಿಗೆ ರಫ್ತುಮಾಡಿದರು. ಗಾಜಿನ ಪಾತ್ರೆಗಳ ಉತ್ಪತ್ತಿ 1952ರಲ್ಲಿ ಸುಮಾರು 50,000 ಮೆಟ್ರಿಕ್ ಟನ್ನುಗಳಿದ್ದು 1965ರಲ್ಲಿ ಅದು 1,55,000 ಮೆಟ್ರಿಕ್ ಟನ್ನುಗಳಿಗೆ ಏರಿತ್ತು. ಭಾರತದಲ್ಲಿ ತಯಾರಾದ ಗಾಜಿನ ಸೀಸೆಗಳನ್ನು ಶ್ರೀಲಂಕ, ಇರಾನ್, ಸೌದಿ ಅರೇಬಿಯ, ಬರ್ಮ, ಪಾಕಿಸ್ತಾನ, ಥಾಯ್‍ಲೆಂಡ್, ಪೂರ್ವ ಆಫ್ರಿಕ, ಕುವೈತ್ ಮತ್ತು ನೇಪಾಲಗಳಿಗೆ ರಫ್ತು ಮಾಡುತ್ತಾರೆ.

ಕರ್ನಾಟಕದಲ್ಲಿ ಎರಡು ಗಾಜಿನ ಕಾರ್ಖಾನೆಗಳಿವೆ. ಬೆಂಗಳೂರು ಜಿಲ್ಲೆಯಲ್ಲಿರುವ ವೈಟ್‍ಫೀಲ್ಡಿನ ಅಲೆಂಬಿಕ್ ಗಾಜಿನ ಕಾರ್ಖಾನೆ (ಸ್ಥಾಪನೆ 1966) ಸ್ವಯಂಚಾಲಕ ಯಂತ್ರಗಳಿಂದ ನಡೆಯುತ್ತದೆ. ಇದು ದಕ್ಷಿಣ ಭಾರತದಲ್ಲೇ ಮೊದಲನೆಯದು. ಈ ಕಾರ್ಖಾನೆಯಲ್ಲಿ ಪ್ರತಿದಿವಸ 55 ಟನ್ ಗಾಜಿನ ಸಾಮಾನುಗಳು ಉತ್ಪತ್ತಿಯಾಗುತ್ತವೆ. ಉತ್ಪತ್ತಿ ಮಟ್ಟವನ್ನು 130 ಟನ್ನುಗಳಿಗೆ ಏರಿಸುವ ಉದ್ದೇಶ ಉಂಟು. ಇದರ ವಾರ್ಷಿಕ ಉತ್ಪಾದನ ಸಾಮರ್ಥ್ಯ 24,000 ಟನ್ನುಗಳು. ವಾರ್ಷಿಕ ಮಾರಾಟ ಮೌಲ್ಯ ಸುಮಾರು ರೂ.1,20,000. ಪ್ರಯೋಗ ಶಾಲೆಯಲ್ಲಿ ಪರೀಕ್ಷೆ ಮಾಡಿದ ಉತ್ತಮ ಗುಣದ ಗಾಜುಗಳನ್ನು ಈ ಕಾರ್ಖಾನೆಯಲ್ಲಿ ತಯಾರಿಸುತ್ತಾರೆ.



**ಗಾಜಿನ ಕುಪ್ಪಿಗಳು ಕುಲುಮೆಯಿಂದ ಹೊರಬರುತ್ತಿವೆ**

ಗಾಜಿನ ತಯಾರಿಕೆ: ಒಟ್ಟು ಗಾಜಿನ ಉತ್ಪತ್ತಿಯಲ್ಲಿ ಶೇ.95 ಭಾಗ ಸಾಮಾನ್ಯ ಗುಣದ ಗಾಜಿರುತ್ತದೆ. ಉಳಿದದ್ದು ವಿಶೇಷ ಗಾಜುಗಳು. ಗಾಜನ್ನು ತಯಾರಿಸಲು ಬಳಸುವ ಕಚ್ಚಾ ಪದಾರ್ಥಗಳು ಪ್ರಮಾಣ ಹೀಗಿರುತ್ತದೆ: ಸಿಲಿಕ(ಮರಳು) ಶೇ.75, ಸುಣ್ಣ ಶೇ.10, ಸೋಡ ಶೇ.15, ಗಾಜಿನ ಹಾಳೆಯನ್ನು ತಯಾರಿಸುವಾಗ ಸುಣ್ಣದ ಅಂಶದಲ್ಲಿ ನಾಲ್ಕು ಭಾಗ ತೆಗೆದು ಆ ಸ್ಥಳದಲ್ಲಿ ಮೆಗ್ನೀಶಿಯಂ ಅನ್ನು ಬಳಸುತ್ತಾರೆ. ಸೀಸೆಯ ಗಾಜು ಮಾಡುವಾಗ ಶೇ.2 ಭಾಗ ಅಲ್ಯುಮಿನಿಯಂ ಬಳಸುತ್ತಾರೆ. ವಾಣಿಜ್ಯ ಗಾತ್ರದಲ್ಲಿ ಗಾಜನ್ನು ತಯಾರಿಸುವಾಗ ಗೋಣಿಚೀಲದಲ್ಲಿ ಶೇಖರಿಸಿರುವ ಕಚ್ಚಾ ಪದಾರ್ಥಗಳನ್ನು ತೂಕ ಮಾಡಿ ಒಲೆಗೆ ಅಥವಾ ಕುಲುಮೆಗೆ ಹಾಕಲು ಕಳಿಸುತ್ತಾರೆ. ದೊಡ್ಡ ಕಾರ್ಖಾನೆಗಳಲ್ಲಿ ತೂಕ ಮಾಡುವ ಕೆಲಸ ಸ್ವಯಂಚಾಲಕ ಯಂತ್ರಗಳಿಂದ ನಡೆಯುತ್ತದೆ. ಕಾಂಕ್ರೀಟ್ ಮಿಶ್ರಣವನ್ನು ಮಾಡುವಂಥ ಯಂತ್ರದಲ್ಲಿ ಕಚ್ಚಾಪದಾರ್ಥಗಳ ಮಿಶ್ರಣವನ್ನು ಮಾಡುತ್ತಾರೆ. ಹೀಗೆ ತಯಾರಾದ ಮಿಶ್ರಣವನ್ನು ಸಾಲು ಬಕೆಟ್ಟುಗಳಲ್ಲಿ ತುಂಬಿ ಸಾಗುಪಟ್ಟಿ ಟ್ರಾಲಿಗಳ ಮುಖಾಂತರ ಅಥವಾ ಸಣ್ಣ ರೈಲುಗಳಿಂದ ಅಥವಾ ಕೊಳವೆಗಳ ಮೂಲಕ ಒತ್ತಡದ ವಾಯುವನ್ನು ಉಪಯೋಗಿಸಿ ನೂಕುತ್ತಾರೆ. ಈ ಕಚ್ಚಾ ಪದಾರ್ಥಗಳ ಮಿಶ್ರಣ ಹೋಗುವಾಗ ಅಲ್ಲಾಡಿ ಬೀಳಬಹುದು. ಇದನ್ನು ತಪ್ಪಿಸಲು ಈ ಮಿಶ್ರಣವನ್ನು ಅದುಮಿ ಇಟ್ಟಿಗೆಯಂತೆ ಮಾಡಿ ಅನಂತರ ರವಾನಿಸುತ್ತಾರೆ. ಯಾವ ರೀತಿಯ ಗಾಜನ್ನು ತಯಾರಿಸುತ್ತಾರೋ ಅದರ ಗಾಜಿನ ತುಂಡುಗಳನ್ನು ಈ ಮಿಶ್ರಣದಲ್ಲಿ ಬೆರೆಸಿರುವುದು ಪದ್ಧತಿ. ಇದರಿಂದ ಅನುಕೂಲತೆಯೂ ಉಂಟು. ಹಿಂದಿನ ತಯಾರಿಕೆಯಿಂದ ಬಂದ ಈ ವ್ಯರ್ಥವಾದ ಗಾಜಿನ ತುಂಡುಗಳಿಗೆ ಕಲೆಟ್ ಎಂದು ಹೆಸರು. ಇದನ್ನು ಸಣ್ಣ ಚೂರುವಾಡಿ ಬಳಸುತ್ತಾರೆ. ನವೀನ ಯಂತ್ರೋಪಕರಣಗಳಲ್ಲಿ ಸೂತ್ರಕ್ಕೆ ಅನುಸಾರವಾಗಿ, ಮರಳು ಅಥವಾ ಬೆಣಚುಕಲ್ಲಿನ ಪುಡಿ, ಸೋಡಿಯಂ ಕಾರ್ಬೊನೇಟ್ ಮತ್ತು ಇತರ ವಸ್ತುಗಳನ್ನು ಬೆರೆಸಿ ಮಿಶ್ರಣ ಮಾಡುವರು. ಸಾಗುಪಟ್ಟಿಗಳ ಮೇಲೆ ಚಲಿಸುವ ಬಕೆಟ್ಟುಗಳಲ್ಲಿ ಈ ಮಿಶ್ರಣವನ್ನು



**ಅನ್ನೀಲನಕೋಷ್ಠದಿಂದ ಹೊರಬಂದ ಕುಪ್ಪಿಗಳನ್ನು ಮಾರುಕಟ್ಟೆಗೆ ನಿರ್ಯಾತ ಮಾಡಲು ಪರೀಕ್ಷಿಸುತ್ತಿದ್ದಾರೆ**

ಯಂತ್ರಕ್ಕೆ ಸಾಮಾನು ಒದಗಿಸುವ ಸಲಕರಣೆಗೆ ತಲುಪಿಸುವರು. ಇಲ್ಲಿಂದ ಈ ಮಿಶ್ರಣವನ್ನು ಒಂದೇ ಸಮನಾಗಿ ಉರಿಯುತ್ತಿರುವ ಒಲೆಯಲ್ಲಿ ಸುರಿಯುವರು. ಸುಮರು $1480^0$ ಸೆಂ. ಉಷ್ಣತೆಯಲ್ಲಿ ಕರಗಿದ ಗಾಜು ಶುದ್ಧಗೊಳಿಸುವ ಕೊಠಡಿಗೆ ನಿಧಾನವಾಗಿ ಒಂದೇ ಪ್ರವಾಹದಲ್ಲಿ ಹೋಗುತ್ತದೆ. ಕೊಳೆಯನ್ನು ಈ ಕೊಠಡಿಯಲ್ಲಿ ತೆಗೆದು ಶುದ್ಧ ಗಾಜನ್ನು ದುಂಡನೆಯ ರಂಧ್ರದ ಮೂಲಕ ಹೊರ ನೂಕುತ್ತಾರೆ. ನಿಧಾನವಾಗಿ ಹರಿಯುವ ಈ ಮಂದ ಗಾಜನ್ನು ಬೇಕಾದ ಗಾತ್ರಕ್ಕೆ ಕತ್ತರಿಸಿ ಮುದ್ದೆ ಮಾಡುವರು. ಕೆಂಪಗೆ ಕಾದಿರುವ ಮುದ್ದೆಗಾಜು ನಕ್ಷತ್ರದಂತೆ ಪ್ರಕಾಶಿಸುತ್ತ ಅಚ್ಚುಗಳಿಗೆ ಬಿದ್ದು ಅವುಗಳಲ್ಲಿರುವ ಆಕಾರಗಳನ್ನು ಪಡೆಯುವುದು. ಗಾಜಿನ ಆಕಾರವನ್ನು ಪೂರ್ಣಮಾಡುವ ಅಚ್ಚು, ಅದು ಹಿಡಿದುಕೊಂಡು ಕೆಲವೇ ಸೆಕೆಂಡುಗಳಲ್ಲಿ ಒತ್ತಡದ ವಾಯುವನ್ನು ಊದುವುದರ ಮೂಲಕ, ಸೀಸೆಗೆ ಸರಿಯಾದ ಆಕಾರವನ್ನು ಕೊಡುತ್ತದೆ. ಕಬ್ಬಿಣದ ಅಚ್ಚುಗಳ ಬಾಯಿ ತೆರೆದಾಗ ಸೀಸೆಯ ಸಮೂಹ ಹೊರಗೆ ಬೀಳುತ್ತದೆ. ಪ್ರತಿಯೊಂದು ಸೀಸೆಯೂ ಆಕಾರ ಮತ್ತು ಗಾತ್ರದಲ್ಲಿ ಒಂದೇ ರೀತಿ ಇರುವುದು. ಹೊಳೆಯುವ ಸೀಸೆ ಅಥವಾ ಜಾಡಿಗಳು ಕಾವಿನಿಂದ ಹದಮಾಡುವ ಒಲೆಗಳುಳ್ಳ ಸುರಂಗದಲ್ಲಿ ಸಾಗುಪಟ್ಟಿಯ ಮೂಲಕ ಹಾದು ಹೋಗಿ ನಿಧಾನವಾಗಿ ತಣ್ಣಗಾಗುತ್ತದೆ. ತರಬೇತಾಗಿರುವ ವೀಕ್ಷಕರು  ಈ ಸುರಂಗದ ಇನ್ನೊಂದು ಭಾಗದಲ್ಲಿ ಸೀಸೆಗಳನ್ನು ಪರೀಕ್ಷಿಸುವರು. ಅವುಗಳಲ್ಲಿ ದೋಷ ಕಂಡುಬಂದರೆ ಅಂಥವನ್ನು ಬೇಡದ ಗಾಜು ಎಂದು ಪರಿಗಣಿಸಿ ಮುಂದಿನ ಒಬ್ಬೆಯಲ್ಲಿ ಬಳಸುವರು. ಆಗ ತಾನೆ ತಯಾರಾದ ಗಾಜಿನ ಸೀಸೆಗಳನ್ನು ಮಾರಾಟಕ್ಕೆ ರವಾನಿಸುವ ಮೊದಲು ಪ್ರಯೋಗಶಾಲೆಯಲ್ಲಿ ಬೆಳಕಿನ ಕಿರಣಗಳಿಗೆ ಒಡ್ಡಿ ಪರೀಕ್ಷಿಸುತ್ತಾರೆ. ಸೀಸೆಯಲ್ಲಿ ಯಾವ ಬಣ್ಣವೂ ಕಾಣಿಸದಿದ್ದರೆ ಅದು ತೇರ್ಗಡೆ ಹೊಂದುತ್ತದೆ. ಅದರಲ್ಲಿ ಹಳದಿ ಮುಂತಾದ ಬಣ್ಣ ಕಂಡಲ್ಲಿ ಆ ಸೀಸೆಯನ್ನು ತೆಗೆದುಹಾಕಿ ಕಲೆಟ್ ಆಗಿ ಬಳಸುತ್ತಾರೆ. ಸುಮಾರು 50 ಪೌಂಡ್ ತೂಕದ ಒತ್ತಡವನ್ನು ಯಂತ್ರದ ಮುಖಾಂತರ ಸೀಸೆಯ ಮೇಲೆ ಹೇರಲಾಗುವುದು. ಸೀಸೆಯ ಸಾಮರ್ಥ್ಯ ಸರಿಯಾಗಿದ್ದರೆ ಅಗ ಏನೂ ಆಗುವುದಿಲ್ಲ ಇಲ್ಲದಿದ್ದರೆ ಅದು ಒಡೆದು ಹೋಗುತ್ತದೆ. ಸೀಸೆಗಳಿಗೆ ಕಾವು ಕೊಟ್ಟ ತತ್‍ಕ್ಷಣ ತಣ್ಣಗೆ ಮಾಡಿದರೆ ಅದನ್ನು ಅವು ತಾಳಿಕೊಳ್ಳುತ್ತವೆಯೇ ಎಂಬುದನ್ನು ಪರೀಕ್ಷಿಸಲು ಬಿಸಿನೀರು ಮತ್ತು ತಣ್ಣಗಿರುವ ನೀರಿನ ತೊಟ್ಟಿಗಳಲ್ಲಿ ಸೀಸೆಗಳನ್ನು ಮುಳಗಿಸಿ ನೋಡುತ್ತಾರೆ. ಉತ್ತಮ ಗುಣದ ಸೀಸೆಯ ಮೇಲೆ ಇದರಿಂದ ಯಾವ ಪರಿಣಾಮವೂ ಆಗುವುದಿಲ್ಲ. ಸೀಸೆ ಸರಿಯಾಗಿಲ್ಲದಿದ್ದರೆ ಒಡೆದು  ಹೋಗುತ್ತದೆ.


**ವಿವಿಧ ಗಾಜುಗಳು :** 1 ಗಾಜಿನ ಸುರುಳಿ(ರೋಲ್ಡ್ ಗ್ಲಾಸ್): ಪ್ರಾರಂಭದಲ್ಲಿ ಹಾಳೆಗಾಜು(ಷೀಟ್ ಗ್ಲಾಸ್) ಮತ್ತು ತಟ್ಟೆ ಗಾಜುಗಳಲ್ಲಿ (ಪ್ಲೇಟ್ ಗ್ಲಾಸ್) ಬಹಳ ವ್ಯತ್ಯಾಸವಿತ್ತು. ಊದುವುದರ ಮುಖಾಂತರ ಒಂದನ್ನು ತಯಾರಿಸುತ್ತಿದ್ದರು.

ಇನ್ನೊಂದನ್ನು ಅಚ್ಚಿಗೆ ಹಾಕಿ ಸುರುಳಿ ಸುತ್ತುತ್ತಿದ್ದರು. ತಟ್ಟೆ ಗಾಜಿನ ಭಾಗಗಳಿಗೆ ಕಡೆಗೆ ಮೆರಗು ಕೊಡುತ್ತಿದ್ದರು. ಈಗ ಮುಂಚಿನ ಹಾಗೆ ಈ ವಿಂಗಡಣೆ ಸರಳವಾಗಿಲ್ಲ. 1688ರಲ್ಲಿ ಮೊದಲು ತಟ್ಟೆ ಗಾಜನ್ನು ತಯಾರಿಸಿದರು. ಕರಗಿದ ಗಾಜನ್ನು ಇಳಿಜಾರು ಮೇಜಿನ ಮೇಲೆ ಎರಕ ಹೊಯ್ಯುತ್ತಿದ್ದರು. ಇದರಲ್ಲಿ ಎರಡು ಸುರುಳಿ ಗಾಜು ಸಿಗುತ್ತಿತ್ತು.

**2 ಹೊಳಪಿನ ಗಾಜು :** ಆರ್ಗ್ಯಾನಿಕ್ ಗಂಧಕದ ಮಿಶ್ರಣಗಳಾದ ಚಿನ್ನ, ಪ್ಲಾಟಿನಮ್ ಮತ್ತು ಇತರ ಪ್ರಮುಖ ಲೋಹಗಳನ್ನು ಲ್ಯಾವೆಂಡರ್ ಸುಗಂಧ ಎಣ್ಣೆಯಲ್ಲಿ ತೆಗೆದುಕೊಂಡು ಗಾಜಿಗೆ ಬಳಿದರೆ ಹೊಳಪುಗಾಜು ದೊರೆಯುತ್ತದೆ.

**3 ಅಲಂಕೃತ ಗಾಜು :** ಚಿನ್ನ ಬೆಳ್ಳಿ ಮತ್ತು ತಾಮ್ರಗಳನ್ನುಳ್ಳ ಕೆಲವು ಗಾಜುಗಳು ಬೆಳಕಿಗೆ ಸೂಕ್ಷ್ಮವಾಗಿರುತ್ತವೆ. ಇವನ್ನು ಅತಿ ತೀಕ್ಷ್ಣವಾದ ಅತಿನೇರಿಳೆ ಕಿರಣಗಳಿಗೆ (ಅಲ್ಟ್ರವಯೊಲೆಟ್ ರೇಸ್) ಒಡ್ಡಿದರೆ ಯಾವ ಬದಲಾವಣೆಯೂ ಗಾಜಿನಲ್ಲಿ ಕಂಡು ಬರುವುದಿಲ್ಲ. ಆದರೆ ಈ ಗಾಜನ್ನು ಮೃದುವಾಗಿ ಮಾಡಲು ಕಾಯಿಸಿದಾಗ ಅದು ಹಳದಿ ಅಥವಾ ಕೆಂಪುಬಣ್ಣಕ್ಕೆ ತಿರುಗುತ್ತದೆ.

**4 ಸಂರಕ್ಷಕ ಗಾಜು :** ಗಾಜು ಮುರಿದಾಗ ಅಥವಾ ಒಡೆದಾಗ ಜನರಿಗೆ ಅದು ಸಿಡಿದು ಉಂಟಾಗುವ ಅಪಾಯವನ್ನು ಇದು ಕಡಿಮೆ ಮಾಡುತ್ತದೆ. ಎರಡು ಗಾಜಿನ ಹಾಳೆಗಳ ಮಧ್ಯದಲ್ಲಿ ಮೆದುವಾದ ಹಾಳೆಯೊಂದನ್ನು ಇಟ್ಟು ತೆಳುಪದರದ ಗಾಜನ್ನು ತಯಾರಿಸುತ್ತಾರೆ. ಹಾಗಾಗಿ ಗಾಜು ಮುರಿದಾಗ ಅಪಾಯವಾಗುವುದಿಲ್ಲ. ಗಾಜಿನ



ಕುಪ್ಪಿಗಳ ಮೇಲೆ ಅಕ್ಷರಗಳನ್ನೂ ಅಲಂಕಾರ ಚಿತ್ರಗಳನ್ನೂ ಮುದ್ರಿಸುವ ಸ್ಥಾವರ

ಹಾಳೆಗಳನ್ನು ಅವು ಮೃದುವಾಗುವ ಅವಧಿಕ ಸ್ಥಿತಿವರೆಗೆ ಕಾಯಿಸಿ ಬಳಿಕ ಒಂದೇ ಸಮನಾಗಿ ವಾಯುವಿನಿಂದ ಬೇಗ ತಣ್ಣಗೆ ಮಾಡಲಾಗುವುದು. ಇಂಥ ಗಾಜನ್ನು ಕಾರು, ಮೋಟಾರು ವಾಹನ ಮುಂತಾದವುಗಳಲ್ಲಿ ಬಳಸುತ್ತಾರೆ.

**5. ಗಾಜಿನ ದಾರ :** ಬಿಸಿಯಾಗಿರುವ ಗಾಜನ್ನು ಎಳೆದು ದಾರದಂತೆ ಮಾಡಿ ಅದನ್ನು ಗಾಜಿನ ಪಾತ್ರೆಗಳ ಮೇಲೆ ಆಭರಣದಂತೆ ತೊಡಿಸುವುದನ್ನು ಮೊದಲು ಗಾಜಿನ ಚರಿತ್ರೆ ಆರಂಭವಾದಾಗಿನಿಂದಲೂ ಕಾಣಬಹುದು **(ನೋಡಿ– ಗಾಜಿನಬಟ್ಟೆ)**.

**6. ರಂಗಿನ ಗಾಜು :** ಸಾವಿರಾರು ವರ್ಷಗಳ ಹಿಂದೆ ಚರ್ಚುಗಳ ಕಿಟಕಿಯ ಗಾಜುಗಳನ್ನು ರಂಗಿನಿಂದ ಚಿತ್ರಿಸುತ್ತಿದ್ದರು. ಗಾಜಿನ ಕೆಲಸಗಾರ ಕೊಳವೆಯೊಂದನ್ನು ಕರಗಿರುವ ಗಾಜಿನಲ್ಲಿ ಅದ್ದಿ ತುದಿಯಲ್ಲಿ ಮೃದುವಾದ ಮುದ್ದೆ ತೆಗೆದುಕೊಳ್ಳುತ್ತಾನೆ. ಕೊಳವೆಯ ಇನ್ನೊಂದು ಅಂಚಿನಿಂದ ಗಾಜನ್ನು ಊದಿ ದೊಡ್ಡ ಟೊಳ್ಳಾದ ಗಾಜಿನ ಚೆಂಡನ್ನು ಮಾಡಿ ಅದನ್ನು ತೂಗಾಡಿಸಿ ಕೊಳವೆಯ ಆಕಾರವನ್ನು ಮಾಡುತ್ತಾನೆ. ಇದು ತಣ್ಣಗಾಗಿ ಸ್ವಲ್ಪ ಗಟ್ಟಿಯಾದ ಮೇಲೆ ಅಂಚುಗಳನ್ನು ಕತ್ತರಿಸುತ್ತಾನೆ. ಅನಂತರ ಇದನ್ನು ಕಾಯಿಸಿ ಮೃದುಮಾಡಿ ಗಾಜಿನ ಹಾಳೆಯಾಗಿ ಬಿಚ್ಚುತ್ತಾನೆ. ಈ ರೀತಿಯಲ್ಲಿ 91.5ಸೆಂ.ಮೀ ಉದ್ದ ಮತ್ತು 63ಸೆಂ.ಮೀ ಅಗಲದ ಗಾಜಿನ ಹಾಳೆಗಳನ್ನು ಪಡೆದು ಅವುಗಳ ಮೇಲೆ ಆಕೃತಿ ಚಿತ್ರಗಳನ್ನು ಬರೆದು ಕಿಟಕಿಗಳಲ್ಲಿ ಉಪಯೋಗಿಸುತ್ತಿದ್ದರು.

**ಗಾಜಿನ ಉಪಯೋಗಗಳು :** ಗಾಜಿನ ಸೀಸೆಗಳಲ್ಲಿ ಮಾತ್ರೆ, ಪುಡಿ, ದ್ರವ, ಮುಲಾಮು ಈ ರೀತಿ ಯಾವ ವಸ್ತುವನ್ನು ಬೇಕಾದರೂ ತುಂಬಬಹುದು. ಹಾಲು, ಹಣ್ಣು, ತರಕಾರಿ ಮತ್ತು ಆಹಾರ ವಸ್ತುಗಳನ್ನು ಗಾಜಿನ ಪಾತ್ರೆಗಳಲ್ಲಿ ಶೇಖರಿಸಿಟ್ಟರೆ ಅವು ಅಂದವಾಗಿ ಕಾಣುತ್ತವೆ. ಸುಗಂಧ ಎಣ್ಣೆಗಳನ್ನು, ಔಷಧಿಗಳನ್ನು, ತಂಪಾದ ಪಾನೀಯಗಳನ್ನು, ಬೀರ್, ಮದ್ಯ ಮುಂತಾದವುಗಳನ್ನು ಗಾಜಿನ ವಿವಿಧ ಆಕಾರದ ಮತ್ತು ಆಕರ್ಷಿಸುವ ಸೀಸೆಗಳಲ್ಲಿ ತುಂಬಿ ಮಾರಾಟ ಮಾಡುತ್ತಾರೆ. ಗಾಜನ್ನು ಕಿಟಕಿಗಳಲ್ಲಿ, ಬಾಗಿಲುಗಳಲ್ಲಿ ಮತ್ತು ಹೆಂಚುಗಳಲ್ಲಿ ಉಪಯೋಗಿಸುತ್ತಾರೆ. ಅತಿಸಾಮರ್ಥ್ಯವಿರುವ ಗಾಜು ಉಕ್ಕನ್ನು ಹೋಲುತ್ತದೆ. ಆದ್ದರಿಂದ ಇದನ್ನು ದೊಡ್ಡ ಸುತ್ತಿಗೆಯಂತೆ ಬಳಸಬಹುದು. ಹೆಚ್ಚು ಬಳುಕುವ ಮತ್ತು ಮೃದುವಾದ ಗಾಜನ್ನು ಲಾಡಿಯಂತೆ ಗಂಟುಹಾಕಬಹುದು. ಪುಟಿತತೆ ಇರುವ ಗಾಜನ್ನು ಹಗ್ಗದ ರೂಪದಲ್ಲಿ ಮತ್ತು ಸ್ಪ್ರಿಂಗಿನ ಹಾಗೆ ಬಳಸಬಹುದು. ಕಾರಿನ ಟಯರುಗಳಲ್ಲಿ ಗಾಜನ್ನು ಉಪಯೋಗಿಸುವುದರಿಂದ ಅವು ಹೆಚ್ಚು ಬಾಳಿಕೆ ಬರುತ್ತವೆ. ರಾಸಾಯನಿಕ ವಸ್ತುಗಳಿಂದ ಹೆಚ್ಚು ಸಾಮರ್ಥ್ಯ ಪಡೆದ ಗಾಜು 50,000 ಪೌಂಡಿನ ಒತ್ತಡ ತಡೆಯಬಲ್ಲುದು. ಆದ್ದರಿಂದ ಇದನ್ನು ಲೋಹ ಮತ್ತು ಉಕ್ಕಿನ ಸ್ಥಳಗಳಲ್ಲಿ ಉಪಯೋಗಿಸುತ್ತಾರೆ.

ಬ್ರಿಟನಿನಲ್ಲಿ ಒಡೆದ ಗಾಜಿನ ಸೀಸೆಗಳ ರಾಶಿ ಜನರಿಗೆ ದೊಡ್ಡ ತೊಂದರೆಯಾಗಿತ್ತು. ಈ ಸೀಸೆಗಳನ್ನು ಚೆನ್ನಾಗಿ ಪುಡಿಮಾಡಲು ಹ್ಯಾಂಪ್‍ಶೈರ್ ಕಾರ್ಖಾನೆ ಒಂದು ಹೊಸ ಯಂತ್ರವನ್ನು ಕಂಡುಹಿಡಿಯಿತು. ಈ ಯಂತ್ರ ಮದ್ಯದ ಸೀಸೆಗಳನ್ನು 15 ಸೆಕೆಂಡುಗಳಲ್ಲಿ ಮತ್ತು ಬೀರ್ ಸೀಸೆಗಳನ್ನು 3 ಸೆಕೆಂಡುಗಳಲ್ಲಿ ಪುಡಿ ಮಾಡುತ್ತದೆ. ಈ ಪುಡಿಯನ್ನು ರಸ್ತೆಮಾಡುವ ಉದ್ಯೋಗದವರಿಗೆ ಮಾರುವರು. ಅವರು ಇದನ್ನು ಬಳಸಿ ಗಾಜಿನ ಕಲ್ಲರಗು ರಸ್ತೆಯನ್ನು ತಯಾರಿಸುತ್ತಾರೆ. ಇಂಥ ರಸ್ತೆಯಲ್ಲಿ ವೇಗವಾಗಿ ಚಲಿಸುವ ವಾಹನಗಳು ಜಾರುವುದಿಲ್ಲ. ಈಗಾಗಲೇ ಇಂಥ ರಸ್ತೆಗಳು ಡೆನ್‍ಮಾರ್ಕ್, ನ್ಯೂಯಾರ್ಕ್, ಇಟಲಿ, ಜರ್ಮನಿ ಮತ್ತು ಜಪಾನಿನಲ್ಲಿ ಇವೆ. (ಎಚ್.ಜಿ.ಎಂ.)

**ಗಾಜಿನ ಬಟ್ಟೆ :** ಗಾಜಿನ ದಾರದಿಂದ ನೇಯ್ದ ಬಟ್ಟೆ. ಬಿಸಿಗಾಜನ್ನು ದಾರದಂತೆ ಎಳೆಯಲು ಸಾಧ್ಯ. ಇದು ಸಸ್ಯ ಜನ್ಯ ಇಲ್ಲವೇ ಪ್ರಾಣಿಜನ್ಯ ನಾರಿನ ರೂಪವನ್ನೇ ಪಡೆದಿರುತ್ತದೆ. ಗಾಜಿನ ದಾರ ಸುಲಭವಾಗಿ ಬಗ್ಗುತ್ತದೆ. ಇದು ಕೂದಲಿಗಿಂತ ತೆಳುವಾಗಿರುತ್ತದೆ. ಇಂಥ ದಾರದಿಂದ ತಯಾರಾದ ಬಟ್ಟೆಯ ಮೂಲಕ ನೀರು ಇಳಿಯದು; ಕ್ರಿಮಿಗಳಿಗೆ ಇದು ಅಭೇದ್ಯ; ಉಷ್ಣ ಮತ್ತು ಬೆಂಕಿಗೆ ಸಗ್ಗದು. ವಿದ್ಯುನ್ನಿರೋಧಕ ವಸ್ತುವಾಗಿ ಕೂಡ ಇದರ ಉಪಯೋಗ ಉಂಟು.

ಗಾಜಿನ ಬಟ್ಟೆಯ ಉದ್ಯಮ ವ್ಯಾಪಕವಾಗಿ ಪ್ರಾರಂಭವಾದದ್ದು ಎರಡನೆಯ ಮಹಾಯುದ್ಧಕ್ಕಿಂತ ಸ್ವಲ್ಪ ಮುಂಚೆ. 1931 ಮತ್ತು 1938 ರಲ್ಲಿ ಓವನ್ಸ್ – ಇಲ್ಲಿನಾಯ್ಸ್ ಕಂಪೆನಿಯವರು ಭಾರಿ ಗಾತ್ರದಲ್ಲಿ ಗಾಜಿನ ದಾರವನ್ನು ತಯಾರಿಸುವ ರೀತಿಗಳನ್ನು ಪರೀಕ್ಷಿಸಿದರು. ಇದರ ಫಲವಾಗಿ ಎರಡು ಪ್ರಮುಖ ದರ್ಜೆಯ ಗಾಜಿನ ದಾರಗಳನ್ನು ವಿಂಗಡಿಸಲಾಯಿತು; ಅಖಂಡದಾರ ಮತ್ತು ತಂತುದಾರ (ಸ್ಟೇಪಲ್). ಗಾಜಿನ ದಾರದ ವ್ಯಾಸ ಒಂದೇ ಸಮವಾಗಿರಬೇಕು. ತೂತು ಕೊರೆದ ಬಳೆಯ ಮುಖಾಂತರ ಗಾಜನ್ನು ಹೊರಕ್ಕೆ ನೂಕುವಾಗ ಗಾಜಿನ ಆಳ ಒತ್ತಡವನ್ನು ಕುಂದಿಸುತ್ತದೆ; ಇದರಿಂದ ದಾರದ ವ್ಯಾಸ ಬದಲಾಗಬಹುದು. ಆದ್ದರಿಂದ ಗಾಜನ್ನು ಸಣ್ಣಗೋಲಿಗಳ ರೂಪದಲ್ಲಿ ತೂತುಕೊರೆದ ಬಳೆಯನ್ನು ತಯಾರಿಸಿ ಅದನ್ನು ವಿದ್ಯುಚ್ಛಕ್ತಿಯಿಂದ ಕಾಯಿಸುತ್ತಾರೆ. ಈ ದಾರದಿಂದ ತಯಾರಾದ ನೂತ ಗಾಜು (ಸ್ಪನ್‍ಗ್ಲಾಸ್) ಅಖಂಡ ದಾರದಿಂದ ಇಲ್ಲವೇ ತಂತು ದಾರದಿಂದ ತಯಾರಾಗಿರಬಹುದು.

ಗಾಜಿನ ದಾರದ ಹೊರರೂಪದ ಗುಣಗಳಿಗೆ ಪ್ರಾಮುಖ್ಯ ಉಂಟು. ಹವೆಯಿಂದ ವಿದ್ಯುನ್ನಿರೋಧಕ ದಾರದ ಮೇಲೆ ಏನೂ ಪರಿಣಾಮವಾಗದಂತೆ ತಡೆಯಲು ಆ ದಾರದ ರಚನೆಯಲ್ಲಿ ಶೇ.55 ಸಿಲಿಕ, ಶೇ.10 ಬೋರಿಕ್ ಆಮ್ಲ, ಶೇ.14 ಅಲ್ಯುಮಿನ, ಶೇ.17 ಸುಣ್ಣ ಮತ್ತು ಮೆಗ್ನೀಷಿಯವನ್ನು ಬಳಸುತ್ತಾರೆ. ಕರಗಿದ ಗಾಜು ರಂಧ್ರದ ಮೂಲಕ ಹಾದು ಒಂದೇ ಎಳೆ ದಾರದಂತೆ ಹೊರಗೆ ಬರುತ್ತದೆ. ಇದು ರಭಸದಿಂದ ಸುತ್ತುತ್ತಿರುವ ಗಾಲಿಯಲ್ಲಿ ಸೇರಿಕೊಳ್ಳುತ್ತದೆ. ಕುಲುಮೆಯಿಂದ ಹರಿಯುವ ಗಾಜಿನ ವೇಗಕ್ಕಿಂತ ಈ ಗಾಲಿಯ ವೇಗ ಹೆಚ್ಚಾಗಿರುತ್ತದೆ. ಇದರ ಎಳೆತದಿಂದ ಗಾಜು ಕರಗಿದ ಅವಸ್ಥೆಯಿಂದಲೇ ಅತ್ಯಂತ ತೆಳುವಾದ ದಾರದ ರೂಪ ತಳೆಯುತ್ತದೆ. ಈ ದಾರವನ್ನು ನೇಯ್ಗೆಯಂತ್ರದಲ್ಲಿ ಬಳಸಿ ಗಾಜಿನ ಬಟ್ಟೆಯನ್ನು ತಯಾರಿಸುವರು. ಇಂಥ ಬಟ್ಟೆಯ ದಪ್ಪ ಸುಮಾರು 0.003" – 0.023".

ಉಪಯೋಗಗಳು: ಗಾಜಿನ ದಾರದಿಂದ ತಯಾರಾದ ನಯವಿಲ್ಲದ ಚಾಪೆಯನ್ನು ಗಾಳಿ ಸೋಸುವ ಸಲಕರಣೆಗಳಲ್ಲಿ ಶುದ್ಧಿಗೊಳಿಸುವ ಯಂತ್ರಗಳಲ್ಲಿ ಮತ್ತು ಬಟ್ಟಿಯಿಳಿಸುವ ಯಂತ್ರೋಪಕರಣದ ಸಮಕಾರಕ ಗೋಪುರಗಳಲ್ಲಿ ಬಳಸುತ್ತಾರೆ. ಗಾಜಿನ ಬಟ್ಟೆಯನ್ನು ಸುಲಭವಾಗಿ ಶುಭ್ರಮಾಡಬಹುದು. ಇವುಗಳಿಗೆ ಬೆಂಕಿ ತಗಲುವುದಿಲ್ಲ. ಅಲಂಕಾರದ ಈ ಬಟ್ಟೆಗಳನ್ನು ಚಿತ್ರಮಂದಿರಗಳಲ್ಲಿ ಮತ್ತು ಹಡಗುಗಳಲ್ಲಿ ಬೆಂಕಿಯ ಅಪಾಯವನ್ನು ಎದುರಿಸಲು ಉಪಯೋಗಿಸುತ್ತಾರೆ. ಈ ಬಟ್ಟೆಗಳು ನೀರನ್ನು ಹೀರಿಕೊಳ್ಳುವುದಿಲ್ಲವಾದ್ದರಿಂದ ಅಲ್ಪಕಾಲದ ಮಳೆಯ ಸುರಿತವನ್ನು ತಡೆಗಟ್ಟಲು ಈ ಬಟ್ಟೆಯ ಪರದೆಯನ್ನು ಬಳಸುತ್ತಾರೆ. ಬೆಂಕಿಗೆ ಸಗ್ಗದ ಅಂಟನ್ನು ಗಾಜಿನಬಟ್ಟೆಗೆ ಸೇರಿಸಿ ಅತಿ ಸಾಮರ್ಥ್ಯ

ಯುತವಾದ ಅಟ್ಟವನ್ನು ಕಟ್ಟಬಹುದು. ವಿಮಾನೋದ್ಯಮದಲ್ಲಿ ಇಂಥ ಬಟ್ಟೆಗೆ ವಿಶೇಷ ಉಪಯುಕ್ತತೆ ಉಂಟು. ಗಾಜಿನ ದಾರಕ್ಕೆ ಪ್ಲಾಸ್ಟಿಕ್ ಸೇರಿಸಿ ತಯಾರಿಸಿದಾಗ ಲಭಿಸುವ ವಸ್ತು ಅತ್ಯಂತ ಸಾಮರ್ಥ್ಯಯುತವಾದದ್ದು. ಕ್ರೀಡಾಕಾರುಗಳನ್ನೂ ಹಡಗಿನ ಕಟ್ಟಡಗಳನ್ನೂ ಇದರಿಂದ ತಯಾರಿಸುತ್ತಾರೆ. (ಎಚ್.ಜಿ.ಎಂ.)

**ಗಾಜಿನ ಮನೆ :** ನಿಯಂತ್ರಿತ ಹವೆಯಲ್ಲಿ ಸಸ್ಯಗಳನ್ನು ಬೆಳೆಸಲು ಕಟ್ಟಿರುವ ಮನೆ. ಈ ಮನೆಯ ಛಾವಣಿ ಮತ್ತು ಗೋಡೆಗಳೆಲ್ಲವೂ ಗಾಜಿನವೆ. ಚಳಿ, ಗಾಳಿ ಮತ್ತು ಮಳೆಯ ಹೊಡೆತದಿಂದ ರಕ್ಷಣೆ ನೀಡಿ ಸಾಕಷ್ಟು ಬೆಳಕು ಬೀಳುವಂತೆ ರೂಪಿಸಿರುವ ಮನೆಯಿದು. ಚಳಿ ಗಾಳಿಯನ್ನು ಸಹಿಸಿಕೊಂಡು ಬಯಲಿನಲ್ಲೂ ಬೆಳೆಯಬಲ್ಲ ಕೆಲವು ದೃಢಕಾಯ ಸಸ್ಯಗಳುಂಟು. ಅವು ಬೆಳೆಯುವುದು ನಿಧಾನ. ಗಾಜಿನ ಮನೆಯಲ್ಲಾದರೆ ಅವುಗಳ ಬೆಳೆವಣಿಗೆಯನ್ನು ಚುರುಕುಗೊಳಿಸಬಹುದು. ಆದರೆ ಕೋಮಲ ಪ್ರಕೃತಿಯ ಸಸ್ಯಗಳನ್ನು ಮತ್ತು ಪರದೇಶದಿಂದ ತಂದ ಗಿಡಗಳನ್ನು ಪೋಷಿಸಲು ಇಂಥ ಗಾಜಿನ ಮನೆಗಳು ಅತ್ಯಾವಶ್ಯಕ. ಅಕಾಲದಲ್ಲಿ ಶೀತ ಹವೆಯಲ್ಲಿ ಮತ್ತು ಚಳಿದೇಶಗಳಲ್ಲಿ ಸಸ್ಯಗಳನ್ನು



ಗಾಜಿನ ಮನೆ – ಲಾಲ್‌ಬಾಗ್, ಬೆಂಗಳೂರು

ಬೆಳೆಸಲು ಉಷ್ಣವನ್ನು ಕೃತಕವಾಗಿ ಒದಗಿಸಬೇಕು. ಅದಕ್ಕಾಗಿ ಗಾಜಿನ ಮನೆಯೊಳಗೆ ಒಂದು ಒಲೆಯನ್ನು ಉರಿಸಿ ಬೆಚ್ಚನ ವಾತಾವರಣ ಕಲ್ಪಿಸುವುದು ರೂಢಿ. ಹಾಗೆ ಮಾಡಿದಾಗ ಅದಕ್ಕೆ ಕಾವು ಮನೆ ಎಂದು ಹೆಸರು. ಖಾಸಗಿ ತೋಟಗಳಿಗೆ ಮತ್ತು ವಾಸಗೃಹಗಳಿಗೆ ಸೇರಿದಂತಿರುವ ಗಾಜಿನ ಮನೆಗಳನ್ನು ಹಸಿರು ಮನೆ ಎನ್ನುತ್ತಾರೆ. ಅವು ಕಾವು ಮನೆಗಳೂ ಆಗಿದ್ದರೆ ರಕ್ಷಣಾಗೃಹಗಳು ಎನಿಸಿಕೊಳ್ಳುತ್ತವೆ. ಇಂಥ ಗಾಜಿನ ಮನೆಗಳ ವಿಸ್ತೀರ್ಣ ಒಂದು ಸಣ್ಣ ಕೊಠಡಿಯಷ್ಟು. ಆದರೆ ಭೂರಿಗಾತ್ರದಲ್ಲಿ ಟೊಮ್ಯಾಟೊ, ಸೌತೆಕಾಯಿ ಮುಂತಾದ ಕಾಯಿಪಲ್ಯಗಳನ್ನು ವಿದೇಶೀಯ ಪುಷ್ಪಗಳನ್ನು ಬೆಳೆಸಬೇಕಾದರೆ ಗಾಜಿನ ಮನೆಯ ವಿಸ್ತೀರ್ಣ ಸಹಸ್ರಾರು ಚದರಡಿಗಳಷ್ಟಿರುವುದು ಅಗತ್ಯ. ಮೋಡ ಕವಿದ ವಾತಾವರಣದಲ್ಲಿ ಬೆಳಕು ಸಾಲದೆ ಸಸ್ಯದ ಬೆಳೆವಣಿಗೆ ಕುಂಠಿತವಾಗದಿರಲೆಂದು ಗಾಜಿನ ಮನೆಗಳಲ್ಲಿ ಕೃತಕ ಬೆಳಕಿನ ವ್ಯವಸ್ಥೆಯನ್ನೂ ಮಾಡಿರುತ್ತಾರೆ. ಗಾಜಿನ ಮನೆಯನ್ನು ಪೂರ್ವಪಶ್ಚಿಮವಾಗಿ ಕಟ್ಟಿದ್ದರೆ ಅದರ ಛಾವಣಿ ಒಂದೇ ಹಾಸಿನದು. ದಕ್ಷಿಣಾಭಿಮುಖವಾಗಿ ಇಳಿಜಾರಾಗಿರುತ್ತದೆ. ದಕ್ಷಿಣೋತ್ತರವಾಗಿ ಕಟ್ಟಿರುವ ಗಾಜಿನ ಮನೆಗಳ ಛಾವಣಿಯಲ್ಲಿ ಅನೇಕ ಉಬ್ಬುತಗ್ಗುಗಳಿರುವುವು. ಛಾವಣಿಯ ಒಂದು ಪಾರ್ಶ್ವ ಪೂರ್ವಕ್ಕೂ ಮತ್ತೊಂದು ಪಾರ್ಶ್ವ ಪಶ್ಚಿಮಕ್ಕೂ ಇಳಿಜಾರಾಗಿರುತ್ತದೆ. ಇಂಥ ನಿರಿಗೆ ಚಾವಣಿಗಳ ಮೂಲಕ ಸಸ್ಯಗಳಿಗೆ ಇಡೀ ಹಗಲು ಸೂರ್ಯಸ್ನಾನದ ಲಾಭ ದೊರೆಯುವುದು.


ಸಾಮಾನ್ಯವಾಗಿ ಗಾಜಿನ ಮನೆಯ ಗೋಡೆಗಳು ಮೊಗಸಾಲೆಯ ಗೋಡೆಗಳಂತೆ ಮೋಟು. ಎತ್ತರ 50–60 ಸೆಂಮೀ. ಅವನ್ನು ಇಟ್ಟಿಗೆ ಅಥವಾ ಸಿಮೆಂಟ್ ಕಾಂಕ್ರೀಟಿನಿಂದ ಕಟ್ಟುವುದು ರೂಢಿ. ಗೋಡೆಯ ಮೇಲೆ ನಿಲ್ಲಿಸಲಾಗಿರುವ ಮರದ ಅಥವಾ ಉಕ್ಕಿನ ಚೌಕಟ್ಟುಗಳಲ್ಲಿ ಗಾಜಿನ ಹಲಗೆಗಳನ್ನು ಅಳವಡಿಸಿರುತ್ತಾರೆ. ಕೆಲವು ಗಾಜಿನ ಮನೆಗಳಿಗೆ ಗೋಡೆಗಳೇ ಇರುವುದಿಲ್ಲ. ಇಳಿಜಾರಾದ ಛಾವಣಿ ನೆಲಗಟ್ಟಿಗೇ ಹೊಂದಿಕೊಂಡಿರುವುದು. ಗರಿಷ್ಠ ಬೆಳಕು ಬೀಳಲು ಈ ರಚನೆ ಬಲು ಅನುಕೂಲ. ಗಾಜಿನ ಮನೆಯ ವಿನ್ಯಾಸ ಹೇಗಿದ್ದರೂ ಧಾರಾಳ ಗಾಳಿ ಸಂಚಾರಕ್ಕೂ ಬಿಸಿಲಿನ ಝಳದಿಂದ ರಕ್ಷಣೆಗೂ ಸೂಕ್ತ ವ್ಯವಸ್ಥೆ ಅಲ್ಲಿ ಇರಬೇಕು. ಗಾಳಿಸಂಚಾರಕ್ಕೆ ಬೇಕಾದ ವಾತಾಯನಗಳು ಬಾಗಿಲುಗಳ ಮೇಲಿರಬಹುದು. ಇಲ್ಲವೆ ಅವು ಮೇಲ್ಗಿಲಿನ ಕಿಟಿಕಿಗಳಾಗಿಬಹುದು. ಆಗ ಕಿಟಕಿಗಳನ್ನು ಅಗತ್ಯವಿದ್ದಷ್ಟು ಮೇಲೆತ್ತಿದರೆ ಗಾಳಿ ಒಳಗೆ ಬರಬಹುದೇ ವಿನಾ ಮಳೆಯ ಎರಿಚಲು ಬಡಿಯಲು ಅವಕಾಶವಿರದು. ಬಿಸಿಲಿನ ಝಳ ಅತಿಯೆನಿಸಿದಾಗ ಗಾಜಿನ ಮನೆಯ ಹೊರಗೆ ಅಥವಾ ಒಳಗೆ ಚಾಪೆಗಳನ್ನೋ ಪರದೆಗಳನ್ನೋ ಇಳಿಬಿಡಬಹುದು. ಇಲ್ಲದಿದ್ದರೆ ಗಾಜಿಗೆ ಸುಣ್ಣ ಬಳಿದರೂ ಸಾಕು. ಗಾಜಿನ ಮನೆಯೊಳಗೆ ಪರಿಚಲನೆಯಲ್ಲಿರುವ ಗಾಳಿಯ ಉಷ್ಣತೆ ಮತ್ತು ಆರ್ದ್ರತೆಗಳ ನಿಯಂತ್ರಣವೂ ಒಂದು ಪ್ರಮುಖ ಸಮಸ್ಯೆ. ಕಾವು ಮನೆಗಳಲ್ಲಾದರೆ ಬಿಸಿನೀರಿನ ಕೊಳಾಯಿಗಳಿಂದ ಉಷ್ಣತಾನಿಯಂತ್ರಣ ಸಾಧ್ಯ. ಆರ್ದ್ರತೆಯ ನಿಯಂತ್ರಣಕ್ಕೆ ಗಾಜಿನ ಮನೆಯಲ್ಲಿರುವ ನೀರಿನ ತೊಟ್ಟಿಗಳನ್ನು ನಿರ್ದಿಷ್ಟ ಕಾಲ ತೆರೆದಿಡುವುದು ಅಥವಾ ಮುಚ್ಚುವುದು ಪದ್ಧತಿ. ಉಷ್ಣದೇಶಗಳಲ್ಲಾದರೆ ನೀರನ್ನು ಸಿಂಪಡಿಸಿ ಗಾಳಿಯ ಆರ್ದ್ರತೆಯನ್ನು ನಿಯಂತ್ರಿಸುತ್ತಾರೆ. ಪ್ರತಿಯೊಂದು ಗಾಜಿನ ಮನೆಯೂ ಗರಿಷ್ಠ ಮತ್ತು ಕನಿಷ್ಠ, ಒದ್ದೆ ಮತ್ತು ಒಣಬುರುಡೆ ಉಷ್ಣತಾಮಾಪಕಗಳಿಂದ ಸಜ್ಜಾಗಿರುವುದು. ಚಳಿಗಾಲದಲ್ಲಿ ಗಾಜಿನ ಮನೆಯ ಒಳಾಂಗಣವನ್ನು ಬೆಚ್ಚಗಿಡಲು ಅಲ್ಲಲ್ಲೆ ತೈಲ ಒಲೆಗಳನ್ನು ಹೂಡಿರುತ್ತಾರೆ.

ಗಾಜಿನ ಮನೆಯ ಒಳರಚನೆ ಅದರಲ್ಲಿ ಬೆಳೆಸುವ ಸಸ್ಯಗಳ ಸ್ವಭಾವಕ್ಕೆ ಅನುಗುಣವಾಗಿರುವುದು ಸಹಜ. ಗಿಡ್ಡಗೋಡೆಗಳಾಗಿದ್ದರೆ ಅವುಗಳ ಮೇಲ್ಮಟ್ಟಕ್ಕೆ ಹೊಂದಿಕೊಂಡಂತೆ ಮನೆಯ ಒಳಸುತ್ತ ಏಕವಾಗಿ ಬಡುವಿರುತ್ತದೆ. ಇದರ ಮೇಲೆ ಕುಂಡಗಳು ಮತ್ತು ಬೀಜದ ಪೆಟ್ಟಿಗೆಗಳನ್ನು ಪೇರಿಸಬಹುದು. ಅವುಗಳ ಮೇಲೆ ಧಾರಾಳವಾಗಿ ಬೆಳಕೂ ಬೀಳುತ್ತದೆ. ಬಡುವಿನ ಕೆಳಗೆಲ್ಲ ಮರಳು, ಫಲವತ್ತಾದ ಮಣ್ಣು ಮತ್ತು ಸಸ್ಯಶೇಷಮಿಶ್ರಿತ ಮೃತ್ತಿಕೆಗಳನ್ನು ದಾಸ್ತಾನು ಮಾಡಬಹುದು. ಛಾವಣಿ ನೆಲಗಟ್ಟನ್ನು ಸೋಕುವ ಗಾಜಿನ ಮನೆಗಳಲ್ಲಿ ಇಂಥ ಬಡುಗಳಿಗೆ ಅವಕಾಶವಿಲ್ಲ.

ಬಹುತೇಕ ಹಸಿರುಮನೆ ಮತ್ತು ಕಿತ್ತಳೆಗಿಡಗಳಿಗೆ ಉಷ್ಣತೆ ಚಳಿಗಾಲದಲ್ಲಿ $45^0$–$55^0$ ಫ್ಯಾ., ಮಾರ್ಚಿಯಿಂದ ಸೆಪ್ಟೆಂಬರ್‌ವರೆಗೆ $55^0$–$65^0$ ಫ್ಯಾ. ಮಿತಿಯಲ್ಲಿರಬೇಕು. ದ್ರಾಕ್ಷಿ ಬೆಳೆಗಂತೂ ಉಷ್ಣತಾನಿಯಂತ್ರಣ ಅತ್ಯಗತ್ಯ. ನವೆಂಬರಿನಿಂದ ಫೆಬ್ರುವರಿವರೆಗೆ $60^0$ ಫ್ಯಾ; ಮೊಗ್ಗುಗಳು ಬಿರಿಯುವಾಗ $65^0$ ಫ್ಯಾ.; ಹೂವಿರುವ ತನಕ $75^0$ ಫ್ಯಾ.; ಬೀಜರೂಪಣೆಯ ಕಾಲದಲ್ಲಿ $68^0$ ಫ್ಯಾ.; ಮತ್ತು ಹಣ್ಣು ಮಾಗುವಾಗ $70^0$ ಫ್ಯಾ. ಬಾಳೆಹಣ್ಣಿಗೆ ಚಳಿಗಾಲದಲ್ಲಿ $60^0$–$70^0$ ಫ್ಯಾ. ಮತ್ತು ಬೇಸಿಗೆಯಲ್ಲಿ $70^0$–$85^0$ ಫ್ಯಾ. ಅನಾನಾಸ್ ಹಣ್ಣಿಗೆ ಚಳಿಗಾಲದಲ್ಲಿ $65^0$–$75^0$ ಫ್ಯಾ. ಮತ್ತು ಬೇಸಿಗೆಯಲ್ಲಿ $70^0$–$90^0$ ಫ್ಯಾ. ಇವುಗಳ ಸಮೃದ್ಧ ಬೆಳೆಗೆ ಇಷ್ಟು ಸೂಕ್ಷ್ಮವಾದ ಉಷ್ಣತಾನಿಯಂತ್ರಣ ಅವಶ್ಯಕ. ಇದು ಗಾಜಿನ ಮನೆಯಲ್ಲಿ ಸಾಧ್ಯವೇ ವಿನಾ ಬಯಲಿನಲ್ಲಲ್ಲ.

ಇಂಗ್ಲೆಂಡ್ ಮತ್ತು ವೇಲ್ಸ್ ದೇಶಗಳೂ ಸೇರಿದಂತೆ ಅಲ್ಲಿ ಗಾಜಿನ ಮನೆಗಳು ಒಳಗೊಂಡಿರುವ ಪ್ರದೇಶದ ವಿಸ್ತೀರ್ಣ ಸುಮಾರು 4,000 ಎಕರೆಗಳು. ಜುಲೈ ತಿಂಗಳಿನಲ್ಲಿ ಈ ಪ್ರದೇಶದ ಅರ್ಧದಷ್ಟು ಭಾಗದಲ್ಲಿ ಟೊಮ್ಯಾಟೊ, 1/5 ಭಾಗದಲ್ಲಿ ಪುಷ್ಪಗಳು ಮತ್ತು 1/8 ಭಾಗದಲ್ಲಿ ಸೌತೆಯನ್ನು ಬೆಳೆಸಲಾಗುವುದೆಂದು ಒಂದು ಅಂದಾಜು. ಇದರಿಂದ ಸಸ್ಯಪೋಷಣೆಯಲ್ಲಿ ಗಾಜಿನ ಮನೆಯ ಮಹತ್ತ್ವಪಾತ್ರ ಅರಿವಾಯಿತು. ಬೆಂಗಳೂರಿನ ಸುಪ್ರಸಿದ್ಧ ಲಾಲ್‌ಬಾಗಿನಲ್ಲೂ ಒಂದು ಗಾಜಿನ ಮನೆಯಿರುವುದನ್ನು ನೆನೆಯಬಹುದು. ಹಾಗೆಯೇ ಹುಬ್ಬಳ್ಳಿಯಲ್ಲಿ ಒಂದು ಗಾಜಿನ ಮನೆಯಿದೆ. ಬೆಂಗಳೂರಿನಲ್ಲಿ ರಾಜ್ಯಪಾಲರು ವಾಸಿಸುವ ರಾಜಭವನ ಉದ್ಯಾನದಲ್ಲಿ ಒಂದು ಗಾಜಿನ ಮನೆ ನಿರ್ಮಾಣವಾಗಿದೆ. (ಎಚ್.ಜಿ.ಎಸ್.)

**ಗಾಜಿನ ಮೀನು :** ಆಕ್ಟಿನೋಪ್ಟೆರ್ಜಿಯೈ ವರ್ಗದ ಪರ್ಸಿಫಾರ್ಮಿಸ್ ಗಣದ ಅಂಬಾಸಿಡೀ ಕುಟುಂಬಕ್ಕೆ ಸೇರಿದ ಒಂದು ಸಿಹಿನೀರು ಮೀನು. ಅಂಬಾಸಿಸ್ ಇದರ ವೈಜ್ಞಾನಿಕ ನಾಮ ಅಲ್ಲದೆ ಇದಕ್ಕೆ ಸಿಪಾರಿ ಮೀನು ಎಂಬ ಹೆಸರೂ ಇದೆ. ಸುಮಾರು 7.5 ಸೆಂ.ಮೀ ಬೆಳೆಯುವ ಸಣ್ಣ ಮೀನು. ಬಲು ಪಾರದರ್ಶಕವಾಗಿ ಗಾಜಿನಂತೆಯೇ ಕಾಣುವುದರಿಂದ ಈ ಹೆಸರು. ಭಾರತ, ಬರ್ಮಾ, ಇಂಡೋನೇಶಿಯ, ಜಾವಾ,



ಮಲಯ, ತೈಲಾಂಡ್ ದೇಶಗಳ ನದಿ ಕೆರೆ ಕುಂಟೆಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ಮೀನು. ಪಾರದರ್ಶಕ, ದೇಹದ ಬಣ್ಣ ಹಳದಿ ಮಿಶ್ರಿತ ಆಲಿವ್, ಮಧ್ಯದಲ್ಲಿ ಬೆಳ್ಳಿ ಬಣ್ಣದ ಗೆರೆ. ದೊಡ್ಡ ತಲೆ, ಬಾಲದ ರೆಕ್ಕೆ ಸಮ ಭಾಗದ ಹಾಲೆಗಳಾಗಿ ಆಳವಾಗಿ ಕವಲೊಡೆದಿದೆ. ಮುಳ್ಳಿನ ಬೆನ್ನು ರೆಕ್ಕೆ ಮೇಲೆ ಕಪ್ಪು ಗುರುತು. ಭುಜದ ಮೇಲೆ ಚುಕ್ಕೆಗಳು ದೀರ್ಘ ಚತರಸ್ರಾಕಾರದ ಮಚ್ಚೆಯಾಗಿ ಒಟ್ಟುಗೂಡಿವೆ. ತಲೆಯ ಮೇಲ್ಭಾಗ ಹಾಗೂ ಬೆನ್ನು ಭಾಗದ ಮೊದಲನೆಯ ಈಜುರೆಕ್ಕೆಯ ಅರ್ಧಭಾಗ ಕಪ್ಪು ಬಣ್ಣದವು.

ಪಾರ್ಶ್ವದ ಈಜುರೆಕ್ಕೆಗಳು ಕಿತ್ತಳೆ ಬಣ್ಣದವು. ಮೇಲಿನ ದವಡೆಗಿಂತ ಉದ್ದವಾಗಿರುವ ಕೆಳದವಡೆ, ಕೆಳದವಡೆಯ ಸಂಯೋಜನಾ ಸ್ಥಾನದ (ಸಿಂಫೈಸಿಸ್) ಎರಡು ಕಡೆಗಳಲ್ಲೂ ಮುಂದಕ್ಕೆ ಚಾಚಿರುವ ಡೊಂಕಾದ ಕೋರೆಹಲ್ಲುಗಳು., ಎರಡು ದವಡೆಗಳಲ್ಲೂ ಹಲ್ಲಿನ ಎರಡು ಪಂಕ್ತಿಗಳು, – ಇವು ಗಾಜಿನ ಮೀನನ್ನು ಗುರುತಿಸಲು ಇರುವ ಪ್ರಮುಖ ಲಕ್ಷಣಗಳು. (ಬಿ.ಎಚ್.ಎಂ.)

**ಗಾಜು :** ಕೆಲವು ದ್ರವಪದಾರ್ಥಗಳು ಅತಿಯಾಗಿ ತಣಿಸಲ್ಪಟ್ಟು ತಮ್ಮ ದ್ರವರೂಪವನ್ನು ಕಳೆದುಕೊಂಡರೂ ದ್ರವದ ಲಕ್ಷಣಗಳನ್ನು ಉಳಿಸಿಕೊಂಡಾಗ ದೊರೆಯುವ ಘನವಸ್ತು (ಗ್ಲಾಸ್). ಸಾಮಾನ್ಯ ಉಷ್ಣತಾಮಟ್ಟದಲ್ಲಿ ಇದು ಗಟ್ಟಿಯಾಗಿರುತ್ತದೆ. ಎತ್ತರದಿಂದ ಬಿದ್ದರೆ ಚೂರುಚೂರಾಗುತ್ತದೆ. ಕೆಲವು ನೂರು ಡಿಗ್ರಿ ಉಷ್ಣತೆಗೆ ಬಿಸಿ ಮಾಡಿದಾಗಲೂ ಗಾಜಿನ ಘನರೂಪ ಬದಲಾಗುವುದಿಲ್ಲ. ಆದರೆ ಇದನ್ನು ಮತ್ತಷ್ಟು ಬಿಸಿ ಮಾಡಿದರೆ ನಿಧಾನವಾಗಿ ಮೆತ್ತಗಾಗಿ ಮಂದವಾದ ದ್ರವರೂಪವನ್ನು ಪಡೆಯುತ್ತದೆ. ಮಿಕ್ಕ ಘನಪದಾರ್ಥಗಳಂತೆ ನಿರ್ದಿಷ್ಟವಾದ ಉಷ್ಣತಾಮಟ್ಟದಲ್ಲಿ ಇದು ಒಮ್ಮೆಲೇ ದ್ರವವಾಗುವುದಿಲ್ಲ. ಅಧಿಕ ಉಷ್ಣತಾಮಟ್ಟದಲ್ಲಿ ಗಾಜು ಮಿಕ್ಕ ದ್ರವಗಳಂತೆಯೇ ವರ್ತಿಸುತ್ತದೆ. ಮಿಕ್ಕ ದ್ರವಗಳಂತೆ, ಹರಿಯುವ, ತಾನಿರುವ ಪಾತ್ರೆಯ ಆಕಾರವನ್ನು ಪಡೆಯುವ, ಪಾತ್ರೆಗೆ ಯಾವ ಆಕಾರವಿದ್ದರೂ ತನ್ನ ಮಟ್ಟವನ್ನು ಉಳಿಸಿಕೊಳ್ಳುವ ಗುಣಗಳು ದ್ರವಗಾಜಿಗೂ ಇವೆ. ದ್ರವಗಾಜನ್ನು ಘನೀಭವನ ಉಷ್ಣತೆಗೆ ತಣಿಸಿದರೂ ಘನೀಭವಿಸುವುದಿಲ್ಲ. ಗಾಜಿನ ಹರಳುಗಳೂ ಕಾಣಿಸುವುದಿಲ್ಲ. ಅದು ದ್ರವರೂಪದಲ್ಲೇ ತಣಿಸಿ ಅದು ಘನರೂಪವನ್ನು ಹೊಂದುವಂತೆ ಮಾಡಬಹುದು. ಈ ಸ್ಥಿತಿಯಲ್ಲಿ ಅದು ದ್ರವರೂಪದಿಂದಿದ್ದರೂ ಅದರ ಹರಿಯುವ ಗುಣ ಅತಿ ಕಡಿಮೆಯಾಗಿ ಅದು ಘನ ಪದಾರ್ಥದಂತೆ ಕಾಣುತ್ತದೆ.



ಗಾಜು ತಯಾರಿಕೆಯಲ್ಲಿ ಒಂದು ಮುಖ್ಯ ಕಚ್ಚಾ ಪದಾರ್ಥ ಕ್ವಾರ್ಟ್ಜ್‌ನ ಶೇಖರಣೆ


ತಯಾರಿಕೆ : ಶುದ್ಧವಾದ ಮತ್ತು ಕಬ್ಬಿಣದ ಸಂಯುಕ್ತರಹಿತ ಮರಳು (ಗ್ಲಾಸ್ ಸ್ಯಾಂಡ್) ಸೋಡಖಾರ (ಸೋಡಿಯಂ ಕಾರ್ಬೋನೇಟ್) ಮತ್ತು ಸುಣ್ಣದ ಕಲ್ಲು (ಲೈಮ್ ಸ್ಟೋನ್) ಇವು ಆವಶ್ಯಕ ಘಟಕಾಂಶಗಳು. ಇನ್ನು ಗಾಜಿನ ಬಗೆಯನ್ನು ಅನುಸರಿಸಿ ಕೆಲವೊಮ್ಮೆ ಪೊಟ್ಯಾಸಿಯಮ್ ಕಾರ್ಬನೇಟ್, ಲೆಡ್ ಮಾನಾಕ್ಸೈಡ್, ಬೋರಾನ್ ಟ್ರೈ ಆಕ್ಸೈಡ್ ಮುಂತಾದವನ್ನು ಸೇರಿಸುವರು. ಇಷ್ಟಲ್ಲದೇ ಕೆಳಗೆ ಕೊಟ್ಟಿರುವ ಒಂದು ಅಥವಾ ಹೆಚ್ಚು ವರ್ಗಗಳ ವಸ್ತುಗಳನ್ನು ಸಹ ಸೇರಿಸುತ್ತಾರೆ: (1) ಕಲೆಟ್ ಎಂಬ ಅನುಪಯುಕ್ತವಾದ ಗಾಜು ಮತ್ತು ಚೂರಾದ ಗಾಜು; (2) ಉತ್ಕರ್ಷಣಕಾರಕಗಳು (ಆಕ್ಸಿಡೈಸಿಂಗ್ ಏಜೆಂಟ್ಸ್); (3) ಬಣ್ಣಗಳನ್ನು ಹೋಗಲಾಡಿಸುವ ವಸ್ತುಗಳು; (4) ನಿರ್ದಿಷ್ಟ ಬಣ್ಣಗಳನ್ನು ಬರಿಸುವ ವಸ್ತುಗಳು.

ಗಾಜಿನ ವಸ್ತುಗಳ ತಯಾರಿಕೆಯಲ್ಲಿ ಹಾಳಾಗಿ ಉಳಿಯುವ ಗಾಜು ಮತ್ತು ಗಾಜಿನ ಚೂರುಗಳು (ಕಲೆಟ್ಸ್) ಗಾಜಿನ ತಯಾರಿಕೆಯಲ್ಲಿ ವಿವಿಧ ರೀತಿಯಲ್ಲಿ ಸಹಾಯಕವಾಗಿವೆ. ಅವನ್ನು ಪುನಃ ಉಪಯೋಗಿಸುವುದರಿಂದ ಹಾಳಾಗಿ ಹೋಗುವ ಪಾಲು ಉಳಿತಾಯವಾಗುತ್ತದೆ. ಅಲ್ಲದೆ ಗಾಜು ದ್ರವಗೊಳ್ಳುವುದಕ್ಕೆ ಕಲೆಟ್ ತುಂಬ ಸಹಾಯಕವಾಗುವುದು. ಉತ್ಕರ್ಷಣಕಾರಕಗಳನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸುತ್ತಾರೆ. ಉದಾಹರಣೆಗಾಗಿ ಗಾಜಿನ ತಯಾರಿಕೆಯಲ್ಲಿ ಲೆಡ್ ಆಕ್ಸೈಡನ್ನು ಬಳಸಬೇಕಾದಾಗ ಕುಲುಮೆಯ ಅನಿಲಗಳಿಂದಾಗಿ ಅದು ಲೋಹರೂಪಕ್ಕೆ ಮಾರ್ಪಾಡು ಗೊಳ್ಳದಂತೆ ಈ ಕಾರಕಗಳನ್ನು ಉಪಯೋಗಿಸಬೇಕಾಗುವುದು. ಅನೇಕ ವೇಳೆ ಗಾಜಿನ ತಯಾರಿಕೆಯಲ್ಲಿ ಉಪಯೋಗಿಸುವ ವಸ್ತುಗಳಲ್ಲಿ ಅನಗತ್ಯವಾದ ಇತರ ವಸ್ತುಗಳು ಬೆರೆತಿರುವುದರಿಂದ ಪೂರೈಸಿದ ಗಾಜಿಗೆ ವಿವಿಧ ಬಣ್ಣಗಳು ಬರುತ್ತವೆ. ಹಾಗೆ ಬಣ್ಣ ಬಾರದಂತೆ ಈ ಅನಗತ್ಯ ವಸ್ತುಗಳನ್ನು ನಿಷ್ಕ್ರಿಯಗೊಳಿಸಲು ಉತ್ಕರ್ಷಣಕಾರಕ ವಸ್ತುಗಳನ್ನು ಸೇರಿಸುವರು. ಹೀಗೆ ಅಗತ್ಯವಾದ ಎಲ್ಲ ವಸ್ತುಗಳನ್ನು ಸರಿಯಾದ ಪ್ರಮಾಣದಲ್ಲಿ ಬೆರೆಸಿ, ಮಿಶ್ರಣವನ್ನು ದ್ರವರೂಪ ಬರುವವರೆಗೆ ಕುಲುಮೆಗಳಲ್ಲಿ ಕಾಯಿಸುತ್ತಾರೆ. ಇದಕ್ಕೆ ವಿವಿಧ ರೀತಿಯ ಕುಲುಮೆಗಳನ್ನು ಸಂದರ್ಭಾನುಸಾರ



ಒಡೆದು ಹುಡಿಮಾಡುವ ಯಂತ್ರಕ್ಕೆ ಕ್ವಾರ್ಟ್ಜ್‌ನ್ನು ಉಣಿಸಲಾಗುತ್ತಿದೆ


ಉಪಯೋಗಿಸುತ್ತಾರೆ. ವಿಶಿಷ್ಟ ಜಾತಿಯ ಗಾಜನ್ನು ತಯಾರಿಸಲು ಮಡಿಕೆ ಅಕಾರದ ಕುಲುಮೆಯನ್ನೂ, ಸಾಮಾನ್ಯ ಗಾಜನ್ನು ಭಾರಿ ಗಾತ್ರದಲ್ಲಿ ತಯಾರಿಸಲು ಟ್ಯಾಂಕ್ ಆಕಾರದ ಕುಲುಮೆಗಳನ್ನೂ (ಟ್ಯಾಂಕ್ ಫರ್ನೇಸಸ್) ಉಪಯೋಗಿಸುವರು. ಮಿಶ್ರಣ ಸರಿಯಾಗಿ ದ್ರವವಾದ ಬಳಿಕ ರಾಸಾಯನಿಕ ಕ್ರಿಯೆಗಳಿಂದ ಉಂಟಾದ ಅನಿಲಗಳು ಹೊರಹೊಮ್ಮುವುದಕ್ಕಾಗಿ ಸಾಕಷ್ಟು ಕಾಲವನ್ನು ಬಿಡುತ್ತಾರೆ. ಅನಂತರ ಗಾಜಿನ ದ್ರವವನ್ನು ಹೊರತೆಗೆದು ನುರಿತ ಕಾರ್ಮಿಕರು ಅದನ್ನು ಕೊಳವೆಗಳ ಮೂಲಕ ಊದಿ, ಅಚ್ಚುಗಳಿಂದೊತ್ತಿ ಅಥವಾ ಯಂತ್ರಗಳ ಸಹಾಯದಿಂದ ಅದಕ್ಕೆ ಭಿನ್ನರೂಪಗಳನ್ನು ಕೊಟ್ಟು ಜನರ ಉಪಯೋಗಕ್ಕೆ ಒದಗುವ ಹಾಗೆ ಮಾಡುತ್ತಾರೆ. ದ್ರವರೂಪದಲ್ಲಿದ್ದಾಗ ಗಾಜಿಗೆ ಯಾವ ಆಕೃತಿಯನ್ನು ಕೊಡಲಾಗುವುದೋ ಅದೇ ಆಕೃತಿಯನ್ನು ಅದು ಘನವಸ್ತುವಾದಾಗಲೂ ಇಟ್ಟುಕೊಳ್ಳುವುದು ಗಾಜಿನ ಒಂದು ವಿಶಿಷ್ಟ ಗುಣ. ಗಾಜಿಗೆ ಬೇರೆ ಬೇರೆ ಆಕೃತಿ ಕೊಟ್ಟು ತಣಿಸಿದಾಗ ಅದರಲ್ಲಿ ಒಂದು ಬಗೆಯ ಎಳೆತ ಸೆಳೆತಗಳು ಉಂಟಾಗಿ ಅದು ನಿರ್ಬಲಗೊಳ್ಳುವುದು. ಅದರ ಬಲವನ್ನೂ ಬಾಳುವಿಕೆಯನ್ನೂ ಹೆಚ್ಚಿಸುವ ಸಲುವಾಗಿ ಈ ಎಳೆತ ಸೆಳೆತಗಳನ್ನು ಹೋಗಲಾಡಿಸುವುದು ಅಗತ್ಯ. ಅದಕ್ಕಾಗಿ ಗಾಜಿನ ವಸ್ತುಗಳನ್ನು ಪುನಃ ಒಂದು ನಿರ್ದಿಷ್ಟವಾದ ಉಷ್ಣತೆಗೆ ಬಿಸಿ ಮಾಡಿ ಮತ್ತೆ ನಿಧಾನವಾಗಿ ಅದನ್ನು ತಣಿಸುವ ಕ್ರಮವಿದೆ. ಅನ್ನೀಲನ ಕ್ರಿಯೆ ಎಂದು ಇದರ ಹೆಸರು. ಇದಕ್ಕೆ ಒಳಪಟ್ಟು ಗಾಜಿನ ಬಾಳಿಕೆ ದೀರ್ಘವಾಗುವುದು.



ಕರಗಿದ ಗಾಜನ್ನು ಊದಿ ಬೇರೆ ಬೇರೆ ಆಕಾರಗಳನ್ನು ಪಡೆಯಲು ಬಳಸುವ ಸಂಪೀಡಕಗಳು (ಕಂಪ್ರೆಸರ್)

ಗಾಜಿನಲ್ಲಿ ವಿವಿಧ ಬಗೆಗಳಿವೆ. ಕುಪ್ಪಿಗಳು, ಪಾತ್ರೆಗಳು, ತಟ್ಟೆಗಳು, ಹಾಳೆಗಳು ಮುಂತಾದವನ್ನು ಸಾಮಾನ್ಯ ಗಾಜಿನಿಂದ ತಯಾರಿಸುವರು. ಈ ಜಾತಿ ಗಾಜಿನಲ್ಲಿ ಶುದ್ಧ ಮರಳು, ಸೋಡಖಾರ ಮತ್ತು ಸುಣ್ಣದ ಕಲ್ಲು ಸೇರಿವೆ. ಇಂಥ ಗಾಜು ಹೆಚ್ಚಿನ ಉಷ್ಣತೆಯನ್ನು ತಡೆದುಕೊಳ್ಳಲಾರದು. ಅತ್ಯುಷ್ಣತೆಯಲ್ಲಿರುವ ಪದಾರ್ಥಗಳನ್ನು ಈ ಪಾತ್ರೆಗಳಿಗೆ ಥಕ್ಕನೆ ಸುರಿದರೆ ಇವು ಒಡೆದುಹೋಗುತ್ತವೆ. ಅದೇ ರೀತಿ ಪಾತ್ರೆಗಳು

ಬಲು ಬಿಸಿಗೊಂಡಿರುವಾಗ ಫಕ್ಕನೆ ಅವನ್ನು ತಣಿಸಿದಾಗಲೂ ಅವು ಒಡೆದು ಹೋಗುತ್ತವೆ. ಉಷ್ಣತೆಯ ತೀವ್ರ ಏರಿಳಿತಗಳನ್ನು ತಡೆಯಬಲ್ಲ ಗಾಜನ್ನು ವಿಶಿಷ್ಟವಾಗಿ ನಿರ್ಮಿಸ ಬೇಕಾಗುತ್ತದೆ. ಇದಕ್ಕೆ ಗಟ್ಟಿಗಾಜು ಎಂದು ಹೆಸರು. ಇದರ ತಯಾರಿಕೆಯಲ್ಲಿ ಸೋಡಕಾರದ ಬದಲು ಪೊಟ್ಯಾಸಿಯಮ್ ಕಾರ್ಬನೇಟನ್ನು ಉಪಯೋಗಿಸುವರು. ಗಾಜಿಗೆ ಇನ್ನೂ ಬೇರೆ ವಿಶಿಷ್ಟ ಗುಣಗಳನ್ನು ಕೊಡಲು ಸೀಸದ ಇಲ್ಲವೆ ಬೇರಿಯಮಿನ ಸಂಯುಕ್ತ ವಸ್ತುಗಳನ್ನು ಸುಣ್ಣದಕಲ್ಲಿನ ಬದಲು ಉಪಯೋಗಿಸುವರು. ಕೆಲವು ಸಂದರ್ಭದಲ್ಲಿ ಮರಳಿನ ಬದಲು ಅಥವಾ ಅದರ ಜೊತೆಗೆ ಬೋರಾನ್ ಟ್ರೈ ಆಕ್ಸೈಡನ್ನು ಉಪಯೋಗಿಸುವರು. ಇದರಿಂದಾಗಿ ಒದಗುವ ಬೋರೋ ಸಿಲಿಕೇಟ್ ಗಾಜು ಉಷ್ಣತೆಯ ತೀವ್ರ ಬದಲಾವಣೆಗಳನ್ನು ತಡೆಯಲು ಚೆನ್ನಾಗಿ ಸಮರ್ಥವಾಗುತ್ತದೆ.



ಬೆಂಗಳೂರಿನ ಅಲೆಂಬಿಕ್ ಗಾಜು ಕಾರ್ಖಾನೆಯ ಒಂದು ಒಳನೋಟ

ಇನ್ನು ಬಣ್ಣಬಣ್ಣದ ಗಾಜುಗಳೂ ಇವೆ. ತಯಾರಿಕೆಯ ವೇಳೆ ಕಚ್ಚಾ ಪದಾರ್ಥಗಳೊಡನೆ ಅಗತ್ಯವಾದ ಲೋಹದ ಆಕ್ಸೈಡನ್ನು ಸಣ್ಣ ಪ್ರಮಾಣದಲ್ಲಿ ಸೇರಿಸುವುದರಿಂದ ಗಾಜಿಗೆ ಬೇಕಾದ ಬಣ್ಣ ಬರಿಸಬಹುದು. ಕೊಬಾಲ್ಟ್ ಆಕ್ಸೈಡನ್ನು ಸೇರಿಸುವುದರಿಂದ ನೀಲಿಗಾಜನ್ನೂ ಮ್ಯಾಂಗನೀಸ್ ಡೈ ಆಕ್ಸೈಡ್‌ನ್ನು ಸೇರಿಸುವುದರಿಂದ ಹಳದಿ ಗಾಜನ್ನೂ ಬಂಗಾರ ಅಥವಾ ಸಿಲೇನಿಯಮ್ ಸೇರಿಸುವುದರಿಂದ ಕೆಂಪು ಬಣ್ಣದ ಗಾಜನ್ನೂ, ಯುರೇನಿಯಮ್ ಆಕ್ಸೈಡನ್ನು ಸೇರಿಸುವುದರಿಂದ ಹಳದಿ ಗಾಜನ್ನೂ ತಯಾರಿಸಬಹುದು. ಕ್ಯಾಲ್ಸಿಯಂ ಫ್ಲೋರೈಡ್, ಅರ್ಸಿನಿಯಸ್ ಆಕ್ಸೈಡ್, ಅಲ್ಯೂಮಿನಿಯಮ್ ಆಕ್ಸೈಡ್, ಜಿಂಕ್ ಮತ್ತು ಕ್ಯಾಲ್ಸಿಯಮ್ ಫಾಸ್ಫೇಟುಗಳನ್ನು ಒಂದೊಂದಾಗಿ ಆಗಲಿ ಅಥವಾ ಕೆಲವುಗಳ ಕೂಟದಲ್ಲಿ ಆಗಲಿ ಬಳಸುವುದರಿಂದ ಗಾಜಿಗೆ ಬಿಳಿಬಣ್ಣವನ್ನು ಅಲ್ಪಪಾರ ದರ್ಶಕ ಗುಣವನ್ನೂ ಒದಗಿಸಬಹುದು. ಇಂಡಿಯನ್ ಆಕ್ಸೈಡನ್ನು ಸೇರಿಸಿದರೆ ಗಾಜು ಕಪ್ಪುಬಣ್ಣವನ್ನು ಪಡೆಯುತ್ತದೆ. ಇನ್ನೊಂದು ಅತಿ ಉಪಯುಕ್ತವಾದ ಜಾತಿ ಪೈರೆಕ್ಸ್ ಗಾಜು. ಇದರಲ್ಲಿ ಶೇ.80 ರಷ್ಟು ಮರಳು ಸೇರಿರುವುದರಿಂದ ಇದನ್ನು ಹೆಚ್ಚು ಬಿಸಿಮಾಡಿ ಕೂಡಲೆ ತಣಿಯಬಿಟ್ಟರೂ ಅದು ಒಡೆಯುವುದಿಲ್ಲ. ಅಲ್ಲದೆ ಅದು ಅಧಿಕ ಉಷ್ಣತೆಯನ್ನು ತಡೆದುಕೊಳ್ಳುವುದು. ಕನ್ನಡಕ, ಸೂಕ್ಷ್ಮದರ್ಶಕ, ದೂರದರ್ಶಕ ಮೊದಲಾದ ಉಪಕರಣ ತಯಾರಿಕೆಯಲ್ಲಿ ಆಪ್ಟಿಕಲ್ ಗಾಜು ಎಂಬ ವಿಶಿಷ್ಟ ಜಾತಿಯ ಗಾಜನ್ನು ಉಪಯೋಗಿಸು ವರು. ಇದರ ತಯಾರಿಕೆಯಲ್ಲಿ ಕಚ್ಚಾ ಪದಾರ್ಥಗಳನ್ನೂ ತಯಾರಿಕೆಯ ಕ್ರಿಯೆಗಳನ್ನೂ ಚೆನ್ನಾಗಿ ಪರಿಶೀಲಿಸಿ ಅದಕ್ಕೆ ವಿಶಿಷ್ಟ ಗುಣಗಳು ನಿರ್ದಿಷ್ಟ ಪ್ರಮಾಣದಲ್ಲಿ ಇರುವಂತೆ ನೋಡಿಕೊಳ್ಳಲಾಗುವುದು. ತೆಳುವಾದ ಗಾಜಿನ ಪದರಗಳನ್ನು ಸೆಲ್ಯುಲೋಸ್ ಅಸಿಟೇಟ್ ಎಂಬ ವಸ್ತುವಿನಿಂದ ಒಂದಕ್ಕೊಂದು ಜೋಡಿಸಿಕೊಳ್ಳುವ ಹಾಗೆ ಮಾಡುವುದರಿಂದ ಅಪಾಯರಹಿತ ಗಾಜಿನ ಹಾಳೆಯನ್ನು ತಯಾರಿಸಬಹುದು. ಇದರ ಪದರಗಳು ಕಾಣಿಸುವುದಿಲ್ಲ. ಅಲ್ಲದೆ ಈ ಗಾಜು ಪಾರದರ್ಶಕವಾಗಿಯೂ ಇರುತ್ತದೆ. ಅಪಘಾತಕ್ಕೆ ಒಳಗಾದಾಗ ಇಂಥ ಗಾಜು ಪುಡಿಪುಡಿಯಾದರೂ ಅದರ ಚೂರುಗಳು ಸಿಡಿದು ಯಾವ ಹಾನಿಯನ್ನೂ ಮಾಡುವುದಿಲ್ಲ. ಬದಲು ಆ ಚೂರುಗಳು ಇದ್ದಲ್ಲಿಯೇ ಅಂಟಿಕೊಂಡಿರುವುವು. ಇಂಥ ಗಾಜನ್ನು ಮೋಟಾರು ವಾಹನಗಳಲ್ಲಿ ಚಾಲಕರ ಎದುರು ಗಾಳಿರಕ್ಷಕಗಳಾಗಿ (ವಿಂಡ್ ಷೀಲ್ಡ್ಸ್) ಉಪಯೋಗಿಸುತ್ತಾರೆ.

**ನೀರು ಗಾಜು:** ದಪ್ಪವಾಗದ ದ್ರವರೂಪದಲ್ಲಿರುವ ಒಂದು ಜಾತಿಯ ಗಾಜು. ಸೋಡಕಾರ ಮತ್ತು ಶುದ್ಧವಾದ ಮರಳನ್ನು ಟ್ಯಾಂಕ್ ಆಕಾರದ ಕುಲುಮೆಯಲ್ಲಿ ಚೆನ್ನಾಗಿ ಕಾಯಿಸಿದಾಗ ಸೋಡಿಯಮ್ ಸಿಲಿಕೇಟ್ ಎಂಬ ವಸ್ತು ದ್ರವರೂಪದಲ್ಲಿ ತಯಾರಾಗುವುದು. ಇದನ್ನು ಹೊರತೆಗೆದು ನೀರು ಚಿಮುಕಿಸಿ ಚೂರು ಚೂರು ಮಾಡುವರು. ಈ ಚೂರುಗಳನ್ನು ಮಿತಗಾತ್ರದ ನೀರಿನೊಂದಿಗೆ ಬಾಯ್ಲರಿನಲ್ಲಿ ಹೆಚ್ಚು ಒತ್ತಡದಲ್ಲಿ ಕುದಿಸಿದಾಗ ಸೋಡಿಯಂ, ಸಿಲಿಕೇಟ್ ಕರಗಿ ದ್ರಾವಣವಾಗುವುದು. ಇದನ್ನು ಅಗತ್ಯವಿರುವಷ್ಟು ದಪ್ಪ ದ್ರವವಾಗುವವರೆಗೆ ಬಿಸಿ ಮಾಡಿದಾಗ ನೀರು ಗಾಜು ದೊರೆಯುತ್ತದೆ. ಈ ಜಾತಿಯ ಗಾಜಿನ ಉಪಯೋಗಗಳು ಬಹಳ. ಮರದ ವಸ್ತುಗಳಿಗೆ ಇದನ್ನು ಸವರಿದರೆ ಅವಕ್ಕೆ ಬೆಂಕಿ ತಗಲುವುದಿಲ್ಲ. ಮೊಟ್ಟೆಗಳನ್ನು ಈ ದ್ರಾವಣದಲ್ಲಿ ಅದ್ದಿಟ್ಟರೆ ಅವು ದೀರ್ಘಕಾಲದವರೆಗೆ ಕೆಡುವುದಿಲ್ಲ. ಇತರ ರಾಸಾಯನಿಕ ವಸ್ತುಗಳನ್ನು ಸೇರಿಸಿ ಅಥವಾ ಬರೀ ಇದೇ ವಸ್ತುವನ್ನು ಅಂಟಾಗಿ ಉಪಯೋಗಿಸಬಹುದು. ಇದನ್ನು ರಂಗು ಮತ್ತು ಸಾಬೂನಿನ ತಯಾರಿಕೆಯಲ್ಲೂ ಉಪಯೋಗಿಸಲಾಗುತ್ತಿದೆ.

ಗಾಜು ಇಂದು ಉತ್ತಮ ವಾಸ್ತುಶಿಲ್ಪದ ಸರಕಾಗಿದೆ. ಇಂದಿನ ಗೃಹನಿರ್ಮಾಣ ಉದ್ದಿಮೆಗೆ ಗಾಜು ಹೊಸ ಚೌಕಟ್ಟನ್ನೇ ತೊಡಿಸಿದೆ. ಇದಕ್ಕೆ ಕಾರಣ ಗಾಜು ತಂತ್ರಜ್ಞಾನದಲ್ಲಿ ಘಟಿಸುತ್ತಿರುವ ಅತ್ಯಾಧುನಿಕ ಬೆಳವಣಿಗೆ. ಗಾಜನ್ನು ಯಾಂತ್ರಿಕವಾಗಿ ಅಥವಾ ರಾಸಾಯನಿಕವಾಗಿ ಮಾರ್ಪಾಡುಗೊಳಿಸಬಹುದು. ಸಮರ್ಥವಾಗಿ ಸಂಸ್ಕರಿಸಿ ಗಾಜನ್ನು ಶಬ್ದನಿರೋಧಕ, ಶಾಖಹೀರುವಿಕೆ, ಶಾಖಪ್ರತಿಫಲನ, ಹವಾಮಾನ ಪ್ರತಿರೋಧಕ, ಅಗ್ನಿನಿರೋಧಕ ಮತ್ತು ವಿದ್ಯುತ್ ಆಘಾತ ತಡೆಯಬಲ್ಲ ಸಾಧನವಾಗಿ ಬಳಸಬಹುದಾಗಿದೆ. ನೂರಾರು ವರ್ಷಗಳಿಂದ ಗೃಹ ನಿರ್ಮಾಣದಲ್ಲಿ ಗಾಜಿನ ಬಳಕೆಯಾಗಿದೆಯಾದರೂ ಅಂದಿನ ಷೀಟ್ ಗ್ಲಾಸ್‌ನಿಂದ ಅತ್ಯಾಧುನಿಕ ಫ್ಲೋಟ್ ಗ್ಲಾಸ್‌ವರೆಗೂ ಗಾಜು ಭಾರಿ ಮಾರ್ಪಾಡು ಕಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲೂ ಗಾಜಿನ ಬಳಕೆ ಯಥೇಚ್ಛವಾಗಿದೆ. ತೆಳು ಗಾಜಿನ ಹಾಳೆಗಳಿಂದ ಹಿಡಿದು ಸೂರ್ಯನ ರಶ್ಮಿಗಳನ್ನು ತಡೆ ಹಿಡಿಯಬಲ್ಲ ಗುಣಮಟ್ಟದ ಗಾಜುಗಳು ಇಂದು ಲಭ್ಯ. ಗಾಜು ಉದ್ಯಮ ವೇಗವಾಗಿ ಬೆಳೆಯುತ್ತಿದೆ. ಹಿಂದಿನ ಕಾಲದಲ್ಲಿ ಗೂಡುಗಳಂತಿದ್ದ ಮನೆಗಳು ಇಂದು ಹೆಚ್ಚು ಪಾರದರ್ಶಕವಾಗಿರಲು ಸಾಧ್ಯವಾಗಿರುವುದು ಗಾಜಿನಿಂದ.

ಗಾಜು ಸೂಕ್ಷ್ಮ ಪರಿಕರವಾಗಿದ್ದು ಅದರ ಅಗತ್ಯಗಳಿಗೆ ಅನುಸಾರವಾಗಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. (ಎಂ.ವಿ.ಬಿ)

**ಗಾಟಿಂಗೆನ್ :** ಜರ್ಮನಿಯಲ್ಲಿ ಒಂದು ವಿಶ್ವವಿದ್ಯಾಲಯ ನಗರ. ಕೆಳ ಸ್ಯಾಕ್ಸನಿಯ ಅತ್ಯಂತ ದಕ್ಷಿಣ ಭಾಗದಲ್ಲಿ, ರೈನ್ ನದಿಯ ದಡದ ಮೇಲೆ, ಹೈನ್‌ಬರ್ಗ್ ಪರ್ವತದ ತಪ್ಪಲಿನಲ್ಲಿದೆ. ಪ್ರ.ಶ. 950ರ ಜರ್ಮನ್ ದಾಖಲೆಗಳಲ್ಲಿ ಗೋಡಿಂಗ್ ಅಥವಾ ಗುಟಿಂಗಿ ಎಂಬ ಗ್ರಾಮದ ಹೆಸರಿದೆ. ಈ ಗ್ರಾಮವೇ ತರುವಾಯದ ದಿನಗಳಲ್ಲಿ ಗಾಟಿಂಗೆನ್ ಎಂಬ ಹೆಸರು ತಳೆಯಿತು. ಈ ನಗರಕ್ಕೆ ಜರ್ಮನಿಯ ದೊರೆ 4ನೆಯ ಆಟೋ 1210ರಲ್ಲಿ ನಗರಪಾಲಿಕೆ ಹಕ್ಕನ್ನು ನೀಡಿದ. ವಾಣಿಜ್ಯದ ಸೌಲಭ್ಯಗಳಿಗಾಗಿ ಜರ್ಮನಿಯ ನಗರಗಳು 14ನೆಯ ಶತಮಾನದಲ್ಲಿ ಮಾಡಿಕೊಂಡ ಹ್ಯಾನ್ಸೀಯಾಟಿಕ್ ಸಂಘದಲ್ಲಿ ಈ ನಗರ ಉನ್ನತ ಸ್ಥಾನ ಪಡೆಯಿತು. ಇದು 1513ರಲ್ಲಿ ಜರ್ಮನಿಯ ಧಾರ್ಮಿಕ ಪುನರುತ್ಥಾನ ಚಳವಳಿಯಲ್ಲಿ ಭಾಗವಹಿಸಿತು; ಮೂವತ್ತು ವರ್ಷಗಳ ಯುದ್ಧದ (1618–1648) ಕಾಲದಲ್ಲಿ ಕಷ್ಟನಷ್ಟಗಳಿಗೊಳಗಾಯಿತು. ಮುಂದೆ ಒಂದು ಶತಮಾನ ದುರ್ಗತಿಯಲ್ಲಿದ್ದು ತರುವಾಯ ವಿಶ್ವವಿದ್ಯಾಲಯದ ಸ್ಥಾಪನೆಯಿಂದ ಪ್ರಸಿದ್ಧಿಗೆ ಬಂತು. ಈ ನಗರ 18ನೆಯ ಶತಮಾನದಲ್ಲಿ ಜರ್ಮನಿಯ ಯುವ ಕವಿಸಂಘದ ಕೇಂದ್ರವಾಗಿತ್ತು.

ಇಲ್ಲಿಯ ಪುರಭವನ 14ನೆಯ ಶತಮಾನದ ಕಟ್ಟಡ.ಇದನ್ನು 1880ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು. ನಗರದ ಹಳೆಯ ಬೀದಿಗಳು ಕಿರಿದು, ಅಂಕುಡೊಂಕು.

ಈ ನಗರದಲ್ಲಿರುವ ವಿಶ್ವವಿದ್ಯಾಲಯವನ್ನು ಇಂಗ್ಲೆಂಡಿನ ದೊರೆ 2ನೆಯ ಜಾರ್ಜ್ 1737ರಲ್ಲಿ ಸ್ಥಾಪಿಸಿದ. ರಾಷ್ಟ್ರೀಯ ಮನೋಭಾವವನ್ನು ಬೆಳೆಸುವುದರಲ್ಲಿ ಈ ವಿಶ್ವವಿದ್ಯಾಲಯದ ಪಾತ್ರ ಹಿರಿದಾದ್ದು. ಹ್ಯಾನೋವರ್‌ನ ಆಗಸ್ಟ್ ದೊರೆಯ ಪ್ರತಿಗಾಮಿ ನೀತಿಯನ್ನು ವಿರೋಧಿಸಿದ್ದಕ್ಕಾಗಿ ಇಲ್ಲಿಯ ಏಳ್ವರು ಪ್ರಾಧ್ಯಾಪಕರು ತಮ್ಮ ಕೆಲಸ ಕಳೆದುಕೊಂಡರು (1837). ಗ್ರಿಮ್ ಸೋದರರು ಇವರಲ್ಲಿಬ್ಬರು. ಬಿಸ್ಮಾರ್ಕ್ ಗಾಟಿಂಗೆನ್ನಿನ ವಿದ್ಯಾರ್ಥಿ. ನಾಜ಼ಿಗಳ ಆಡಳಿತ ಕಾಲದಲ್ಲಿ ಗಾಟಿಂಗೆನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಖ್ಯೆ 3,850 ರಿಂದ (1930–31) 1540 ಕ್ಕೆ (1936–37) ಇಳಿದುಹೋಗಿತ್ತು. ವಿಶ್ವವಿದ್ಯಾಲಯದ ಮುಖ್ಯ ಕಟ್ಟಡವೂ ಅದರ ಪಕ್ಕದಲ್ಲಿರುವ ಗ್ರಂಥಾಲಯವೂ ಪ್ರಾಣಿವಿಜ್ಞಾನ, ಮಾನವ ಶಾಸ್ತ್ರ, ಖನಿಜವಿಜ್ಞಾನಗಳಿಗೆ ಸಂಬಂಧಿಸಿದ ಸಂಗ್ರಹಾಲಯಗಳೂ ಉಲ್ಲೇಖಾರ್ಹ.

ಮಧ್ಯಯುಗದಲ್ಲಿ ಗಾಟಿಂಗೆನ್ ಉಣ್ಣೆ ಕೈಗಾರಿಕಾ ಕೇಂದ್ರವಾಗಿತ್ತು. 19–20ನೆಯ ಶತಮಾನಗಳಲ್ಲಿ ವಿಜ್ಞಾನ, ಶಸ್ತ್ರಕ್ರಿಯೆ ಮತ್ತು ದೃಕ್ ಉಪಕರಣ ಕೈಗಾರಿಕೆಗಳು ಬೆಳೆದಿವೆ. ಇಲ್ಲಿಯ ವಿಜ್ಞಾನ ಸಂಘ ಪ್ರಕಟಿಸುತ್ತಿರುವ (ಸ್ಥಾಪಿತ 1739) ಗಾಟಿಂಗಿಷೆ ಗೇಲಿರ್ಟೆ ಆನ್‌ಟ್ಸೈಗೆನ್ ಜರ್ಮನಿಯ ಪ್ರಮುಖ ವಿದ್ವತ್ ಪತ್ರಿಕೆ.

ಎರಡನೆಯ ಮಹಾಯುದ್ಧ ಕಾಲದಲ್ಲಿ ಈ ನಗರ ಹೆಚ್ಚಾಗಿ ಬಾಂಬು ದಾಳಿಗೆ ತುತ್ತಾಗಲಿಲ್ಲ. 1945ರಲ್ಲಿ ಇದು ಬ್ರಿಟಿಷ್ ಆಕ್ರಮಿತ ವಲಯದಲ್ಲಿ ಇತ್ತು. (ವಿ.ಜಿ.ಕೆ.)

**ಗಾಟ್ಲೆಂಡ್ :** ಸ್ವೀಡನಿಗೆ ಸೇರಿದ ಒಂದು ದ್ವೀಪ. ಬಾಲ್ಟಿಕ್ ಸಮುದ್ರದಲ್ಲಿ ಉ.ಅ. $57^0$–$58^0$ ನಡುವೆ, ಸ್ವೀಡನಿನ ಮುಖ್ಯ ಭೂಭಾಗದ ಪೂರ್ವಕ್ಕೆ 75 ಕಿಮೀ ದೂರದಲ್ಲಿದೆ. ಇದರ ಉದ್ದ 115.5 ಕಿಮೀ., ಕನಿಷ್ಠ ಅಗಲ 45ಕಿಮೀ. ವಿಸ್ತೀರ್ಣ 3.140ಚ.ಕಿಮೀ. ಇದೂ ಫಾರ, ಗಾಟ್ಸ್ಕ ಸ್ಯಾಂಡನ್, ಲಿಲ, ಸ್ಟೋರ್‌ಕಾರ್ಲ್‌ಸೊ ದ್ವೀಪಗಳೂ ಸೇರಿ ಗಾಟ್ಲೆಂಡ್ ಕೌಂಟಿಯಾಗಿದೆ. ಗಾಟ್ಲೆಂಡ್ ಪ್ರಸ್ಥಭೂಮಿ ಸಿಲೂರಿಯಮ್ ಸುಣ್ಣಕಲ್ಲಿನಿಂದ ಕೂಡಿದ್ದು, ಕರಾವಳಿಯಲ್ಲಿ ಸುಣ್ಣಕಲ್ಲಿನ ಉದ್ದನೆಯ ಸಾಲುಗಳಿವೆ. ಬಾರ್ಲಿ, ರೈ, ಸಕ್ಕರೆ ಬೀಟ್, ತರಕಾರಿ, ಹೂವು ಇಲ್ಲಿ ಬೆಳೆಯುತ್ತವೆ. ಫಾರ ಮರಳಿನಿಂದ ಕೂಡಿದೆ. ಕುರಿ ಮೇಯಿಸುವುದು ಇಲ್ಲಿಯ ಕಸಬು. ಮೀನುಗಾರಿಕೆ, ಸಿಮೆಂಟ್ ತಯಾರಿಕೆ ನಡೆಯುತ್ತವೆ. ಗಾಟ್ಲೆಂಡಿನ ಮುಖ್ಯ ಬಂದರು ವಿಸ್ಬಿ. ಇದೇ ಇಲ್ಲಿಯ ಮುಖ್ಯ ಪಟ್ಟಣ. ಪ್ರವಾಸ ದೃಷ್ಟಿಯಿಂದಲೂ ಗಾಟ್ಲೆಂಡ್ ಮುಖ್ಯವಾಗಿದೆ. (ಎಂ.ಎಸ್.)

**ಇತಿಹಾಸ:** ಗಾಟ್ಲೆಂಡ್ ಕಂಚಿನಯುಗದಿಂದಲೇ ವ್ಯಾಪಾರ ಕೇಂದ್ರವಾಗಿತ್ತು. 9ನೆಯ ಶತಮಾನದಿಂದಲೇ ಸ್ವೀಡನಿಗೆ ಸೇರಿತು. 12ನೆಯ ಶತಮಾನದಲ್ಲಿ ಈ ದ್ವೀಪದ ವ್ಯಾಪಾರಿಗಳು ಪಶ್ಚಿಮ ಯುರೋಪ್ ಮತ್ತು ರಷ್ಯದ ನಡುವಿನ ಮಾರ್ಗದಲ್ಲಿ ಅಧಿಪತ್ಯ ಸ್ಥಾಪಿಸಿದರು. ಆರ್ಮನಿಯ ವ್ಯಾಪಾರಿಗಳು. ಇಲ್ಲಿಯ ಮುಖ್ಯ ಪಟ್ಟಣಗಳಲ್ಲಿ ಮತ್ತು ಇಲ್ಲಿಯ ಈಗಿನ ಮುಖ್ಯ ಪಟ್ಟಣವಾದ ವಿಸ್ಬಿಯಲ್ಲಿ ನೆಲೆಸಿದರು. ಇದು ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ 1361ರಲ್ಲಿ ಡಚ್ಚರು ಇದನ್ನು ವಶಪಡಿಸಿಕೊಂಡರು. 1654ರಲ್ಲಿ ಸ್ವೀಡನ್ನಿಗೆ ಹಿಂತಿರುಗಸಲ್ಪಟ್ಟಿತು. 19ನೆಯ ಶತಮಾನದ ಕೊನೆಯಲ್ಲಿ ಕೋಟೆಗಳನ್ನು ಕಟ್ಟಿ ಬಲಪಡಿಸಿದರು. (ಎನ್.ಎಲ್.)

**ಗಾಟ್‌ಷೆಡ್, ಯೋಹಾನ್ ಕ್ರಿಸ್ಟಾಫ್ :** 1700–1766. ಯುರೋಪಿನ ಸಾಂಸ್ಕೃತಿಕ ಚರಿತ್ರೆಯಲ್ಲೂ ಜರ್ಮನ್ ಸಾಹಿತ್ಯ ಚರಿತ್ರೆಯಲ್ಲೂ ಪ್ರಬುದ್ಧಯುಗ ಎಂದು ಕರೆಯಲ್ಪಟ್ಟಿರುವ 18ನೆಯ ಶತಮಾನದ ಪ್ರಮುಖ ಜರ್ಮನ್ ಲೇಖಕರಲ್ಲಿ ಮೊದಲಿಗ, ಈತನನ್ನು ಯುಗಪ್ರವರ್ತಕನೆಂದೇ ಕರೆದಿದ್ದಾರೆ.

ಕೋನಿಗ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಮೊದಲು ದೇವತಾಶಾಸ್ತ್ರವನ್ನು ವ್ಯಾಸಂಗ ಮಾಡುತ್ತಿದ್ದ ಗಾಟ್‌ಷೆಡ್ ಕೆಲಕಾಲಾನಂತರ ಸಾಹಿತ್ಯ ಹಾಗೂ ಸೌಂದರ್ಯ ಮೀಮಾಂಸೆಯತ್ತ ಹೊರಳಿದ. ಕಡೆಗೆ ಅದೇ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾದರೂ ಆ ಹುದ್ದೆಯಲ್ಲಿ ಹೆಚ್ಚು ಕಾಲ ಇರಲಿಲ್ಲ. ಬಲವಂತವಾಗಿ ಅರಸನ ಸಿಡಿಗುಂಡು ಸೈನ್ಯಕ್ಕೆ ತನ್ನನ್ನು ಎಳೆದೊಯ್ಯುವರೆಂಬ ಭೀತಿ ತಲೆದೋರಿತಾಗಿ ಕೂಡಲೇ ಕೋನಿಗ್ಸ್ ಬರ್ಗ್ ಬಿಟ್ಟು ಲೀಪ್ಜಿಗ್ ನಗರಕ್ಕೆ ಪಲಾಯನ ಮಾಡಿದ.



ಲೀಪ್ಜಿಗ್ ನಗರದಲ್ಲಿ ಹೆಸರಾಂತ ವಿಶ್ವವಿದ್ಯಾಲಯವಿತ್ತು; ಮೇಲಿಂದಮೇಲೆ ಅಲ್ಲಿ ದೊಡ್ಡ ದೊಡ್ಡ ಜಾತ್ರೆಗಳು ನಡೆಯುತ್ತಿದ್ದುವು. ಜರ್ಮನಿಯ ಪುಸ್ತಕ ವ್ಯಾಪಾರ ಕುದುರಿದ್ದಕ್ಕೆ ಈ ನಗರ ಬಹುಪಾಲು ಕಾರಣವೆನ್ನಲಾಗಿದೆ. ಈ ಎಲ್ಲ ಕಾರಣಗಳಿಂದಲೇ ಲೀಪ್ಜಿಗ್ ನಗರ ಇಡೀ ಉತ್ತರ ಯುರೋಪಿನಲ್ಲೇ ಒಂದು ಪ್ರಮುಖ ಕೇಂದ್ರವಾಗಿತ್ತು. ಲೀಪ್ಜಿಗ್ ಮುಟ್ಟಿದ ಕೂಡಲೇ ಗಾಟ್‌ಷೆಡ್ ಮತ್ತೆ ತಮ್ಮ ಅಧ್ಯಯನ ಪ್ರವಚನಗಳನ್ನು ಆರಂಭಿಸಿ 1730 ರಲ್ಲಿ ಕಾವ್ಯಕಲೆಯ ಪ್ರಾಧ್ಯಾಪಕನಾದ ನಲ್ಲದೆ ಡಾಯಿಷ್‌ಬಂದ್ ಗೆಸ್ಸಲ್‌ಷಾಫ್ಟ್ ಎಂಬ ಸಂಘಕ್ಕೆ ಸದಸ್ಯನಾಗಿ ಆಯ್ಕೆಯಾದ; ಕೆಲವು ವರ್ಷಗಳ ಅನಂತರ ಈ ಸಂಘದ ಹಿರಿಯನಾದ ಕಾರಣ ಸಾಹಿತ್ಯ ಪ್ರಪಂಚದಲ್ಲಿ ಒಂದು ಮಹಾಶಕ್ತಿಯೇ ಆದ. ವ್ಯಕ್ತಿವಾದ ಮತ್ತು ವಿಚಾರವಾದಗಳು ಸಂಗಮಿಸಿ ಉಕ್ಕೇರುತ್ತಿದ್ದ ಕಾಲವದು. ಈ ಪ್ರವಾಹಕ್ಕೆ ದುಮುಕಿ ಗಾಟ್‌ಷೆಡ್ ತನ್ನ ಸರ್ವಶಕ್ತಿಯಿಂದಲೂ ಲೀಪ್ಜಿಗ್ ನಗರವನ್ನು ಜರ್ಮನಿಯ ಬೌದ್ಧಿಕ ಕೇಂದ್ರವನ್ನಾಗಿ ಮಾಡಲು ಶ್ರಮಿಸಿದ. ಅಡಿಸನ್ನನ ಸ್ಪೆಕ್ಟೇಟರ್ ಪತ್ರಿಕೆಯ ಮಾದರಿಯಲ್ಲಿ ಡೀ ವರ್‌ನೂನ್‌ಫ್‌ತಿಗನ್ ಟ್ಯಾಡ್ಲೆರಿನ್ನನ್ ಎಂಬ ಪತ್ರಿಕೆಯನ್ನು ಆರಂಭಿಸಿದ. ಇದಾಗಲೇ 1727ರಲ್ಲಿ ಈತ ಹೊರಡಿಸಿದ ಡರ್ ಬೀಡರ್‌ಮನ್ ಎಂಬ ಪತ್ರಿಕೆಯಾಗಲೀ ಊರ್ಜಿತವಾಗಲಿಲ್ಲ.

ಗಾಟ್‌ಷೆಡ್ಡನ ಮೊಟ್ಟಮೊದಲ ಮುಖ್ಯ ಕೃತಿಯೆಂದರೆ ಫರ್‌ಸೂಕ್ ಐನೆರ್ ಕ್ರಿಟಿಷೆನ್ ಡಿಕ್ಟ್‌ಕುನ್ಸ್ಟ್ ಫಾರ್ ಡೀ ಡಾಯ್ಟ್ಯನ್ ಎಂಬ ಕಾವ್ಯಮೀಮಾಂಸೆಯನ್ನು ಕುರಿತ ಗ್ರಂಥ (1730). ಈ ಕೃತಿಯಿಂದಾಗಿ ಅದುವರೆಗೂ ಪ್ರಸಿದ್ಧವಾಗಿದ್ದ ಓಪಿಟ್ಜನ ಕಾವ್ಯ ಮೀಮಾಂಸಾ ಗ್ರಂಥ ಬುಕ್ ಫಾನ್ ಡೇರ್ ಡಾಯ್ ಟ್ಶೆನ್ ಪೊಯೆಟೆರೀ (1624) ತನ್ನ ಪ್ರಾಶಸ್ತ್ಯವನ್ನು ಕಳೆದುಕೊಂಡಿತು. ಅಲ್ಲದೆ ಅದುವರೆಗೂ ಪ್ರಚಾರದಲ್ಲಿ ತೀರ ಕೃತಕವಾದ ಬರೋಕ್ ಶೈಲಿಗೆ ಗಾಟ್‌ಷೆಡ್ಡನ ಗ್ರಂಥ ಕೊಡಲಿಪೆಟ್ಟು ಹಾಕಿ ಜರ್ಮನ್ ಸಾಹಿತ್ಯಕ್ಕೆ ದೊಡ್ಡ ಉಪಕಾರವೆಸಗಿತು. ಇದು ಕಾವ್ಯರಚನೆಗೆ ಕೈಗನ್ನಡಿಯಾಗ ಬೇಕೆಂದೇ ಬರೆದ ಶಾಸ್ತ್ರ ಗ್ರಂಥ. ಇದರಲ್ಲಿ ಗಾಟ್‌ಷೆಡ್ ಬಹುವಾಗಿ ಫ್ರೆಂಚ್ ಮೂಲಗಳಿಂದ, ಅದರಲ್ಲೂ ವಿಶೇಷವಾಗಿ ಲೀ ಬಾಸು ಮತ್ತು ದಾಬಿಗ್ನಾಕ್ ಎಂಬ ಲೇಖಕರ ಕೃತಿಗಳಿಂದ ವಿಷಯವನ್ನು ಸಂಗ್ರಹಿಸಿ ಅಳವಡಿಸಿಕೊಂಡಿದ್ದಾನೆ. ಕಾವ್ಯವೆಂದರೆ ಕೇವಲ ಛಂದೋಬದ್ಧವಾದ ಪಂಕ್ತಿಗಳನ್ನು ನಿರ್ಮಿಸುವ ಯಾಂತ್ರಿಕ ಚಮತ್ಕಾರ ಅಲ್ಲ; ಅದು ನಿಸರ್ಗದ ಅನುಕರಣವಾಗಬೇಕು ಎಂದು ಗಾಟ್‌ಷೆಡ್ ಒತ್ತಾಯವಾಗಿ ನಿರೂಪಿಸಿದ. ಕಾವ್ಯ ಕೃತಕವಾಗಬಾರದು. ಸಹಜವಾಗಿರಬೇಕು. ಸ್ವಾಭಾವಿಕವಾಗಿರಬೇಕು. ಎಂದವನು ಮೇಲಿಂದಮೇಲೆ ಘೋಷಿಸುತ್ತಾನಾದರೂ ಅವನಿಗೆ ಕಾವ್ಯದ ಮರ್ಮ ತಿಳಿದಿಲ್ಲವೆನಿಸುತ್ತದೆ. ಫ್ರೆಂಚ್ ಲೇಖಕರ ಪ್ರಭಾವಕ್ಕೆ ಅತಿಯಾಗಿ ಒಳಪಟ್ಟುದರಿಂದ ಆತ ಕಾವ್ಯದ ಶರೀರಕ್ಕೆ ಹೆಚ್ಚು ಪ್ರಾಮುಖ್ಯಕೊಟ್ಟನಾಗಿ ಕಾವ್ಯದ ಆತ್ಮ ಆತನಿಗೆ ಕಾಣದಾಯಿತು. ಫ್ರೆಂಚ್ ಲೇಖಕರಂತೆ ಅವನೂ ಸಾಹಿತ್ಯವನ್ನು ಕೃತಕವಾಗಿ ವರ್ಗೀಕರಿಸಿದ. ಕಾವ್ಯಾನುಭವದಲ್ಲಿ ಉತ್ತಮ ಅಭಿರುಚಿ ಎಂದರೇನು ಎಂಬುದನ್ನು ವಿವರಿಸಲು ಒಂದು ದೊಡ್ಡ ಸೂತ್ರಾವಳಿಯನ್ನೇ ನಿರ್ಮಿಸಿದ. ಕಾವ್ಯರಚನೆಯಲ್ಲಿ ವಿಚಾರ ಮತ್ತು ಭಾವನಾಶಕ್ತಿಗಳ ಪರಸ್ಪರ ಪಾತ್ರವೇನು ಎಂಬುದನ್ನು ವಿಸ್ತಾರವಾಗಿ ವಿವೇಚಿಸಿದ. ಈ ಪ್ರಯತ್ನ ನಿಜಕ್ಕೂ ಮೆಚ್ಚತಕ್ಕದ್ದು. ಆದರೆ ಕಾವ್ಯರಚನೆಯಾಗಲಿ ಕಾವ್ಯನುಭವವಾಗಲಿ ಬರಿಯ ನಿಯಮ–ನಿರ್ಬಂಧಗಳಿಗೊಳಪಟ್ಟದ್ದಲ್ಲ ಎಂಬುದನ್ನು ಗಾಟ್‌ಷೆಡ್ ಅರಿಯದೆ ಹೋದುದು ದುರ್ದೈವ. ಕಾವ್ಯವು ನಿಸರ್ಗವನ್ನೂ ಮಾನವ ಸ್ವಭಾವವನ್ನೂ ಅನುಸರಿಸಬೇಕೆಂದು ನಿರೂಪಿಸಹೊರಟವನು ಅದರೊಡನೆ ಫ್ರಾನ್ಸಿನ ಅಭಿಜಾತ ಸಾಹಿತ್ಯ ಲೇಖಕರು ಸೃಷ್ಟಿಸಿದ ನಿಯಮಗಳನ್ನೂ ಅವರು ಅನುಸರಿಸಿದ ವಿಧಾನಗಳನ್ನು ಬೆರಸಿದ. ಇದರಿಂದ ಇವನ ನಿರೂಪಣೆಯಲ್ಲಿ ಪುನಃ ಪುನಃ ಪೂರ್ವಾಪರ ವಿರೋಧಗಳೂ ಅಸಾಂಗತ್ಯಗಳೂ ಹುಟ್ಟಿದುವು. ತನ್ನ ಮೂಲತತ್ತ್ವಕ್ಕೂ ಫ್ರೆಂಚ್ ಲೇಖಕರ ಕಟ್ಟುಪಾಡುಗಳಿಗೂ ಪರಸ್ಪರ ಸಾಮಂಜಸ್ಯವಿಲ್ಲದಿರುವುದರಿಂದಲೇ ತನ್ನ ನಿರೂಪಣೆಯಲ್ಲೂ ಪರಸ್ಪರ ವಿರೋಧಗಳು ಉಂಟಾಗುತ್ತಿವೆಯೆಂಬುದು ಅವನಿಗೇ ಅರಿವಾಗಿತ್ತು. ಅವನ ನಿರೂಪಣೆಯಲ್ಲೇ ಇದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೂ ಕಾವ್ಯದ ವಿವಿಧ ರೂಪಗಳ ಸೃಷ್ಟಿಗೆ ಆವಶ್ಯಕವೆಂದು ತೋರಿದ ನಿಯಮಗಳನ್ನು ಪ್ರತಿಪಾದಿಸುವುದು, ಹಾಗೂ ವಿಚಾರ ಮತ್ತು ಸಾಮಾನ್ಯಾನುಭವಗಳಿಗೆ ವಿರುದ್ಧವಾಗಿವೆ ಯೆಂದು ಅನ್ನಿಸಿದ ಕಾವ್ಯಕೃತಿಗಳನ್ನು ಖಂಡಿಸುವುದು ಇವೇ ಗಾಟ್‌ಷೆಡ್ಡನ ಮುಖ್ಯ ಗುರಿಗಳಾದುವು. ತನ್ನ ಈ ಹೆಗ್ಗುರುತುಗಳ ದೃಷ್ಟಿಯಿಂದಲೇ ಈತ ಮಿಲ್ಟನ್ ಮಹಾಕವಿಯ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯವನ್ನು ಕಟುವಾಗಿ ಟೀಕಿಸಿದ. ಈ ಟೀಕೆಯಿಂದಲೇ ಗಾಟ್‌ಷೆಡ್ಡನಿಗೂ ಬಾಡ್‌ಮರ್ ಮತ್ತು ಬ್ರೀಟಿನ್ಗರ್ ಎಂಬ ಸ್ವಿಟ್ಜರ್‌ಲೆಂಡಿನ ಲೇಖಕರಿಗೂ ಭಿನ್ನಾಭಿಪ್ರಾಯ ಆರಂಭವಾದದ್ದು. ಈ ಭಿನ್ನಾಭಿಪ್ರಾಯ ಮುಂದೆ ಬಲವಾಗಿ ಬೆಳೆದು ಕಡೆಗೆ ಗಾಟ್‌ಷೆಡ್ಡನ ಪ್ರತಿಷ್ಠೆ, ಪ್ರಭಾವಗಳು ಇಳಿಮುಖವಾಗಲು ಕಾರಣವಾಯಿತು.

ಆದರೂ ಗಾಟ್‌ಷೆಡ್ ಸಮಕಾಲೀನ ಸಾಹಿತ್ಯದಲ್ಲಿ ತೀವ್ರಾಸಕ್ತಿ ತಳೆದದ್ದು ಮೆಚ್ಚತಕ್ಕ ವಿಷಯ. ಅವನ ತಿದ್ದುಪಾಟುಗಳಿಂದ ಉಳಿದೆಲ್ಲ ಸಾಹಿತ್ಯರೂಪಗಳಿಗಿಂತ ನಾಟಕ ಸಾಹಿತ್ಯಕ್ಕೆ ಆದ ಉಪಕಾರ ಹೆಚ್ಚು. ಆ ಕಾಲದಲ್ಲಿ ನಾಟಕ ಸಾಹಿತ್ಯಕ್ಕೂ ನಾಟಕರಂಗಕ್ಕೂ ಸಂಬಂಧವೇ ಇಲ್ಲದಂತಾಗಿದ್ದುದು ಅವನಿಗೆ ಕಂಡಬಂತು. ಜನಪ್ರಿಯ ನಾಟಕಗಳು ಸುಸಂಸ್ಕೃತರ ಮುಂದೆ ಪ್ರದರ್ಶಿಸಲು ಯೋಗ್ಯವಾಗಿರಲಿಲ್ಲ. ಗಾಟ್‌ಷೆಡ್ ಉತ್ತಮ ಸಾಹಿತ್ಯ ಕೃತಿಗಳಾದ ನಾಟಕಗಳನ್ನು ರಂಗಭೂಮಿಗೆ ತಂದು ನಾಟಕಕ್ಕೂ ರಂಗಭೂಮಿಗೂ ನಡುವೆ ಕತ್ತರಿಸಿಹೋಗಿದ್ದ ಸಂಬಂಧವನ್ನು ಪುನಃ ಬೆಸೆದ. ಯೋಹಾನ್ ನ್ಯೂಬರ್ ಮತ್ತು ಅವನ ಪತ್ನಿ ಕ್ಯಾರೊಲಿನ್ (1697–1760) ಇವರ ನೇತೃತ್ವದಲ್ಲಿ ನಡೆಯುತ್ತಿದ್ದ ಒಂದು ನಾಟಕ ಮಂಡಲಿಯ ಸಹಾಯದಿಂದ ಗಾಟ್‌ಷೆಡ್ ಫ್ರೆಂಚ್ ಅಭಿಜಾತ ನಾಟಕದ ಅತ್ಯುತ್ತಮ ಕೃತಿಗಳನ್ನು ಜರ್ಮನ್ ರಂಗಭೂಮಿಯಲ್ಲಿ ಪ್ರತಿಷ್ಠಾಪಿಸಿದ. ಇದರ ಪರಿಣಾಮವಾಗಿ ರಂಗಭೂಮಿ ಸುಶಿಕ್ಷಿತ ವರ್ಗಗಳಿಗೆ ಆಕರ್ಷಕವಾಯಿತು.

ಒಂದು ವಿಷಯವನ್ನು ನೆನಪಿಡಬೇಕು. ಇಂಗ್ಲಿಷ್ ಸಾಹಿತಿಗಳು ಹಾಗೂ ವಿಮರ್ಶಕರಂತೆ ಗಾಟ್‌ಷೆಡ್ಡನೂ ನಾಟಕ ವಾಸ್ತವಿಕವಾಗಿರಬೇಕೆಂದು ಪದೇ ಪದೇ ಎಚ್ಚರಿಸಿದ; ರಂಗಭೂಮಿಯಲ್ಲಿ ನಟನಟಿಯರ ವೇಷಭೂಷಣಗಳು ಐತಿಹಾಸಿಕ ದೃಷ್ಟಿಯಿಂದ ವಾಸ್ತವಿಕವಾಗಿರಬೇಕೆಂದು ಒತ್ತಾಯಪಡಿಸಿದ. ಆಡಂಬರವೂ ಕೃತಕವೂ ಆದ ಭಾಷಣಶೈಲಿಯನ್ನೂ ಕೆಳದರ್ಜೆಯ ಹಾಸ್ಯವನ್ನೂ ಸಂಪೂರ್ಣವಾಗಿ ನಾಟಕದಿಂದ ತೊಡೆದುಹಾಕಿದ. ಜೊತೆಗೆ ನಾಟಕದ ಸಹಜತೆಗೆ ಮೂಲಕಾರಣಗಳಾಗಿರುವ ಕಾಲ, ದೇಶ ಮತ್ತು ಕ್ರಿಯೆಗಳ ಐಕ್ಯಕ್ಕೆ ಪ್ರಾಧಾನ್ಯ ಕೊಟ್ಟ. ಈ ಸುಧಾರಣೆಗಳಲ್ಲಿ ಕೊನೆಯದರಿಂದ ಏನು ಒಳ್ಳೆಯದಾಯಿತು ಎಂಬುದು ಚರ್ಚಾಸ್ಪದವಾದ ವಿಷಯ.

ರಂಗಭೂಮಿಯನ್ನು ಸುಧಾರಿಸಿದ ಮೇಲೆ ಅಭಿನಯಯೋಗ್ಯ ನಾಟಕಗಳನ್ನು ಒದಗಿಸುವ ಭಾರವೂ ಗಾಟ್‍ಷೆಡ್ಡನ ಮೇಲೆಯೇ ಬಿತ್ತು. ಅವನೂ ಅವನ ಮಿತ್ರರೂ ಸೇರಿ ಒಂದು ನಾಟಕ ಭಂಡಾರವನ್ನೇ ಕೂಡಿಸಲು ಯತ್ನಿಸಿದರು. ಇದರಲ್ಲಿ ಹೆಚ್ಚು ಪಾಲು ಭಾಷಾಂತರಗಳು. 1740 ರಿಂದ 1745ರ ವರೆಗಿನ ಅವಧಿಯಲ್ಲಿ ಗಾಟ್‍ಷೆಡ್ಡನೂ ಅವನ ಸಹೋದ್ಯೋಗಿಗಳೂ ನಾಟಕಗಳ ದೊಡ್ಡ ಸಂಕಲವೊಂದನ್ನು ಆರು ಸಂಪುಟಗಳಲ್ಲಿ ಪ್ರಕಟಿಸಿದರು. ಇದರ ಹೆಸರು ಡಾಯಿಚ್‍ಶೆ ಷಾನ್‍ಬ್ಯೂನೆ ನಾಹ್ ಡೇನ್ ರೆಗೆಲ್ನ್ ಡೇರ್ ಆಲ್ಟೆನ್ ಗ್ರೀಕೆನ್ ಉಂಟ್ ರೋಮರ್ ಐನ್‍ಗೆರಿಕ್ಟೆಟ್ ಎಂದು. ಈ ಸಂಕಲನಕ್ಕೆ ನಾಟಕಗಳನ್ನು ಒದಗಿಸಿದವರಲ್ಲಿ ಗಾಟ್‍ಷೆಡ್ಡನ ಪತ್ನಿ ಲೂಯಿಸ ಅಡೆಲ್‍ಗುಂಡ್ ವಿಕ್ಟೋರಿಯ (1713 – 62) ಒಬ್ಬಳು. ಈಕೆಗೆ ಕಾಮಿಡಿಗಳನ್ನು ಭಾಷಾಂತರಿಸುವ ಕೆಲಸ ಕೊಡಲಾಗಿತ್ತು. ಈಕೆ ರಚಿಸಿದ ಎರಡು ಮೂರು ಸ್ವತಂತ್ರ ನಾಟಕಗಳು ಗಾಟ್‍ಷೆಡ್ಡನು ಬರೆದು ಹೆಸರುಗಳಿಸಿದ ಡೇರ್ ಸ್ಟರ್‍ಬೆಂಡೆ ಕಾಟೊ ಎಂಬ ಟ್ರ್ಯಾಜಿಡಿಗಿಂತ ಉತ್ತಮವಾಗಿವೆ. ಕಾಟೋ ಪ್ರಕಟವಾದದ್ದು 1731 ರಲ್ಲಿ. ಇದು ಬಹುಮಟ್ಟಿಗೆ ಫ್ರೆಂಚ್ ನಾಟಕಕಾರ ದೇ ಚಾಮ್ ರಚಿಸಿದ ಕೇತನ್ ದೂ ತೀಕ್ (1715) ಎಂಬ ಟ್ರ್ಯಾಜಿಡಿಯ ಭಾಷಾಂತರ. ಮುಕ್ತಾಯಕ್ಕೆ ಅಡಿಸನ್ನನ ನಾಟಕದ ಮುಕ್ತಾಯವನ್ನು ಹೊಂದಿಸಿಕೊಳಲಾಗಿದೆ. ಗಾಟ್‍ಷೆಡ್ಡನ ಈ ಟ್ರ್ಯಾಜಿಡಿಯಲ್ಲಿ ಸೂತ್ರರೂಪದಲ್ಲಿರುವ ಅಸಂಖ್ಯ ಸೂಕ್ತಿಗಳೂ ಪ್ರಭಾವಪೂರ್ಣವಾದ ಒಂದೆರಡು ದೃಶ್ಯಗಳೂ ಇವೆ. ಆದ್ದರಿಂದಲೇ ಈ ನಾಟಕ ಜರ್ಮನ್ ರಂಗ ಭೂಮಿಯಲ್ಲಿ ಇಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಜನಪ್ರಿಯವಾಗಿ ಉಳಿಯಿತು.

ರಂಗಭೂಮಿಯಲ್ಲಿ ಗಾಟ್‍ಷೆಡ್ ಮಾಡಿದ ಸುಧಾರಣೆಗಳು ಬಹುಮಟ್ಟಿಗೆ ಸಫಲಗೊಂಡುವು. ಅವನ ಅಧ್ಯಕ್ಷತೆಯಲ್ಲಿ ಜರ್ಮನ್ ಸಂಘ ಏಳಿಗೆ ಪಡೆಯಿತು. 1732 ರಲ್ಲಿ ಈತ ಸ್ಥಾಪಿಸಿದ ಸಾಹಿತ್ಯ ಪತ್ರಿಕೆ ಅವಿಚ್ಛಿನ್ನವಾಗಿ ಹನ್ನೆರಡು ವರ್ಷಕಾಲ ನಡೆಯಿತು. ಅದರ ಹೆಸರು ಬ್ರೈಟೇಗೆ ಟ್ಸುರ್ ಕ್ರಿಟಿಷೆನ್ ಹಿಸ್ಟಾರಿಯಿ ಡೇರ್ ಡಾಯಿಟ್ಶೆನ್ ಶ್ಟ್ರಾಕೆ ಪೊಯೆಸೀ ಉಂಟ್ ಬೆರೆಡ್‍ಸ್ಸಾಮ್‍ಕೈಟ್. ಈ ಎಲ್ಲ ಕಾರಣಗಳಿಂದ ಗಾಟ್‍ಷೆಡ್ಡನ ಗೌರವ ಅತ್ಯುನ್ನತ ಮಟ್ಟಕ್ಕೇರಿತು. ಅವನ ಮಾತು ಅಧಿಕಾರವಾಣಿಯಾಯಿತು. ಸಾಹಿತ್ಯಪ್ರಪಂಚದಲ್ಲಿ ಈತ 1738 ರವರೆಗೂ ಪ್ರತಿವಾದಿಭಯಂಕರನಾಗಿದ್ದ. ಆದರೆ ಆ ವರ್ಷ ಇವನಿಗೂ ಇವನ ಅನುಯಾಯಿಗಳಿಗೂ ವಿರಸದ ಮುನ್ಸೂಚನೆ ಕಾಣಿಸಿಕೊಂಡಿತು. ಮಿಲ್ಟನ್ ಮಹಾಕವಿಯ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯವನ್ನು ಗಾಟ್‍ಷೆಡ್ ಕಟುವಾಗಿ ಟೀಕಿಸಿದ್ದನೆಂದು ಹಿಂದೆಯೇ ಹೇಳಲಾಗಿದೆ. 1732 ರಲ್ಲಿ ಬೋಡ್‍ಮರ್ ಎಂಬ ಸ್ವಿಸ್ ಲೇಖಕ ಆ ಮಹಾಕಾವ್ಯವನ್ನು ಜರ್ಮನ್ ಭಾಷೆಗೆ ಪರಿವರ್ತಿಸಿದನಲ್ಲದೆ 1738 ರಲ್ಲಿ ಆತನೂ ಆತನ ಸ್ವಿಸ್ ಮಿತ್ರ ಬ್ರೀಟಿಂಗರ್ ಇಬ್ಬರೂ ಗಾಟ್‍ಷೆಡ್ಡನ ಅಭಿಪ್ರಾಯಗಳನ್ನು ಪ್ರತ್ಯಕ್ಷವಾಗಿ ಟೀಕಿಸತೊಡಗಿದರು. 1740 ರಲ್ಲಿ ಬ್ರೀಟಿಂಗರನ ಕ್ರಿಟಿಷೆ ಡಿಕ್ಟ್‍ಕುನ್ಸ್ಟ್ ಮತ್ತು ಬೋಡ್‍ಮರನ ಕ್ರಿಟಿಷೆ ಅಭಾಂಡ್‍ಲೂಂಗ್ ಫಾನ್ ಡೇಮ್ ವುಂಡರ್‍ಬಾರೆನ್ ಇನ್ ಡೇರ್ ಪೊಯೆಸೀ ಎಂಬ ವಿಮರ್ಶನ ಗ್ರಂಥಗಳು ಪ್ರಕಟವಾದುವು. ಇವೆರಡರಲ್ಲೂ ಗಾಟ್‍ಷೆಡ್ಡನ ಅಭಿಪ್ರಾಯಗಳನ್ನು ಬಲವಾಗಿ ಟೀಕಿಸಲಾಗಿತ್ತು. ಈ ಟೀಕೆಯನ್ನು ಅಪಮಾನವೆಂದು ಭಾವಿಸಿ ಗಾಟ್‍ಷೆಡ್ ಕೆರಳಿಬಿದ್ದ. ಇವನು ಮತ್ತು ಇವನ ಅನುಯಾಯಿಗಳಾದ ಲೀಪ್‍ಜಿಗ್ ಪಂಥದವರಿಗೂ ಬೋಡ್‍ಮರ್ ಹಾಗೂ ಬ್ರೀಟಿಂಗರ್‍ರವರ ಪ್ರಭಾವಕ್ಕೊಳಪಟ್ಟ ಸ್ವಿಸ್ ಪಂಥದವರಿಗೂ ಒಂದು ಕಾಳಗವೇ ಆರಂಭವಾಯಿತು. ಕಾವ್ಯದ ನಿಜವಾದ ಹೃದಯ ಏನೆಂಬುದನ್ನು ಸ್ಪಷ್ಟಪಡಿಸಹೊರಟ ಸ್ವಿಸ್ ಪಂಥದವರಿಗೆ ಕಾವ್ಯದ ಮರ್ಮ ಗಾಟ್‍ಷೆಡ್ಡನಿಗಿಂತ ಚೆನ್ನಾಗಿ ಅರಿವಾಗಿತ್ತೆಂಬುದು ಸ್ಪಷ್ಟ. ಆದುದರಿಂದ ಈ ವಾದ – ವಿವಾದದಲ್ಲಿ ಗಾಟ್‍ಷೆಡ್ ಸೋತದ್ದು ಸಹಜವೇ ಆಗಿದೆ.

ಗಾಟ್‍ಷೆಡ್ ಮಾಡಿದ ಉಗ್ರ ಟೀಕೆಯಿಂದ ಕೆರಳಿ ಆತ್ಮಸಮರ್ಥನೆ ಮಾಡಿಕೊಳ್ಳುವುದಕ್ಕಾಗಿಯೇ ಬೋಡ್‍ಮರ್ ಕ್ರಿಟಿಷ್ ಬೆಟ್ರಾಕ್‍ಟೂಂಗೆನ್ ವ್ಯೂಬರ್ ಡೀ ಪೊಯೆಟಿಷನ್ ಗೆಮಾಲ್ಡೆ ಡೇರ್ ಡಿಕ್ಟರ್ ಎಂಬ ಗ್ರಂಥ ಬರೆದು ಅದರಲ್ಲಿ ಗಾಟ್‍ಷೆಡ್ಡನ ಅಭಿಪ್ರಾಯವನ್ನು ಖಂಡತುಂಡ ಮಾಡಿದ. ಬಳಿಕ ಉಭಯಪಂಥದ ಹಿಂಬಾಲಕರೂ ಪರಸ್ಪರ ಅಣಕ, ವಿಕಟಹಾಸ್ಯ, ವ್ಯಂಗ್ಯ, ವಿಡಂಬನ ಮುಂತಾದ ಎಲ್ಲ ಬಗೆಯ ಅಸ್ತ್ರಶಸ್ತ್ರಗಳನ್ನೂ ಪ್ರಯೋಗಿಸಿದರು. ಅಸಂಖ್ಯ ಕಿರುಹೊತ್ತಿಗೆಗಳು ಹಾಗೂ ನಿಯತಕಾಲಿಕೆಗಳೆಲ್ಲ ಈ ವಿವಾದಕ್ಕೆ ಮೀಸಲಾದುವು.

ಗಾಟ್‍ಷೆಡ್ಡನ ಅನುಯಾಯಿಗಳೆಲ್ಲ ಒಬ್ಬೊಬ್ಬರಾಗಿ ಅವನನ್ನು ಬಿಟ್ಟು ಹೋದರು. ಕ್ಯಾರೊಲಿನ್ ನ್ಯೂಬರ್‌ಗೂ ಇವನಿಗೂ ಜಗಳವುಂಟಾಗಿ ಆಕೆಯ ನಾಟಕಮಂಡಲಿ ಗಾಟ್‍ಷೆಡ್‍ನನ್ನು ರಂಗಭೂಮಿಯ ಮೇಲೆಯೇ ಅಪಹಾಸ್ಯ ಮಾಡಿತು (1741). ಸ್ವಿಸ್ ಪಂಥದವರು ಬ್ರೆಮರ್ ಬೈಟ್ರೇಗೆ ಎಂಬ ಪತ್ರಿಕೆಯನ್ನು ತಮ್ಮ ಸಿದ್ಧಾಂತಗಳ ಪ್ರತಿಪಾದನೆಗಾಗಿಯೇ ಸ್ಥಾಪಿಸಿಕೊಂಡಿದ್ದರು. ಇದನ್ನು ನಡೆಸುತ್ತಿದ್ದವರಲ್ಲಿ ಬಹುಪಾಲು ಮಂದಿ ಹಿಂದೆ ಗಾಟ್‍ಷೆಡ್ಡನ ನಿಷ್ಠೆ ಅನುಯಾಯಿಗಳಾಗಿದ್ದು ಆಮೇಲೆ ಇವನನ್ನು ತ್ಯಜಿಸಿಹೋದವರು. ಗಾಟ್‍ಷೆಡ್ ತನ್ನ ಶಿಷ್ಯನಾದ ಕ್ರಿಸ್ಟಾಫ್ ಆಟೋಫಾನ್ ಷ್ಯೋನೇಕ್ ಎಂಬಾತ ಬರೆದ ಹರ್‍ಮನ್ ಓಡರ್ ಡಾಸ್ ಬೀಫ್ರೇಟ್ ಡಾಯಿಟ್ಶ್‍ಲಂಡ್ ಎಂಬ ನೀರಸ ಕಾವ್ಯವನ್ನು ಆ ಯುಗಕ್ಕೇ ಕಿರೀಟಪ್ರಾಯವಾದ ಸಾಧನೆಯೆಂದು ಹೊಗಳಿದ. ಇದರಿಂದ ಅವನು ಇನ್ನೂ ನಗೆಗೀಡಾದ.

ಹೀಗೆ ಗಾಟ್‍ಷೆಡ್ಡನ ಜೀವಿತದ ಕಡೆಯ ಇಪ್ಪತ್ತು ವರ್ಷಗಳಲ್ಲಿ ಆತನ ಪ್ರತಿಷ್ಠೆ ಗೌರವಗಳು ಒಂದೇ ಸಮನೆ ಕುಗ್ಗುತ್ತ ಹೋದವು. ಆದರೂ ಎದೆಗೆಡದೆ ಆತ 1748 ರಲ್ಲಿ ಗ್ರೂಂಡಲ್ ಗೂಂಗ್ ಐನರ್ ಡಾಯಿಟ್ ಟ್ಶೆನ್‍ಶ್ಟ್ರಾಕ್‍ಕೂನ್ಸ್ಟ್ ಎಂಬ ಗ್ರಂಥವನ್ನು ಪ್ರಕಟಿಸಿದ. ಈತ ಮೊಟ್ಟಮೊದಲು ಬರೆದ ಕಾವ್ಯಮೀಮಾಂಸಾ ಗ್ರಂಥದಿಂದ ಪದ್ಯಕಾವ್ಯಕ್ಕಾದ ಉಪಕಾರಕ್ಕಿಂತ ಈ ಹೊಸ ಗ್ರಂಥದಿಂದ ಜರ್ಮನ್ ಗದ್ಯಕ್ಕೆ ಹೆಚ್ಚು ಉಪಕಾರವಾಯಿತು. ಇದಲ್ಲದೆ ಈತ ಜರ್ಮನ್ ಸಾಹಿತ್ಯದ ಸ್ಮರಣೀಯ ಕೃತಿಗಳನ್ನೆಲ್ಲ ವ್ಯಾಸಂಗ ಮಾಡಿ, ಸಂಕಲನ ಮಾಡಿ, ಅನುವಾದಿಸಿದ. ಎಲ್ಲಕ್ಕಿಂತ ಮೇಲಾಗಿ ನ್ಯೋಥಿಂಗರ್ ಫೊರಾತ್‍ಟ್ಸುರ್ ಗೆಸಿಕ್ಟೆ ಡೇರ್ ಡಾಯಿಟ್ಶೆನ್ ಡ್ರಾಮಾಟಿಶೆನ್ ಕೂನ್ಸ್ಟ್ ಎಂಬ ಹೆಸರಿನಲ್ಲಿ 1757 ರಿಂದ ಮೊದಲು ಮಾಡಿ 1765 ರ (ಅವನು ತೀರಿಕೊಳ್ಳುವುದಕ್ಕೆ ಮುಂಚೆ ಒಂದು ವರ್ಷದ) ವರೆಗೂ ಜರ್ಮನ್ ನಾಟಕ ಸಾಹಿತ್ಯದ ದೊಡ್ಡ ಗ್ರಂಥ ಸೂಚಿಯೊಂದನ್ನು ರಚಿಸಿದ. ಈಗಲೂ ಇದು ಜರ್ಮನ್ ಸಾಹಿತ್ಯದ ಇತಿಹಾಸಕಾರನಿಗೆ ಒಂದು ಅಮೂಲ್ಯವಾದ ಗಣಿಯಾಗಿದೆ.

ಲೀಪ್ಜಿಗ್‍ನಲ್ಲಿ ತನಗೆ ಶಿಷ್ಯರಾಗಿದ್ದವರೇ ತನ್ನನ್ನು ಬಿಟ್ಟುಹೋಗಿ ತನಗೆ ಎದುರಾಗಿ ನಿಂತದ್ದು ಗಾಟ್‍ಷೆಡ್ಡನಿಗೆ ಕಟುವಾದ ವೇದನೆಯನ್ನುಂಟುಮಾಡಿತು. ಈ ದುಃಖದಲ್ಲಿಯೇ ಅವನು ಮೃತನಾದ.

ಬ್ರೀಮರ್ ಬೀಟ್ರೇಜ್ ಪತ್ರಿಕೆಯಲ್ಲಿ ಲೇಖನ ಬರೆಯುತ್ತಿದ್ದ ಗಾಟ್‍ಷೆಡ್ಡನ ಎದುರಾಳಿಗಳು ಕ್ರಾಂತಿಕಾರಕ ಸುಧಾರಕರೇನೂ ಆಗಿರಲಿಲ್ಲ. ಗಾಟ್‍ಷೆಡ್ಡನ ಪ್ರಮುಖಸೂತ್ರಗಳಲ್ಲಿ ಅವರಿಗೂ ನಂಬಿಕೆ ಇತ್ತು. ವ್ಯತ್ಯಾಸವೇನೆಂದರೆ ಅವನ ಅತಿರೇಕಗಳನ್ನು ಬದಿಗೊತ್ತಿ ಅವನ ಸಿದ್ಧಾಂತಗಳಲ್ಲಿದ್ದ ಉತ್ತಮಾಂಶಗಳನ್ನು ಮಾತ್ರ ಅವರು ಅನುಷ್ಠಾನಕ್ಕೆ ತರಲು ಯತ್ನಿಸಿದರು. ಅವರ ಕವಿತೆಗಳೂ ವಿಚಾರ ಪ್ರಧಾನವಾಗಿದ್ದುವೇ ಹೊರತು ಭಾವಪ್ರಧಾನವೂ ಆಗಿರಲಿಲ್ಲ. ಆದರೂ ಕಾವ್ಯಸೃಷ್ಟಿ ಕವಿಹೃದಯದಲ್ಲಿ ಹೇಗಾಗುವುದೆಂದು ಅರಿತರೆ ಮಾತ್ರ ಕಾವ್ಯದ ಅಂತರಂಗವನ್ನು ಹೋಗಬಹುದೆಂದು ಅವರು ಗುರುತಿಸಿದುದು ಜರ್ಮನ್ ಸಾಹಿತ್ಯದ ಮುನ್ನಡೆಯಲ್ಲಿ ಒಂದು ದೊಡ್ಡ ಹೆಜ್ಜೆ, ಮುಂದಿನ ಯುಗದ ರೊಮ್ಯಾಂಟಿಕ್ ಸಾಹಿತ್ಯಕ್ಕೆ ಒಂದು ಮೊದಲ ಸೂಚನೆ. (ಕೆ.ವಿ.ಎಸ್.ಟಿ.)

**ಗಾಟ್ಸಿ ಕಾರ್ಲೋ :** 1720–1806. ಇಟಲಿಯ ನಾಟಕಕಾರ. ರಸಿಕರ ಸುಸಂಸ್ಕೃತರ ಬೀಡು ಎನಿಸಿಕೊಂಡಿದ್ದ ವೆನಿಸ್‍ನಲ್ಲಿ ಜನಿಸಿದ. ಕೆಲಕಾಲ ಡಾಲ್ಮೇಷಿಯದಲ್ಲಿ ರಾಹುತಪಡೆಯ ಸೈನಿಕನಾಗಿದ್ದ. ತನ್ನ 24 ನೆಯ ವರ್ಷದಲ್ಲಿ ವೆನಿಸ್‍ಗೆ ಹಿಂದಿರುಗಿ ಅಲ್ಲಿನ ಶಿಷ್ಟ ಸಮಾಜದಲ್ಲಿ ಹೆಸರುಗಳಿಸಿ ಶ್ರೀಮಂತ ಸಾಹಿತಿಗಳ ಸಹವಾಸ ದೊರಕಿಸಿಕೊಂಡ. ಇಟಲಿಯ ಜನಪದ ಸಾಹಿತ್ಯದ ಹಳೆಯ ಪರಂಪರೆಯನ್ನು ಉಳಿಸಬೇಕೆಂದು ವಾದಿಸಿ, ಹೊಸ ಪೀಳಿಗೆಯ ಲೇಖಕರ ವಿರುದ್ಧ ಕತ್ತಿ ಕಟ್ಟಿದ. ಆ ಕಾಲದಲ್ಲಿ ಕಾರ್ಲೋ ಗಾಲ್ಡೋನಿ (**ನೋಡಿ– ಗಾಲ್ಡೋನಿ, ಕಾರ್ಲೋ**) ಹಾಗೂ ಷಿಯಾರಿ ಎಂಬ ಇಬ್ಬರು ಹೊಸ ಹೊಸ ಸಾಮಾಜಿಕ ವಿನೋದನಾಟಕಗಳನ್ನು ಬರೆದು ಪ್ರದರ್ಶಿಸಿ ವಿಪುಲವಾದ ಜನಪ್ರಿಯತೆ ಸಂಪಾದಿಸಿದ್ದರು. ಮಡಿವಂತ ಸಾಹಿತಿಗಳೇ ಸೇರಿ ಸ್ಥಾಪಿಸಿದ ಗಾನೆಲೆಷ್ಚಿ ಅಕಾಡೆಮಿಯ ಸದಸ್ಯನಾಗಿ ಗಾಟ್‍ಸಿ ಅಂಥ ಹೊಸ ನಾಟಕಕಾರರ ಅತಿವಾಸ್ತವಿಕತೆಯನ್ನೂ ಭಾವುಕತೆಯನ್ನೂ ತನ್ನ ನಾಟಕಗಳಲ್ಲಿ ವಿಡಂಬನೆ ಮಾಡಿ ಮಿತಿ ಇಲ್ಲದ ವಾದವಿವಾದಗಳನ್ನು ಎಬ್ಬಿಸಿದ. ಇಟಲಿಯ ಜನಪದ ನಾಟಕ ಪ್ರಕಾರವಾದ ಕಮೆದಿಯ ದೆಲ್ ಆರ್ತ್‍ನ ಪ್ರಾತಿನಿಧಿಕ, ಸಾಂಪ್ರದಾಯಿಕ ಪಾತ್ರಗಳನ್ನೇ ತನ್ನ ನಾಟಕಗಳಿಗೆ ಅಳವಡಿಸಿಕೊಂಡು ಜನಪದ ಕಟ್ಟುಕಥೆಗಳಿಂದ ಅಜ್ಜಿ ಕಥೆಗಳಿಂದ ಆರಿಸಿದ ಕಥಾವಸ್ತುವನ್ನು ಧಾರಾಳವಾಗಿ ಬಳಸಿಕೊಂಡ. ಈತ ಬರೆದ ಫಿಯಾಬಿ ಎಂಬ ಹತ್ತು ವಿಚಿತ್ರ ಕಾಲ್ಪನಿಕ ರೂಪಕಗಳು ಹೆಸರುವಾಸಿಯಾದವು. ಇವುಗಳಲ್ಲಿ ಮುಖ್ಯವಾದ, ಮೂರು ಕಿತ್ತಳೇ ಹಣ್ಣಿನ ಕಥೆ–ಎನ್ನುವ ವಿಚಿತ್ರ ಪ್ರಹಸನದಲ್ಲಿ ಗಾಲ್ಡೋನಿ ಮತ್ತು ಷಿಯಾರಿಗಳಿಬ್ಬರನ್ನೂ ವಿಚಿತ್ರ ಹಾಸ್ಯಪಾತ್ರಗಳಾಗಿ ಮಾರ್ಪಡಿಸಿ ಗೇಲಿಮಾಡಿದ. ಜಿಂಕೆಯಾಗಿ ಮಾರ್ಪಟ್ಟ ದೊರೆ, ಪುಟಾಣಿ ಸುಂದರ ಹಸುರು ಹಕ್ಕಿ, ಟುರಾಂಡಾಟ್ – ಇವು ಈತನ ಇತರ ಸ್ವಾರಸ್ಯಕರ ಕೃತಿಗಳು.

ಇಟಲಿಯ ಪ್ರೇಕ್ಷಕರನ್ನು, ರಸಿಕರನ್ನು ಪ್ರಬಲವಾಗಿ ಸೆಳೆದು ವೆನಿಸ್ ರಂಗ ಭೂಮಿಯ ಮೇಲೆ ಕೋಲಾಹಲವನ್ನುಂಟುಮಾಡಿದ ಗಾಟ್‍ಸಿಯ ವಿಚಿತ್ರ ವೈನೋದಿಕಗಳು ಬಲುಬೇಗ ತಮ್ಮ ಆಕರ್ಷಣೆಯನ್ನು ಕಳೆದುಕೊಂಡು ಸ್ವಲ್ಪಕಾಲ ಮೂಲೆಗುಂಪಾದವು.

ಆದರೆ 1777ರಲ್ಲಿ ಇವು ಜರ್ಮನ್ ಭಾಷೆಗೆ ಅನುವಾದವಾಗಿ ಜರ್ಮನಿಯಲ್ಲಿ ವಿಶೇಷ ಮನ್ನಣೆ ಪಡೆದವು. ಗಯಟೆ, ಷಿಲ್ಲರ್, ಲೆಸ್ಸಿಂಗ್, ಷ್ಲೆಗಲ್ ಮುಂತಾದ ಜರ್ಮನ್ ರೊಮ್ಯಾಂಟಿಕ್ ಸಾಹಿತಿಗಳಿಗೆ ಗಾಟ್‌ಸಿಯ ನಾಟಕಗಳು ಹಿಡಿಸಿದವು. ಇವನ ಒಂದೆರಡು ಕಥಾನಕಗಳು ಪ್ಯೂಚ್ಚೀನೀ, ಪ್ರೋಕೋಫೀವ್ ಮುಂತಾದವರ ಆಪೆರಗಳಲ್ಲಿ ಮತ್ತೆ ಮತ್ತೆ ಹೊಸ ರೂಪ ತಾಳಿವೆ. 1780ರಲ್ಲಿ ಗಾಟ್‌ಸಿ ಬರೆದ ಆತ್ಮಕಥೆಯಲ್ಲಿ ಬೇಕಾದಷ್ಟು ಆತ್ಮಪ್ರತಿಷ್ಠೆ, ಆಡಂಬರ ತುಂಬಿವೆ. ಆದರೆ ಅವನ ಚಿಕ್ಕಂದಿನ ನೆನಪುಗಳು, ಇಟಲಿಯ ಜನಪದ ಸಾಹಿತ್ಯವನ್ನು ಕುರಿತ ಮಾತುಗಳು, ಎಲ್ಲಕ್ಕಿಂತ ಹೆಚ್ಚಾಗಿ ಅವನು ಗಾಲ್ಡೋನಿ, ಷಿಯಾರಿಗಳ ಜೊತೆ ನಡೆಸಿದ ಜಗಳಗಳ ಲಘುಹಾಸ್ಯದ ವರ್ಣನೆಗಳು–ಇವುಗಳಿಂದಾಗಿ ಅದು ಸ್ವಾರಸ್ಯವಾದ ಗ್ರಂಥವಾಗಿದೆ. (ಎಚ್.ಕೆ.ಆರ್.)

**ಗಾಟ್‌ಹೆಲ್ಫ್, ಯೆರೆಮೀಯಾಸ್ :** 1797–1854. ಸ್ವಿಟ್ಜರ್‌ಲೆಂಡ್‌ನ ಪ್ರಾಟೆಸ್ಟಂಟ್ ಪಾದ್ರಿ, ಕಾದಂಬರಿಕಾರ. ಇವನ ನಿಜನಾಮ ಆಲ್ಬರ್ಟ್ ಬಿಟ್‌ಜಿಯಸ್. ತಂದೆ ಪಾದ್ರಿಯಾಗಿದ್ದ. ಗಾಟ್‌ಹೆಲ್ಫ್ ತನ್ನ ಶಾಲಾ ದಿನಗಳಲ್ಲಿ ಹಾಗೂ ಜರ್ಮನಿಯ ಬರ್ನ್ ಮತ್ತು ಗಾಟಿಂಗೆನ್‌ಗಳಲ್ಲಿ ವೇದಾಂತದ ವಿದ್ಯಾರ್ಥಿಯಾಗಿದ್ದಾಗ ಪ್ರಗತಿಪರ ಧೋರಣೆಗಳನ್ನು ಎತ್ತಿಹಿಡಿದ. ಬರ್ನ್‌ನಲ್ಲಿ ಶ್ರೀಮಂತ ಪ್ರಭುತ್ವವನ್ನು ಮಟ್ಟಹಾಕಿದ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ. 1832ರಲ್ಲಿ ಪಾದ್ರಿಯಾದ ಮೇಲೆ ತನ್ನ ದೇಶದ ಜನರಲ್ಲಿ ತಿಳಿವಳಿಕೆಯನ್ನುಂಟುಮಾಡಲು ತುಂಬ ಶ್ರಮವಹಿಸಿದ; ಸಾರ್ವತ್ರಿಕ ವಿದ್ಯಾಭ್ಯಾಸವನ್ನು ತರಲು ಪ್ರಯತ್ನಿಸಿದ. ಜೀವನದಲ್ಲಿ ಉಪೇಕ್ಷಿಸಲ್ಪಟ್ಟವರಿಗಾಗಿ ಒಂದು ಸಂಸ್ಥೆಯನ್ನು ಕೂಡ ಸ್ಥಾಪಿಸಿದ.

ಸ್ವಿಟ್ಜರ್‌ಲೆಂಡಿನಲ್ಲಿ ಸ್ವತಂತ್ರ್ಯ ವಿಚಾರಗಳ ತತ್ತ್ವದಲ್ಲಿ ತೀವ್ರ ಸುಧಾರಣಾ ಪ್ರವೃತ್ತಿಗಳು ಕಾಣಿಸಿಕೊಂಡಾಗ ಈತ ಹೆಚ್ಚು ಹೆಚ್ಚಾಗಿ ಸಂಪ್ರದಾಯಗಳನ್ನು ಎತ್ತಿ ಹಿಡಿದ. ದಿಗಿಲು ಹುಟ್ಟಿಸುವ ಲೌಕಿಕವಾದದಿಂದ ಕ್ರೈಸ್ತಧರ್ಮದ ನಂಬಿಕೆಗಳನ್ನು ಜೀವಂತವಾಗಿಡುವ ಆಸೆ ಇವನನ್ನು ಬರೆಯಲು ಪ್ರೇರೇಪಿಸಿತು. ಹಳ್ಳಿಗರ ಜನ ಜೀವನವನ್ನು ಚಿತ್ರಿಸುವ ಇವನ ಕಾದಂಬರಿ ಡೆರ್ ಬ್ಯಾನರ್ನ್‌ಸ್ಪಿಗೆಲ್ 1837ರಲ್ಲಿ ಪ್ರಕಟವಾಯಿತು. 1838ರಲ್ಲಿ ಇನ್ನೊಂದು ಕಾದಂಬರಿ ದಿ ಜಾಯ್ಸ್ ಅಂಡ್ ಸಫರಿಂಗ್ಸ್ ಆಫ್ ಎ ಸ್ಕೂಲ್ ಮಾಸ್ಟರ್ ಎರಡು ಸಂಪುಟಗಳಲ್ಲಿ ಹೊರಬಿತ್ತು. ಉಲ್‌ರಿಕ್ ದಿ ಫಾರಮ್‌ಹ್ಯಾಂಡ್ (1840), ಉಲ್‌ರಿಕ್ ದಿ ಟೆನೆಂಟ್ (1849) ಎಂಬೆರಡು ಕಾದಂಬರಿಗಳಲ್ಲಿ ಈತ ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಐಹಿಕ ಸುಖ ಪ್ರವೃತ್ತಿಗಳನ್ನು ವಿರೋಧಿಸಿದ್ದಾನೆ. ಈತನ ಗುರಿ ನೀತಿ ಬೋಧೆಯಾದರೂ ತನ್ನ ಎಲ್ಲ ಬರೆಹಗಳಲ್ಲಿ ಈತ ಅಸಾಧಾರಣ ಸಾಹಿತ್ಯಕ ಸಾಮರ್ಥ್ಯವನ್ನು ಮೆರೆದಿದ್ದಾನೆ. ಇವನ ಹದಿಮೂರು ಕಾದಂಬರಿಗಳು, ಐವತ್ತಕ್ಕೂ ಹೆಚ್ಚು ಸಣ್ಣ ಕಥೆಗಳು ಈತನ ಅಸಾಧಾರಣ ಪ್ರತಿಭೆಯನ್ನು ಪ್ರಕಾಶಪಡಿಸುವುದಲ್ಲದೆ ಜನರಲ್ಲಿ ಇವನಿಗೆ ಎಂಥ ತೀವ್ರ ಆಸಕ್ತಿ ಇತ್ತೆಂಬುದನ್ನು ಸಾಬೀತುಗೊಳಿಸುತ್ತವೆ. ಮಾನಸಿಕ ಪರಿವೀಕ್ಷಣೆ, ವಿಭಾವನಾಶಕ್ತಿ ಮತ್ತು ಭಾಷೆಯನ್ನು ಸೃಷ್ಟ್ಯಾತ್ಮಕವಾಗಿ ಬಳಸುವ ಚೈತನ್ಯ–ಇವು ಅತ್ಯಂತ ಜೀವಂತ ಪಾತ್ರಗಳನ್ನು ಸೃಷ್ಟಿಸುವುದರಲ್ಲಿ ಇವನಿಗೆ ಬಹಳ ಸಹಾಯಕವಾದುವು. ಬನ್ನೀಸ್ ಗ್ರಾಮಾಂತರ ಪ್ರದೇಶದ ಜನಜೀವನವೇ ಈತನ ಕಥನ ಸಾಮಗ್ರಿ. ಮಾನವತೆಯ ರಚನಾತ್ಮಕ ಬಲಗಳನ್ನು ಕುಟುಂಬ ಮತ್ತು ಸಾಮಾಜಿಕ ಜೀವನದಲ್ಲಿ ಕೇಂದ್ರಿಕೃತವಾಗಿರುವ ಧರ್ಮವಲ್ಲದ ಕ್ರೈಸ್ತಧರ್ಮದಲ್ಲಿ ಕಾಣಬಹುದೆಂದು ಈತ ನಂಬಿದ್ದ.

ಜರ್ಮನ್ ಸಾಹಿತ್ಯದಲ್ಲಿನ ಸಹಜತಾ ಪಂಥಕ್ಕೆ (ನ್ಯಾಚುರಲಿಸಂ) ಈತ ಮೊದಲಿಗ ನೆಂದು ಹೆಸರಾಗಿದ್ದಾನೆ. (ಕೆ.ಎಸ್.ಬಿ.)

**ಗಾಡಗೀಳ, ಗಂಗಾಧರ ಗೋಪಾಳ :** 1923–2008. ಮಹಾರಾಷ್ಟ್ರದ ಹೆಸರಾಂತ ಸಣ್ಣ ಕಥೆಗಾರರು; ಅಲ್ಲಿಯ ನವ್ಯಕಥೆಯ ಆದ್ಯಪ್ರವರ್ತಕರು. ಇವರು 1923ರ ಆಗಸ್ಟ್ 25ರಂದು ಮುಂಬಯಿಯಲ್ಲಿ ಜನಿಸಿದರು. ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಚರಿತ್ರೆ ಮತ್ತು ಅರ್ಥಶಾಸ್ತ್ರಗಳನ್ನು ಮುಖ್ಯ ವಿಷಯಗಳನ್ನಾಗಿ ಆರಿಸಿಕೊಂಡು ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಪದವಿಯನ್ನು ಪಡೆದು ಅದೇ ವಿಷಯಗಳ ಪ್ರಾಧ್ಯಾಪಕರಾಗಿ ಕೆಲಸ ಮಾಡತೊಡಗಿದರು. ಬರೆವಣಿಗೆಯ ಕಡೆಗೆ ಮೊದಲಿನಿಂದಲೂ ಇವರಿಗೆ ಒಲವು. ಪ್ರಿಯಾ ಆಣಿ ಮಾಂಜರ (ಪ್ರಿಯೆ ಮತ್ತು ಬೆಕ್ಕು) ಎಂಬ ಮೊದಲ ಕಥೆ ವಾಙ್ಮಯಶೋಭಾ ಪತ್ರಿಕೆಯಲ್ಲಿ ಪ್ರಕಟವಾಯಿತು. ಮಾನಸಚಿತ್ರೆ ಎನ್ನುವ ಮೊದಲ ಕಥಾಸಂಗ್ರಹ ಹೊರಬಂದದ್ದು 1946ರಲ್ಲಿ. ಅನಂತರ ಇವರು ಸಣ್ಣ ಕಥೆಗಳನ್ನು ಮಾತ್ರವಲ್ಲದೆ ಏಕಾಂತ ನಾಟಕ, ಪ್ರವಾಸ ವರ್ಣನೆ, ನಾಟಕ, ಕಾದಂಬರಿ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಪುಲವಾಗಿ ಬರೆದಿದ್ದಾರೆ. ಮಾನಸಚಿತ್ರೆ (1946). ನವ್ಯಾವಾಟಾ (ಹೊಸ ದಾರಿಗಳು, 1950), ಕಬೂತರೆ (ಪಾರಿವಾಳಗಳು, 1952) ಮತ್ತು ತಲಾವಾತೀಲ ಚಾಂದಣಿ (ಕೆರೆಯಲ್ಲಿಯ ಬೆಳದಿಂಗಳು, 1954)–ಇವು ಇವರ ಕಥಾಸಂಗ್ರಹಗಳು. ಪಾಂಚನಾಟಿಕಾ (1953) ಒಂದು ನಾಟಕ ಸಂಗ್ರಹ, ಲಿಲೀಚೆ ಫೂಲ್ (ಲಿಲಿ ಹೂವು, 1955) ಒಂದು ಕಾದಂಬರಿ, ಗೋಪುರಾಂಚ್ಯಾ ದೇಶಾಂತ (ಗೋಪುರಗಳ ದೇಶದಲ್ಲಿ) ಒಂದು ಪ್ರವಾಸ ವರ್ಣನೆ, ಖಡಕ ಆಣಿ ಪಾಣೀ ಒಂದು ವಿಮರ್ಶನ ಗ್ರಂಥ, ಇವಲ್ಲದೆ ಮಕ್ಕಳಿಗಾಗಿ ಕಥೆಗಳು ಎಂದು ಮುಂತಾಗಿ ಇವರ ಬರೆವಣಿಗೆ ಬಹುಮುಖವಾಗಿ ಮುಂದುವರಿದಿದೆ. 1964ರಲ್ಲಿ ನ್ಯೂಯಾರ್ಕಿನ ಹೆರಾಲ್ಡ್



ಟ್ರಿಬ್ಯೂನ್ ಪತ್ರಿಕೆಯ ಪಾರಿತೋಷಕ ಇವರಿಗೆ ದೊರಕಿತಲ್ಲದೆ ಮೂರು ವರ್ಷಗಳ ಅನಂತರ ರಾಕ್‌ಫೆಲರ್ ಫೌಂಡೇಷನ್ನಿನಿಂದ ಒಂದು ವರ್ಷದ ವ್ಯಾಸಂಗ ವೇತನವೂ ಸಿಕ್ಕಿತು. ಗಾಡಗೀಳರು ಇಂಗ್ಲಿಷಿನಲ್ಲಿಯೂ ಚೆನ್ನಾಗಿ ಬರೆಯಬಲ್ಲರು. ಇವರ ಅನೇಕ ಕಥೆಗಳು ಹಿಂದೀ, ಗುಜರಾತಿಗಳಲ್ಲಿ ಮಾತ್ರವಲ್ಲದೆ ಇಂಗ್ಲಿಷ್ ಮತ್ತು ಇಟಾಲಿಯನ್ ಭಾಷೆಗಳಲ್ಲಿಯೂ ಅನುವಾದಿತವಾಗಿ ಪ್ರಕಟವಾಗಿವೆ. ನಲವತ್ತರಿಂದ ಅರವತ್ತರವರೆಗಿನ 20ನೆಯ ಶತಮಾನದ ಎರಡು ದಶಕಗಳಲ್ಲಿ ಸಮೃದ್ಧವಾಗಿ ಬೆಳೆದ ಮರಾಠಿ ಸಣ್ಣ ಕಥೆಗಳ ಪ್ರಪಂಚದಲ್ಲಿ ಗಂಗಾಧರ ಗಾಡಗೀಳರಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಕಥೆಯನ್ನು ಹೊರಜಗತ್ತಿನ ಘಟನೆಗಳಿಗೆ ಸೀಮಿತವಾಗಿಸದೆ ಅಂತರಂಗ ಪ್ರಪಂಚದ ಅನಂತ ವಿಸ್ತಾರವನ್ನು ಅದಕ್ಕೆ ಒದಗಿಸಿದವರು ಇವರು. ಮಾತ್ರವಲ್ಲದೆ ಮಾನವಸ್ವಭಾವವನ್ನು ಅನೇಕ ನಿಲುವುಗಳಿಂದ ಅನೇಕ ಪಾತ್ರಗಳಲ್ಲಿ ಕಂಡು ವಿಶ್ಲೇಷಿಸಿ ವಿವರಿಸುವ ಇವರ ವಿಧಾನ ಸಣ್ಣ ಕಥೆಗಳ ಪರಿಣಾಮ ಸಾಧನೆಯಲ್ಲಿ ಒಂದು ಹೊಸ ಆಯಾಮವನ್ನೇ ಸಾಧಿಸಿತು. ಸಾಹಿತ್ಯ ನಿರ್ಮಿತಿಯ ಜೊತೆಯಲ್ಲಿ ತಮ್ಮ ಅಧ್ಯಾಪನದ ವಿಷಯವಾದ ಅರ್ಥಶಾಸ್ತ್ರವನ್ನು ಕುರಿತು ಇಂಗ್ಲಿಷಿನಲ್ಲಿ ಮೂರು ಮತ್ತು ಮರಾಠಿಯಲ್ಲಿ ಎರಡು ಗ್ರಂಥಗಳನ್ನು ಇವರು ಬರೆದಿದ್ದಾರೆ. ಮಹಾರಾಷ್ಟ್ರದ ಪ್ರತಿಭಾನ್ವಿತ ಬರೆಹಗಾರರಾಗಿದ್ದ ಇವರ ಕೊಡುಗೆಯನ್ನು ಇವರು ಬರೆದ ಕೃತಿಗಳಲ್ಲಿ ಹೇಗೋ ಹಾಗೆ ಸಣ್ಣ ಕಥೆಗೆ ಇವರು ಕೊಟ್ಟ ತಿರುವಿನಲ್ಲಿಯೂ ಗುರುತಿಸಬಹುದಾಗಿದೆ. ಇವರು 2008 ಸೆಪ್ಟೆಂಬರ್ 15ರಂದು ನಿಧನವಾದರು. (ವಿ.ಎಂ.ಐ.)

**ಗಾಡಗೀಳ, ಧನಂಜಯ ರಾಮಚಂದ್ರ :** 1901–71. ಭಾರತದ ಒಬ್ಬ ವಿಚಾರಶೀಲ ಲೇಖಕ, ಅರ್ಥಶಾಸ್ತ್ರಜ್ಞ. ಜನನ 1901ರ ಏಪ್ರಿಲ್ 10 ರಂದು, ಮಹಾರಾಷ್ಟ್ರದ ನಾಸಿಕದಲ್ಲಿ. ನಾಗಪುರದ ಪಟವರ್ಧನ್ ಪ್ರೌಢಶಾಲೆಯಲ್ಲೂ ಕೇಂಬ್ರಿಜಿನ ಕ್ವೀನ್ಸ್ ಕಾಲೇಜಿನಲ್ಲೂ ವ್ಯಾಸಂಗಮಾಡಿ ಎಂ.ಎ., ಎಂ.ಲಿಟ್. ಪದವಿಗಳಿಸಿದರು.



ಅರ್ಥಶಾಸ್ತ್ರ ಇವರ ವಿಶೇಷ ವ್ಯಾಸಂಗ ವಿಷಯ. ಇವರ ವಿದ್ವತ್ತನ್ನು ಗುರುತಿಸಿ ನಾಗಪುರ, ಕರ್ನಾಟಕ ಹಾಗೂ ಆಗ್ರ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಿ.ಲಿಟ್. ಪದವಿ ನೀಡಿದುವು.

ಗಾಡಿಗೀಳರು ವಿದೇಶದಿಂದ ಹಿಂದಿರುಗಿದ ಅನಂತರ ಮುಂಬಯಿ ಸರ್ಕಾರದ ಹಣಕಾಸು ಶಾಖೆಯಲ್ಲಿ ಸುಮಾರು ಎರಡು ವರ್ಷ ಕೆಲಸಮಾಡಿದರು. ಅನಂತರ ಸೂರತ್‌ನ ಕಾಲೇಜೊಂದರಲ್ಲಿ 1925ರಿಂದ 1930ರ ವರೆಗೆ ಪ್ರಿನ್ಸಿಪಾಲರಾಗಿದ್ದರು. 1930 ರಿಂದ 1966ರ ವರೆಗೆ ಪುಣೆಯ ಗೋಖಲೆ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು. 1966–67ರಲ್ಲಿ ಅವರು ಪುಣೆ ವಿಶ್ವವಿದ್ಯಾಲಯದ ಕುಲಪತಿ ಗಳಾಗಿದ್ದರು. ಇವರ ತಜ್ಞತೆಯನ್ನು ಗುರುತಿಸಿ ಭಾರತ ಸರ್ಕಾರ ಇವರನ್ನು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ 1967ರಲ್ಲಿ ನೇಮಿಸಿತು. ಗಾಡಗೀಳರು ಆ ಅವಧಿಯಲ್ಲಿ ಭಾರತದ ವಾರ್ಷಿಕ ಯೋಜನೆಗಳನ್ನು ಮತ್ತು ನಾಲ್ಕ ನೆಯ

ಪಂಚವಾರ್ಷಿಕ ಯೋಜನೆ ಯನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದರು. 1971ರ ಮೇ ತಿಂಗಳಲ್ಲಿ ಯೋಜನಾ ಆಯೋಗವನ್ನು ಬಿಟ್ಟು ದೆಹಲಿಯಿಂದ ಹಿಂದಿರುಗುತ್ತಿದ್ದಾಗ ಹಾದಿಯಲ್ಲೇ ತೀರಿಕೊಂಡರು.

ಗಾಡಗೀಳರ ಪ್ರಾರಂಭದ ಬರೆಹ ಮರಾಠಿಯಲ್ಲಿತ್ತು. ಸಾಮಾನ್ಯ ಜನಕ್ಕೆ ಅರ್ಥವಾಗುವ ಭಾಷೆಯಲ್ಲಿ ಬರೆದ ಅರ್ಥಶಾಸ್ತ್ರಜ್ಞರ ಪೈಕಿ ಗಾಡಗೀಳರೂ ಒಬ್ಬರು. ಅವರು ಭಾರತಕ್ಕೆ ಹಿಂದಿರುಗಿದ ಕೂಡಲೆ ಭಾರತದ ಆರ್ಥಿಕ ಸಮಸ್ಯೆಗಳ ಬಗ್ಗೆ ಬರೆಯಲು ಪ್ರಾರಂಭಿಸಿ ತಮ್ಮ ಕೊನೆಗಾಲದ ವರೆಗೂ ಆ ಕೆಲಸ ಮುಂದುವರಿಸಿದರು. ಈ ಕಾರಣದಿಂದ ಇವರು ಭಾರತೀಯ ಅರ್ಥಶಾಸ್ತ್ರವನ್ನು ಬೆಳೆಸಿದವರಲ್ಲಿ ಒಬ್ಬರೆಂದು ಪರಿಗಣಿತರಾಗಿದ್ದಾರೆ. 1924ರಲ್ಲಿ ಇವರು ಬರೆದ ದಿ ಇಂಡಸ್ಟ್ರಿಯಲ್ ಎವಲ್ಯೂಷನ್ ಆಫ್ ಇಂಡಿಯ ಎಂಬುದು ಭಾರತದ ಆರ್ಥಿಕ ಇತಿಹಾಸಜ್ಞರಿಗೆ ಉಪಯುಕ್ತವಾದ ಗ್ರಂಥ, ಇವರ ಇಪ್ಪತ್ತು ಗ್ರಂಥಗಳ ಪೈಕಿ, ರೆಗ್ಯುಲೇಷನ್ ಆಫ್ ವೇಜಸ್ ಅಂಡ್ ಅದರ್ ಪ್ರಾಬ್ಲೆಮ್ಸ್ ಆಫ್ ಇಂಡಿಯ, ದಿ ಇಕೊನಾಮಿಕ್ ಎಫೆಕ್ಟ್ ಆಫ್ ಇರಿಗೇಷನ್, ದಿ ಇಕೊನಾಮಿಕ್ ಪಾಲಿಸಿ ಅಂಡ್ ಡೆವಲಪ್‍ಮೆಂಟ್– ಇವು ಮುಖ್ಯವಾದವು. ಭಾರತದ ಆರ್ಥಿಕ ಸಮಸ್ಯೆಗಳ ಬಗ್ಗೆ ಅವರಿಗಿದ್ದ ವಿದ್ವತ್ತಿನ ಪರಿಣಾಮವಾಗಿ ಅವರು ಭಾರತೀಯ ಅರ್ಥಶಾಸ್ತ್ರಜ್ಞರ ಸಮ್ಮೇಳನದ ಅಧ್ಯಕ್ಷರಾಗಿ 1940ರಲ್ಲೂ ಭಾರತೀಯ ಕೃಷಿ ಅರ್ಥಶಾಸ್ತ್ರಜ್ಞರ ಸಮ್ಮೇಳನದ ಅಧ್ಯಕ್ಷರಾಗಿ 1954ರಲ್ಲೂ ಆಯ್ಕೆಗೊಂಡರು.

ಗಾಡಗೀಳರು ಭಾರತದ ಆರ್ಥಿಕ ಸಮಸ್ಯೆಗಳ ಅಧ್ಯಯನದ ಜೊತೆಗೆ ರಾಜಕೀಯ ಸಮಸ್ಯೆಗಳತ್ತಲೂ ಗಮನಕೊಟ್ಟಿದ್ದರು. ಗೋಖಲೆ ಅಧ್ಯಯನ ಸಂಸ್ಥೆಯ ಧ್ಯೇಯ ಭಾರತದ ಇತ್ತೀಚಿನ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳ ಅಧ್ಯಯನವಾಗಿದ್ದುದು ಇವರ ಈ ಆಸಕ್ತಿಗೆ ಕಾರಣ. ಈ ಸಂಸ್ಥೆಯ ನಿರ್ದೇಶಕರಾಗಿ ಇವರು ಸ್ವಾಭಾವಿಕ ವಾಗಿಯೇ ರಾಜಕೀಯ ಸಮಸ್ಯೆಗಳ ಅಧ್ಯಯನವನ್ನೂ ಕೈಗೊಳ್ಳಬೇಕಾಯಿತು. 1942ರಲ್ಲಿ ಭಾರತಕ್ಕೆ ಬಂದಿದ್ದ ಕ್ರಿಪ್ಸ್ ಆಯೋಗದ ಅನಂತರ ಇವರು ಫೆಡರೇಟಿಂಗ್ ಇಂಡಿಯ ಎಂಬ ಗ್ರಂಥ ರಚಿಸಿದರು. ಅನಂತರ ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಸಂವಿಧಾನರಚನಾ ಮಂಡಳಿಯ ಸದಸ್ಯರಾಗಿದ್ದರು. ಭಾರತದ ಸಂವಿಧಾವನ್ನು ಕುರಿತು ಅನೇಕ ಲೇಖನಗಳನ್ನು ಬರೆದರು.

ರಾಜಕೀಯ ಸಮಸ್ಯೆಗಳ ಬಗ್ಗೆ ಇವರು ಬರೆದದ್ದು ಸಾಮಯಿಕವಾದ್ದು. ಆದರೆ ಇವರ ಮುಖ್ಯ ಕೊಡುಗೆಯೆಲ್ಲ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ. ಗೋಖಲೆ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಇವರು ಅನೇಕ ಆರ್ಥಿಕ ಸಮಸ್ಯೆಗಳನ್ನು ವಿಶ್ಲೇಷಿಸಿ ಸೂಕ್ತ ಸಲಹೆಗಳನ್ನೂ ನೀಡುವುದರಲ್ಲಿ ಮಗ್ನರಾಗಿದ್ದರು. ಹೀಗೆ ಇವರ ನಿರ್ದೇಶನದ ಮೊದಲ ದಶಕದಲ್ಲಿಯೇ ಇವರು ಹಣ್ಣುಹಂಪಲು ಮಾರುಕಟ್ಟೆ, ಮೋಟಾರು ಬಸ್ಸು ಸಾರಿಗೆ, ಕೃಷಿ ಉದ್ಯಮ ಇವುಗಳ ಅವಲೋಕನಗಳನ್ನೂ ಪುಣೆ ಹಾಗೂ ಷೋಲಾಪುರ ನಗರಗಳ ಅವಲೋಕನಗಳನ್ನೂ ಮುಗಿಸಿದ್ದರು.

ಗಾಡಗೀಳರು ಅನೇಕ ವಿಚಾರಣಾ ಸಮಿತಿಗಳ ಸದಸ್ಯರಾಗಿ ಕೆಲಸ ಮಾಡಿದರು. ಆದರೆ ಎಲ್ಲರಂತೆ ಇವರು ಸಮಿತಿಯ ಕೆಲಸ ಮುಗಿದ ಅನಂತರ ಆ ವಿಷಯವನ್ನು ಕೈಬಿಟ್ಟಂಥವರಲ್ಲ. ಸಮಿತಿ ಪರಿಶೀಲಿಸಿದ ವಿಷಯದ ವರದಿ ಒಪ್ಪಿಸಿದ ಅನಂತರವು ಆ ಬಗ್ಗೆ ಮಥನ ಮುಂದುವರಿಸಿ ಇವರು ತಮ್ಮ ಅಭಿಪ್ರಾಯಗಳನ್ನು ಪುಸ್ತಕ ಇಲ್ಲವೆ ಲೇಖನಗಳ ರೂಪದಲ್ಲಿ ಪ್ರಕಟಿಸುತ್ತಿದ್ದರು. ಉದಾಹರಣೆಗೆ, ಮುಂಬಯಿ ಕಾರ್ಮಿಕರ ವಿಚಾರಣಾ ಸಮಿತಿಯ (1937–40) ಸದಸ್ಯರಾಗಿ ಕೆಲಸ ಮಾಡಿದ ಅನಂತರ ಕಾರ್ಮಿಕ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ರೆಗ್ಯುಲೇಷನ್ ಆಫ್ ವೇಜಸ್ ಅಂಡ್ ಅದರ್ ಪ್ರಾಬ್ಲೆಮ್ಸ್ ಆಫ್ ಇಂಡಸ್ಟ್ರಿಯಲ್ ಲೇಬರ್ ಇನ್ ಇಂಡಿಯ ಎಂಬ ಪುಸ್ತಕದಲ್ಲಿ ವ್ಯಕ್ತಪಡಿಸಿದರು. ಸಾರಿಗೆ ಸೇವೆಗಳ ರಾಷ್ಟ್ರೀಯ ಯೋಜನಾಮಂಡಳಿಯ ಉಪಸಮಿತಿಯ (1939–40) ಅಧ್ಯಕ್ಷರಾಗಿ ಕೆಲಸ ಮಾಡಿದ ಅನಂತರ ರಸ್ತೆ ಸಾರಿಗೆ ರಾಷ್ಟ್ರೀಕರಣ, ಸಾರಿಗೆ ಸಂಘಟನೆ ಮುಂತಾದ ವಿಷಯಗಳನ್ನು ಕುರಿತು ಬರೆದರು. ಹಾಗೆಯೇ ಮಹಾರಾಷ್ಟ್ರ ರಾಜ್ಯದ ಆಹಾರ ಮತ್ತು ಕೃಷಿ ವಸ್ತುಗಳ ಸಲಹಾಮಂಡಳಿ ಮತ್ತು ಭಾರತ ಸರ್ಕಾರದ ಆಹಾರ ಧಾನ್ಯಗಳ ಧೋರಣಾ ಸಮಿತಿ ಇವುಗಳ ಸದಸ್ಯರಾಗಿದ್ದು ಆಹಾರ ಬೆಲೆಗಳ ಧೋರಣೆ, ಆಹಾರ ಧಾನ್ಯಗಳ ವಸೂಲಿ ಮೊದಲಾದ ವಿಷಯಗಳನ್ನು ಕುರಿತು ಬರೆದರು.


ಆದರೆ ಇವರು ಉದ್ದಕ್ಕೂ ಆಸ್ಥೆ ತೋರಿಸಿದಂಥ ವಿಷಯಗಳೆಂದರೆ ಗ್ರಾಮಾಂತರ ಸಮಸ್ಯೆಗಳು ಮತ್ತು ಆರ್ಥಿಕ ಯೋಜನೆಗಳು. ಮಹಾರಾಷ್ಟ್ರ ಸರ್ಕಾರ ಒಕ್ಕಲುತನ ಹಾಗೂ ರೈತರ ಸಾಲದ ಬಗ್ಗೆ ಕಾಯಿದೆ ಹೊರಡಿಸುವ ಸಂದರ್ಭದಲ್ಲಿ ಗಾಡಗೀಳರು ಇವೆರಡರ ಬಗ್ಗೆಯೂ ಅನೇಕ ಲೇಖನಗಳನ್ನು ಬರೆದರು. ಒಕ್ಕಲುತನ ಹಾಗೂ ಭೂಸುಧಾರಣೆ ಬಗ್ಗೆ ತಮಗೆ ಇದ್ದ ಅಭಿಪ್ರಾಯಗಳನ್ನು ಅವರು ಭಾರತೀಯ ಕೃಷಿ ಅರ್ಥಶಾಸ್ತ್ರಜ್ಞರ ಸಮ್ಮೇಳನದಲ್ಲಿ (1954) ತಮ್ಮ ಅಧ್ಯಕ್ಷಭಾಷಣದಲ್ಲಿ ವ್ಯಕ್ತ ಪಡಿಸಿದರು. ಗ್ರಾಮಾಂತರ ಸಹಕಾರದ ಬಗ್ಗೆ ಇವರ ಕೊಡುಗೆ ಅಮೂಲ್ಯವಾದ್ದು. ಸಹಕಾರ ಸಂಸ್ಥೆಗಳೊಡನೆ ಇವರಿಗಿದ್ದ ಸಂಪರ್ಕವೇ ಇದಕ್ಕೂ ಕಾರಣವಾಯಿತು. ಇವರು ಮೊದಲು ಪುಣೆ ಜಿಲ್ಲೆಯ ಕೇಂದ್ರೀಯ ಸಹಕಾರ ಬ್ಯಾಂಕಿನ ಸದಸ್ಯರಾಗಿ, ಅನಂತರ ಅದರ ಅಧ್ಯಕರಾಗಿ ದುಡಿದರು. ಪುಣೆ ಜಿಲ್ಲೆಯ ಕೇಂದ್ರೀಯ ಮಾರಾಟ ಹಾಗೂ ಕೊಳ್ಳುವ ಸಂಘದ ಅಧ್ಯಕ್ಷರಾಗಿದ್ದಾಗ (1945–50) ಸಹಕಾರ ಸಂಘಗಳ ಮೂಲಕ ಆವಶ್ಯಕ ವಸ್ತುಗಳನ್ನು ಬಳಕೆದಾರರಿಗೆ ಒದಗಿಸಿ ಬೆಲೆ ನಿಯಂತ್ರಣವನ್ನು ಕೈಗೊಳ್ಳಬಹುದೆಂಬುದಾಗಿ ಅವರು ಪ್ರತಿಪಾದಿಸಿದರು. ಭಾರತ ಸರ್ಕಾರದ ಕೃಷಿ ಧೋರಣಾ ಮಂಡಳಿ ಕೃಷಿ ಹಣಕಾಸು ಉಪಸಮಿತಿಯ ಅಧ್ಯಕ್ಷರಾಗಿ ಗ್ರಾಮಾಂತರ ಸಹಕಾರಿ ಹಣಕಾಸಿನ ಯೋಜನೆಯನ್ನು ರೂಪಿಸಿದ್ದರು. ಇವರು ಗ್ರಾಮಾಂತರ ಉದ್ದರಿ ಅವಲೋಕನ ಸಮಿತಿಯ (1951–54) ಸದಸ್ಯರಾಗಿದ್ದಾಗ ರೈತರಿಗೆ ಸಹಕಾರಿ ಬ್ಯಾಂಕುಗಳ ಮೂಲಕ ಹಣಕಾಸನ್ನು ಒದಗಿಸುವ ಸಮರ್ಪಕವಾದ ಕ್ರಮವನ್ನು ರೂಪಿಸುವುದರಲ್ಲಿ ಇವರ ಈ ಅನುಭವ ಸಹಾಯಕವಾಯಿತು. ಮೊಟ್ಟಮೊದಲ ಬಾರಿಗೆ ಭಾರತದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಕಾರಣರಾದವರು ಇವರು. ಅನಂತರ ಮಹಾಷ್ಟ್ರದಲ್ಲಿ ಇನ್ನೂ ಅನೇಕ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸ್ಥಾಪಿತವಾದುವು. ಹೀಗೆ ಭಾರತದಲ್ಲಿ ಸಹಕಾರಿ ಚಳವಳಿಯಲ್ಲಿ ಗಾಡಗೀಳರ ಪಾತ್ರ ಹಿರಿದಾಗಿತ್ತು.

ಆರ್ಥಿಕ ಯೋಜನಾಕ್ಷೇತ್ರಕ್ಕೆ ಇವರ ಕೊಡುಗೆ ಅಮೂಲ್ಯವಾದ್ದು. ಯೋಜನೆ ಗಳೊಡನೆ ಇವರ ಸಂಪರ್ಕ ಹಳೆಯದು. ಇವರು 1940ರ ದಶಕದ ಆದಿಯಲ್ಲಿ ಸಾಂಗ್ಲಿ, ಕೊಲ್ಲಾಪುರ ಮುಂತಾದ ರಾಜ್ಯಗಳ ಅಭಿವೃದ್ಧಿ ಮಂಡಲಿಗಳ ಸದಸ್ಯರಾಗಿದ್ದರು. ಮಹಾರಾಷ್ಟ್ರ ಅಸ್ತಿತ್ವಕ್ಕೆ ಬಂದ ಅನಂತರ ಅದರ ಯೋಜನಾ ಆಯೋಗದ ಸದಸ್ಯರಾಗಿಯೂ ದುಡಿದರು. ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವುದರಲ್ಲಿ ನಿರತರಾಗಿದ್ದ ಅರ್ಥಶಾಸ್ತ್ರಜ್ಞರ ತಂಡದಲ್ಲಿ ಒಬ್ಬರಾಗಿದ್ದು ಅನಂತರ ಆ ತಂಡದ ಉಪಾಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಭಾರತದ ಯೋಜನೆಗಳ ಬಗ್ಗೆ ಇವರು ಅನೇಕ ಲೇಖನಗಳನ್ನು ಬರೆದರು. ಆಗ ಇವರು ಪ್ಲಾನಿಂಗ್ ಅಂಡ್ ಇಕೊನಾಮಿಕ್ ಪಾಲಿಸಿ ಎಂಬ ಗ್ರಂಥವನ್ನು ಪ್ರಕಟಿಸಿದರು. ಭಾರತದ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಗಾಡಗೀಳರಿಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಪ್ರಾರಂಭದಿಂದಲೂ ಇವರು ಯೋಜನಾ ಆಯೋಗದ ಕಾರ್ಯವಿಧಾನದಲ್ಲಿ ಕೊರತೆಯನ್ನೇ ಕಂಡಿದ್ದರು. ಅದನ್ನು ಸಂಪೂರ್ಣ ದುರಸ್ತು ಮಾಡಬೇಕೆಂಬುದು ಇವರ ಅಭಿಪ್ರಾಯವಾಗಿತ್ತು. ಇವರು ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಹೋಗುವ ಮುನ್ನ, ದೇಶದ ಪಂಚವಾರ್ಷಿಕ ಯೋಜನೆಗಳು ಯಶಸ್ವಿಯಾಗದಿದ್ದುದಕ್ಕೆ ಅವುಗಳಲ್ಲಿ ಧೋರಣಾ ಚೌಕಟ್ಟು ಹಾಗೂ ನಿಯಂತ್ರಣ ಚೌಕಟ್ಟು ಇಲ್ಲದ್ದೇ ಕಾರಣವೆಂಬುದು ಇವರ ಅಭಿಪ್ರಾಯವಾಗಿತ್ತು. ಹೀಗಾಗಲು ಕಾರಣವಾದ ಎರಡು ಅಂಶಗಳಿವು: 1. ನಿರುಪಾಧಿಕ ಪ್ರೇರಣೆಯುಳ್ಳ ಹಿತಾಸಕ್ತ ವ್ಯಕ್ತಿಗಳು ಸರ್ಕಾರದ ಮೇಲೆ ಬೀರುವ ಪ್ರಭಾವ, 2. ವಿನಿಯೋಜನೆಯನ್ನು ಕೈಗೊಂಡ ಮಾತ್ರಕ್ಕೆ ಆರ್ಥಿಕ ಅಭಿವೃದ್ಧಿ ಸ್ವಯಂ ಚಲಿಯಾಗಿ ಪರಿಣಮಿಸುವ ಸಾಧ್ಯತೆಯಿದೆ ಎಂದು ತಿಳಿದ ಆರ್ಥಿಕ ಮತ್ತು ಸಾಮಾಜಿಕ ತಂತ್ರಜ್ಞರ ಸಲಹೆ ಈ ಕಾರಣಗಳಿಂದಾಗಿ ಯೋಜನೆಯ ಸಾಧನಸಂಪತ್ತು ಹಿತಾಸಕ್ತ ವ್ಯಕ್ತಿಗಳ ಕೈಸೇರಿತು; ಹಾಗೂ ಮಾರುಕಟ್ಟೆಯನ್ನವಲಂಬಿಸಿದ ಉಪಯೋಗಗಳಿಗಾಗಿ ವಿನಿಯೋಗಿಸಲ್ಪಟ್ಟಿತು. ಇದರಿಂದಾಗಿ ಬೆಲೆಗಳ ಮಟ್ಟ ಏರಲು ಪ್ರಾರಂಭವಾಯಿತು. ಆರ್ಥಿಕ ಅಸಮಾನತೆ ಹೆಚ್ಚುತ್ತ ಬಂತು. ಬೆಲೆಗಳನ್ನು ನಿಯಂತ್ರಿಸಿ ಆರ್ಥಿಕ ಸ್ಥಿರತೆ. ಸಾಧಿಸಬೇಕಾದರೆ ವಸ್ತುಗಳ ಬಳಕೆಗೆ ತಡೆಹಾಕಬೇಕು ಮತ್ತು ಸಮರ್ಪಕವಾದ ಬೆಲೆಗಳ ಧೋರಣೆಯನ್ನು ರೂಪಿಸಬೇಕು. ಜೊತೆಗೆ ಉತ್ಪಾದನೆ, ವಾಣಿಜ್ಯ ಹಾಗೂ ಬ್ಯಾಂಕುಗಳ ಮೇಲೆ ಹೆಚ್ಚಿನ ನಿಯಂತ್ರಣ ವಿಧಿಸಬೇಕು– ಎಂಬುದು ಇವರ ಅಭಿಪ್ರಾಯವಾಗಿತ್ತು. ಹಂಚಿಕೆಗಿಂತ ಉತ್ಪಾದನೆಯೇ ಮುಖ್ಯವೆಂಬ ಸರ್ಕಾರದ ಧೋರಣೆಯೂ ಉದ್ಯೋಗಾವ ಕಾಶಗಳನ್ನು ಸೃಷ್ಟಿಸುವುದರ ಬಗ್ಗೆ ಸರ್ಕಾರದ ಅನಾದರಣೆಯೂ ಆರ್ಥಿಕ ಅಸಮಾನತೆ ಅಧಿಕವಾಗಲು ಕಾರಣವೆಂದು ಇವರು ಭಾವಿಸಿದ್ದರು.

ಆದರೆ ಗಾಡಗೀಳರೇ ಪ್ರತಿಪಾದಿಸಿದ ಅನೇಕ ವಿಚಾರಗಳನ್ನು ಇವರು ಆಯೋಗದ ಉಪಾಧ್ಯಕ್ಷರಾದಾಗ ನಾಲ್ಕನೆಯ ಯೋಜನೆಯಲ್ಲಿ ಅನುಷ್ಠಾನಕ್ಕೆ ತರಲಾಗಲಿಲ್ಲ. ಇದಕ್ಕೆ ಬಹುಶಃ ಆಡಳಿತ ಚೌಕಟ್ಟಿನಲ್ಲಿದ್ದ ಅಡಚಣೆಗಳು ಕಾರಣ. ಇವರು ಮತ್ತೆ ಗೋಖಲೆ ಅಧ್ಯಯನ ಸಂಸ್ಥೆಗೆ ಹಿಂದಿರುಗಿದ್ದಿದ್ದರೆ ಇವುಗಳ ಸ್ಪಷ್ಟ ವಿವರಣೆ ಬಹುಶಃ ಸಿಗುತ್ತಿತ್ತು ಎಂಬುದು ಇವರ ಸ್ನೇಹಿತರಾದ ವಿ.ಎಂ. ದಂಡೇಕರರ ಅಭಿಪ್ರಾಯ. ಯೋಜನಾ ಆಯೋಗ ತಯಾರಿಸಿರುವ ಐದನೆಯ ಯೋಜನೆಯ ಉಪಗಮನ ಪತ್ರದಲ್ಲಿ ಗಾಡಗೀಳರ ಅಭಿಪ್ರಾಯ ಗಳಿಗೆ ಮನ್ನಣೆ ದೊರಕಿದೆ. ಹಂಚಿಕೆಗಿಂತ ಉತ್ಪಾದನೆ ಮುಖ್ಯವೆಂಬ ಧೋರಣೆಯನ್ನು

ಅದರಲ್ಲಿ ಖಂಡಿಸಿರುವುದಲ್ಲದೆ ಅಭಿವೃದ್ಧಿಯ ಫಲ ಎಲ್ಲರಲ್ಲೂ ಸಮಾನವಾಗಿ ಹಂಚಿಕೆಯಾಗಬೇಕಾದರೆ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕು ಹಾಗೂ ಅವಶ್ಯಕ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದು ಪ್ರತಿಪಾದಿಸಲಾಗಿದೆ. (ಎ.ಎ.)

**ಗಾಡಗೀಳ, ನರಹರ ವಿಷ್ಣು :** 1896–1966. ಮಹಾರಾಷ್ಟ್ರದ ಹಿರಿಯ ಕಾಂಗ್ರೆಸ್ ಮುಂದಾಳುಗಳಲ್ಲಿ ಒಬ್ಬರು. ರಾಜಸ್ಥಾನದಲ್ಲಿಯ ಮಲ್ಹಾರ ಗಡದಲ್ಲಿ 1896ರ ಜನವರಿ 10ರಂದು ಜನ್ಮ ತಾಳಿದ ಇವರು ನೀಮಚ್, ಬರೋಡ ಮತ್ತು ಪುಣೆಗಳಲ್ಲಿ ಶಿಕ್ಷಣ ಪಡೆದು 1918ರಲ್ಲಿ ಬಿ.ಎ. ಪದವೀಧರರಾದರು. ಮುಂದಿನ ಎರಡು ವರ್ಷಗಳಲ್ಲಿ ಮುಂಬಯಿಯಲ್ಲಿ ಕಾನೂನು ವ್ಯಾಸಂಗ ಮುಗಿಸಿ ಪುಣೆಯಲ್ಲಿ ನ್ಯಾಯವಾದಿಗಳಾದರು. 1929ರಿಂದ 1932ರ ವರೆಗೆ ಪುಣೆಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ, 1931,1936 ಮತ್ತು 1945ರಲ್ಲಿ ಅದರ ಅಧ್ಯಕ್ಷರಾಗಿ ಕೆಲಸ ಮಾಡಿದರು. 1928ರಿಂದ 1932ರ ವರೆಗೆ ಕಾಂಗ್ರೆಸಿನ ಯುವಕ ಚಳವಳಿಯಲ್ಲಿ ಭಾಗವಹಿಸಿದ್ದರು; ಅಲ್ಲದೆ ನಾಸಿಕ ಮತ್ತು ಖಾರಗಳಲ್ಲಿ ಸೇರಿದ್ದ ಸಮ್ಮೇಳನಗಳ ಅಧ್ಯಕ್ಷರಾಗಿದ್ದರು. 1935ರಲ್ಲಿ ಆಗಿನ ಕೇಂದ್ರ ವಿಧಾನಪರಿಷತ್ತಿಗೆ ಆಯ್ಕೆಯಾಗಿ ಅಲ್ಲಿಯ ಕಾಂಗ್ರೆಸ್ ಪಕ್ಷದ ಸಚೇತಕರಾಗಿ ಮತ್ತು ಕಾರ್ಯದರ್ಶಿಯಾಗಿ ನೇಮಕವಾದರು. 1942ರಲ್ಲಿ ಭಾರತದ ವಿಮೋಚನೆಗಾಗಿ ನಡೆದ ಚಳವಳಿಯಲ್ಲಿ ಭಾಗವಹಿಸಿದ್ದರು. 1947–52ರಲ್ಲಿ ಕೇಂದ್ರ ಮಂತ್ರಿ ಮಂಡಲದಲ್ಲಿ ವಿದ್ಯುತ್ತು, ಗಣಿ ಮತ್ತು ಕಟ್ಟಡಗಳ ಶಾಖೆಯ ಮಂತ್ರಿಯಾಗಿದ್ದರು. 1955ರಲ್ಲಿ ಸಾಂಗಲಿಯಲ್ಲಿ ನಡೆದ ಮಹಾರಾಷ್ಟ್ರ ಗ್ರಂಥಾಲಯ ಪರಿಷತ್ತಿನ ಅಧಿವೇಶನದ ಅಧ್ಯಕ್ಷರಾಗಿದ್ದರು. 1958–62ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಅಧ್ಯಕ್ಷರಾಗಿಯೂ ಪಂಜಾಬಿನ ರಾಜ್ಯಪಾಲರಾಗಿಯೂ ಇದ್ದರು. ಕ್ರಿಯಾಶೀಲ ರಾಜಕೀಯದಲ್ಲಿ ಭಾಗವಹಿಸುತ್ತಿದ್ದ ಗಾಡಗೀಳರು ಲೇಖಕರೂ ಆಗಿದ್ದರು. 1962ರಲ್ಲಿ ಸಾತಾರದಲ್ಲಿ ಜರುಗಿದ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇವರು 1963ರಿಂದ ಮೂರು ವರ್ಷಗಳ ಕಾಲ ಪುಣೆ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕೆಲಸ ಮಾಡಿದರು. ರಾಜಕೀಯ, ಸಾಹಿತ್ಯ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಸ್ಮರಣೀಯವಾದ ಕೆಲಸ ಮಾಡಿದ ಇವರು 1966ರ ಜನವರಿ 12ರಂದು ನಿಧನರಾದರು.



ಮಹಾರಾಷ್ಟ್ರದಲ್ಲಿ ಬ್ರಾಹ್ಮಣೇತರ ಸಮಾಜ ಕಾಂಗ್ರೆಸ್ಸಿನಿಂದ ದೂರವಾಗಿರುತ್ತಿದ್ದ ಕಾಲವೊಂದಿತ್ತು. ಆ ಸಂದರ್ಭದಲ್ಲಿ ಬ್ರಾಹ್ಮಣೇತರ ಮುಂದಾಳುಗಳಾಗಿದ್ದ ಕೇಶವರಾವ್ ಜೇಧೆ ಎಂಬವರ ಸಹಾಯ ಸಹಕಾರಗಳಿಂದ, ಜನಸಂಖ್ಯೆಯ ದೃಷ್ಟಿಯಿಂದ ಬಹುಸಂಖ್ಯಾತವಾದ ಆ ಪಕ್ಷ ಕಾಂಗ್ರೆಸ್ಸಿನೊಳಗೆ ಬರುವಂತೆ ಮಾಡಿ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ಸನ್ನು ದೃಢಪಡಿಸಲು ಕಾರಣರಾದರು. 1932ರಿಂದ ಹದಿಮೂರು ವರ್ಷಕಾಲ ಮಹಾರಾಷ್ಟ್ರದ ರಾಜಕೀಯ ಕ್ಷೇತ್ರದಲ್ಲಿ ಇವರ ಪ್ರಭಾವ ವಿಶೇಷವಾಗಿತ್ತು. ವಿಚಾರ ಮತ್ತು ಕಾರ್ಯಧೋರಣೆಗಳಲ್ಲಿ ಗಾಢಗೀಳರು ವಲ್ಲಭ ಭಾಯಿ ಪಟೇಲರಿಗೆ ಹತ್ತಿರದವರಾಗಿದ್ದರು. ಪಟೇಲರ ನಿಧನದ ಅನಂತರದಲ್ಲಿ ಜವಾಹರಲಾಲ್ ನೆಹರು ಅವರಿಂದ ಇವರು ದೂರದೂರ ಸರಿಯುವಂತಾಯಿತು. ಪಕ್ಷದ ಪ್ರತಿಷ್ಠೆಯನ್ನು ಕಾಪಾಡಬೇಕಾದಾಗ ಅಂತಸ್ಸಾಕ್ಷಿಯ ವಿಚಾರ ಧೋರಣೆಗೆ ಅವಕಾಶವಿರಕೂಡದು ಎಂದು ಇವರು ಪ್ರಚಾರ ಮಾಡಿದರು. ಹಿಂದಿ, ಗುಜರಾತಿ, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಮರ್ಥವಾಗಿ ಬರೆಯಬಲ್ಲವರಾಗಿದ್ದ ಇವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಹಿಂದಿ ಅಂದಾಜು ಪತ್ರಿಕೆ, ಗ್ಯಾನಬಾಚೆ ಅರ್ಥಶಾಸ್ತ್ರ, ಸಭಾಶಾಸ್ತ್ರ, ರಾಜ್ಯಶಾಸ್ತ್ರ ವಿಚಾರ, ರಾಜ್ಯವ್ಯವಹಾರ ವಿಚಾರ, ಘಟಾನಾಪ್ರಬೋಧಿನೀ, ಸಾಲುಗುದಸ್ತ, ಅನಗಡ ಮೋತಿ, ಎಂಬ ಗ್ರಂಥಗಳನ್ನೂ ಮಾಝೆ ಸಮಕಾಲೀನ, ಮುಠಾತೇ ಮೇಸ್, ಪಥಿಕ ಹೀಗೆ ಮೂರು ಸಂಪುಟಗಳಲ್ಲಿ ಆತ್ಮಚರಿತ್ರೆಯನ್ನೂ ಇವರು ಬರೆದಿದ್ದಾರೆ. (ವಿ.ಎಂ.ಐ.)

**ಗಾಡರ್ಡ್, ರಾಬರ್ಟ್ ಹಚಿನ್ಸ್ :** 1882–1945. ಅಮೆರಿಕದ ಭೌತವಿಜ್ಞಾನಿ. ಆ ರಾಷ್ಟ್ರದಲ್ಲಿ ಆಕಾಶಯಾನದ ಆದ್ಯ ಪ್ರವರ್ತಕ, ಪ್ರಪಂಚದ ಆದ್ಯ ಪ್ರವರ್ತಕರಲ್ಲಿ ಒಬ್ಬ (ಇನ್ನೊಬ್ಬ ರಷ್ಯ ದೇಶದ **ಟ್ಸಿಯೋಲ್‍ಕಾವ್‍ಸ್ಕಿ–ನೋಡಿ**). ಮೆಸಾಚುಸೆಟ್ಸ್‌ನ ವಾರ್ಸೆಸ್ಟರಿನಲ್ಲಿ 1882ರ ಅಕ್ಟೋಬರ್ 5 ರಂದು ಜನನ. ಕಾಯಿಲಸ್ಥನಾದ ಈತ ಹೆಚ್ಚಾಗಿ ಅಂತರ್ಮುಖಿಯಾಗಿಯೇ ಇದ್ದ. ಆಕಾಶಯಾನದ ಬಗ್ಗೆ ಇವನಿಗೆ ಅಪಾರಾಸಕ್ತಿ. ವಾರ್ಸೆಸ್ಟರ್ ಔದ್ಯೋಗಿಕ ಶಿಕ್ಷಣ ಸಂಸ್ಥೆಯಲ್ಲಿ ಅಭ್ಯಸಿಸಿ ಪದವೀಧರನಾದ(1908). ಮುಂದಿನ ವಿದ್ಯಾಭ್ಯಾಸ ಕ್ಲಾರ್ಕ್ ವಿಶ್ವವಿದ್ಯಾಲಯದಲ್ಲಿ. 1915–19ವರೆಗೂ ಇದೇ ವಿಶ್ವವಿದ್ಯಾಲಯ ದಲ್ಲಿ ಉಪಪ್ರಾಧ್ಯಾಪಕನಾಗಿಯೂ ಅನಂತರ 1919–43ರ ವರೆಗೆ ಇಲ್ಲಿಯೇ ಪ್ರಾಧ್ಯಾಪಕನಾಗಿಯೂ ಸೇವೆ ಸಲ್ಲಿಸಿದ. ರಾಕೆಟ್ ಸಂಶೋಧನೆಯ ಕೆಲವೇ ಅಗ್ರಗಾಮಿಗಳಲ್ಲಿ ಈತನೂ ಒಬ್ಬ. ದ್ರವೇಂಧನ ಚಾಲಿತ ರಾಕೆಟನ್ನು ಮೊಟ್ಟಮೊದಲು ಉಡಾಯಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ.


ಪದವೀಧರನಾದ ಕೇವಲ ಒಂದು ವರ್ಷದಲ್ಲಿಯೇ ಗಾಡರ್ಡ್ ತನ್ನ ಟಿಪ್ಪಣಿ ಪುಸ್ತಕಗಳಲ್ಲಿ ರಾಕೆಟ್ ವಿಜ್ಞಾನ ಕ್ಷೇತ್ರದಲ್ಲಿ ಸುಮಾರು 70 ವರ್ಷಗಳ ಅನಂತರ ಸಾಧಿಸಬಹುದಾದ ಸಿದ್ಧಿಗಳ ಬಗ್ಗೆ ಪ್ರಸ್ತಾವಿಸಿದ್ದ. ಹಂತ ಹಂತವಾಗಿ ರಾಕೆಟುಗಳ ಉಡಾವಣೆ, ಘನ ಮತ್ತು ದ್ರವ ಇಂಧನವುಳ್ಳ ರಾಕೆಟುಗಳ ಉಡಾವಣೆ, ಮನುಷ್ಯ ಸಹಿತ ರಾಕೆಟುಗಳು ಗ್ರಹಗಳನ್ನು ತಲಪಿ ಮತ್ತೆ ಭೂಮಿಗೆ ಹಿಂತಿರುಗುವ ಸಾಧ್ಯತೆ, ಅತಿವೇಗದ ಆಕಾಶಯಾನಗಳಲ್ಲಿ ರಾಕೆಟುಗಳಲ್ಲಿರುವ ಮನುಷ್ಯರ ಜೀವರಕ್ಷಣೆ, ಚಂದ್ರಯಾನ, ಚಂದ್ರನಲ್ಲಿ ರಾಕೆಟನ್ನು ಉಡಾಯಿಸುವ ನೆಲೆಯನ್ನು ಸ್ಥಾಪಿಸುವ ಸಾಧ್ಯತೆ– ಇವೇ ಮುಂತಾದವುಗಳ ಬಗ್ಗೆ ಈತ ಆಗಲೇ ಚರ್ಚಿಸಿದ್ದ. ಆದರೆ ಆತ ಈ ಯಾವ ಅಭಿಪ್ರಾಯಗಳನ್ನೂ ಕ್ಲಾರ್ಕ್ ವಿಶ್ವವಿದ್ಯಾಲಯದ ವ್ಯಾಸಂಗ ಕ್ಷೇತ್ರವನ್ನು ಸೇರಿ ಪ್ರಯೋಗಗಳನ್ನು ಪ್ರಾರಂಭಿಸುವ ವರೆಗೂ ಪ್ರಚುರ ಪಡಿಸಲಿಲ್ಲ. 1941ರಲ್ಲಿ ಗಾಡರ್ಡ್ ಅಮೆರಿಕ ಸಂಯುಕ್ತಸಂಸ್ಥಾನದ ಎರಡು ಸನ್ನದುಗಳನ್ನು ಪಡೆದ: ಮೊದಲನೆಯದು ದ್ರವೇಂಧನಗಳನ್ನು ಉಪಯೋಗಿಸಿ ರಾಕೆಟುಗಳನ್ನು ಉಡಾಯಿಸುವ ಬಗ್ಗೆ ಪ್ರಯೋಗ ಗಳನ್ನು ಮಾಡಲು; ಮತ್ತು ಎರಡನೆಯದು ಹಂತ ಹಂತವಾಗಿ ರಾಕೆಟುಗಳನ್ನು ಉಡಾಯಿಸುವ ಅಂದರೆ ಸಣ್ಣ ರಾಕೆಟನ್ನು ಹೊತ್ತ ದೊಡ್ಡ ರಾಕೆಟುಗಳನ್ನು ಉಡಾಯಿಸುವ ಬಗ್ಗೆ ಪ್ರಯೋಗ ಮಾಡಲು. 1914–16ರವರೆಗೆ ಈತ ರಾಕೆಟ್ ಉಡಾವಣೆಯ ಮೂಲತತ್ತ್ವದ ಬಗ್ಗೆ ಆಳವಾದ ಸಂಶೋಧನೆ ನಡೆಸಿದ. ಅನಂತರ ಘನೇಂಧನಚಾಲಿತ ರಾಕೆಟುಗಳ ಉಡಾವಣೆಯ ಬಗ್ಗೆ ಅನೇಕ ಪ್ರಯೋಗಗಳನ್ನು ನಡೆಸಿ ಪ್ರಯೋಗದಿಂದ ಪ್ರಯೋಗಕ್ಕೆ ರಾಕೆಟ್ ಹೆಚ್ಚು ಎತ್ತರ ಹಾರುವ ಹಾಗೆ ಮಾಡಿದ. ರಾಕೆಟುಗಳು ನಿರ್ವಾತ ಪ್ರದೇಶದಲ್ಲಿ ಕೂಡ ಕೆಲಸಮಾಡಬಲ್ಲವು ಎಂದು ತೋರಿಸಲು ಸಾಧನವೊಂದನ್ನು ಉಪಜ್ಞಿಸಿ ಅದನ್ನು ಪ್ರದರ್ಶಿಸಿದ. ಅಲ್ಲದೇ ಚಂದ್ರನಿಗೆ ರಾಕೆಟ್ ಕಳುಹಿಸುವ ಸಾಧ್ಯತೆಯ ಬಗ್ಗೆ ಪ್ರಯೋಗಗಳನ್ನು ಮಾಡಿದ. ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಪ್ರಯೋಗಗಳನ್ನು ನಡೆಸಿ ವಿಧವಿಧವಾದ ಪ್ರವರ್ತಕಗಳು (ಪ್ರೊಪೆಲ್ಲೆಂಟ್ಸ್) ಉಡಾವಣೆಯ ಸಮಯದಲ್ಲಿ ಉಂಟುಮಾಡುವ ನೂಕುಬಲ (ಥ್ರಸ್ಟ್) ಪರಿಮಾಣಗಳನ್ನು ಅಳೆದ. ಇವನ್ನು ಗಮನಿಸಿದ ಸ್ಮಿತ್‌ಸೋನಿಯನ್ ಸಂಸ್ಥೆ ಗಾಡರ್ಡ್‌ನಿಗೆ ಹೆಚ್ಚಿನ ಧನಸಹಾಯ ಮಾಡಿತು. 1926ರ ವರೆಗೂ ಈತ ಅಮೆರಿಕನ್ ರಾಕೆಟ್ ಸೊಸೈಟಿಯ ಮೆಂಬರುಗಳ ಲ್ಲೊಬ್ಬನಾಗಿ ಡ್ಯಾನಿಯಲ್ ಮತ್ತು ಫ್ಲಾರನ್ಸ್ ಗಗೆನ್ ಹ್ಯಾಮ್ ಪ್ರತಿಷ್ಠಾನದ ಸಹಾಯದಿಂದ ದ್ರವೇಂಧನಚಾಲಿತ ರಾಕೆಟುಗಳ ಉಡಾವಣೆಯ ಬಗ್ಗೆ ಸತತ ಪ್ರಯೋಗಗಳನ್ನು ನಡೆಸಿದ. 1926ರ ಮಾರ್ಚ್ 16ರಂದು ಮಸಾಚುಸೆಟ್ಸ್‌ನ ಆಬರ್ನ್ ಪಟ್ಟಣದ ಹತ್ತಿರದ ಕೃಷಿ ಕ್ಷೇತ್ರವೊಂದರಿಂದ ಪ್ರಪಂಚದ ಮೊಟ್ಟಮೊದಲನೆಯ ಇಂಥ ಒಂದು ರಾಕೆಟನ್ನು ಈತ ಉಡಾಯಿಸಿದ. ಇದಕ್ಕೆ ಸಂಬಂಧಪಟ್ಟ ಗಾಡರ್ಡ್‌ನ ವರದಿಯ ಪ್ರಕಾರ ಈ ರಾಕೆಟು 2.5 ಸೆಕೆಂಡುಗಳಲ್ಲಿ ಸು. 56.25 ಮೀಟರ್‌ಗಳಷ್ಟು ಎತ್ತರಕ್ಕೆ ಹಾರಿತ್ತು. ಈ ಸಂಶೋಧನೆ ಆಧುನಿಕ ರಾಕೆಟ್ ಉಡಾವಣೆಗೆ ಬಲವಾದ ಬುನಾದಿ ಹಾಕಿತು ಎಂದು ಹೇಳಬಹುದು. ಈ ವೇಳೆಗೆ ರಾಕೆಟ್‌ಯುಗ ಭದ್ರವಾಗಿ ನೆಲೆಯೂರಿತ್ತು. ಜರ್ಮನಿಯಲ್ಲಿ ಒಂದು ಸಂಸ್ಥೆ ಮತ್ತು ಅಮೆರಿಕದಲ್ಲಿ ಒಂದು ಸಂಸ್ಥೆ ಈ ಪ್ರಯೋಗಗಳನ್ನು ಇನ್ನಷ್ಟು



ಪರಿಷ್ಕರಿಸಲು ಪ್ರಯತ್ನವನ್ನು ನಡೆಸುತ್ತ ಮುಂದುವರಿದುವು. ಅಮೆರಿಕನ್ ರಾಕೆಟ್ ಸಂಸ್ಥೆಯ ಇತರ ಸದಸ್ಯರು ತಮ್ಮ ಪ್ರಯತ್ನಗಳನ್ನು ನಿಲ್ಲಿಸಿದರೂ ಅದರ ಒಬ್ಬ ಸದಸ್ಯ ಗಾಡರ್ಡ್ ಮಾತ್ರ ಸತತವಾಗಿ ಪ್ರಯೋಗಗಳನ್ನು ಮುಂದುವರಿಸುತ್ತಲೇ ಹೋದ. 1935ರ ವೇಳೆಗೆ 2287.5 ಮೀಟರ್‌ಗಳಷ್ಟು ಎತ್ತರಕ್ಕೆ ದ್ರವೇಂಧನಚಾಲಿತ ರಾಕೆಟೊಂದನ್ನು ಹಾರಿಸುವುದರಲ್ಲಿ ಈತ ಜಯಶೀಲನಾದ. ಎರಡನೆಯ ಮಹಾಯುದ್ಧ ಕಾಲದಲ್ಲಿ ಗಾಡರ್ಡನನ್ನು ಅಮೆರಿಕದ ನೌಕಾ ಇಲಾಖೆಯ ಬ್ಯೂರೊ ಆಫ್ ಆಸ್ಟ್ರೊನಾಟಿಕ್ಸ್ ನಿರ್ದೇಶಕನನ್ನಾಗಿ ನೇಮಿಸಿದರು. ನೌಕಾಯಾನದಲ್ಲಿ ದ್ರವೇಂಧನಚಾಲಿತ ರಾಕೆಟುಗಳ ಉಪಯೋಗದ ಬಗ್ಗೆ ಈತ ಈ ಕಾಲದಲ್ಲಿ ಸಂಶೋಧನೆ ನಡೆಸಿದ.

1945ರ ಆಗಸ್ಟ್ 10ರಂದು ಗಾಡರ್ಡ್ ಅಸುನೀಗಿದ. ಅಮೆರಿಕವನ್ನು ಆಕಾಶಯುಗಕ್ಕೆ ಆವಾಹಿಸುವಲ್ಲಿ ಗಾಡರ್ಡ್‌ನ ಕೊಡುಗೆ ಅಪಾರ. ಅಮೆರಿಕದ ಮೇರಿಲೆಂಡಿನ ಗ್ರೀನ್‌ಬೆಲ್ಟಿನಲ್ಲಿ ಗಾಡರ್ಡ್ ಆಕಾಶಯಾನ ಕೇಂದ್ರವನ್ನು ನಾಸಾ ಸಂಸ್ಥೆ ಸ್ಥಾಪಿಸಿ ಈತನ ಹೆಸರನ್ನು ಚಿರಸ್ಥಾಯಿಗೊಳಿಸಿದೆ. (ಎಸ್.ಎಚ್.ಎಸ್.)

**ಗಾಡಿ :** ದವಸ ಧಾನ್ಯಗಳ, ಸಾಮಾನು ಸರಂಜಾಮುಗಳ ಸಾಗಣೆಗೆ ಹಾಗೂ ಜನರ ಪ್ರಯಾಣಕ್ಕೆ ಬಹಳ ಹಿಂದಿನಿಂದಲೂ ಬಳಸಲಾಗುತ್ತಿರುವ ಸಾಧನ. ಚಕ್ರ ಅಥವಾ ಗಾಲಿಗಳ ಸಂಖ್ಯೆಯ ಆಧಾರದ ಮೇಲೆ ಇವನ್ನು ಬೇರೆ ಬೇರೆ ಹೆಸರಿನಲ್ಲಿ




**1. ಪ್ರ.ಶ.ಪೂ.2000ಕ್ಕೂ ಹಿಂದಿದ್ದ ರಥ, ಉಂಡೆಗಾಲಿಯದು–ಸಿಂಧೂ ಕಣಿವೆಯಲ್ಲಿನ ಚನ್ಹುದಾರೋ. 2. ಪ್ರ.ಶ.ಪೂ. 15ನೆಯ ಶತಮಾನದ ಕ್ರೀಟನ್ ರಥದ ಮಾದರಿ, ಹೋತಗಳನ್ನು ಕಟ್ಟಿದ್ದು, ಉಂಗುರದ ಮೇಲಿನ ಚಿತ್ರದ ಪ್ರತಿಕೃತಿ. 3. ಪ್ರ.ಶ.ಪೂ. 300ಕ್ಕೂ ಹಿಂದಿನ ಕಮಾನು ಗಾಡಿ. 4. ಪ್ರ.ಶ.ಪೂ. 2500ರ ಸುಮಾರಿನ ಸುಮೇರಿಯನ್ ಯುದ್ಧ ರಥ. ಉರ್ ಪ್ರದೇಶದ ಒಂದು ಚಿತ್ರಣ. 5. ಕಾನೆಸ್ಟೋಗ ವ್ಯಾಗನ್ ಗಾಡಿ; ಅಮೆರಿಕದ ವಸಾಹತು ಕಾಲದಲ್ಲಿ ಬಳಕೆಯಲ್ಲಿದ್ದುದು. 6. ಪ್ರ.ಶ.ಪೂ. 18ನೆಯ ಶತಮಾನದ ಫ್ರೆಂಚ್ ಕೋಚು. 7. ಸ್ಲೆಜ್–ಶೀತವಲಯ ಪ್ರದೇಶದಲ್ಲಿನ ಗಾಲಿಯಿಲ್ಲದ ಗಾಡಿ. 8. ಮಕ್ಕಳ ಮೂಗಾಲಿ ಗಾಡಿ.**

ವರ್ಗೀಕರಿಸಲಾಗಿದೆಯಾದರೂ ಸಾಮಾನ್ಯವಾಗಿ ಎರಡು ಚಕ್ರಗಳುಳ್ಳ ಕಮಾನು ರಹಿತವಾದ, ಸ್ಪ್ರಿಂಗ್ ಅಥವಾ ಸ್ಪ್ರಿಂಗ್ ಫಲಕಗಳನ್ನು ಹೊಂದಿರದ ಸಾಗಣೆಯ ಸಾಧನವನ್ನು ಗಾಡಿ ಅಥವಾ ಬಂಡಿಯೆಂದು ಕರೆಯುತ್ತಾರೆ. ಗಾಡಿ ಎಳೆಯಲು ವ್ಯಕ್ತಿ ಇಲ್ಲವೆ ಯಾವುದಾದರೂ ಒಂದು ಬಗೆಯ ಪ್ರಾಣಿಯನ್ನು ಬಳಸಲಾಗುತ್ತದೆ. ಈ ಸಂಚಾಲಕ ಶಕ್ತಿಯ ಆಧಾರದ ಮೇಲೆ ಅದಕ್ಕೆ ಬೇರೆ ಬೇರೆ ಹೆಸರುಗಳನ್ನು ಕೊಡಲಾಗಿದೆ. ಅತ್ಯಾಧುನಿಕ ವಾಹನಗಳು ಬಳಕೆಗೆ ಬಂದಿದ್ದರೂ ಇಂದೂ ಹಲವು ದೇಶಗಳಲ್ಲಿ ಸೀಮಿತೋದ್ದೇಶಗಳಿಗಾದರೂ ಈ ವಾಹನ ಬಳಕೆಯಲ್ಲಿದೆ.

**ಇತಿಹಾಸ :** ವಿಶ್ವದ ಪ್ರಾಚೀನ ಸಾಹಿತ್ಯದಲ್ಲಿ–ಉದಾಹರಣೆಗೆ, ಭಾರತದ ವೈದಿಕ ಸಾಹಿತ್ಯದಲ್ಲಿ, ಬೈಬಲಿನಲ್ಲಿ–ಗಾಡಿಯ ಉಲ್ಲೇಖವಿದೆ. ಶೂದ್ರಕನಂತೂ ತನ್ನ ಜಗದ್ವಿಖ್ಯಾತ ಮೃಚ್ಛಕಟಿಕಾ ನಾಟಕದ ಮೂಲಕ ಗಾಡಿಗೆ ಸಾಹಿತ್ಯೇತಿಹಾಸದಲ್ಲಿಯೇ ಅಪೂರ್ವ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟಿದ್ದಾನೆ. ಪ್ರಾಚೀನ ನಾಗರಿಕತೆಯ ಆಡುಂಬೊಲಗಳಾಗಿದ್ದ ಪ್ರದೇಶಗಳಲ್ಲಿ ನಡೆಸಿದ ಉತ್ಖನನಗಳಲ್ಲಿ, ಚಿತ್ರಕಲೆಯ ಹಾಗೂ ಶಿಲ್ಪದ ಪ್ರಾಚೀನ ಮಾದರಿಗಳಲ್ಲಿ, ಗಾಡಿಗಳು ಕಂಡು ಬಂದಿರುವುದು ಮಾನವ ಜನಾಂಗಕ್ಕೆ ಅವು ಎಂಥ ಉಪಯುಕ್ತ ಸಾಧನಗಳಾಗಿದ್ದವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಗಾಡಿಗೆ ತುಂಬ ಪ್ರಾಚೀನ ಇತಿಹಾಸವಿದೆ. ಕನಿಷ್ಠ ಪಕ್ಷ ಪ್ರ.ಶ.ಪೂ. ಮೂರು–ನಾಲ್ಕು ಸಾವಿರ ವರ್ಷಗಳಷ್ಟು ಹಿಂದೆಯೇ ಗಾಡಿಗಳು ಅಸ್ತಿತ್ವದಲ್ಲಿದ್ದುವೆಂಬುದಕ್ಕೆ ಖಚಿತ ಸಾಕ್ಷ್ಯಗಳಿವೆ. ಕೆಲವು ವಿದ್ವಾಂಸರು ಇವುಗಳ ಪ್ರಾಚೀನತೆಯನ್ನು ಪ್ರ.ಶ.ಪೂ. 15ನೆಯ ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ಯುತ್ತಾರೆ. ಪ್ರಾಚೀನ ಮೆಸಪೊಟೇಮಿಯ ದಲ್ಲಿ ಇವು ಬಳಕೆಯಲ್ಲಿದ್ದುವೆಂದು ನಿಶ್ಚಿತವಾಗಿ ತಿಳಿದು ಬಂದಿದೆ. ಈ ಸಂಸ್ಕೃತಿಯನ್ನು ಪೋಷಿಸಿದ ಜನರೇ ಗಾಡಿಗಳನ್ನು ಮೊಟ್ಟಮೊದಲಿಗೆ ಬಳಕೆಗೆ ತಂದಿರಬೇಕೆಂದು ಹೇಳಲಾಗಿದೆ. ಕಿಷ್‌ನಲ್ಲಿ ದೊರೆತಿರುವ ಪೂರ್ವ–ವಂಶಜರ ಸಮಾಧಿಗಳಲ್ಲಿ ಕಂಡುಬಂದಿರುವ ಗಾಡಿಗಳಲ್ಲಿ ಉಂಡೆಚಕ್ರವಿದ್ದು, ಅವು ತಾಮ್ರದ ಪಟ್ಟಿಯನ್ನು ಹೊಂದಿವೆ. ಮಾನವ ತನ್ನ ತಲೆಯ ಮೇಲೆ ಹಾಗೂ ಪ್ರಾಣಿಗಳ ಮೇಲೆ ಹೊರೆಯನ್ನು ಹೇರಿಕೊಂಡು ಹೋಗುವುದಕ್ಕೆ ಬದಲಾಗಿ ಸಾಗಣೆಯ ಸಾಧನವೊಂದನ್ನು ರೂಪಿಸಲು ಪ್ರಯತ್ನಿಸಿದಾಗ ಬಹುಶಃ ಗಾಡಿಯ ಮೊಟ್ಟಮೊದಲ ಸ್ವರೂಪ ಗೋಚರಿಸಿತು. ಇದೇ ಸ್ಲೆಜ್ ಅಥವಾ ಜಾರುಬಂಡಿ. ಇದಕ್ಕೆ ಗಾಲಿಗಳು (ಚಕ್ರ) ಇರುತ್ತಿರಲಿಲ್ಲ (**ನೋಡಿ– ಗಾಲಿ**). ಚಕ್ರದ ಆವಿಷ್ಕಾರ ಸಾಗಣೆಯ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ಸುಮೇರಿಯನ್ ಚಿತ್ರಲಿಪಿಯಲ್ಲಿ ಜಾರುಬಂಡಿಗಳನ್ನು ಹೋಲುವಂಥ ಕೆಲವು ಚಿತ್ರಗಳಿವೆ. ಆದರೆ, ಈ ಸಂಸ್ಕೃತಿಯ ಅತ್ಯಂತ ಪ್ರಾಚೀನ ಅವಶೇಷಗಳಲ್ಲಿ– ಅಂದರೆ ಮಡಕೆಗಳ ಮೇಲೆ ಕೆತ್ತಿರುವ ಚಿತ್ರಗಳಲ್ಲಿ–ನಾಲ್ಕು ಚಕ್ರಗಳನ್ನುಳ್ಳ ವಾಹನವೂ ಕಾಣದೊರೆತಿರುವುದು ಕುತೂಹಲಕರವಾಗಿದೆ. ಈ ಸಂಸ್ಕೃತಿಯ ಕೇಂದ್ರವೆಂದು ಭಾವಿಸಲಾಗಿರುವ ಸುಮೇರ್ ಪ್ರದೇಶದ ಎರೆಖ್ ಎಂಬಲ್ಲಿರುವ ಇನ್ನಾವ ದೇವಾಲಯದಲ್ಲಿಯೂ ನಾಲ್ಕು ಉಂಡೆಚಕ್ರಗಳನ್ನುಳ್ಳ, ಬಹುಮಟ್ಟಿಗೆ ಜಾರುಬಂಡಿಯನ್ನು ಹೋಲುವಂಥ ಗಾಡಿಯೊಂದರ ಚಿತ್ರವಿದೆ. ಇದೇ ಅವಧಿಯದಾಗಿರಬಹುದೆಂದು ಭಾವಿಸಲಾಗಿರುವ ಕಿಷ್, ಉರ್ ಮತ್ತು ಸ್ಯೂಜ್ಯ ಪ್ರದೇಶಗಳಲ್ಲಿ ದೊರೆತಿರುವ ರಾಜರ ಸಮಾಧಿಗಳಲ್ಲಿಯೂ ಈ ಬಗೆಯ ಗಾಡಿಗಳ ಪ್ರತಿಕೃತಿಗಳಿವೆ. ಮಧ್ಯ ಏಷ್ಯದ ಸ್ಟೆಪ್ ಹುಲ್ಲುಗಾವಲುಗಳಲ್ಲಿ ಹಾಗೂ ಸಿಂಧೂನದೀ ಕಣಿವೆಯಲ್ಲಿ ಎರಡು ಚಕ್ರಗಳನ್ನುಳ್ಳ ಗಾಡಿಯೇ ವಿಶೇಷವಾಗಿ ಬಳಕೆಯಲ್ಲಿದ್ದುದಾಗಿ ತಿಳಿಯಬಂದಿದೆ. ಈ ಅವಶೇಷಗಳು ಪ್ರ.ಶ.ಪೂ. ಮೂರನೆಯ ಸಹಸ್ರಾಬ್ದದ ಕೊನೆಯ ಶತಮಾನದವಾಗಿದ್ದಿರಬೇಕೆಂದು ಭಾವಿಸಲಾಗಿದೆ. ಸಿಂಧೂ ನದೀ ಕಣಿವೆಯಲ್ಲಿನ ಚನ್ಹು–ದಾರೋ ಎಂಬಲ್ಲಿ ದೊರೆತಿರುವ ಗಾಡಿಗಳ ಮಾದರಿಗಳು ಆಕಾರದಲ್ಲಿ ಚಿಕ್ಕವಾಗಿದ್ದುವು; ನೊಗಕ್ಕೆ ಎರಡು ಎತ್ತುಗಳನ್ನು ಕಟ್ಟಲಾಗುತ್ತಿತ್ತು. ಹೊರವಲಯಕ್ಕೆ ಉಬ್ಬಿಕೊಂಡಿರುತ್ತಿದ್ದ ವಕ್ರರೂಪದಲ್ಲಿರುತ್ತಿದ್ದ ಎರಡು ತೊಲೆಗಳಿದ್ದು ಅಡ್ಡವಾಗಿ ಮೂರು ಕಿರು ತೊಲೆಗಳನ್ನು ಜೋಡಿಸಿ ಇವನ್ನು ಬಂಧಿಸಲಾಗುತ್ತಿತ್ತು. ಉದ್ದ ತೊಲೆಗಳಲ್ಲಿ ರಂಧ್ರಗಳನ್ನು ಕೊರೆದು ಗೂಟಗಳನ್ನು ಹೊಡೆದಿರುತ್ತಿದ್ದರು. ಚಕ್ರಗಳು ಉಂಡೆಯಾಗಿರುತ್ತಿದ್ದುವು. ಮೂರು ವೃತ್ತ ಖಂಡಗಳ ರೂಪದಲ್ಲಿ ಕತ್ತರಿಸಲಾದ ಮರದ ಭಾಗಗಳನ್ನು ಜೋಡಿಸಿ ಉಂಡೆಚಕ್ರವನ್ನು ರೂಪಿಸುವ ವಾಡಿಕೆ ಇದ್ದಂತೆ ತೋರುತ್ತದೆ. ಮಧ್ಯೆ ಅಚ್ಚಿನ ಭಾಗವೂ ಸೇರ್ಪಡೆಗೊಂಡಿರುತ್ತಿತ್ತು. ಗಾಡಿಯ ದೂರಿ ಮತ್ತು ಚಕ್ರಗಳನ್ನು ಒಂದಿಗೇ ಹಿಡಿದಿಡಲು ಕಡಾಣಿಯನ್ನು ಬಳಸಲಾಗುತ್ತಿತ್ತು. ಚಕ್ರಗಳನ್ನೊಳಗೊಂಡ ಅಚ್ಚಿನ ಮರದ ಚೌಕಟ್ಟಿನಲ್ಲಿ ಅಟ್ಟಣೆಯನ್ನು ಕಟ್ಟಿ, ಸಾಮಾನುಗಳನ್ನು ಇಡಲು ಅಥವಾ ಜನರಿಗೆ ಕೂಡಲು ಅನುಕೂಲ ಮಾಡಿಕೊಡಲಾಗುತ್ತಿತ್ತು. ಇತಿಹಾಸಪೂರ್ವಕಾಲದ ಈ ಗಾಡಿಗಳ ಸ್ವರೂಪ ಇಂದೂ ಸಿಂಧ್‌ನಲ್ಲಿ ಬಳಕೆಯಲ್ಲಿರುವ ರೈತರ ಗಾಡಿಗಳಿಗಿಂತ ಬಹುವಾಗಿ ಭಿನ್ನವಾಗಿಲ್ಲ. ಕರ್ನಾಟಕ ರಾಜ್ಯದ ಕೆಲವೆಡೆಗಳಲ್ಲಿ ಕಾಣಬರುವ ವಡ್ಡರ ಬಂಡಿಗಳು ಬಹುಮಟ್ಟಿಗೆ ಇದೇ ಮಾದರಿಯವು. ಏಷ್ಯದ ಸ್ಟೆಪ್ ಹುಲ್ಲುಗಾವಲಿನ ವಲಸೆಗಾರರು ಕಮಾನುಯುಕ್ತವಾದ ಗಾಡಿಗಳನ್ನೂ ಬಳಸುತ್ತಿದ್ದರು. ಬಹುಮಟ್ಟಿಗೆ ಕುಟುಂಬದ ಸದಸ್ಯರ ಪ್ರಯಾಣಕ್ಕಾಗಿ ಬಳಸಲಾಗುತ್ತಿದ್ದ ಈ ಗಾಡಿಗಳ ಮಾದರಿಗಳು ಪ್ರ.ಶ.ಪೂ. ಮೂರನೆಯ ಸಹಸ್ರಾಬ್ದದ ಹೊತ್ತಿಗೆ ಸಿರಿಯ ಮತ್ತು ಅಸ್ಸೀರಿಯಗಳಲ್ಲಿ

ಕಾಣಬಂದುವೆಂದು ಹೇಳಲಾಗಿದೆ. ಪ್ರ.ಶ.ಪೂ. ಎರಡನೆಯ ಸಹಸ್ರಾಬ್ದದ ಆರಂಭದ ಹೊತ್ತಿಗೆ ಮಧ್ಯ ಪ್ರಾಚ್ಯದಲ್ಲೆಲ್ಲ ಈ ಬಗೆಯ ಗಾಡಿಗಳು ಕಾಣದೊರೆಯುತ್ತಿದ್ದುವು. ಸಿರಿಯ, ಕ್ರೀಟ್ ಮತ್ತು ಅನಟೋಲಿಯ ಪ್ರಸ್ಥಭೂಮಿಯನ್ನೂ ಅವು ಪ್ರವೇಶಿಸಿದ್ದುವು. ಪ್ರಚಲಿತ ಶಕ ಪೂರ್ವದ ಕೊನೆಯ ಶತಮಾನಗಳ ಅವಧಿಯಲ್ಲಿ ಈ ಕಮಾನು ಗಾಡಿಗಳು ಚೀನವನ್ನು ಪ್ರವೇಶಿಸಿದುವು. ಹಂಗರಿಯ ಸರಕುಸಾಗಣೆ ಗಾಡಿಗಳು ಸಿರಿಯದ ಮಾದರಿಯನ್ನೂ ಕ್ಯಾಲ್‍ಮಿಕ್ ಸ್ಟೆಪ್ ಹುಲ್ಲುಗಾವಲಿನ ಗಾಡಿಗಳು ಸಿಥಿಯನ್ ಮಾದರಿಯನ್ನೂ ಹೋಲುತ್ತವೆ. ಅನಟೋಲಿಯದ ಸಾಗರ ಸಂಚಾರಿಗಳು ಈಜಿಪ್ಟಿನ



**ಜೋಡೆತ್ತಿನ ಗಾಡಿ ಮತ್ತು ಅದರ ಭಾಗಗಳು: 1. ಕವೆಗೋಲು, 2. ಬಿದಿರು ದಬ್ಬೆ, 3. ನಡುವರಿ ತೊಲೆ, 4. ನೊಗ, 5. ಕಣ್ಣಿಗೂಟ, 6. ಕಣ್ಣಿ, 7. ಮೂಕಿ, 8. ಕಡಾಣಿ, 9. ಅಚ್ಚು, 10. ದೂರಿ, 11. ಅರೆ, 12. ಚಕ್ರ, 13. ಇರ್ಚಿ**

ಮೇಲೆ ಆಕ್ರಮಣ ಮಾಡಿದ ಅನಂತರದಲ್ಲಿಯೇ ಈಜಿಪ್ಟಿಗೆ ಗಾಡಿಗಳ ಪ್ರವೇಶವಾದದ್ದು. ಗ್ರೀಸ್ ಮತ್ತು ರೋಮ್‍ಗಳಲ್ಲಿಯೂ ಉಂಡೆಚಕ್ರದ ಬೇಸಾಯದ ಬಂಡಿಗಳು ಬಳಕೆಯಲ್ಲಿದ್ದುವು. ಕಂಚಿನ ಯುಗದ ಕೊನೆಯ ದಿನಗಳಲ್ಲಿ ಗಾಡಿಗಳು ಯುರೋಪನ್ನು ಪ್ರವೇಶಿಸಿದವು. ಈ ಹೊತ್ತಿಗೆ ಉಂಡೆಚಕ್ರಗಳಿಗೆ ಬದಲಾಗಿ ಅಲೆಗಳನ್ನುಳ್ಳ ಚಕ್ರಗಳೂ ಬಳಕೆಗೆ ಬಂದಿದ್ದುವು. ಈ ಕಾಲದ ಗ್ರೀಸಿನ ಕುಂಭಕಲಾ ಚಿತ್ರಗಳಲ್ಲಿ ಈ ಬಗೆಯ ಚಕ್ರಗಳನ್ನುಳ್ಳ ಗಾಡಿಗಳ ಪ್ರತಿಕೃತಿಗಳು ಕಾಣದೊರೆಯುತ್ತವೆ. ಉಂಡೆಚಕ್ರಗಳಿಗೆ ಬದಲಾಗಿ ಅರೆಯುಕ್ತ ಚಕ್ರಗಳನ್ನು ಬಳಸುವ ಕ್ರಮವನ್ನು ಮುಂದೆ ತಂದವರು ಹಿಟ್ಟೈಟರೆಂದು ಹೇಳಲಾಗಿದೆ. ಮೊದಲಿಗೆ ಇಂಥ ಮರದ ಚಕ್ರಗಳನ್ನೂ ಮುಂದೆ ಮರದ ಚಕ್ರಗಳಿಗೆ ಬದಲಾಗಿ ಲೋಹದ ಚಕ್ರಗಳನ್ನೂ ಬಳಸಿದವರಲ್ಲಿ ಇವರೇ ಮೊದಲಿಗರು. ರೋಮನ್ ಚಕ್ರಾಧಿಪತ್ಯದಲ್ಲಿ ಉಂಡೆ ಚಕ್ರದ ಹಾಗೂ ಅರೆ ಚಕ್ರದ ಗಾಡಿಗಳು 20ನೆಯ ಶತಮಾನದ ಮಧ್ಯಭಾಗದಲ್ಲಿಯೂ ಬಳಕೆಯಲ್ಲಿದ್ದುವು. ಈ ಬಗೆಯ ರೋಮನ್ ಗಾಡಿಗಳ ಮಾದರಿಗಳನ್ನು ಸ್ಪೇನ್, ಸಾರ್ಡೀನಿಯ, ಬೋಸ್ನಿಯ, ಅನಟೋಲಿಯ ಮತ್ತು ಮಧ್ಯ ಇಟಲಿಯಲ್ಲಿ ಸಂರಕ್ಷಿಸಿ ಇಡಲಾಗಿದೆ. ರಚನೆಯ ದೃಷ್ಟಿಯಿಂದ ಈ ಗಾಡಿಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು: ಅಚ್ಚಿನ ಮೇಲೆ ಕುಳಿತಿರುವ ಅಟ್ಟಣೆಯನ್ನುಳ್ಳ ಗಾಡಿಗಳು ಹಾಗೂ ಮೂಕಿ ತೊಲೆಯ ಮೇಲೆ ಕುಳಿತಿರುವ ಗಾಡಿಗಳು ಎಂದು. ಮೊದಲ ಮಾದರಿಯ ಗಾಡಿಗಳು ಸ್ಪೇನ್, ಲ್ಯಾಟಿಯಂ ಮತ್ತು ಇಟಲಿಗಳಲ್ಲಿಯೂ ಎರಡನೆಯ ಬಗೆಯವು ಅನಟೋಲಿಯ ಮತ್ತು ಸಾರ್ಡೀನಿಯಗಳಲ್ಲಿಯೂ ಕಾಣಬರುತ್ತವೆ. ಅಮೆರಿಕ ಖಂಡಕ್ಕೆ ಈ ಗಾಡಿಗಳ ಪರಿಚಯವಾದದ್ದು ಸ್ಪ್ಯಾನಿಷ್ ಆಕ್ರಮಣದ ಅನಂತರದಲ್ಲಿಯೇ.

ಅಮೆರಿಕವನ್ನು ಪ್ರವೇಶಿಸಿದ ಈ ಗಾಡಿಯನ್ನು ಎಳೆಯಲು ಹೇಸರುಗತ್ತೆಗಳನ್ನು ಬಳಸಲಾಗಿತ್ತು. ಪ್ರ.ಶ. 1ನೆಯ ಶತಮಾನದ ಹೊತ್ತಿಗೆ ಮೇಕೆಗಳು ಅಥವಾ ನಾಯಿಗಳು ಎಳೆಯಬಹುದಾಗಿದ್ದಂಥ ಸಣ್ಣ ಗಾಡಿಗಳು ರೂಪುದಳೆದಿದ್ದುವೆಂಬುದಕ್ಕೆ ಪಾಂಪೆಯ ಭಿತ್ತಿಚಿತ್ರಗಳು ಸಾಕ್ಷಿಯಾಗಿವೆ. ಪ್ರ.ಶ.2ನೆಯ ಶತಮಾನದ ಹೊತ್ತಿಗೆ ಎತ್ತಿನ ದೊಡ್ಡ ಗಾಡಿಗಳು ಚೀನದಲ್ಲಿ ಬಹುವಾಗಿ ಬಳಕೆಗೆ ಬಂದುವು. ಗಾಡಿಗೆ ನೊಗವನ್ನು ಹೂಡಿ ಎತ್ತುಗಳನ್ನು ಕಟ್ಟುವ ಈ ಬಳಕೆ ಪಾಶ್ಚಾತ್ಯ ಪ್ರಪಂಚಕ್ಕಿಂತಲೂ ದೂರ ಪ್ರಾಚ್ಯದಲ್ಲಿಯೇ ಹೆಚ್ಚಾಗಿ ಬಳಕೆಗೆ ಬಂತು. ಯುರೋಪಿನ ಕೆತ್ತನೆಗಳಲ್ಲಿ 8ನೆಯ ಶತಮಾನದ ಅಂತರದಲ್ಲಿಯೇ ಈ ಬಗೆಯ ಮೊದಲ ಚಿತ್ರ ಕಾಣದೊರೆತಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿಯನ್ನೊದಗಿಸುತ್ತದೆ. ಭಾರತದಲ್ಲಿ ಎತ್ತುಗಳನ್ನು ವಿಶೇಷವಾಗಿ ಬಳಸುತ್ತಿದ್ದರು. ಆದರೆ ಕೆಲವೆಡೆಗಳಲ್ಲಿ ಕೋಣಗಳನ್ನೂ ಅಪೂರ್ವವಾಗಿ ಬಂಜೆ ಹಸುಗಳನ್ನೂ ಈ ಉದ್ದೇಶಕ್ಕೆ ಬಳಸುವ ವಾಡಿಕೆ ಇರುವುದೂ ಕಂಡುಬಂದಿದೆ. ಪರ್ಷಿಯ ಮತ್ತು ಕಪ್ಪಡೋಸಿಯಗಳಲ್ಲಿ ಬಹುಶ: ಮೊದಲ ಬಾರಿಗೆ ಕುದುರೆಗಾಡಿಗಳು ಸಿದ್ಧವಾದಂತೆ ತಿಳಿದು ಬಂದಿದೆ. ಅಂದರೆ ಪ್ರಚಲಿತ ಶಕಪೂರ್ವ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆಯೇ ಕುದುರೆಗಳನ್ನು ಈ ಕಾರ್ಯಕ್ಕೆ ಬಳಸುವ ಪದ್ಧತಿ ಬಳಕೆಗೆ ಬಂದಿರಬೇಕೆಂದು ಹೇಳಲಾಗಿದೆ.

**ಗಾಡಿಯ ಬಗೆಗಳು**: ಭಾರತದಲ್ಲಿ ಒಂಟೆತ್ತಿನ ಗಾಡಿ, ಜೋಡೆತ್ತಿನ ಗಾಡಿ, ವಡ್ಡರ ಗಾಡಿ (ಚಕ್ಕಡಿ), ಕೈಗಾಡಿ ಮತ್ತು ಕುದುರೆಗಾಡಿ ವಿಶೇಷವಾಗಿ ಬಳಕೆಯಲ್ಲಿವೆ. ಇವುಗಳಲ್ಲಿ ವಡ್ಡರ ಗಾಡಿಯೊಂದು ಈಚೆಗೆ ಅಪೂರ್ವ ವಸ್ತುವಾಗಿ ಪರಿಣಮಿಸುತ್ತಿದೆ. ರಚನೆಯ ಸ್ಥೂಲತ್ವ ಮತ್ತು ಅಕುಶಲತ್ವಗಳಿಂದಾಗಿ ಹಾಗೂ ಅವನ್ನು ಯಾವ ಉದ್ದೇಶಕ್ಕಾಗಿ ಬಳಸುತ್ತಿದ್ದರೋ ಆ ಉದ್ದೇಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅವುಗಳಿಗೆ ವಡ್ಡರ ಬಂಡಿ ಎಂದು ಹೆಸರಿಸಿರಬೇಕು. ವಡ್ಡ ಜನಾಂಗದಲ್ಲಿ ಅವು ವಿಶೇಷವಾಗಿ ಬಳಕೆಯಲ್ಲಿದ್ದುದೂ ಇದಕ್ಕೆ ಕಾರಣವಾಗಿರಬೇಕು.

ಒಂಟೆತ್ತಿನ ಗಾಡಿ ಮತ್ತು ಜೋಡೆತ್ತಿನ ಗಾಡಿ ಎಂಬ ಶಬ್ದಗಳೇ ಈ ಸಾಧನಗಳಲ್ಲಿ ಕ್ರಮಶಃ ಒಂದು ಮತ್ತು ಎರಡು ಎತ್ತುಗಳನ್ನು ಬಳಸಲಾಗುತ್ತದೆಂಬುದನ್ನು ಸೂಚಿಸುತ್ತವೆ. ಇವುಗಳಲ್ಲಿ ಕಮಾನುರಹಿತ ಹಾಗೂ ಕಮಾನುಸಹಿತವಾದ ಗಾಡಿಗಳೆಂದು ಎರಡು ಬಗೆಗಳುಂಟು. ದೂರಿ ಮತ್ತು ಕಡಾಣಿಗಳಿಂದ ಬಂಧಿಸಲ್ಪಟ್ಟ ಎರಡು ಚಕ್ರಗಳ ನಡುವೆ ಮರದ ಅಚ್ಚು ಇದ್ದು, ಅದರ ಮೇಲೆ ಅಟ್ಟಣೆ ಇರುತ್ತದ್ದೆಯಷ್ಟೇ. ಈ ಅಟ್ಟಣೆಯ ಎಡ ಮತ್ತು ಬಲತುದಿಯಲ್ಲಿ ದಪ್ಪನಾದ ತೊಲೆಗಳಿರುತ್ತವೆ. ಇದರ ಹಿಂಬದಿ ಮತ್ತು



**ಜೋಡೆತ್ತಿನ ಟೈರ್ ಗಾಡಿ**

ಮುಂಬದಿಗಳಲ್ಲಿ ಅಡ್ಡಡ್ಡವಾಗಿ ದಪ್ಪ ತೊಲೆಗಳನ್ನು ಕೂಡಿಸಿ ಆಯತಾಕಾರದ ಚೌಕಟ್ಟನ್ನು ನಿರ್ಮಿಸಿರುತ್ತಾರೆ. ಚೌಕಟ್ಟಿನ ಮಧ್ಯೆ ಹಲಗೆಗಳನ್ನು ಜೋಡಿಸಿರುತ್ತಾರೆ. ಒಂಟೆತ್ತಿನ ಗಾಡಿಯಲ್ಲಿ ಎಡ ಮತ್ತು ಬಲಬದಿಯ ತೊಲೆಗಳು ಕೆಲವು ಮೀಟರ್‍ಗಳಷ್ಟು ಮುಂದಕ್ಕೆ ಚಾಚಿಕೊಂಡಿದ್ದು ಮತ್ತೊಂದು ಉರುಟಾದ ನೊಗ ಇದಕ್ಕೆ ಅಡ್ಡವಾಗಿ ಬಂದು ಚೌಕಟ್ಟೊಂದನ್ನು ನಿರ್ಮಿಸುತ್ತದೆ. ಈ ಚೌಕಟ್ಟಿನ ನಡುವೆ ಒಂದು ಎತ್ತು ಬರುತ್ತದೆ, ಅದರ ಹೆಗಲಿನ ಮೇಲೆ ನೊಗವನ್ನಿಟ್ಟು ಕಣ್ಣಿಯಿಂದ ಅದನ್ನು ನೊಗಕ್ಕೆ ಬಂಧಿಸಲಾಗುತ್ತದೆ. ಎರಡೂ ಬದಿಯ ತೊಲೆಗಳಲ್ಲಿ ಅಲ್ಲಲ್ಲಿ ರಂಧ್ರಗಳನ್ನು ಕೊರೆದು ಕವೆಗೋಲು ಅಥವಾ ಗೂಟಗಳನ್ನು ನೆಟ್ಟಿರುತ್ತಾರೆ. ಅಗತ್ಯಾನುಗುಣವಾಗಿ ಬಿದಿರಿನ ದೆಬ್ಬೆಗಳನ್ನು ಹೆಣೆದು ಈ ಪಾರ್ಶ್ವಗಳನ್ನು ಪೂರೈಸುವುದೂ ಉಂಟು. ಸಾಮಾನು ಸರಂಜಾಮುಗಳ ಸಾಗಣೆಗೆ ಹಾಗೂ ಪ್ರಯಾಣಿಕರು ಒರಗಿಕೊಂಡು ಕೂಡಲು ಇದರಿಂದ ಅನುಕೂಲವಾಗುತ್ತದೆ. ಜೋಡೆತ್ತಿನ ಗಾಡಿಯಲ್ಲಿ ಬದಿಯ ತೊಲೆಗಳು ಅಟ್ಟಣೆಯ ಚೌಕಟ್ಟಿನಲ್ಲಿಯೇ ಕೊನೆಗಾಣುತ್ತವೆ. ಅದರೆ, ಮೂರನೆಯ ದಪ್ಪ ತೊಲೆಯೊಂದು ಇವುಗಳ ನಡುವೆ ಬಂದಿದ್ದು ಅದು ಕೆಲವು ಮೀಟರ್‍ಗಳಷ್ಟು ಮುಂದಕ್ಕೆ ಚಾಚಿಕೊಂಡಿದ್ದು, ಮೂಕಿಯಲ್ಲಿ ಕೊನೆಗೊಂಡಿರುತ್ತದೆ. ಪ್ರತ್ಯೇಕವಾದ ನೊಗವನ್ನು ಇಟ್ಟು ಕಟ್ಟಲು ಅನುಕೂಲವಾಗುವಂತೆ ಮೂಕಿಯ ತುದಿ ತತ್‍ಕ್ಷಣದ ಪಾತಳಿಗಿಂತ ಸು. 16 ಸೆಂ.ಮೀನಷ್ಟು ಮೇಲೆ ಎದ್ದಿರುತ್ತದೆ. ಅಂದರೆ, ಆ ರೀತಿ ಅದನ್ನು ಕೊರೆಯಲಾಗಿರುತ್ತದೆ. ಅದರ ತುದಿಯ ತಳಭಾಗವೂ ಲಂಬಾಕಾರವಾಗಿ ಸುಮಾರು 46 ಸೆಂ.ಮೀನಷ್ಟು ಕೆಳಚಾಚಿ ಕೊಂಡಿರುತ್ತದೆ. ಹೀಗಾಗಿ, ಗಾಡಿಯ ಅಟ್ಟಣೆಯ ಮುಂಚಾಚು, ಒಂಟೆತ್ತಿನ ಗಾಡಿಯಲ್ಲಾಗುವಂತೆ, ನೆಲದ ಮೇಲೆ ಕುಳಿತಿರುವುದಿಲ್ಲ. ಅಡ್ಡಲಾಗಿ ಹಾಕಲಾದ ನೊಗದ ಎರಡೂ ಬದಿಗಳಲ್ಲಿ ತುದಿಯಿಂದ ಸ್ವಲ್ಪ ದೂರದಲ್ಲಿ ಒಂದೊಂದು ರಂಧ್ರವಿರುತ್ತದ. ಇದೇ ಕಣ್ಣಿಗೂಟದ ರಂಧ್ರ, ಈ ಗೂಟದ ನೆರವಿನಿಂದ ಹಾಗೂ ಕಣ್ಣಿಯನ್ನು ಬಳಸಿ ನೊಗಕ್ಕೆ ಕಟ್ಟಲಾಗುತ್ತದೆ. ಈ ಪ್ರಕ್ರಿಯೆಯನ್ನು ಗಾಡಿ ಹೂಡುವುದು ಎನ್ನುತ್ತಾರೆ. ಅಟ್ಟಣೆಯ ಎರಡೂ ಬದಿಯಿಂದ ಬಲವಾದ ಬಿದಿರುದೆಬ್ಬೆಗಳನ್ನು ಎಳೆದು ಮೂಕಿಯ ತುದಿಯಲ್ಲಿ ಬಂಧಿಸಿರುತ್ತಾರೆ.

ಅಡ್ಡ ತೊಲೆ ಮತ್ತು ಈ ಎರಡು ಬಿದಿರು ಬಾಹುಗಳು ಸೇರಿ ಒಟ್ಟಿನಲ್ಲಿ ಒಂದು ಸಮದ್ವಿಬಾಹು ತ್ರಿಭುಜವನ್ನು ರಚಿಸಿರುತ್ತವೆ. ನಡುವಣ ದಪ್ಪ ತೊಲೆ ಈ ತ್ರಿಭುಜವನ್ನು ಎರಡು ತ್ರಿಭುಜಗಳಾಗಿ ವಿಂಗಡಿಸುವ ಲಂಬರೇಖೆಯಂತಿರುತ್ತದೆ. ಗಾಡಿ ಹೊಡೆಯುವವನು ಸರಿಯಾಗಿ ಕುಳಿತು ಗಾಡಿ ಹೊಡೆಯಲು ಇದರಿಂದ ಅನುಕೂಲವಾಗುತ್ತದೆ. ಎತ್ತಿನ ಕತ್ತಿಗೆ ಕಟ್ಟಿರುವ ಹಗ್ಗಗಳೆರಡನ್ನೂ ಹಿಡಿದುಕೊಂಡು ಗಾಡಿ ಹೊಡೆಯುವವನು ಕುಳಿತುಕೊಳ್ಳುತ್ತಾನೆ. ಒಂಟೆತ್ತಿನ ಗಾಡಿಯಲ್ಲಿ ಸಾರಥಿ ಅಟ್ಟಣೆಯ ಮುಂಬದಿಯ ಒಂದು ಪಕ್ಕದಲ್ಲಿ ಮಾತ್ರ ಇರುತ್ತದೆ. ಈ ಹಗ್ಗ ಅಥವಾ ಹಗ್ಗಗಳೇ ಇಲ್ಲಿಯ ಸ್ಟಿಯರಿಂಗ್ ಸಾಧನಗಳು; ಅಂದರೆ, ಅವನ್ನು ಅಗತ್ಯಾನುಗುಣವಾಗಿ, ಎಳೆದು ಅಥವಾ ಪಾರ್ಶ್ವವನ್ನು ಬದಲಾಯಿಸುವುದರ ಮೂಲಕ ಅಪೇಕ್ಷಿಸಿದ ದಿಕ್ಕಿನಲ್ಲಿ ಹೋಗಬಹುದು. ತಿರುಗಬಹುದು. ಅಷ್ಟೇ ಅಲ್ಲ, ಬ್ರೇಕ್ ಅಥವಾ ತಡೆಯ ಸಾಧನವೂ ಇದೇ. ಜಗ್ಗಿಸಿ, ಹಿಡಿದೆಳೆದರೆ ಗಾಡಿ ನಿಲ್ಲುತ್ತದೆ. ಸಡಿಲ ಬಿಟ್ಟರೆ ಚಲಿಸುತ್ತದೆ. ಮಳೆ, ಗಾಳಿ ಮತ್ತು ಬಿಸಿಲಿನಿಂದ ರಕ್ಷಣೆ ಪಡೆಯುವ ಹಾಗೂ ತನ್ಮೂಲಕ ಸಾಗಣೆಯ ಅಥವಾ ಯಾನದ ಸೌಕರ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ, ಕವೆಗೋಲು ಅಥವಾ ಗೂಟಗಳನು ವಿಸ್ತರಿಸಿ, ಅವನ್ನು ಆಧರಿಸಿ ಬಿದಿರಿನ ಕಮಾನನ್ನು ಕಟ್ಟಿ, ಅದಕ್ಕೆ ಗೋಣಿಪಟ್ಟೆಯನ್ನು ಹೊಲಿಯುವುದುಂಟು. ಇದನ್ನೇ ಕಮಾನು ಗಾಡಿ ಎಂದು ಕರೆಯುವುದು. ಅಲಂಕರಣದ ದೃಷ್ಟಿಯಿಂದ ಕಮಾನಿನ ಒಳಭಾಗಕ್ಕೆ ಬಣ್ಣ ಹಚ್ಚುವ, ಬದಿಗಳಿಗೆ, ಕನ್ನಡಿಯನ್ನು ಜೋಡಿಸುವ ವಾಡಿಕೆಯೂ ಇದೆ. ಹಬ್ಬಹರಿದಿನಗಳಲ್ಲಿ ಪ್ರಮುಖರನ್ನು ಸನ್ಮಾನಿಸುವಂಥ ಸಂದರ್ಭಗಳಲ್ಲಿ ಜೋಡೆತ್ತಿನ ಗಾಡಿಗಳ ಮೆರವಣಿಗೆಯನ್ನು ಏರ್ಪಡಿಸುವುದೂ ಉಂಟು.

ಒಬ್ಬಿಬ್ಬರು ನಿರ್ವಹಿಸಬಹುದಾದಷ್ಟು ಪ್ರಮಾಣದ ಹೊರೆಯನ್ನು ತುಂಬಹುದಾದಂಥ ಕಿರು ಒಂಟೆತ್ತಿನ ಗಾಡಿಯೇ ಕೈಗಾಡಿ. ವ್ಯತ್ಯಾಸ ಇಷ್ಟೇ. ಎತ್ತಿಗೆ ಬದಲಾಗಿ ಮಾನವ ವ್ಯಕ್ತಿ ಈ ಗಾಡಿಯನ್ನು ಎಳೆಯುತ್ತಾನೆ. ಸೀಮಿತೋದ್ದೇಶಗಳಿಗೆ ಹಾಗೂ ಸೀಮಿತ ದೂರಗಳಿಗೆ ಇದನ್ನು ಬಳಸಬಹುದು.

ಮುಗ್ಗಾಲಿಗಳ ಬಳಕೆ ಅಷ್ಟಾಗಿ ಕಾಣಬರುವುದಿಲ್ಲವಾದರೂ ಮಕ್ಕಳ ಆಟಕ್ಕೆ ಉಪಯೋಗಿಸುವ ಆಟದ ಗಾಡಿ ವಾಸ್ತವವಾಗಿ ಒಂದು ಮುಗ್ಗಾಲಿಯೇ. ಮಗು ನೆಟ್ಟಗೆ ನಿಂತು ಹಿಡಿದುಕೊಳ್ಳಲು ಅನುಕೂಲವಾಗುವಷ್ಟು ಅಂದರೆ ಸುಮಾರು 46 ಸೆಂ.ಮೀನಷ್ಟು ಎತ್ತರದಲ್ಲಿ ಒಂದು ಅಡ್ಡಪಟ್ಟಿ, ಅದರ ಎರಡೂ ತುದಿಗಳಿಗೆ ಸ್ವಲ್ಪ ದೂರದಲ್ಲಿ ಎರಡು ಲಂಬಾಕಾರದ ಪಟ್ಟಿಗಳು. ಅವನ್ನು ಬಂಧಿಸುವ ಮತ್ತೊಂದು ಅಡ್ಡಪಟ್ಟಿ. ಅದರ ಇಕ್ಕೆಲಗಳಲ್ಲಿ ಎರಡು ಚಕ್ರಗಳು. ಕೆಳ ಅಡ್ಡ ಪಟ್ಟಿಯ ಮಧ್ಯದಿಂದ ನೇರವಾಗಿಯೂ ಮೇಲು ಅಡ್ಡಪಟ್ಟಿಯಿಂದ ಇಳಿಜಾರಾಗಿಯೂ ಬರುವ ಪಟ್ಟಿಗಳ ಸಂಧಿಸ್ಥಾನಕ್ಕೆ ಕೊಂಚ ಮುಂದೆ ಮತ್ತೊಂದು ಚಕ್ರವನ್ನು ಅಳವಡಿಸಿರುತ್ತಾರೆ. ಹೀಗಾಗಿ ಇದನ್ನು ತಳ್ಳಿಕೊಂಡು ಹೋಗುವುದು ಮಗುವಿಗೆ ಸುಲಭವೂ ಹೌದು. ಮಕ್ಕಳಿಗೆ ಇದು ಮನೋರಂಜನೆಯನ್ನೊದಗಿಸುವ ಆಟಿಕೆಯೂ ಹೌದು. ಬೇಗ ಕಾಲು ಬರದ – ಅಂದರೆ ನಡೆಯುವುದನ್ನು ಕಲಿಯದ – ಮಕ್ಕಳಿಗೆ ನಡೆಗಲಿಸುವುದರಲ್ಲಿ ಇದು ತುಂಬ ಪರಿಣಾಮಕಾರಿ.

ಒಂಟೆತ್ತಿನ ಗಾಡಿ ಅಥವಾ ಜೋಡೆತ್ತಿನ ಗಾಡಿ ವ್ಯವಸಾಯ – ವಾಣಿಜ್ಯೋದ್ದೇಶಗಳಿಗೆ ತುಂಬ ಉಪಯುಕ್ತವಾಗಿವೆಯಾದರೂ ಮುಖ್ಯ ಕೊರತೆಯೆಂದರೆ ಅವುಗಳ ಪರಿಮಿತ ವೇಗ. ಈ ಗಾಡಿಗಳನ್ನು ಎಳೆಯುವ ಎತ್ತು, ಕೋಣ ಮೊದಲಾದುವು ತುಂಬ ವೇಗದಿಂದ ಚಲಿಸಲಾರವು. ಗಾಡಿಗಳ ಭಾರವೂ ಗಾಲಿಯ ಸುತ್ತಿನ ಲೋಹ ಪಟ್ಟಿಯೂ ಇದಕ್ಕೆ ಕಾರಣ. ಹೀಗಾಗಿ, ಸಾಕಷ್ಟು ಹಿಂದೆಯೇ ಈ ಗಾಡಿಗಳಿಗೆ ಕುದುರೆಗಳನ್ನು ಬಳಸುವ ಪದ್ಧತಿ ಜಾರಿಗೆ ಬಂದಿತು. ಇದರಿಂದ ವೇಗದ ಪ್ರಯಾಣ ಸಾಧ್ಯವಾಯಿತು. ಕ್ರಮೇಣ ಗಾಡಿಯ ಸ್ವರೂಪದಲ್ಲೂ ಸುಧಾರಣೆಗಳಾದುವು. ಇದರ ಫಲವೇ ಈಗಿನ ಕುದುರೆ ಗಾಡಿ. ಕುದುರೆಗಳನ್ನು ಯುದ್ಧರಥಗಳಿಗೆ ಹಾಗೂ ವೈಭವೋಪೇತ ವಾಹನಗಳಾದ ಕೋಚುಗಳಿಗೆ ಬಳಸುವ ವಾಡಿಕೆ ಬೆಳೆದು ಬಂದಿತ್ತಾದರೂ ಕುದುರೆಗಾಡಿಯ ಉದ್ದೇಶ ಮತ್ತು ಸೌಲಭ್ಯಗಳು ಬೇರೆಯೇ ಆಗಿದ್ದುವು. ಇದು ಒಂಟೆತ್ತಿನ ಗಾಡಿಯ ಸುಧಾರಿತ ರೂಪ. ಅದುವರೆಗೆ ಚಕ್ರಕ್ಕೆ ಹಾಕುತ್ತಿದ್ದ ಕಬ್ಬಿಣದ ಪಟ್ಟಿಗಳಿಗೆ ಬದಲಾಗಿ ರಬ್ಬರಿನ ಪಟ್ಟೆ ಬಂತು. ಅಚ್ಚಿನ ಮೇಲೆ ಅಟ್ಟಣೆಗೆಯನ್ನು ನೇರವಾಗಿ ಕೂಡಿಸುವುದರಿಂದ ರಸ್ತೆಯ ಏರಿಳಿತಗಳು ಪ್ರತಿಯೊಂದು ಕಂಪನವೂ ಆಘಾತವೂ ವಾಹನ ಮೇಲೆ ಕುಳಿತಿರುವ ಪ್ರಯಾಣಿಕರ ಮೇಲೆ ಪ್ರಭಾವ ಬೀರುತ್ತದೆ. ಈ ಕಂಪನವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಸ್ಪ್ರಿಂಗ್ – ಫಲಕಗಳ ಮೇಲೆ ಅಟ್ಟಣಿಗೆಯನ್ನು ಕೂಡಿಸಲಾಯಿತು. ಒಂಟೆತ್ತಿನ ಗಾಡಿಯಲ್ಲಿರುವಂತೆ, ಅಟ್ಟಣೆಯ ಮುಂಚಾಚಿನ ಪಾರ್ಶ್ವಸ್ಥ ಕಿರುದೊಲೆಗಳನ್ನು ಮತ್ತೊಂದು ಉರುಟು ನೊಗ ಬಂಧಿಸಿರುವುದಿಲ್ಲ. ಚರ್ಮದ ಕಣ್ಣಿಗಳನ್ನು ಹಾಕಿರುತ್ತಾರೆ. ಇವುಗಳ ನೆರವಿನಿಂದ ಲಗಾಮು ಹಾಕಿರುವ ಕುದುರೆಯನ್ನು ಗಾಡಿಗೆ ಕಟ್ಟಲಾಗುತ್ತದೆ. ಪ್ರಯಾಣಿಕರು ಹತ್ತಿ ಗಾಡಿಯಲ್ಲಿ ಕುಳಿತುಕೊಳ್ಳಲು ನೆರವಾಗುವುದಕ್ಕಾಗಿ ಗಾಡಿಯ ಹಿಂಬದಿಯಲ್ಲಿ ಕಾಲೊತ್ತು ಇರುತ್ತದೆ. ಅಟ್ಟಣೆಯ ಮೇಲೆ ಸುಮಾರು 75 ಸೆಂ.ಮೀ.ಯಷ್ಟು ಎತ್ತರದಲ್ಲಿ ಕಮಾನನ್ನು ಕಟ್ಟಿದ್ದು, ಅದಕ್ಕೆ ಸಾಮಾನ್ಯವಾಗಿ ಜಲನಿರೋಧಕ ಮೇಣಗಪಟದ ಬಟ್ಟೆಯನ್ನು ಹೊದಿಸಿರುತ್ತಾರೆ. ಒಳಗೆ ಕುಳಿತವರು ಹಿಡಿದುಕೊಳ್ಳಲು ಅನುಕೂಲವಾಗುವಂತೆ ಲೋಹದ ಅಥವಾ ಮರದ ಗುಂಡುಗೋಲನ್ನು ಅಥವಾ ಕಂಬಿಯನ್ನು ಎರಡೂ ಬದಿಗಳಲ್ಲಿ ಹಾಕಿರುತ್ತದೆ. ಅಲಂಕರಣದ ದೃಷ್ಟಿಯಿಂದ, ಕನ್ನಡಿಯನ್ನು ಅಳವಡಿಸಿರುವುದೂ ಚಿತ್ತಾರಗಳನ್ನು ಬರೆಸಿರುವುದೂ ಉಂಟು. ಕೂರುವ ಜಾಗದ ಉದ್ದಕ್ಕೂ ಕುದುರೆಗೆ ತಿನ್ನಲು ಕೊಡುವ ಹುಲ್ಲನ್ನು ಹರಡಿದ್ದು ಅದರ ಮೇಲೆ ಜಮಖಾನೆಯನ್ನು ಹಾಸಿರುತ್ತಾರೆ. ನಾಲ್ಕರಿಂದ ಆರುಮಂದಿ ಇದರಲ್ಲಿ ಒಮ್ಮೆಗೇ ಹಾಗೂ ಹೆಚ್ಚು ವೇಗವಾಗಿ ಪ್ರಯಾಣ ಮಾಡಬಹುದು. ಆದರೆ, ಕುಳಿತುಕೊಳ್ಳುವವರು ಮೈ – ಕೈ ಮುದುರಿಕೊಂಡು ಕೂಡಬೇಕಾಗುತ್ತದೆ. ಆದ್ದರಿಂದ ದೀರ್ಘಕಾಲದ ಅಥವಾ ದೂರದ ಪ್ರಯಾಣಕ್ಕೆ ಇದು ಹೇಳಿಸಿದ್ದಲ್ಲ.

ಕುದುರೆಗಾಡಿಯ ಆಸನವ್ಯವಸ್ಥೆಯ ಈ ಅಸುಖವನ್ನು ಹೋಗಲಾಡಿಸಲಾಗಿರುವ ವಾಹನವೇ ಷಾಪಸಂದ್. ಆದರೆ ಇದರಲ್ಲಿ ಆಸನವ್ಯವಸ್ಥೆ ಮಾತ್ರ ನಾಲ್ಕು ಮಂದಿಗೆ ಸೀಮಿತ. ಕುದುರೆಗಾಡಿಯಲ್ಲಿ ಬಹುಮಟ್ಟಿಗೆ ಎದುರುಬದುರಾಗಿ ಕೂಡಬೇಕಷ್ಟೇ. ಆದರೆ ಇಲ್ಲಿ ಬೆನ್ನಿಗೊಬ್ಬರು ಒರಗಿ ಕುಳಿತುಕೊಳ್ಳುವಂತೆ – ಒಂದು ಜೋಡಿ ಮುಮ್ಮುಖವಾಗಿ, ಒಂದು ಜೋಡಿ ಹಿಮ್ಮುಖವಾಗಿ – ವ್ಯವಸ್ಥೆಮಾಡಲಾಗಿದೆ. ಷಾಪಸಂದ್ ನೋಡಲಿಕ್ಕೂ ತುಂಬ ಸುಂದರವಾಗಿದೆ. ಹಿಂಬದಿಯಲ್ಲಿ ಕುಳಿತು ಪ್ರಯಾಣ ಮಾಡುವುದಂತೂ ತುಂಬ



ಷಾಪಸಂದ್ ಜಟಕಾಗಾಡಿ

ಸುಖಕರ. ಇದಕ್ಕೆ ಕಾರಣ ಕಾಲು ಚಾಚಿ ಕುಳಿತುಕೊಳ್ಳಲು ಅನುವಾಗುವಂತೆ ಅಟ್ಟಣೆಯ ಕೆಳಭಾಗದಲ್ಲಿ ಹಾಗೂ ಅದಕ್ಕೆ ಸೇರಿದಂತೆ ಪಾದಪೀಠದ ವ್ಯವಸ್ಥೆ ಇರುವುದು. ಮುಂಭಾಗದಲ್ಲಿ ಒಂದು ತೊಟ್ಟಿಯನ್ನು ಏರ್ಪಡಿಸಲಾಗಿದೆ. ಮುಂಬದಿಯಲ್ಲಿ ಕೂಡುವವರು ಕಾಲನ್ನು ಇಳಿಬಿಟ್ಟುಕೊಂಡು ಕೂಡಬಹುದು. ಸಾಮಾನ್ಯವಾಗಿ, ಕುದುರೆಗೆ ಹಾಕುವ ಹುಲ್ಲನ್ನು ಇದರಲ್ಲಿ ತುಂಬಿರುತ್ತಾರೆ. ಕೂಡಲು ಮತ್ತೆಯನ್ನು ಹಾಕಿರುತ್ತಾರೆ. ಮುಂಬದಿಯ ಎರಡೂ ಪಾರ್ಶ್ವಗಳಲ್ಲಿ ಹತ್ತಿ ಕುಳಿತುಕೊಳ್ಳಲು ನೆರವಾಗುವ, ಒಂದೊಂದು ಕಾಲೊತ್ತು ಇರುತ್ತದೆ. ಕಮಾನಿನ ಚಾವಣಿ ವಿಸ್ತಾರವಾಗಿಯೂ ವಿಶಿಷ್ಟ ವಕ್ರದಂತೆಯೂ ಇದ್ದು, ರೆಕ್ಸೀನಿನಂಥ ಜಲನಿರೋಧಕ ವಸ್ತ್ರದಿಂದ ಆಚ್ಛಾದಿತವಾಗಿರುವುದರಿಂದ ಗಾಡಿ ನೋಡಲೂ ಚೆನ್ನಾಗಿರುತ್ತದೆ. ಚಕ್ರದ ಪಟ್ಟೆಯ ಮೇಲೆ ದೂಳು ರಕ್ಷಕ ಪಟ್ಟಿ ಅಟ್ಟಣಿಗೆ ಸೇರಿದಂತೆ, ಇರುತ್ತದೆ. ಗಾಡಿಯ ವಿವಿಧ ಭಾಗಗಳಿಗೆ ಬೇರೆ ಬೇರೆ ಬಣ್ಣವನ್ನು ಲೇಪಿಸಿ ಅದನ್ನು ಆಕರ್ಷಕವಾಗಿ ಕಾಣುವಂತೆ ಮಾಡಿರುತ್ತಾರೆ. ಒಳಪಾರ್ಶ್ವದಲ್ಲಿ ಕನ್ನಡಿಯೂ ಚಿತ್ತಾರಗಳೂ ಇರುತ್ತವೆ. ಕುಳಿತಿರುವವರು ಆಯ ತಪ್ಪದಂತೆ ಹಿಡಿದುಕೊಂಡು ಕುಳಿತುಕೊಳ್ಳುವ ಸಲುವಾಗಿ ಚರ್ಮದ ಪಟ್ಟಿಯನ್ನು ಹಾಕಿರುತ್ತಾರೆ. ಇದರಲ್ಲಿನ ಪ್ರಯಾಣ ಸಂತಸದಾಯಕವಾಗಿರುತ್ತದೆ.

ಕುದುರೆಗಾಡಿಗೆ ಜಟಕಾ ಎಂಬ ಹೆಸರೂ ಇದೆ. ಸಾರಥಿಯ ಸೂಚನೆ ದೊರೆತೊಡನೆಯೇ ಚಿಮ್ಮಿ ಮುಂದೆ ಹೋಗುವ (ಝಟಕಾ) ವಾಹನವಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ಮೊದಲಿಗೆ ಆಡಳಿತಗಾರರ, ಅಧಿಕಾರಿಗಳ ಉಪಯೋಗಕ್ಕಾಗಿ ರಚಿತವಾಗಿದ್ದಿರಬಹುದಾದ ವಾಹನವಾದ್ದರಿಂದ ಜಟಕಾದ ಸುಧಾರಿತ ರೂಪದ ವಾಹನಕ್ಕೆ ಷಾಪಸಂದ್ (ಷಾಹ್ ಆಡಳಿತಗಾರರ, ಪಸಂದ್ ಇಷ್ಟ) ಎಂದು ಹೆಸರು ಬಂದಿರಬೇಕು. ಕುದುರೆಗಾಡಿ ಅಥವಾ ಜಟಕಾಗಳು ಸಾಮಾನ್ಯವಾಗಿ ಎಲ್ಲ

ಕಡೆಗಳಲ್ಲೂ ಕಾಣಬರುತ್ತವೆಯಾದರೂ ಷಾಪಸಂದ್ ಕೆಲವೇ ನಗರಗಳ ವೈಶಿಷ್ಟ್ಯಪೂರ್ಣ ವಾಹನವೆನ್ನಿಸಿಕೊಂಡಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಮೈಸೂರಿನಲ್ಲೂ ಉತ್ತರ ಭಾರತದಲ್ಲಿ ವಾರಣಾಸಿ, ಆಗ್ರ ಮುಂತಾದ ಕಡೆಗಳಲ್ಲೂ ಇವನ್ನು ಕಾಣಬಹುದು. ದುಃಖದ ಸಂಗತಿ ಎಂದರೆ ಈ ವೇಗದ ಯುಗದ ವಾಹನಗಳಲ್ಲೊಂದಾದ ಆಟೋರಿಕ್ಷಾದ ಪ್ರಭಾವದಿಂದಾಗಿ ಕುದುರೆಗಾಡಿಗಳು ಮೂಲೆಗುಂಪಾಗುತ್ತಿವೆ.


ಸ್ವಯಂಚಾಲಿತ ವಾಹನಗಳ ಪ್ರಭಾವ ಸಾಂಪ್ರದಾಯಿಕ ಸ್ವರೂಪದ ಗಾಡಿಗಳ ಮೇಲೆ ಬಿದ್ದಿರುವುದಕ್ಕೆ ರಬ್ಬರ್ ಚಕ್ರದ ಗಾಡಿಗಳು ಸಾಕ್ಷಿಯಾಗಿವೆ. ಇವು ಉದ್ದ ಅಗಲ ಆಕಾರಗಳಲ್ಲಿ ಸಾಮಾನ್ಯ ಗಾಡಿಗಳಿಗಿಂತ ದೊಡ್ಡವಾಗಿರುತ್ತವೆ. ಅಚ್ಚು, ದೂರಿ, ಕಡಾಣಿಗಳಿಗೆ ಬದಲಾಗಿ, ಬಲವಾದ ಆಕ್ಸಲ್ ಮೇಲೆ ಜೋಡಿಸಿರುವ ಲೋಹದ ಚೌಕಟ್ಟಿನ ಮೇಲೆ ಗಾಡಿಯ ಅಟ್ಟಣೆ ಕುಳಿತಿರುತ್ತದೆ. ಉರುಳು ಮಣಿಗಳ (ಬಾಲ್ – ಬೇರಿಂಗ್ಸ್) ನೆರವಿನಿಂದ ಚಕ್ರಗಳು ಸುಲಭವಾಗಿ ತಿರುಗುತ್ತವೆ. ಲೋಹದ ಚಕ್ರಮೂಲ (ವ್ಹೀಲ್ – ಬೇಸ್) ಹೊಂದಿದಂತೆ ಟೈರು ಮತ್ತು ಟ್ಯೂಬುಗಳಿರುತ್ತವೆ. ಟ್ಯೂಬಿಗೆ ಗಾಳಿಯನ್ನು ತುಂಬಿಸಲಾಗುತ್ತದೆ. ಈ ಚಕ್ರ ಬಸ್ಸಿನ ಚಕ್ರಕ್ಕಿಂತ ದೊಡ್ಡದಾಗಿರುವ ಸಂಭವವಿಲ್ಲದಿರುವುದರಿಂದ, ಸಾಂಪ್ರದಾಯಿಕ ಗಾಡಿಯ ಚಕ್ರಕ್ಕೂ ಇದಕ್ಕೂ ಹೋಲಿಕೆಯೇ ಇಲ್ಲ. ಅಂತೆಯೇ ಮೂಕಿ ಮತ್ತು ಅಟ್ಟಣೆ ಚೌಕಟ್ಟಿನ ನಡುವಣ ತ್ರಿಭುಜಾಕಾರ ರಚನೆಗಳಿರುವುದಿಲ್ಲ. ಯಂತ್ರಕ್ಕೆ ಬದಲಾಗಿ ಎತ್ತುಗಳೇ ಇವನ್ನು ಎಳೆಯುತ್ತವೆ. ಇದನ್ನು ಸಾಮಾನ್ಯವಾಗಿ ಸರಕು ಸಾಗಣೆ ಉಪಯೋಗಿಸುವುದರಿಂದ ಕಮಾನು ಇರುವುದಿಲ್ಲ.

ಒಟ್ಟಿನಲ್ಲಿ, ಚಕ್ರಸಹಿತವಾದ ಗಾಡಿಗಳು ಮುಖ್ಯವಾಗಿ ವ್ಯವಸಾಯದ ಹಾಗೂ ಪ್ರಯಾಣದ ಅಗತ್ಯಗಳನ್ನು ಪೂರೈಸಿವೆ. ಇಂದಿನ ಯಂತ್ರಯುಗದಲ್ಲೂ ಇವುಗಳ ಮಹತ್ತ್ವ, ಕನಿಷ್ಠ ಪಕ್ಷ ಭಾರತದಲ್ಲಿ, ಕಡಿಮೆಯಾಗಿಲ್ಲ. ಯಂತ್ರೀಕರಣಕ್ಕೊಳಗಾಗಿರುವ ದೇಶಗಳಲ್ಲಿಯೂ ಇವು ಇನ್ನೂ ಬಳಕೆಯಲ್ಲಿವೆ. ಯುರೋಪಿನಲ್ಲಿ ಟಿಂಕರ್ಸ್ ಕಾರ್ಟ್ ಮತ್ತು ಐರಿಷ್ ಜಾಂಟಿಂಗ್ ಕಾರ್ ಎಂಬ ಬಂಡಿಗಳು ವೈಯಕ್ತಿಕ ಸಾಗಣೆಯ ಸಾಧನಗಳಾಗಿವೆ. ರೆಡ್ ರಿವರ್ ಕಾರ್ಟ್ ಎಂಬುದು ಸಾಮಾನು ಸರಂಜಾಮುಗಳ ಬಳಕೆಗೆ ಉಪಯೋಗಿಸಲಾಗುತ್ತಿದ್ದ ದೊಡ್ಡ ಗಾಡಿಯ ಹೆಸರು. ಮೆಕ್ಸಿಕೊದಲ್ಲಿ ತುಂಬ ಜನಪ್ರಿಯವಾಗಿರುವ ಎತ್ತಿನ ಗಾಡಿಯ ಹೆಸರು ಕಾರೇಟಾ.

ರಿಕ್ಷಗಳು: ಕೈಗಾಡಿಯ ವಿಚಾರವನ್ನು ಪ್ರಸ್ತಾವಿಸುವಾಗ, ಎರಡು ಚಕ್ರಗಳ ಮಾನವ ಚಾಲಿತ ರಿಕ್ಷಗಳ ವಿಚಾರವನ್ನೂ ಉಲ್ಲೇಖಿಸಬಹುದು. ಎರಡು ಚಕ್ರಗಳನ್ನುಳ್ಳ ಅಚ್ಚಿನ ಮೇಲೆ ಎತ್ತರದಲ್ಲಿ ಆಸನ ವ್ಯವಸ್ಥೆಯನ್ನು ಹೊಂದಿರುವ (ಕೆಲವೊಮ್ಮೆ ಪ್ರಯಾಣಿಕನಿಗೆ ನೆರಳನ್ನು ಉಂಟು ಮಾಡುವುದಕ್ಕಾಗಿ ಮುಂಚಾಚಬಹುದಾದ ಹಾಗೂ ಮಡಿಸಬಹುದಾದ ಛತ್ರಿಯನ್ನು ಹೊಂದಿರುವ) ಈ ಗಾಡಿಯನ್ನು ಅಟ್ಟಣಿಗೆಗಳಿಂದ ಮುಂಚಾಚಿರುವ ಪಟ್ಟಿ ಕೋಲುಗಳನ್ನು ಹಿಡಿದುಕೊಂಡು ಮಾನವ ವ್ಯಕ್ತಿ ಎಳೆದುಕೊಂಡು ಓಡುತ್ತಾನೆ. ಪ್ರಯಾಣಿಕ ಆಸನದಲ್ಲಿ ಕುಳಿತಿರುತ್ತಾನೆ. ದುರದೃಷ್ಟಶಾಲಿಯೊಬ್ಬ ಪ್ರಾಣಿಯಂತೆ ಗಾಡಿಯನ್ನೆಳೆಯುವುದು ಆತನ ಸೇವೆಯನ್ನು ಕೊಂಡುಕೊಳ್ಳಲು ಸಮರ್ಥನಾಗಿರುವ ವ್ಯಕ್ತಿ ಕುಳಿತು ದರ್ಬಾರು ಮಾಡುವುದು ಮಾನವತೆಯ ವಿಡಂಬನೆ ಎಂದು ಪರಿಗಣಿಸಿ ಕೆಲವೆಡೆಗಳಲ್ಲಿ ವಾಹನ ಈ ವ್ಯವಸ್ಥೆಯನ್ನು ಬಹಿಷ್ಕರಿಸಲಾಗಿದೆಯಾದರೂ ಅವಶೇಷರೂಪದಲ್ಲಿದು ಅಲ್ಲಲ್ಲಿ ಇನ್ನೂ ಉಳಿದುಕೊಂಡಿದೆ.

ರಥಗಳು: ಪ್ರಾಚೀನ ಕಾಲದಲ್ಲಿ ಯುದ್ಧ, ಬೇಟೆ, ಮೆರವಣಿಗೆ ಮತ್ತು ಪಂದ್ಯಗಳ ಸಂದರ್ಭದಲ್ಲಿ ಎರಡು ಚಕ್ರದ ರಥಗಳನ್ನು ಬಳಸುತ್ತಿದ್ದರು. ಅಂದರೆ ಶಾಂತಿ ಮತ್ತು ಯುದ್ಧ ಕಾಲಗಳೆರಡರಲ್ಲಿಯೂ ಇವು ಬಳಕೆಯಲ್ಲಿರುತ್ತಿದ್ದುವು. ಅಥೀನ ಎಂಬ ದೇವತೆ ಯುದ್ಧದ ರಥವನ್ನು ಸೃಷ್ಟಿಸಿದಳೆಂದು ಗ್ರೀಕ್ ಪುರಾಣಗಳಲ್ಲಿ ಹೇಳಲಾಗಿದೆ. ಮೆಸಪೊಟೇಮಿಯ ಮತ್ತು ಸಿರಿಯಗಳಲ್ಲಿ ಪ್ರ.ಶ.ಪೂ. ಸುಮಾರು 20ನೆಯ ಶತಮಾನದ ಹೊತ್ತಿಗೆ ರಥಗಳು ಬಳಕೆಯಲ್ಲಿದ್ದುವೆಂದು ಅವುಗಳ ಚಿತ್ರಣ ಲಭ್ಯವಾಗಿದೆಯೆಂದೂ ಹೇಳಲಾಗಿದೆ. ರೋಮನ್ನರಲ್ಲಿಯೂ ಕೆಲವು ಬಗೆಯ, ರಥಗಳು ಬಳಕೆಯಲ್ಲಿದ್ದುದಾಗಿ ತಿಳಿಯಬಂದಿದೆ. ಹೀರೊಡಟಸನ ಪ್ರಕಾರ, ಸಿಥಿಯನರು ಮೇಲು ಛಾವಣಿಗಳನ್ನುಳ್ಳ ರಥಗಳನ್ನು ಬಳಸುತ್ತಿದ್ದರು. ಈ ರಥದ ಮೇಲಿನ ಛತ್ರ ಅಥವಾ ಚಾವಣಿಯನ್ನು ತೆಗೆದು ಇರಿಸಬಹುದಾಗಿತ್ತು ಹಾಗೂ ಅದನ್ನು ಡೇರೆಯ ರೂಪದಲ್ಲಿ ಬಳಸಬಹುದಾಗಿತ್ತು. ಈಜಿಪ್ಟಿಗೆ ರಥಗಳನ್ನು ಪರಿಚಯಿಸಿಕೊಟ್ಟವರು ಹಿಕ್ಸೋಸರು ಪ್ರ.ಶ.ಪೂ. ಸುಮಾರು 15ನೆಯ ಶತಮಾನದ ಹೊತ್ತಿಗೆ ಚೀನ ದೇಶದಲ್ಲಿಯೂ ರಥಗಳು ಬಳಕೆಯಲ್ಲಿದ್ದುವು. ಟ್ರೋಜನ್ ಯುದ್ಧದ ಹಾಗೂ ಪೆಟ್ರೋಕ್ಲಸನ ಅಂತ್ಯಸಂಸ್ಕಾರದ ವರ್ಣನೆಗಳ ಸಂದರ್ಭದಲ್ಲಿ ಹೋಮರ್ ಕ್ರಮಶಃ ರಥಗಳ ಯುದ್ಧ ಹಾಗೂ ರಥ ಸ್ಪರ್ಧೆಗಳ ವಿವರಗಳನ್ನು ಚಿತ್ರಿಸಿದ್ದಾನೆ. ರಾಮಾಯಣ, ಮಹಾಭಾರತಗಳಲ್ಲೂ ಇವನ್ನು ಆಶ್ರಯಿಸಿ ರಚಿತವಾದ ಸಾಹಿತ್ಯದಲ್ಲೂ ರಥಗಳ, ರಥಯುದ್ಧಗಳ ವರ್ಣನೆ ಬರುತ್ತದೆ. ಭೂ – ಜಲ – ವಾಯುಮಾರ್ಗಗಳಲ್ಲಿ ಸಂಚರಿಸಬಲ್ಲವಾಗಿದ್ದಂಥ ರಥಗಳ ಉಲ್ಲೇಖವೂ ಬರುತ್ತದೆ. ಗ್ರೀಕರೂ ರೋಮನ್ನರೂ ರಥಗಳನ್ನು ಯುದ್ಧಕ್ಕೆ ಅಷ್ಟಾಗಿ ಬಳಸುತ್ತಿರಲಿಲ್ಲ. ಆದರೆ ಪಂದ್ಯ ಹಾಗೂ ಮೆರವಣಿಗೆಗಳ ಸಂದರ್ಭದಲ್ಲಿ ಇವುಗಳ ಬಳಕೆ ವಿಶೇಷವಾಗಿರುತ್ತಿತ್ತು. ಒಲಿಂಪಿಕ್ ಪಂದ್ಯ ಹಾಗೂ ಇತರ ಸಮಾರಂಭಗಳ ಅಂಗವಾಗಿ ರಥ ಸ್ಪರ್ಧೆ ನಡೆಯುತ್ತಿತ್ತು. ರೋಮಿನಲ್ಲಿ ಅನುಭವಿಗಳಾದ ಸಾರಥಿಗಳನ್ನು ಪಂದ್ಯದ ಸಂದರ್ಭದಲ್ಲಿ ನೇಮಿಸಿಕೊಳ್ಳುತ್ತಿದ್ದರು. ಇದನ್ನು ಆಶ್ರಯಿಸಿ ಜೂಜಾಟವೂ ಬಹಳವಾಗಿ ನಡೆಯುತ್ತಿತ್ತು. ರೋಮನ್ ರಥಕ್ಕೆ ಸಾಮಾನ್ಯವಾಗಿ ಎರಡು ಕುದುರೆಗಳನ್ನು ಕಟ್ಟುತ್ತಿದ್ದರು. ಆದರೆ ಮೂರು, ನಾಲ್ಕು ಕುದುರೆಗಳನ್ನುಳ್ಳ ರಥಗಳೂ ಇರುತ್ತಿದ್ದುವು. ಕಾನ್‌ಸ್ಟಾಂಟಿನೋಪಲ್‌ನಲ್ಲಿ ರಥ ಸ್ಪರ್ಧೆ ಪ್ರಮುಖ ಜನಪ್ರಿಯ ಮನರಂಜನೆಯ ಸಾಧನವಾಗಿತ್ತು. ಹಸಿರು ಮತ್ತು ನೀಲಿಯ ಬಣ್ಣಗಳು ಪಂದ್ಯದ ಬಣ್ಣಗಳಾಗಿದ್ದುವು. ಇವು ನಗರದಲ್ಲಿಯೂ ಪಕ್ಷ– ವಿಪಕ್ಷ ಸೂಚಕವಾಗಿದ್ದು ಎರಡು ಪಂಗಡಗಳ ನಡುವೆ ಘರ್ಷಣೆಗಳಿಗೂ ಎಡೆಮಾಡಿಕೊಡುತ್ತಿದ್ದುವು. ಯುರೋಪ್ ಖಂಡದಲ್ಲಿ ಹಾಗೂ ಬ್ರಿಟಿಷ್ ದ್ವೀಪಗಳಲ್ಲಿ ನಡೆದ ಕೆಲ್ಟಿಕ್ ಯುದ್ಧಗಳು ಆ ಯುದ್ಧಗಳಲ್ಲಿ ಬಳಸಲಾದ ಹರಿತವಾದ ಅಲುಗುಗಳಿಂದ ಯುಕ್ತವಾಗಿದ್ದ ಚಕ್ರಗಳನ್ನೊಳಗೊಂಡ ರಥಗಳ ದೃಷ್ಟಿಯಿಂದಲೂ ಗಮನಾರ್ಹವಾಗಿವೆ.

ನಾಲ್ಕು ಚಕ್ರದ ಗಾಡಿಗಳೆಂದರೆ ತೇರುಗಳು, ಪ್ರಯಾಣ ಅಥವಾ ಸರಕು ಸಾಗಣೆ ವಾಹನಗಳು ಮತ್ತು ಕೋಚುಗಳು. ಭಾರತದಲ್ಲಿ ಪ್ರತಿಯೊಂದು ಮುಖ್ಯ ದೇವಾಲಯದಲ್ಲಿಯೂ ಸಾಮಾನ್ಯವಾಗಿ ಒಂದು ತೇರು ಇರುತ್ತದೆ. ವಿಶಿಷ್ಟ ದಿನಗಳಂದು– ರಥೋತ್ಸವದ ದಿವಸಗಳಂದು – ಭಕ್ತರು ತೇರನ್ನೆಳೆಯುತ್ತಾರೆ. ಇದು ಬೃಹದಾಕಾರವಾದ ವಿಶಿಷ್ಟ ಅಲಂಕೃತ ರಚನೆ. ಇಂಗ್ಲೆಂಡಿನಲ್ಲಿ 16ನೆಯ ಶತಮಾನದವರೆಗೆ ಲಿಟ್ಟರ್ ಎಂಬುದೇ ರಾಜ ಮನೆತನದ ವಾಹನ ವಾಗಿತ್ತು. ಹಂಗರಿಯ ಕೋಚ್ಸ್ ಎಂಬಲ್ಲಿ ಮೊಟ್ಟಮೊದಲಿಗೆ ಒಂದು ಬಗೆಯ ವಿಶಿಷ್ಟ ರೀತಿಯ ವಾಹನವನ್ನು ಪ್ರಯೋಗಾರ್ಥವಾಗಿ ಬಳಸಿದ್ದರಿಂದ ಮುಂದೆ ಆ ಬಗೆಯ ವಾಹನಕ್ಕೆ ಕೋಚ್ ಎಂಬ ಹೆಸರು ಬಳಕೆಗೆ ಬಂದಿತು. ಆದರೆ ಅದರ ಉಚ್ಚಾರಣೆಯಲ್ಲಿ ಸಾಕಷ್ಟು ವ್ಯತ್ಯಾಸ ಉಂಟಾಯಿತು. ಇಂಗ್ಲೆಂಡಿನಲ್ಲಿ ಮೊದಲು ಕೊಚ್ ತಯಾರಾದದ್ದು 1555 ರಲ್ಲಿ. ಅನಂತರ ಎಲಿಜ಼ಬೆತ್ ರಾಣಿಯೂ ಭವ್ಯವಾದ ಕೋಚನ್ನು ಮಾಡಿಸಿಕೊಂಡುದಾಗಿ ಹೇಳಲಾಗಿದೆ. 1640 ರಲ್ಲಿ ಊರಿಂದೂರಿಗೆ ಪ್ರಯಾಣ ಮಾಡುವ ಸ್ಟೇಜ್ ಕೋಚುಗಳು ಬಳಕೆಗೆ ಬಂದುವು. ಹದಿನೇಳನೆಯ ಶತಮಾನದ ಹೊತ್ತಿಗೆ ಇವು ತುಂಬ ಜನಪ್ರಿಯವಾಗಿದ್ದುವು. ಇವುಗಳ ಅಲಂಕರಣದ ಬಗೆಗೂ ಶ್ರದ್ಧೆ ಹೆಚ್ಚಿತು. 1669 ಸ್ಯಾಮ್ಯುಯೆಲ್ ಪೆಪ್ಸ್ ಎಂಬಾತ ತನ್ನ ಕೋಚಿಗೆ ಗಾಜಿನ ಕಿಟಕಿಗಳನ್ನು ಹಾಕಿರುವುದಾಗಿ ಪ್ರಚಾರ ಮಾಡಿದನಂತೆ. ಗಾಜಿನ ಕಿಟಕಿ, ಪರದೆ, ಅಲಂಕರಣ ಇವುಗಳು ಹೆಚ್ಚಿದಂತೆ ಕೋಚುಗಳ ತೂಕ ಹೆಚ್ಚಿ ವೇಗ ಕಡಿಮೆಯಾಯಿತು. ಆಗ ಮತ್ತೊಮ್ಮೆ ಅವುಗಳ ಸರಳೀಕರಣದ ಗಮನ ಹರಿಯಿತು. 1784 ರಲ್ಲಿ ಊರಿಂದೂರಿಗೆ ಅಂಚೆಯನ್ನು ಒಯ್ಯಲೂ ಕೋಚುಗಳನ್ನು ಬಳಸಲಾಯಿತು. ಕೋಚುಗಳಿಗೆ ಒಂದೆಡೆ ಸ್ಪ್ರಿಂಗು ಮತ್ತು ಸ್ಪ್ರಿಂಗ್‌ಪ್ಲೇಟುಗಳನ್ನು ಅಳವಡಿಸಿ ರಸ್ತೆಯ ಆಘಾತ ಮತ್ತು ಕಂಪನಗಳನ್ನು ಕಡಿಮೆ ಮಾಡುವುದು, ಅವುಗಳ ರಚನೆಯನ್ನು ಸುಧಾರಿಸುವುದು ನಡೆದಂತೆ ಇನ್ನೊಂದೆಡೆ ರಸ್ತೆಗಳನ್ನು ಸುಧಾರಿಸುವ ಕೆಲಸವೂ ನಡೆದು, ಯುರೋಪಿನಲ್ಲಿ ಸುಂದರ ಸಾರ್ವಜನಿಕ ರಸ್ತೆಗಳು ಕಂಗೊಳಿಸತೊಡಗಿದುವು.



ಬಕ್‌ಬೋರ್ಡ್

ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಕೋನ್‌ಸ್ಟೋಗಾ ವ್ಯಾಗನ್ 19 ನೆಯ ಶತಮಾನದಲ್ಲಿ ಕೊನೆಯಲ್ಲಿ ಬಳಕೆಗೆ ಬಂತು. ಪೆನ್ಸಿಲ್‌ವೇನಿಯದ ಕೋನ್‌ಸ್ಟೋಗಾ ಎಂಬಲ್ಲಿ ಅದನ್ನು ನಿರ್ಮಿಸಿದ್ದುದೇ ಈ ಹೆಸರು ಬಳಕೆಗೆ ಬರಲು ಕಾರಣ. ಮುಂದೆ ಸ್ವಯಂಚಾಲಿತ ವಾಹನಗಳಿಗೂ ಇದೇ ಹೆಸರು ಬಳಕೆಗೆ ಬಂತು.

ಚಕ್ರಗಳ ಸಂಖ್ಯೆ, ಪ್ರವೇಶ ವಿಧಾನ, ಸ್ಥಳಾವಕಾಶ, ಮೇಲ್ಛಾವಣಿ, ಸಾರಥಿಯ ಸ್ಥಳ, ಕುದುರೆ ಹೂಡುವ ವ್ಯವಸ್ಥೆ – ಇವುಗಳಿಗನುಗುಣವಾಗಿ ಕೋಚುಗಳು ವ್ಯಾಗನ್ನುಗಳು ಭಿನ್ನವಾಗಿರುತ್ತಿದ್ದುವು. ಎರಡು ಚಕ್ರದ ವಾಹನಗಳನ್ನು ಎಳೆಯಲು ಒಂದು ಅಥವಾ ಎರಡು ಕುದುರೆಗಳನ್ನು ಉಪಯೋಗಿಸುತ್ತಿದ್ದರು. ಒಬ್ಬರು ಅಥವಾ ಇಬ್ಬರಿಗೆ